₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಭಾನುವಾರ 03.08.2025 ಸಂಪುಟ: 68 ಸಂಚಿಕೆ: 90 ಪುಟಗಳು: 12+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಹಸ್ತಲಾಘವ

ಎಐಸಿಸಿ ಕಾನೂನು, ಮಾನವೀಯ ಹಕ್ಕುಗಳು ಮತ್ತು ಮಾಹಿತಿ ಹಕ್ಕುಗಳ ವಿಭಾಗ ದೆಹಲಿಯಲ್ಲಿ ಆಯೋಜಿಸಿದ್ದ ಸಾಂವಿಧಾನಿಕ ಸವಾಲುಗಳು ಕುರಿತ ವಿಚಾರ ಸಂಕೀರಣ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ.

ಸಮಾಚಾರ ಸಣ್ಣದಲ್ಲ

ಡಿ.ದೇವರಾಜ ಅರಸು ಜಯಂತಿ: ಸಿದ್ಧತಾ ಸಭೆ

ಯಾದಗಿರಿ: ಆ.20 ರಂದು ಡಿ.ದೇವರಾಜ ಅರಸು ಅವರ 110ನೇ ಜನ್ಮದಿನಾಚರಣೆ ಆಚರಣೆಯ ಹಿನ್ನೆಲೆ ಪೂರ್ವಸಿದ್ಧತಾ ಸಭೆಯು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರ ಅಧ್ಯಕ್ಷತೆಯಲ್ಲಿ ಆಗಸ್ಟ್ 8 ರಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಅವರು ತಿಳಿಸಿದ್ದಾರೆ. ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಪೂರ್ವಸಿದ್ಧತಾ ಸಭೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿರುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಹಿತ್ಯ ಪ್ರಶಸ್ತಿಗೆ ಪ್ರೊ.ಸಿದ್ದು ಆಯ್ಕೆ

ಭಾಲ್ಕಿ: ಅಮರಾವತಿ ಶಿವಯ್ಯ ಹಿರೇಮಠ ಪ್ರತಿಷ್ಠಾನ ಭಾಲ್ಕಿ ವತಿಯಿಂದ ಕೊಡಮಾಡುವ ಪ್ರಸಕ್ತ ಸಾಲಿನ ಡಾ.ಬಸವಲಿಂಗ ಪಟ್ಟದ್ದೇವರು ಸಾಹಿತ್ಯ ಪ್ರಶಸ್ತಿಗೆ

ಗದಗನ ಪ್ರೊ.ಸಿದ್ದು ಯಾಪಲ ಪರವಿ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯನ್ನು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಆ.22 ರಂದು ಸಾಯಂಕಾಲ 6 ಗಂಟೆಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಮರಾವತಿ ಶಿವಯ್ಯ ಹಿರೇಮಠ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಮಕ್ತುಂಬಿ ಎಂ.ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ದಣಿವರಿ ಯದ ದಾರಿ, ಬೀಸೋಗಾಳಿ ಮುಂತಾದ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದ್ದಾರೆ. ಕವನ, ಚರಿತ್ರೆ, ಪ್ರವಾಸ ವರ್ಣನೆ, ವೈಚಾರಿಕ ಲೇಖನ, ಚಿಂತನೆಗಳು ಮುಂತಾದ ಕ್ಷೇತ್ರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಅಷ್ಟೇ ಅಲ್ಲದೆ, ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ನಿರಂತರ ಬರವಣಿಗೆ ಮತ್ತು ಉಪನ್ಯಾಸಗಳು ನೀಡುತ್ತಿದ್ದಾರೆ.

ಆ.8ರಿಂದ ಅಗ್ನಿವೀರ ನೇಮಕಾತಿ ರ‍್ಯಾಲಿ

ಬೀದರ: ಅಗ್ನಿವೀರ ನೇಮಕಾತಿ ರ‍್ಯಾಲಿಯು ರಾಯಚೂರಿನ ಕರ್ನಾಟಕ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಮೈದಾನದಲ್ಲಿ ಆ.8ರಿಂದ 25 ರವರೆಗೆ ನಡೆಯಲಿದೆ ಎಂದು ಬೆಳಗಾವಿ ಆರ್ಮಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆನ್‌ಲೈನ್ ಸಾಮಾನ್ಯ ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು www.joinindianarmy.nic.in ನಲ್ಲಿ ಪ್ರಕಟಿಸಲಾಗಿದೆ. ಬೆಳಗಾವಿ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಅಭ್ಯರ್ಥಿಗಳು ಭಾಗವಹಿಸಬಹುದು. ಅಭ್ಯರ್ಥಿಗಳು ಸೇನಾ ನೇಮಕಾತಿಯ ವೆಬ್‌ಸೈಟ್ ವೈಯಕ್ತಿಕ ಖಾತೆ ಮತ್ತು ನೋಂದಾಯಿತ ಇ-ಮೇಲ್ ಐಡಿಯನ್ನು ಲಾಗಿನ್ ಮಾಡುವ ಮೂಲಕ ಪಡೆಯಬಹುದು. ನೇಮಕಾತಿ ರ‍್ಯಾಲಿಯಲ್ಲಿ ನಡೆಸುವ ಪರೀಕ್ಷೆ ಮತ್ತು ಅಂತಿಮ ಅರ್ಹತೆ ಆಧರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಯಾವುದೇ ದಲ್ಲಾಳಿಗಳಿಗೆ ಅಥವಾ ಮಧ್ಯವರ್ತಿಗಳಿಗೆ ಎಚ್ಚರ ವಹಿಸಬೇಕು ಎಂದು ತಿಳಿಸಿದ್ದಾರೆ.

ಅರಿವು ಶೈಕ್ಷಣಿಕ ಸಾಲ ಅರ್ಜಿ ಆಹ್ವಾನ

ಬೀದರ: ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದಿಂದ 2025-26ನೇ ಸಾಲಿನಲ್ಲಿ ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಆರ್ಯ ವೈಶ್ಯ ಸಮುದಾಯಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಯೋಜನೆಯಲ್ಲಿ ಸಿ.ಇ.ಟಿ./ಎನ್.ಇ.ಇ.ಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣ ಹಾಗೂ ಪಿ.ಹೆಚ್.ಡಿ. ನಲ್ಲಿ ವ್ಯಾಸಂಗ ಮಾಡುವ ಆರ್ಯವೈಶ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ 1,00,000ಗಳ ರು. ಸಾಲವನ್ನು ಶೇ.2ರ ಬಡ್ಡಿದರದಲ್ಲಿ ಶೈಕ್ಷಣಿಕ ಸಾಲ ನೀಡಲಾಗುವುದು. ಮಹಿಳೆಯರಿಗೆ ಶೇ.33% ಹಾಗೂ ವಿಕಲಚೇತನರಿಗೆ ಶೇ.5% ಮೀಸಲಾತಿ. ಒಂದು ಕುಟುಂಬದಲ್ಲಿ ಇಬ್ಬರು ಮಾತ್ರ ಸಾಲ ಸೌಲಭ್ಯ ಪಡೆಯಬಹುದು. ಅರ್ಹರು ಆನ್‌ಲೈನ್ kacdc.karnataka.gov.inರ ಮೂಲಕ ಅಕ್ಟೋಬರ್ 31 ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆ ಅರ್ಜಿ ಅವಧಿ ವಿಸ್ತರಣೆ

ಬೀದರ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಪ್ರತಿಷ್ಠಿತ ಸಂಸ್ಥೆಗಳ ಮೂಲಕ ಯು.ಪಿ.ಎಸ್.ಸಿ ನಾಗರಿಕ ಸೇವೆ. ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರ್, ಗ್ರೂಪ್-ಸಿ, ಆರ್‌ಆರ್‌ಬಿ ಮತ್ತು ಎಸ್‌ಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ರಾಜ್ಯದ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತಿದ್ದು.

{ ಎಚ್. ಆಂಜನೇಯ } ಮಾಜಿ ಸಚಿವ

‘ಒಳ ಮೀಸಲಾತಿ ಜಾರಿಯಾಗುವವರೆಗೂ ರಾಜ್ಯದಲ್ಲಿ ಯಾವ ಹುದ್ದೆಗಳು ತುಂಬಲ್ಲ, ವರದಿ ಸಂಪೂರ್ಣ ಜಾರಿಯಾದ ಮೇಲೆ ನೇಮಕಾತಿ ನಡೆಯಲಿದೆ. ಅಲ್ಲಿಯವರೆಗೂ ಮಾದಿಗರನ್ನು ದಾರಿ ತಪ್ಪಿಸುವ ಕೆಲಸ ಯಾವ ಪಕ್ಷವೂ ಮಾಡಬಾರದು. ಯಾರು ಬೇಡ ಅಂದರೂ ಜಾರಿಗೆ ತರುವುದಾಗಿ’ ಸಿಎಂ ಹೇಳಿದ್ದಾರೆ. ಹಾಗಾಗಿ ಅನಗತ್ಯ ಪಾದಯಾತ್ರೆ ಮಾಡುವವರ ಹಿಂದೆ ನಮ್ಮ ಮಾದಿಗ ಸಮುದಾಯ ಹೋಗಬಾರದು.

ರಸಗೊಬ್ಬರ ಪೂರೈಸದ ರಾಜ್ಯ ಸರಕಾರದ ನಡೆ ಖಂಡಿಸಿ ಜೆಡಿಎಸ್ ಪ್ರತಿಭಟನೆ

ರೈತರ ನೆರವಿಗೆ ಬಾರದ ಸರಕಾರ

ಯಾದಗಿರಿ: ಸಮರ್ಪಕ ರಸಗೊಬ್ಬರ ಪೂರೈಕೆ ಮಾಡದ ರಾಜ್ಯ ಸರಕಾರದ ನಡೆ ಖಂಡಿಸಿ ಯಾದಗಿರಿಯಲ್ಲಿ ಜೆಡಿಎಸ್ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಶ್ಚಂದ್ರ ಕಟಕಟಿ, ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ರಾಜ್ಯದ ರೈತರ ಸಮಸ್ಯೆಗೆ ಮತ್ತು ಮಳೆ ಹಾನಿ ಹಾಗೂ ನೆರೆ ಹಾವಳಿಯಿಂದ ಹಾಗೂ ಮಳೆ ಕೊರತೆಯಿಂದ ಭಾಧೀತವಾದ ರೈತರ ಮತ್ತು ನೊಂದ ಸಂತ್ರಸ್ಥರಿಗೆ ಪರಿಹಾರ ನೀಡುವಲ್ಲಿ ರಾಜ್ಯ ಸರಕಾರ ಸಂಪೂರ್ಣವಾಗಿ ವಿಫಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 2 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ಲಂಚಗುಳಿತನ, ದುರಾಡಳಿತ ಮತ್ತು ವೈಫಲ್ಯತೆಯಿಂದ ರಾಜ್ಯದ ಜನತೆ ಆಕ್ರೋಶದಿಂದ ಬೇಸತ್ತು ಬಸವಳಿದಿದ್ದಾರೆ.

ರಾಜ್ಯದಲ್ಲಿ ಪೂರ್ವ ಮುಂಗಾರು ಮತ್ತು ಮುಂಗಾರುನಲ್ಲಿ ಉತ್ತಮ ಮಳೆಯಾಗಿದ್ದು, ರಾಜ್ಯದ ರೈತರು ತಮ್ಮ ಬಹುತೇಕ ಕೃಷಿ ವಿಸ್ತೀರ್ಣದಲ್ಲಿ ಕೃಷಿ ಚಟುವಟಿಕೆ ಪ್ರಾರಂಭಿಸಿ ಬಿತ್ತನೆಯಲ್ಲಿ ತೊಡಗಿದ್ದಾರೆ ಹಾಗೂ ರಾಜ್ಯದಲ್ಲಿ ಬಹುತೇಕ ಜಲಾಶಯಗಳು ಹಾಗೂ ಕೆರೆ ಕಟ್ಟೆಗಳು ಭರ್ತಿಗೊಂಡಿದ್ದು, ನೀರಾವರಿ ಅಚ್ಚುಕಟ್ಟಿನಲ್ಲಿ ರೈತರು ಸಾಗುವಳಿ ಪ್ರಾರಂಭಿಸಿದ್ದಾರೆ. ಆದರೆ, ರಾಜ್ಯ ಸರಕಾರ ರೈತರಿಗೆ ಅಗತ್ಯವಿರುವ ರಸ ಗೊಬ್ಬರವನ್ನು ಪೂರೈಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರುದರು.

ರಾಜ್ಯಪಾಲರು, ರಾಜ್ಯ ಸರಕಾರಕ್ಕೆ ಸೂಕ್ತ ನಿರ್ದೇಶನವಿತ್ತು ಎಚ್ಚರಿಕೆ ನೀಡಿ, ರೈತರ ಸಮಸ್ಯೆ ಹಾಗೂ ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಹಾಗೂ ಮಳೆ ಅಭಾವದಿಂದ ಫಸಲನ್ನು ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದರು. ಒಂದು ವೇಳೆ ರಾಜ್ಯ ಸರಕಾರ ಸಂವಿಧಾನ ರೀತಿ ಕಾರ್ಯನಿರ್ವಹಿಸದಿದ್ದಲ್ಲಿ ರಾಜ್ಯ ಸರಕಾರದ ವಿರುದ್ಧ ಉಗ್ರ ಹೋರಾಟ ಹಮ್ಮಿಕೊಳ್ಳುತ್ತೇವೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಚನ್ನಪ್ಪಗೌಡ ಮೊಸಂಬಿ, ನವಾಜರೆಡ್ಡಿ ಚಪೆಟ್ಲಾ, ರಾಮಣ್ಣ ಕೋಟಗೇರಾ, ಬಸವರಾಜಪ್ಪಗೌಡ ಗೊಂದಡಗಿ, ಬಸವರಾಜ ಕಣೇಕಲ್, ಈಶಪ್ಪ ರಾಖಾ, ರಾಜೇಶ ಉಡುಪಿ ಸೈದಾಪೂರ, ದೇವಿಂದ್ರಪ್ಪ ಸುರಪೂರ, ಶಿವು ಮೊಟಗಿ ಶಹಾಪೂರ, ಶಿವಣ್ಣ ಸುರಪೂರ, ವಿಶ್ವನಾಥ ಶಿರವಾಳ, ಬಂದಪ್ಪ ಅರಳಿ, ನರಸಪ್ಪ ಕವಡೆ, ಶರಣು ಆವಂಟಿ, ಪ್ರಕಾಶ ನೀರಟ್ಟಿ, ಬಸಣ್ಣ ದೇವರಹಳ್ಳಿ, ರವಿ ಪಾಟೀಲ್ ಗುರುಮಿಠಕಲ್, ಮಲ್ಲಣ್ಣಗೌಡ ಕೌಳೂರು, ಬಸ್ಸುಗೌಡ ಚಾಮನಹಳ್ಳಿ, ಬಸರಡ್ಡಿ ಹೆಗ್ಗಣಗೇರಾ ಚಂದ್ರಾಯಗೌಡ ಹತ್ತಿಕುಣಿ, ಶರಣಗೌಡ ಚಾಮನಹಳ್ಳಿ, ರವಿ ಪಾಟೀಲ್ ಹತ್ತಿಕುಣಿ, ಮಲ್ಲಿಕಾರ್ಜುನ ಅರುಣಿ, ಈಶ್ವರ ನಾಯಕ,ಜಯೇಂದ್ರ ಚವ್ಹಾಣ, ಪರಮರೆಡ್ಡಿ ಕಂದಕೂರ, ದೊಡ್ಡಣ್ಣಗೌಡ ಅರಕೇರಾ (ಬಿ), ಮಾರ್ಥಂಡ ಮಾನೇಗಾರ, ನಿಂಗಾರೆಡ್ಡಿ ಯಡ್ಡಳ್ಳಿ, ತಾಯಪ್ಪ ಬದ್ದೇಪಲ್ಲಿ, ಅನಂತಪ್ಪ ಮುಕಡಿ, ಶರಣು ಗಾಡಿ ಮೋಟ್ನಳ್ಳಿ, ಲಕ್ಷ್ಮಣನಾಯಕ ಕುಡ್ಲೂರ, ಅಲ್ಲಾವುದ್ದೀನ್ ನೀಲಹಳ್ಳಿ ಸೇರಿದಂತೆ ಇತರರಿದ್ದರು.



ಯಾದಗಿರಿಯಲ್ಲಿ ಜೆಡಿಎಸ್ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಸರಕಾರ ಕೇಳಿದ್ದಕ್ಕಿಂತ ಹೆಚ್ಚಿಗೆ ಕೊಟ್ಟಾರಲ್ಲಿ

ಕಾಳಸಂತೆಕೋರರು ಸಾಕಷ್ಟು ಪ್ರಮಾಣದಲ್ಲಿ ಶೇಖರಣೆ ಮಾಡಿ ವಿತರಿಸದೇ ಇರುವುದರಿಂದ ರೈತರು ಪರದಾಡುತ್ತಿದ್ದಾರೆ. ಈ ರಸ ಗೊಬ್ಬರಗಳು ಕಾಳಸಂತೆಯಲ್ಲಿ ವರ್ತಕರು ಮನಸ ಇಚ್ಛಾ ಬಂದ ಧರದಲ್ಲಿ ಮಾರಾಟ ಮಾಡುತ್ತಿದ್ದಾರೆ. ರಾಜ್ಯ ರಾಜ್ಯಕ್ಕೆ ಕೊರತೆ ಇರುವ ರಸ ಗೊಬ್ಬರಗಳನ್ನು ಕೇಂದ್ರದೊಂದಿಗೆ ವ್ಯವಹರಿಸಿ ಸಂಪರ್ಕಿಸಿ ಪಡೆಯಲು ವಿಫಲವಾಗಿದೆ. ರಾಜ್ಯದಿಂದ ಕೇಂದ್ರಕ್ಕೆ 6.31000 ಮೆಟ್ರಿಕ ಟನ್ ರಸ ಗೊಬ್ಬರ ಬೇಡಿಕೆ ಇಟ್ಟಿರುತ್ತಾರೆ. ಆದರೂ ಕೇಂದ್ರ ಸರಕಾರ ನಿರೀಕ್ಷೆಗೆ ಮೀರಿ 8.73000 ಮೆಟ್ರಿಕ ಟನ್ ರಸಗೊಬ್ಬರ ಪೂರೈಸಿದ್ದಾರೆ. ಈ ಪೈಕಿ ಕೇವಲ 5.27 ಲಕ್ಷ ಟನ್ ರಸ ಗೊಬ್ಬರ ನೀಡಿರುವುದಾಗಿ ರಾಜ್ಯ ಸರಕಾರ ಆಪಾದನೆ ಮಾಡುತ್ತಿದೆ. ರಾಜ್ಯ ಸರಕಾರವು ಕೇಂದ್ರ ಸರಕಾರದತ್ತ ಕೈಮಾಡಿ ತೋರಿಸಿ ರಾಜ್ಯದ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

ತಾಪಂ ಇಒ ಕಾರ್ಯಕ್ಕೆ ಸಚಿವರಿಂದ ಪ್ರಶಂಸೆ

ಬೀದರ: ಜಿಲ್ಲೆಯ ಔರಾದ ತಾಪಂ ಇಒ ಶಿವಕುಮಾರ ಘಾಟೆ ಅವರು ವಿವಿಧ ಇಲಾಖೆಯ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನ ಮಾಡಿದ ಕಾರಣ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಪ್ರಶಂಸೆ ಪತ್ರ ನೀಡಿ ಗೌರವಿಸಿದ್ದಾರೆ.

ಶುಕ್ರವಾರ ಜಿಪಂ ಸಭಾಂಗಣದಲ್ಲಿ ಸಚಿವ ಈಶ್ವರ ಖಂಡ್ರೆ ಅವರು ಕೇಂದ್ರ ಸರಕಾರದ ನೀತಿ ಆಯೋಗದ ಸಂಪೂರ್ಣತಾ ಅಭಿಯಾನದ ಅಡಿಯಲ್ಲಿ, ಒಂದು ವರ್ಷದ ಅವಧಿಯಲ್ಲಿ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿರುವದನ್ನು ಪರಿಶೀಲಿಸಿ ನಿಗದಿತ ಗುರಿ ತಲುಪಿದ ಇಒ ಘಾಟೆ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದು, ಆರೋಗ್ಯ ಸೇವೆಗಳನ್ನು ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಮತ್ತು ರೋಗ ತಡೆಗಟ್ಟುವಿಕೆ ಕಾರ್ಯಕ್ರ ಮಗಳನ್ನು ಜಾರಿಗೊಳಿಸುವುದು. ರಸ್ತೆ, ನೀರಾವರಿ ಮತ್ತು ವಿದ್ಯುತ್ ಸೌಲಭ್ಯಗಳನ್ನು ಒದಗಿ ಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಇದರ ಮೂಲ ಉದ್ದೇಶವಾಗಿದೆ ಎಂದರು. ಪೌರಾಡಳಿತ ಸಚಿವ ರಹೀಂಖಾನ್, ಶಾಸಕರಾದ ಸಿದ್ದು ಪಾಟೀಲ, ಡಾ.ಶೈಲೇಂದ್ರ ಬೆಲ್ದಾಳೆ, ಶರಣು ಸಲಗಾರ, ಎಂಎಲ್ಸಿಗಳಾದ ಭೀಮರಾವ ಪಾಟೀಲ್, ಎಂ. ಜಿ ಮೂಳೆ, ಚಂದ್ರಶೇಖರ್ ಪಾಟೀಲ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಿಲ್ಲಾ ಪಂಚಾಯತ ಆಡಳಿತಾಧಿಕಾರಿಗಳಾದ ಡಿ.ರಂದೀಪ್, ಡಿಸಿ ಶಿಲ್ಪಾ ಶರ್ಮಾ, ಜಿಪಂ ಸಿಇಒ ಡಾ. ಗಿರೀಶ ಬಡೋಲೆ, ಎಸ್ಪಿ ಪ್ರದೀಪ ಗುಂಟೆ, ಉಪಕಾರ್ಯದರ್ಶಿ ಮುಕ್ಕಣ್ಣ ಕರಿಗಾರ್, ಮುಖ್ಯ ಲೆಕ್ಕಾಧಿಕಾರಿ ಶ್ರೀಕಾಂತ, ಮುಖ್ಯ ಯೋಜನಾಧಿಕಾರಿ ಕಿಶೋರಕುಮಾರ ದುಬೆ ಅನೇಕರಿದ್ದರು.

ಪ್ರಮುಖವಾಗಿ ಕೃಷಿ, ಶಿಕ್ಷಣ, ಆರೋಗ್ಯ, ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಮೇಲೆ ಕೇಂದ್ರೀಕೃತವಾಗಿವೆ. ಕೃಷಿಯನ್ನು ಉತ್ತೇಜಿಸುವುದು, ಗ್ರಾಮ ಶೇಖರಣಾ ಯೋಜನೆ, ಮತ್ತು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಡಿಜಿಟಲ್ ಶಿಕ್ಷಣವನ್ನು ಉತ್ತೇಜಿಸುವುದು, ಶಾಲಾ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಶಿಕ್ಷಕರ ತರಬೇತಿಗೆ ಒತ್ತು ನೀಡುವುದು.

-ಈಶ್ವರ ಖಂಡ್ರೆ, ಸಚಿವ

ವಿವಿಧ ಇಲಾಖೆಯ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನ ಕೈಗೊಂಡ ನಿಮಿತ್ತ ಔರಾದ ತಾಪಂ ಇಒ ಅವರಿಗೆ ಸಚಿವ ಈಶ್ವರ ಖಂಡ್ರೆ ಪ್ರಶಂಸೆ ಪತ್ರ ನೀಡಿದರು.

ವಿಜಯಸಿಂಗ್ ವಿರುದ್ಧ ಅವಾಚ್ಯ ಶಬ್ದ ಬಳಕೆ: ಪ್ರಕರಣ ದಾಖಲು

ಬಸವಕಲ್ಯಾಣ: ಬಿಜೆಪಿ ಶಾಸಕ ಶರಣು ಸಲಗರ ಸೇರಿದಂತೆ ನಾಲ್ಕು ಜನ ಕಾರ್ಯಕರ್ತರ ಮೇಲೆ ಬೀದರ ಜಿಲ್ಲೆಯ ಬಸವಕಲ್ಯಾಣ ನಗರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನೀಲಕಂಠ ರಾಠೋಡ ನೀಡಿರುವ ದೂರಿನ ಮೇರೆಗೆ ಶಾಸಕ ಶರಣು ಸಲಗರ, ಬೆಂಬಲಿಗರಾದ ಕೃಷ್ಣ ಗೋಣೆ, ಶಿವಕುಮಾರ ಅಗ್ರೆ, ಪ್ರದೀಪ ಕಾವಳೆ ವಿರುದ್ಧ ಪ್ರಕರಣ ದಾಖಲಾಗಿದೆ. ಗೋವುಗಳ ರಕ್ಷಣೆ ನೆಪದಲ್ಲಿ ಬಕ್ರಿದ್ ಹಬ್ಬದ ವೇಳೆ ನೈತಿಕ ಪೊಲೀಸ್ ಗಿರಿ ಪ್ರದರ್ಶಿಸಿ ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ್ ವಿರುದ್ಧ ಅವಾಚ್ಯ ಶಬ್ದ ಬಳಸುವ ಮೂಲಕ ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ರಾಜಕೀಯ ದ್ವೇಷದಿಂದ ನಿಂದಿಸಿ ತೇಜೊವಧೆ ಮಾಡುತ್ತಿದ್ದಾರೆ ಎಂದು ಜೂ.28 ರಂದು ದಾಖಲಾಗಿದ್ದ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಈ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಕೆಡಿಪಿ ಸಭೆಯಲ್ಲಿ ಸಲಗರ ಗರಂ: ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಶಾಸಕ ಶರಣು ಸಲಗರ ಶಿಷ್ಟಾಚಾರ ಉಲ್ಲಂಘನೆ ವಿಚಾರದಲ್ಲಿ ಪೊಲೀಸರ ವಿರುದ್ಧ ಫುಲ್ ಗರಂ ಆದರು. ನಾನು ಶಾಸಕನಾದರು ಕೂಡ ನನ್ನ ಹಿಂದೆ ಹೋಮ್ ಗಾರ್ಡ್ ಕೂಡ ಇರಲ್ಲ. ಪರಾಜಿತ ಅಭ್ಯರ್ಥಿ ವಿಯಸಿಂಗ್ ಅವರಿಗೆ ರಾಜ ಮರ್ಯಾದೆ. ಬಿಜೆಪಿ ಶಾಸಕರಿಗೆ ಗೌರವ ಅನ್ನೊದೇ ಇಲ್ವಾ ಎಂದು ಕಿಡಿಕಾರಿದರು. ಅಧಿಕಾರಿಗಳನ್ನು ಬಳಸಿಕೊಂಡು ನನ್ನ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಆಕ್ರೋಶ ಹೊರಹಾಕಿದರು.

ಜೀವನದಲ್ಲಿ ನೆಮ್ಮದಿ ಸಿಗಲಾರದು: ಹಾಲು ಕೊಡುವ ಜಾನುವಾರುಗಳನ್ನು ಕಸಾಯಿಖಾನೆಗೆ ಕಳುಹಿಸುವವರಿಗೆ ಜೀವನದಲ್ಲಿ ನೆಮ್ಮದಿ ಸಿಗಲಾರದು. ಆ ಭಗವಂತ ಒಪ್ಪುವುದಿಲ್ಲ. ಗೋವುಗಳು ರಕ್ಷಣೆ ಮಾಡೋದೆ ತಪ್ಪಾ. ನನಗೆ ಬಹಳ ನೋವಾಗಿದೆ ಎಂದು ತಿಳಿಸಿದರು.

ಸಾಮಾಜಿಕ ಪಿಡುಗಾದ ಮಾನವ ಕಳ್ಳ ಸಾಗಣೆ: ಕಳವಳ

ಯಾದಗಿರಿ: ಮಾನವ ಕಳ್ಳ ಸಾಗಾಣಿಕೆ ಸಾಮಾಜಿಕ ಪಿಡುಗಾಗಿದ್ದು, ಅತಿ ಹೆಚ್ಚು ಮಹಿಳೆಯರು ಮತ್ತು ಮಕ್ಕಳು ಇದಕ್ಕೆ ಒಳಗಾಗುತ್ತಿದ್ದಾರೆ. ಮಹಿಳೆಯರು ಮತ್ತು ಮಕ್ಕಳ ಮೇಲೆ ಎಷ್ಟೋ ದೌರ್ಜನ್ಯಗಳು ನಡೆಯುತ್ತಿವೆ, ಮಕ್ಕಳಿಗೆ ಯಾವುದೇ ಒಂದು ಆಸೆ ತೋರಿಸಿ ಅವರನ್ನು ದುಷ್ಕೃತ್ಯಗಳಿಗೆ ಬಳಸಿಕೊಳ್ಳುತ್ತಿದ್ದಾರೆ ಎಂದು ಯಾದಗಿರಿ ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ ಕಳವಳ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಸ್ತ್ರೀ ಶಕ್ತಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ , ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಯಾದಗಿರಿ ಸಮಗ್ರ ಶಿಶು ಸಂರಕ್ಷಣಾ ಯೋಜನೆ ಇವರ ಸಂಯುಕ್ತಾಶ್ರಯದಲ್ಲಿ ಮಾನವ ಕಳ್ಳ ಸಾಗಾಣಿಕೆ ತಡೆ ದಿನಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಒನ್ ಸ್ಟಾಪ್ ಸೆಂಟರ್ ವಕೀಲರು ಲತಾ ನಾಯಕ್ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ಎಷ್ಟು ಬಲಿ ಆಗುತ್ತಿದ್ದಾರೆ, ಎಲ್ಲಿ ಎಲ್ಲಿ ಮಾನವ ಕಳ್ಳ ಸಾಗಣಿಕೆ ಆಗುತ್ತಿದೆ. ಇದು ಎಲ್ಲ ವರ್ಗದವರು, ವಯಸ್ಸಾದವರು ಸಹ ಮಾನವ ಕಳ್ಳ ಸಾಗಾಣಿಕೆಗೆ ಒಳಗಾಗುತ್ತಿದ್ದಾರೆ. ವಲಸೆ ಹೋದ ಕುಟುಂಬಗಳು ತಮ್ಮ ಪೋಷಕರನ್ನು ಮಕ್ಕಳು ನೋಡಿಕೊಳ್ಳುವ ನೆಪದಲ್ಲಿ, ಹಣ ಸಂಪಾದನೆ ಮಾಡಲು ತಮ್ಮ ತಂದೆ ತಾಯಿಗಳು ಖಾಸಗಿ ಮಕ್ಕಳ ಪಾಲನೆ ಕೇಂದ್ರಗಳಲ್ಲಿ ಕೆಲಸಕ್ಕೆ ಕಳುಹಿಸುತ್ತಿದ್ದಾರೆ, ಇದು ಸಹ ಮಾನವ ಕಳ್ಳ ಸಾಗಾಣಿಕೆ ಎಂದು ಹೇಳಬಹುದು ಎಂದರು.

ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ ಜಿಲ್ಲಾ ಸಂಯೋಜಕರು ಆಶಾಬೇಗಂ ಪ್ರತಿಜ್ಞಾ ವಿಧಿ ಬೋಧಿಸಿದರು. ಅಧ್ಯಕ್ಷತೆ ವಹಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ತಿಪ್ಪಣ್ಣ ಸಿರಸಗಿ ಮಾತನಾಡಿದರು. ಈ ಸಂದರ್ಭದಲ್ಲಿ ಯಾದಗಿರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ತಿಪ್ಪಣ್ಣ ಸಿರಸಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿಗಳು ಗುರುರಾಜ, ಯಾದಗಿರಿ ಶಿಶು ಅಭಿವೃದ್ಧಿ ಯೋಜನೆ ದೀಪಿಕಾ, ಜಿಲ್ಲಾ ಮಿಷನ್ ಸಂಯೋಜಕರು ಯಲ್ಲಪ್ಪ.ಕೆ, ಯಾದಗಿರಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕ ಶಿಶು ಅಭಿವೃದ್ಧಿ ಯೋಜನೆ ಹಿರಿಯ ಮೇಲ್ವಿಚಾರಕಿಯರು ಉಷಾ ಬಳಗನೂರು ಉಪಸ್ಥಿತರಿದ್ದರು.

ಯಾದಗಿರಿ ಸಮಗ್ರ ಶಿಶು ಸಂರಕ್ಷಣಾ ಯೋಜನೆ ಇವರ ಸಂಯುಕ್ತಾಶ್ರಯದಲ್ಲಿ ಮಾನವ ಕಳ್ಳ ಸಾಗಾಣಿಕೆ ತಡೆ ದಿನಚರಣೆ ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ ಉದ್ಘಾಟಿಸಿದರು.

ಮಾನವ ಕಳ್ಳ ಸಾಗಣೆ ಸಾಮಾಜಿಕ ಪಿಡುಗಾಗಿದ್ದು, ಅತಿ ಹೆಚ್ಚು ಮಹಿಳೆಯರು ಮತ್ತು ಮಕ್ಕಳು ಇದಕ್ಕೆ ಒಳಗಾಗುತ್ತಿದ್ದಾರೆ. ಮಹಿಳೆಯರು ಮತ್ತು ಮಕ್ಕಳ ಮೇಲೆ ಎಷ್ಟೋ ದೌರ್ಜನ್ಯಗಳು ನಡೆಯುತ್ತಿವೆ. ಮಕ್ಕಳಿಗೆ ಯಾವುದೇ ಒಂದು ಆಸೆ ತೋರಿಸಿ ಅವರನ್ನು ದುಷ್ಕೃತ್ಯಗಳಿಗೆ ಬಳಸಿಕೊಳ್ಳುತ್ತಿದ್ದಾರೆ.

-ಮರಿಯಪ್ಪ, ಹಿರಿಯ ಸಿವಿಲ್ ನ್ಯಾಯಾಧೀಶ

ಪ್ರತೀಕ್ ಚವ್ಹಾಣ ಪ್ರಕರಣ ಎಸ್‌ಐಟಿಗೆ ವಹಿಸಿ

ಬೀದರ: ಔರಾದ ಶಾಸಕ ಪ್ರಭು ಚವ್ಹಾಣ ಪುತ್ರ ಪ್ರತೀಕ್ ಚವ್ಹಾಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣ ಎಸ್‌ಐಟಿ ತನಿಖೆಗೆ ವಹಿಸಬೇಕು ಎಂದು ಏಕತಾ ಫೌಂಡೇಶನ್ ಅಧ್ಯಕ್ಷ ರವಿಸ್ವಾಮಿ ಸರಕಾರಕ್ಕೆ ಮನವಿ ಮಾಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಪ್ರಭು ಚವ್ಹಾಣ ಅವರು ನಾಲ್ಕು ಬಾರಿ ಶಾಸಕರಾಗಿ ಹಾಗೂ ಮಂತ್ರಿಯಾಗಿದ್ದರು. ಅವರು ಪ್ರಭಾವಿ ರಾಜಕಾರಣಿ ಆಗಿದ್ದು. ಯುವತಿಗೆ ನಿಶ್ಚಿತಾರ್ಥ ಮಾಡಿ ಮದುವೆಯಾಗಿ ನಂಬಿಸಿ ಮೋಸ ಮಾಡಲಾಗಿದೆ. ಜುಲೈ 5 ತಾರೀಖಿನಂದು ಯುವತಿಯ ಕುಟುಂಬಸ್ಥರು ಶಾಸಕರ ಮನೆಗೆ ಹೋಗಿದ್ದಾಗ ಅವರ ಮೇಲೆ ಹಲ್ಲೆ ಮಾಡಲಾಗಿದೆ. ನಂತರ ಸಂತ್ರಸ್ಥೆ ಯುವತಿಯು ಮಹಿಳಾ ಆಯೋಗಕ್ಕೆ ದೂರು ನೀಡಿದ ನಂತರ ಶಾಸಕರು ಪ್ರಭಾವ ಬಳಸಿಕೊಂಡು ಯುವತಿಯ ಕುಟುಂಬಸ್ಥರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಈ ಪ್ರಕರಣ ಕುರಿತು ಯಾವುದೇ ಸಂಘಟನೆಯ ಪದಾಧಿಕಾರಿಗಳು ಪ್ರಶ್ನಿಸಿದರೆ. ಹೋರಾಟ ಕೈಗೊಂಡರೆ ಅಂತಹವರ ಮೇಲೆ ಸುಳ್ಳು ಪ್ರಕರಣ ದಾಖಲಿಸುವ ಮೂಲಕ ಔರಾದನಲ್ಲಿ ಭಯದ ವಾತಾವರಣ ಶ್ರಷ್ಟಿಸಿದ್ದಾರೆ. ಆದರೆ ಅನ್ಯಾಯವಾದ ಮಹಿಳೆಯರ ಬೆಂಬಲಕ್ಕೆ ಏಕತಾ ಫೌಂಡೇಶನ್ ಬೆನ್ನೆಲುಬಾಗಿ ನಿಲ್ಲುವ ಮೂಲಕ ನ್ಯಾಯ ಒದಗಿಸಲು ಬದ್ದ ಎಂದು ತಿಳಿಸಿದರು.

ಮುಖಂಡರಾದ ಸಂದೀಪ ಹಂಗರಗಾ. ತೇಜೆರಾವ ಮೂಳೆ, ಅಶೋಕರಾವ ಪಾಟೀಲ್, ಉಮಾಕಾಂತ ಉಪಸ್ಥಿತರಿದ್ದರು.

ಬೇಟಿ ಪಡಾವೊ ಬೇಟಿ ಬಚಾವೊ ಎಂದು ಹೇಳಿಕೊಳ್ಳುವ ಬಿಜೆಪಿ ಮುಖಂಡರು ಮೌನವಹಿಸಿರುವುದು ಯಾಕೆ ಎಂದು ಪ್ರಶ್ನಿಸಿದ ಅವರು ಅನ್ಯಾಯವಾದ ಯುವತಿಯರಿಗೆ ನ್ಯಾಯ ಸಿಗಬೇಕು. ಪ್ರತೀಕ ಚವ್ಹಾಣಗೆ ಬಂಧಿಸಬೇಕು ಎಂದು ಒತ್ತಾಯಿಸಿದರು. ಸಂವಿಧಾನದ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡಿ ಅತ್ಯಾಚಾರಿ ಮಗನನ್ನು ಮುಚ್ಚಿಟ್ಟಿರುವ ಶಾಸಕ ಹಾಗೂ ಅವನ ಮಗನನ್ನು ಬಂಧಿಸಬೇಕು. ಸಂತ್ರಸ್ಥೆಗೆ ನ್ಯಾಯ ಸಿಗಬೇಕು.

-ರವಿಸ್ವಾಮಿ, ಏಕತಾ ಫೌಂಡೇಶನ್ ಅಧ್ಯಕ್ಷ



ಪತ್ರಕರ್ತರ ಸಂಘದಿಂದ ಪತ್ರಿಕಾ ದಿನ ನಾಳೆ

ನಗರದ ಪತ್ರಿಕಾ ಪಟ್ಟಣದಲ್ಲಿ ಪತ್ರಿಕಾ ದಿನಾಚರಣೆಯ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಲಾಯಿತು.

ಸುರಪುರ: ನಗರದ ತಾಪಂ ಸಭಾಂಗಣದಲ್ಲಿ ಕಾರ್ಯನಿರತ ಪತ್ರಕರ್ತರ ಪತ್ರಕರ್ತರ ಸಂಘದ ತಾಲೂಕು ಘಟಕದ ವತಿಯಿಂದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ತಾಲೂಕಾಧ್ಯಕ್ಷ ಶ್ರೀಕರ್ ಭಟ್ ಜೋಶಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸೋಮವಾರ ಬೆಳಗ್ಗೆ 10 ಗಂಟೆಗೆ ನಡೆಯುವ ಪತ್ರಿಕಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಶಾಸಕ ರಾಜಾ ವೇಣುಗೋಪಾಲ್ ನಾಯಕ ಉದ್ಘಾಟಿಸಲಿದ್ದು, ಸಾನಿಧ್ಯವನ್ನು ನಿಷ್ಠೆ ಕಡ್ಲಪ್ಪನವರ ವಿರಕ್ತ ಮಠದ ಪ್ರಭುಲಿಂಗ ಮಹಾಸ್ವಾಮಿಗಳು ವಹಿಸುವರು. ನಗರಸಭೆ ಅಧ್ಯಕ್ಷೆ ಹೀನಾಕೌಸರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಪ್ರಕಾಶ್ ಗುತ್ತೇದಾರ, ಉಪಾಧ್ಯಕ್ಷ ರಾಜಾ ಪಿಡ್ಡನಾಯಕ, ತಹಸೀಲ್ದಾರ್ ಎಚ್.ಎ.ಸರ್ಕಾವಸ್, ತಾಪಂ ಇಒ ಬಸವರಾಜ್ ಸಜ್ಜನ್, ತಾಲೂಕು ಆರೋಗ್ಯಧಿಕಾರಿ ಡಾ. ಆರ್ ವಿ ನಾಯಕ್, ಸಿಪಿಐ ಉಮೇಶ್.ಎಂ, ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕಿನ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಇದೇ ವೇಳೆ ತಾಲೂಕು ಸಂಘದ ವತಿಯಿಂದ ವಿಶೇಷ ಜೀವಮಾನ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತರಾದ ಗಿರೀಶ್ ಶಾಬಾದಿ ಅವರಿಗೆ ನೀಡಿ ಗೌರವಿಸಲಾಗುವುದು ಎಂದ ಅವರು, ದಿ.ಸುನಿತಾ ಹೊನ್ನಪ್ಪ ತೆಲ್ಕರ್ ಅವರ ಸ್ಮರಣಾರ್ಥ ಪ್ರಶಸ್ತಿಯನ್ನು ಮತ್ತೋರ್ವ ಹಿರಿಯ ಪತ್ರಕರ್ತ ಅಶೋಕ್ ಸಾಲವಾಡಗಿ ಅವರಿಗೆ ನೀಡಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಸಾಧನೆಗೈದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವುದಾಗಿ ವಿವರಿಸಿದರು.

ಸಂದರ್ಭದಲ್ಲಿ ಗಿರೀಶ್ ಶಾಬಾದಿ, ಸಿದ್ದಯ್ಯ ಪಾಟೀಲ್, ಮಲ್ಲು ಗುಳಗಿ, ಧೀರೇಂದ್ರ ಕುಲಕರಣಿ, ಹೊನ್ನಪ್ಪ ತೇಲ್ಕರ, ಕ್ಷೀರಲಿಂಗಯ್ಯ ಹಿರೇಮಠ, ರಾಜು ಕುಂಬಾರ, ಪರಶುರಾಮ್ ಮಲಿಬಾವಿ, ಪುರುಷೋತ್ತಮ ನಾಯಕ, ಮನಮೋಹನ್ ಪ್ರತಿಹಸ್ತ, ಶ್ರೀಮಂತ ಚಲುವಾದಿ, ಮುರಳಿದರ ಅಂಬುರೆ, ವೆಂಕಟೇಶ್ ಯಾದವ, ಉಸ್ಮಾನ್ ಪಟೇಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಕ್ಕಳನ್ನ ಕೂಡಿ ಹಾಕಿ ಕೆಲಸಕ್ಕೆ ಹೋದ ಸಹಾಯಕಿ

ಯಾದಗಿರಿ: ಅಂಗನವಾಡಿ ಕೇಂದ್ರದಲ್ಲಿ ಮಕ್ಕಳನ್ನು ಕೂಡಿ ಹಾಕಿ ಸಹಾಯಕಿಯೊಬ್ಬಳು ಜಮೀನು ಕೆಲಸಕ್ಕೆ ಹೋದ ಅಮಾನವೀಯ ಘಟನೆಯೊಂದು ತಡವಾಗಿ ಬೆಳಕಿಗೆ ಬಂದಿದೆ. ಜಿಲ್ಲೆಯ ಗುರುಮಠಕಲ್ ತಾಲೂಕಿನ ಬುದೂರ್ ಗ್ರಾಮದ ಕೇಂದ್ರ-1 ಅಂಗನವಾಡಿಯಲ್ಲಿ ಜು. 31ರಂದು ಘಟನೆ ನಡೆದಿದೆ ಎನ್ನಲಾಗಿದ್ದು, ಇದೀಗ ಬಯಲಾಗಿದೆ. ಸಹಾಯಕಿ ವಿರುದ್ಧ ಭಾರೀ ಜನಾಕ್ರೋಶ ವ್ಯಕ್ತವಾಗಿದೆ.

ಸಾವಿತ್ರಮ್ಮ ಎನ್ನುವರು ಮಕ್ಕಳನ್ನು ಕೇಂದ್ರದೊಳಗೆ ಬೀಗ ಹಾಕಿ ಜಮೀನು ಹೋಗಿರುವ ಅಂಗನವಾಡಿ ಸಹಾಯಕಿಯಾಗಿದ್ದಾಳೆ.

ಪ್ರಕರಣದ ವಿವರ: ಬುದೂರ್ ಗ್ರಾಮದ ಕೇಂದ್ರ-1 ಅಂಗನವಾಡಿಯ ಮುಖ್ಯ ಸಹಾಯಕಿ ಮಾಸಿಕ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಬೇರೊಂದು ಗ್ರಾಮಕ್ಕೆ ತೆರಳಿದ್ದಾರೆ. ಈ ವೇಳೆ, ಸಹಾಯಕಿ ಸಾವಿತ್ರಮ್ಮ ಮಕ್ಕಳನ್ನು ಕೊಠಡಿಯಲ್ಲಿ ಕೂಡಿಹಾಕಿ ಜಮೀನು ಕೆಲಸಕ್ಕೆ ಹೋಗಿದ್ದಾರೆ. ಲಾಕ್ ಆಗಿರುವ ಕೊಠಡಿಯಲ್ಲಿ ಸಿಲುಕಿದ ಮಕ್ಕಳು ಭಯದಿಂದ ಅಳಲು ಆರಂಭಿಸಿದ್ದಾರೆ. ಮಕ್ಕಳ ಅಳುವಿನ ಶಬ್ದ ಕೇಳಿದ ಸ್ಥಳೀಯರು ಬಂದು ನೋಡಿದರೆ ಅಂಗನವಾಡಿ ಲಾಕ್ ಆಗಿರುವುದು ಬೆಳಕಿಗೆ ಬಂದಿದೆ. ಇದನ್ನು ಕಂಡು ತಕ್ಷಣ ತಕ್ಷಣ ಮುಖ್ಯ ಸಹಾಯಕಿಗೆ ವಿಷಯ ತಿಳಿಸಲಾಗಿದ್ದು, ಮುಖ್ಯ ಸಹಾಯಕಿ ಸ್ಥಳಕ್ಕೆ ಆಗಮಿಸಿ ಬಾಗಿಲು ತೆರೆದು ಮಕ್ಕಳನ್ನು ರಕ್ಷಿಸಿದ್ದಾರೆ.

ಮಕ್ಕಳು ಶಾಲೆಗೆ ಬಾರದಿದ್ದರೆ ಮನೆ ಮುಂದೆ ಧರಣಿ

ಕೆಂಭಾವಿ: ಪಾಲಕರು ತಮ್ಮ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಪ್ರತಿದಿನ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು. ಪಟ್ಟಣದ ಮಕ್ಕಳು ಶಾಲೆಗೆ ಬಾರದಿದ್ದಾರೆ ಪುರಸಭೆ ವತಿಯಿಂದ ಆಯಾ ವಾರ್ಡ್ ಸದಸ್ಯರೆಲ್ಲರೂ ಸೇರಿದಂತೆ ವಿದ್ಯಾರ್ಥಿಗಳ ಮನೆಯ ಮುಂದೆ ಧರಣಿ ಕೂತು ಶಾಲೆಗೆ ಕರೆತರುವ ತೀರ್ಮಾನ ಮಾಡಬೇಕಾಗುತ್ತದೆ ಎಂದು ಪುರಸಭೆ ಅಧ್ಯಕ್ಷ ರಹೇಮಾನ ಪಟೇಲ್ ಯಲಗೋಡ ಹೇಳಿದರು.

ಪಟ್ಟಣದ ಸರಕಾರಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ಪ್ರತಿನಿತ್ಯ ವಿಶೇಷ ಓದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ಸರಕಾರಿ ಶಾಲೆಗಳ ಎಸ್‌ಎಸ್‌ಎಲ್‌ಸಿ ಫಲಿತಾಂಶ ಗಣನೀಯವಾಗಿ ಕುಂಠಿತವಾಗುತ್ತಿರುವುದರಿಂದ ಪಾಲಕರು ಸೇರಿದಂತೆ ಶಿಕ್ಷಣ ಪ್ರೇಮಿಗಳಲ್ಲಿ ಆತಂಕ ಮೂಡಿದೆ. ಅದರಲ್ಲೂ ನಮ್ಮ ಯಾದಗಿರಿ ಜಿಲ್ಲೆಯ ಫಲಿತಾಂಶ ನೋಡಿದರೆ ನಿಜಕ್ಕೂ ಚಿಂತೆಗೀಡು ಮಾಡಿದೆ ಎಂದ ಅವರು, ಈ ಬಾರಿ ಶಾಲೆಯ ಮುಖ್ಯಗುರುಗಳಾದ ವಿಶ್ವನಾಥ ಹರಸೂರ ಹಾಗೂ ಇಲ್ಲಿನ ಶಿಕ್ಷಕರು ವಿಶೇಷ ಕಾಳಜಿ ವಹಿಸಿ ಹೆಚ್ಚಿನ ಕಲಿಕೆಯ ಹಿತದೃಷ್ಟಿಯಿಂದ ಪ್ರತಿದಿನ ಸಾಯಂಕಾಲ ಎರಡು ಗಂಟೆಗಳ ವಿಶೇಷ ಓದು ಕಾರ್ಯಕ್ರಮ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸಂತಸ ತಂದಿದೆ ಎಂದರು. ಕಾರ ಹಿರಿಯ ಪತ್ರಕರ್ತ ಸಂಜೀವರಾವ್ ಕುಲ್ಕರ್ಣಿ ಮಾತನಾಡಿ, ನಮ್ಮ ಪ್ರೌಢ ಶಾಲೆಯಲ್ಲಿ ಕಲಿತ ಅದೆಷ್ಟೋ ಜನ ವಿದ್ಯಾರ್ಥಿಗಳು ಇಂದು ಉನ್ನತ ಹುದ್ದೆಯಲ್ಲಿದ್ದಾರೆ. ಶ್ರೇಷ್ಠ ಗುರು ವೃಂದ ಕಂಡಂತಹ ಮತ್ತು ಶೈಕ್ಷಣಿಕವಾಗಿ ಇತಿಹಾಸ ಸೃಷ್ಟಿದ ಶಾಲೆ ಇದಾಗಿದ್ದು, ಇಂದು ಹಮ್ಮಿಕೊಂಡ ವಿಶೇಷ ಓದು ಕಾರ್ಯಕ್ರಮ ನಿರಂತರ ನಡೆಯುವುದರ ಮೂಲಕ ಶಾಲೆಯ ಇತಿಹಾಸ ಮರುಕಳಿಸುವಂತಾಗಲಿ ಪಟ್ಟಣದ ಹಲವರು ಸಹಕಾರ ನೀಡಲಾಗುವುದು ಎಂದರು.

ಮುಖ್ಯ ಗುರುಗಳಾದ ವಿಶ್ವನಾಥ ಹರಸೂರ ಮಾತನಾಡಿದರು.

ಈ ವೇಳೆ ರಾಘವೇಂದ್ರ ದೇಶಪಾಂಡೆ, ಸಿಆರ್‌ಸಿ ಬಂದೇನವಾಜ್ ನಾಲ್ತವಾಡ್, ಮುಖಂಡ ಶಿವಪ್ಪ.ಜಿ.ಕಂಬಾರ, ರಂಗಪ್ಪ ಭೋವಿ, ಗುರು ಕುಲ್ಕರ್ಣಿ, ಶಿಕ್ಷಕ ಸಿಬ್ಬಂದಿ ಶ್ರೀಕಾಂತ, ಸಿದ್ರಾಮ ಹಂಡಿ, ದತ್ತಾತ್ರಯ ಕುಲ್ಕರ್ಣಿ, ಸಂಜೀವ ಪರಗೊಂಡ, ಬಾಹುಬಲಿ ಸೇರಿದಂತೆ ಹತ್ತನೇ ತರಗತಿ ಮಕ್ಕಳು ಭಾಗವಹಿಸಿದ್ದರು.

ಪಟ್ಟಣದ ಸರಕಾರಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ಪ್ರತಿನಿತ್ಯ ವಿಶೇಷ ಓದು ಕಾರ್ಯಕ್ರಮವನ್ನು ಪುರಸಭೆ ಅಧ್ಯಕ್ಷ ರಹೇಮಾನ ಪಟೇಲ್ ಯಲಗೋಡ ಉದ್ಘಾಟಿಸಿದರು.

₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಭಾನುವಾರ 03.08.2025 ಸಂಪುಟ: 68 ಸಂಚಿಕೆ: 90 ಪುಟಗಳು: 12+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜೈಸ್ವಾಲ್ ಯಶಸ್ವಿ ಶತಕ

ಲಂಡನ್‌ನ ಕೆನ್ನಿಂಗ್ಟನ್ ಓವಲ್‌ನಲ್ಲಿ ನಡೆಯುತ್ತಿರುವ ಭಾರತ-ಇಂಗ್ಲೆಂಡ್ ನಡುವಿನ ಅಂತಿಮ ಟೆಸ್ಟ್‌ನ 2ನೇ ಇನ್ನಿಂಗ್ಸ್‌ನ 3ನೇ ದಿನವಾದ ಶನಿವಾರ, ಭಾರತ ತಂಡದ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಆಕರ್ಷಕ ಶತಕ ಬಾರಿಸುವ ಮೂಲಕ ತಂಡಕ್ಕೆ ಆಧಾರ ಸ್ತಂಭ ಎನಿಸಿದರು. 164 ಬಾಲ್‌ಗಳನ್ನು ಎದುರಿಸಿ 118 ರನ್‌ಗಳನ್ನು ಗಳಿಸಿ ಔಟಾದ ಯಶಸ್ವಿ ಜೈಸ್ವಾಲ್, ಟೀಮ್ ಇಂಡಿಯಾ ಗೌರವಾರ್ಹ ಮೊತ್ತ ತಲುಪುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸೊಂಪಾದ ಪುಟಗಳು



ನಂಬಿಕೆ, ಗೌರವ, ಸಂಸ್ಕೃತಿಯ ಬುನಾದಿ ಮೇಲೆ ಕಟ್ಟಿದ ಭಾರತ - ಭೂತಾನ್ ಸಂಬಂಧ

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6



ಅಲ್ಲಿರುವುದು ನಮ್ಮನೆ... ಇಲ್ಲಿ ಬಂದೆ ಸುಮ್ಮನೆ!

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ನಿಮ್ಮ ನಿರ್ಧಾರಗಳನ್ನು ನೀವು ಸಮರ್ಥಿಸಿಕೊಳ್ಳಬೇಕಿಲ್ಲ ಅಥವಾ ಸ್ಪಷ್ಟೀಕರಣ ನೀಡಬೇಕಿಲ್ಲ. ಅಷ್ಟಕ್ಕೂ ಇದು ನಿಮ್ಮ ಜೀವನ. ಆದರೆ ವಿಷಾದ, ಕ್ಷಮೆಯಾಚಿಸುವಂಥ ಯಾವ ನಿರ್ಧಾರವನ್ನೂ ತೆಗೆದುಕೊಳ್ಳಬಾರದಷ್ಟೇ.

ವಕ್ರತುಂಡೋಕ್ತಿ



ಕೆಲವರು ವಾದ ಮಾಡುವುದಿಲ್ಲ. ತಾವೇ ಸರಿ ಎಂಬುದನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾರೆ.

ಜೀವಿತಾವಧಿ ಶಿಕ್ಷೆಯೊಂದಿಗೆ 11.60 ಲಕ್ಷ ದಂಡ
ನ್ಯಾಯಾಲಯದಲ್ಲಿಯೇ ಪ್ರಜ್ವಲ್ ಕಣ್ಣೀರು
ರೇಪಿಸ್ಟ್ ಪ್ರಜ್ವಲ್‌ಗೆ ಜೀವಿತಾವಧಿ ಜೈಲು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮನೆಗೆಲಸದ ಮಹಿಳೆ ಮೇಲಿನ ಅತ್ಯಾಚಾರ ಆರೋಪ ಸಾಬೀತಾದ ಹಿನ್ನೆಲೆ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣನಿಗೆ ಜೀವಿತಾವಧಿಗೆ ಜೈಲು ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಕೇವಲ ನಾಲ್ಕು ತಿಂಗಳ ದಾಖಲೆ ಸಮಯದಲ್ಲೇ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ತೀರ್ಪು ಪ್ರಕಟಿಸಿದ್ದಾರೆ. ಮೂರು ಅತ್ಯಾಚಾರ ಪ್ರಕರಣ ಮತ್ತು 1 ಲೈಂಗಿಕ ದೌರ್ಜನ್ಯ ಸೇರಿ ಒಟ್ಟು 4 ಪ್ರಕರಣಗಳ ಪೈಕಿ ಒಂದರಲ್ಲಿ ತೀರ್ಪು ಹೊರ ಬಿದ್ದಂತಾಗಿದೆ. ಪ್ರಜ್ವಲ್ ತಪ್ಪಿತಸ್ಥ ಎಂಬುದು ಸಾಬೀತಾಗಿದೆ. ಪ್ರಜ್ವಲ್ ದೋಷಿ ಎಂದು ಶುಕ್ರವಾರ ತೀರ್ಪು ನೀಡಿದ್ದ ಕೋರ್ಟ್, ಶಿಕ್ಷೆ ಪ್ರಮಾಣದ ಆದೇಶವನ್ನು ಶನಿವಾರಕ್ಕೆ ಮುಂದೂಡಿತ್ತು. ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪ ಸಂಬಂಧ ಶನಿವಾರ ವಾದ -ಪ್ರತಿವಾದ ಸುದೀರ್ಘ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾ. ಸಂತೋಷ್ ಗಜಾನನ ಭಟ್ ಅವರು, ಆರೋಪಿಗೆ ಜೀವಾವಧಿ ಶಿಕ್ಷೆಯೊಂದಿಗೆ 11 ಲಕ್ಷದ 60 ಸಾವಿರ ರು. ದಂಡ ವಿಧಿಸಿ ಆದೇಶಿಸಿದ್ದಾರೆ. ಜತೆಗೆ ಸಂತ್ರಸ್ತೆಗೆ 11 ಲಕ್ಷ ರು.ಗಳ ಪರಿಹಾರ ನೀಡಲು ಸೂಚಿಸಿದ್ದಾರೆ.

ರಾಜಕೀಯವಾಗಿ ಬೇಗ ಬೆಳೆದದ್ದೇ ನನ್ನ ತಪ್ಪು

> ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಬಲರಾದ ಪ್ರಜ್ವಲ್ ಮಹಿಳೆ ಮೇಲೆ ದುಷ್ಕೃತ್ಯ ಎಸಗಿದ್ದರು. ಈ ಪ್ರಕರಣದಲ್ಲಿ ಸಂತ್ರಸ್ತ ಮಹಿಳೆ ಕೊನೆವರೆಗೂ ನಮ್ಮ ಜತೆ ನಿಂತು ಶಿಕ್ಷೆ ನೀಡುವವರೆಗೂ ಇದ್ದರು. ನ್ಯಾಯಾಲಯದಲ್ಲಿ ವಾದ ಮಾಡಲು ನಮಗೆ ಮಹಿಳೆ ಸಹಕಾರ ನೀಡಿದರು.
> - **ಬಿ.ಕೆ.ಸಿಂಗ್**, ಎಸ್‌ಐಟಿ ಮುಖ್ಯಸ್ಥ

ಕೋರ್ಟ್‌ನಲ್ಲಿ ಪ್ರಜ್ವಲ್ ರೇವಣ್ಣ ಕಣ್ಣೀರು: ವಾದ, ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಪ್ರಜ್ವಲ್ ಕುರಿತು, ನೀವೇನಾದರೂ ಹೇಳಲು ಬಯಸುವಿರೇ ಎಂದು ಪ್ರಶ್ನಿಸಿದರು. → 4

ಬಿಜೆಪಿಯಿಂದ 5ಕ್ಕೆ ಪ್ರತಿಭಟನೆ

ಬೆಂಗಳೂರು: ಮತಗಳ್ಳತನ ಆರೋಪಕ್ಕೆ ಸಂಬಂಧಿಸಿದಂತೆ ಆ.5ರಂದು ಬೆಂಗಳೂರಿನಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ನೇತೃತ್ವದಲ್ಲಿ ಪ್ರತಿಭಟನೆಯ ಬೆನ್ನಲ್ಲೇ, ಇದಕ್ಕೆ ಪ್ರತಿಯಾಗಿ ರಾಜ್ಯ ಬಿಜೆಪಿಯಿಂದಲೂ ಅದೇ ದಿನ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆದರೆ, ವಿಜಯೇಂದ್ರ ನೇತೃತ್ವದಲ್ಲಿ ವಿಧಾನಸೌಧದ ಮುಂಭಾಗ ಪ್ರತಿಭಟನೆ ನಡೆಯಲಿದೆ.

ರಮ್ಯಾ ಪ್ರಕರಣ: ಇಬ್ಬರ ಬಂಧನ

ಬೆಂಗಳೂರು: ನಟಿ ರಮ್ಯಾ ವಿರುದ್ಧ ಅಶ್ಲೀಲ ಕಾಮೆಂಟ್ ಹಾಗೂ ಸಂದೇಶ ಕಳುಹಿಸಿದ ಆರೋಪದಲ್ಲಿ ಇಬ್ಬರನ್ನು ಬಂಧಿಸಲಾಗಿದೆ. ಈಗಾಗಲೇ 13 ಜನರನ್ನು ಗುರುತಿಸಲಾಗಿದ್ದು, ಇದರಲ್ಲಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿರುವ ಪೊಲೀಸರು, ಉಳಿದವರಿಗಾಗಿ ಹುಡುಕಾಟ ಆರಂಭಿಸಿದ್ದಾರೆ. ಪ್ರಕರಣ ಸಂಬಂಧ ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಇತಿಹಾಸದಲ್ಲೇ ಮೊದಲ ಬಾರಿಗೆ ರವಾನೆ
ನಮ್ಮ ಮೆಟ್ರೋದಲ್ಲಿ ಅಂಗಾಂಗ ಸಾಗಾಟ

ಬೆಂಗಳೂರು: ನಮ್ಮ ಮೆಟ್ರೋ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಮಾನವನ ಅಂಗಾಂಗವನ್ನು ಒಂದು ಆಸ್ಪತ್ರೆಯಿಂದ ಇನ್ನೊಂದು ಆಸ್ಪತ್ರೆಗೆ ರವಾನಿಸಲಾಗಿದೆ. ವೈಟ್ ಫೀಲ್ಡ್‌ನ ವೈದೇಹಿ ಆಸ್ಪತ್ರೆಯಿಂದ ಆರ್ ಆರ್ ನಗರದ ಸ್ಪರ್ಶ ಆಸ್ಪತ್ರೆಗೆ ಅಂಗಾಂಗಳನ್ನು ಸಾಗಿಸಲಾಗಿದೆ. ರಸ್ತೆಯಲ್ಲಿ ಸಂಚಾರ ದಟ್ಟಣೆ ಹಾಗೂ ಇತರೆ ಅಡೆತಡೆಗಳಿಂದ ವಿಳಂಬವಾಗುತ್ತದೆ ಎನ್ನುವ ಕಾರಣದಿಂದಾಗಿ ಈ ಮಹತ್ವದ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ತಿಳಿದುಬಂದಿದೆ. ಶುಕ್ರವಾರ ರಾತ್ರಿ ಮೆಟ್ರೋ ರೈಲು ರಾತ್ರಿ 8:42ಕ್ಕೆ ವೈಟ್ ಫೀಲ್ಡ್ ನಿಲ್ದಾಣದಿಂದ ಹೊರಟು, ರಾತ್ರಿ 9:48ಕ್ಕೆ ಆರ್‌ಆರ್ ನಗರದ ಮೆಟ್ರೋ ನಿಲ್ದಾಣಕ್ಕೆ ತಲುಪಿತು. ಅಲ್ಲಿ ಮತ್ತೊಬ್ಬ ಎಎಸ್‌ಒ ಮತ್ತು ಮೆಟ್ರೋ ಸಿಬ್ಬಂದಿ ವೈದ್ಯಕೀಯ ತಂಡವನ್ನು ಸ್ವಾಗತಿಸಿ, ಕಾಯುತ್ತಿರುವ ಆಂಬ್ಯುಲೆನ್ಸ್‌ಗೆ ವರ್ಗಾವಣೆ ಮಾಡುವಲ್ಲಿ ನೆರವಾಗಿದ್ದು, ಈ ಮೂಲಕ ಅಂಗಾಂಗ ಶಸ್ತ್ರಚಿಕಿತ್ಸೆಗೆ ಅಗತ್ಯವಾದ ಸಮಯಕ್ಕೆ ಅಂಗವನ್ನು ಸ್ಪರ್ಶ ಆಸ್ಪತ್ರೆಗೆ ತಲುಪಿಸಲಾಯಿತು.

5ನೇ ದಿನದ ಕಾರ್ಯಾಚರಣೆ ಅಂತ್ಯ
ಶನಿವಾರವೂ ಸಿಗದ ಒಂದೂ ಕಳೇಬರ

ಧರ್ಮಸ್ಥಳ: ಮುಸುಕುಧಾರಿ ಅಜ್ಞಾತ ವ್ಯಕ್ತಿ ದೂರುದಾರ ಸೂಚಿಸಿದ 13 ಸ್ಥಳಗಳಲ್ಲಿ 8,9 ಮತ್ತು 10ನೇ ಸ್ಥಳದಲ್ಲಿ ಎಸ್ಐಟಿಗೆ ಮೂಳೆಗಳ ಕುರುಹು ಕೂಡ ಸಿಗದೇ ಶೋಧ ಅಂತ್ಯಗೊಂಡಿದೆ.

10ನೇ ಪಾಯಿಂಟ್‌ನಲ್ಲಿ ಮೂರು ಶವಗಳನ್ನು ಹೂತುಹಾಕಲಾಗಿದೆ ಎಂದು ವಿಚಾರಣೆಯಲ್ಲಿ ಹೇಳಿದ್ದ. ಇದರಂತೆ 10ನೇ ಪಾಯಿಂಟ್ ಉತ್ಖನನ ಕಾರ್ಯಾಚರಣೆ ನಡೆಸಲಾಗಿದೆ. ಭಾರಿ ಮಳೆ ನಡುವೆ ಕಾರ್ಯಾಚರಣೆ ನಡೆಸಲಾಗಿತ್ತು. ಆದರೆ ಒಂದೂ ಕಳೇಬರ ಪತ್ತೆಯಾಗಿಲ್ಲ. ಹೀಗಾಗಿ 10ನೇ ಪಾಯಿಂಟ್ ಕಾರ್ಯಾಚರಣೆ ಅಂತ್ಯಗೊಳಿಸಲಾಗಿದೆ. 6 ಅಡಿ ಅಗೆದರೂ ಯಾವುದೇ ಕಳೇಬರ ಪತ್ತೆಯಾಗಿಲ್ಲ. ಹೀಗಾಗಿ ಕಾರ್ಯಾಚರಣೆ ಅಂತ್ಯಗೊಳಿಸಿದ್ದಾರೆ.

ಬೇರೆ ದೇಶಗಳು ಮೆಚ್ಚಿವೆ, ಪ್ರತಿಪಕ್ಷಗಳು ಸಹಿಸುತ್ತಿಲ್ಲ: ಪ್ರಧಾನಿ ಮೋದಿ
ಆಪರೇಷನ್ ಸಿಂಧೂರ ಭಾರತದ ರುದ್ರ ರೂಪ

ವಾರಾಣಸಿ: ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆಯು ಭಾರತದ ಅಂತಃಶಕ್ತಿಯನ್ನು ಜಗತ್ತಿಗೆ ಪ್ರದರ್ಶಿಸಿದೆ. ಭಾರತದ 'ರುದ್ರ ರೂಪ'ವನ್ನು ಕಂಡವರು ದಾಳಿ ಮಾಡಲು ಧೈರ್ಯ ಮಾಡುವುದಿಲ್ಲ. ತನ್ನ ತಂಟೆಗೆ ಬಂದ ಯಾರನ್ನೂ ಭಾರತ ಸುಮ್ಮನೇ ಬಿಡುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಆಪರೇಷನ್ ಸಿಂದೂರ್ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ತಾವು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ಶನಿವಾರ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟದ ಕೆಚ್ಚು ವಿವರಿಸಲು ಶಿವನ 'ರುದ್ರ ರೂಪ'ದ ಉಲ್ಲೇಖ ಮಾಡಿದರು. 140 ಕೋಟಿ ದೇಶವಾಸಿಗಳ ಏಕತೆಯೇ ಆಪರೇಷನ್ ಸಿಂದೂರದ ನೈಜಶಕ್ತಿ. → 4

9.7 ಕೋಟಿ ರೈತರಿಗೆ 20,500 ಕೋಟಿ ರು.

'ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ' ಯೋಜನೆಯ 20ನೇ ಕಂತಿನ ಹಣ 20,500 ಕೋಟಿ ರು.ಗಳನ್ನು ದೇಶಾದ್ಯಂತದ 9.70 ಕೋಟಿ ರೈತರ ಬ್ಯಾಂಕ್ ಖಾತೆಗಳಿಗೆ ನೇರ ವರ್ಗಾವಣೆ ಪ್ರಕ್ರಿಯೆಗೂ ಪ್ರಧಾನಿ ಮೋದಿ ಇದೇ ವೇಳೆ ಚಾಲನೆ ನೀಡಿದರು.

ಸಮಾಚಾರ ಸಣ್ಣದಲ್ಲ

ಪ್ರತ್ಯೇಕ ಪ್ರಕರಣ: ವಿಷ ಸೇವಿಸಿದ್ದ ಇಬ್ಬರು ಸಾವು

ತೀರ್ಥಹಳ್ಳಿ: ಪಟ್ಟಣ ಪಂಚಾಯತ್ ನಲ್ಲಿ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದ ಯುವಕ ವಿಷ ಸೇವಿಸಿ ಪ್ರಾಣ ಕಳೆದುಕೊಂಡಿದ್ದಾನೆ. ಪ್ರಶಾಂತ್

(30 ವರ್ಷ) ಮೃತಪಟ್ಟ ಯುವಕ. ಕುಟುಂಬ ಸಮಸ್ಯೆಯಿಂದಾಗಿ ಮನ ನೊಂದು ವಿಷ ಸೇವಿಸಿದ್ದಾನೆ ಎಂದು ತಿಳಿದುಬಂದಿದೆ. ಮದ್ಯಪಾನಕ್ಕೆ ವಿಷ ಬೆರೆಸಿಕೊಂಡು ಸೇವಿಸಿದ್ದು ನಂತರ ಸ್ನೇಹಿತರಿಗೆ ತಿಳಿಸಿದ್ದಾನೆ. ತಕ್ಷಣವೇ ಆತನನ್ನು ಜೆಸಿ ಆಸ್ಪತ್ರೆ ನಂತರ ಮೆಗ್ಗಾನ್ ಆಸ್ಪತ್ರೆ ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಆಸ್ಪತ್ರೆಗೆ ರವಾನೆ ಮಾಡಲಾಗಿತ್ತು. ಆದರೆ ವಿಷ ಸಂಪೂರ್ಣ ದೇಹವನ್ನು ಆವರಿಸಿಕೊಂಡಿದ್ದ ಪರಿಣಾಮ ಚಿಕಿತ್ಸೆ ಫಲಿಸದೇ ಮಣಿಪಾಲ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ. ಕಾಲೇಜು ವಿದ್ಯಾರ್ಥಿನಿ ಚಿಕಿತ್ಸೆ ಫಲಿಸದೇ ಸಾವು: ಬಾಳೆಬೈಲಿನ ಡಿಗ್ರಿ ಕಾಲೇಜಿನಲ್ಲಿ ಮೊದಲ ವರ್ಷದ ಬಿಬಿಎ ಓದುತ್ತಿದ್ದ ವಿದ್ಯಾರ್ಥಿನಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಅಶ್ವಿನಿ (19 ವರ್ಷ) ಮೃತಪಟ್ಟ ವಿದ್ಯಾರ್ಥಿನಿ. ಯಡೂರಿನಿಂದ ತೀರ್ಥಹಳ್ಳಿಗೆ ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೇನು? ಎಂಬುದಾಗಿ ನಿಖರವಾಗಿ ತಿಳಿದು ಬಂದಿಲ್ಲ.

ಅಕ್ಕನನ್ನು ಕೊಂದವನಿಗೆ ಜೀವಾವಧಿ ಶಿಕ್ಷೆ

ಬಳ್ಳಾರಿ: ಆಸ್ತಿಗಾಗಿ ಅಕ್ಕನನ್ನೇ ಕೊಂದಿದ್ದ ವೇಣು ಗೋಪಾಲ್ ಕೆ.ಜೆ ಎಂಬುವವನಿಗೆ ಜಿಲ್ಲಾ 2ನೇ ಸೆಷನ್ಸ್ ನ್ಯಾಯಾಲಯದ ಪ್ರಭಾರ ನ್ಯಾಯಾಧೀಶರು ಕಠಿಣ ಜೀವಾವಧಿ ಶಿಕ್ಷೆ ಮತ್ತು 25 ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ದಂಡ ನೀಡಲು ವಿಫಲವಾದರೆ, 1 ವರ್ಷ ಶಿಕ್ಷೆ ವಿಧಿಸಬೇಕು ಎಂದು ಕೋರ್ಟ್ ಹೇಳಿದೆ. ಜತೆಗೆ ಮೃತ ಸುನಂದಾ ಪೂಜಾರ್ ಪುತ್ರ ಅಖಿಲ್ ಪೂಜಾರ್‌ಗೆ 50 ಸಾವಿರ ಪರಿಹಾರ ನೀಡಬೇಕು. ಇಲ್ಲವಾದರೆ ಆಸ್ತಿಯಿಂದ ಈ ಹಣವನ್ನು ಹೊಂದಿಸಿಕೊಡಬೇಕು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಸತ್ಯ ನಾರಾಯಣ ಪೇಟೆಯಲ್ಲಿ ವೇಣುಗೋಪಾಲ ನೆಲೆಸಿದ್ದರು. ಅಕ್ಕ ಸುನಂದಾ ಕೂಡ ಅದೇ ಮನೆಯಲ್ಲಿ ಇದ್ದರು. ಗಂಡನನ್ನು ಬಿಟ್ಟು ಬಂದಿದ್ದ ಆಕೆ ಆಸ್ತಿಯಲ್ಲಿ ಭಾಗ ಕೇಳಿದ್ದಕ್ಕೆ ಕೊಲೆ ಮಾಡಿದ್ದ ಎನ್ನಲಾಗಿದೆ.

ಸಾರಿಗೆ ನೌಕರರ ಮುಷ್ಕರ: ಖಾಸಗಿ ಬಸ್ ಮಾಲೀಕರೊಂದಿಗೆ ಸಭೆ

ವಿವಿಧ ಬೇಡಿಕೆಗೆ ಈಡೇರಿಕೆಗೆ ಆಗ್ರಹಿಸಿ 5ರಿಂದ 4 ನಿಗಮ ನೌಕರರಿಂದ ಹೋರಾಟ

ಬೆಂಗಳೂರು: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ಸಂಸ್ಥೆಗಳ ನೌಕರರು ಕರೆ ನೀಡಿರುವ ಅನಿರ್ದಿಷ್ಟಾವಧಿ ಮುಷ್ಕರದ ವೇಳೆ ಸಮಸ್ಯೆಯಾಗಬಾರದೆಂದು ಖಾಸಗಿ ಬಸ್ ಗಳ ಮೊರೆ ಹೋಗಲು ಇಲಾಖೆ ತೀರ್ಮಾನಿಸಿದೆ. ಆದರೀಗ, ಖಾಸಗಿ ಬಸ್ ಸಂಘಟನೆಗಳು ತಮ್ಮದೇಯಾದ 'ಹಲವು' ಬೇಡಿಕೆಯನ್ನು ಇಲಾಖೆಯ ಮುಂದಿಟ್ಟಿದ್ದಾರೆ.

ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ

ಹಾಗೂ ಕೆಕೆಆರ್‌ಟಿಸಿ ಬಸ್‌ಗಳು ಸ್ಥಗಿತಗೊಳ್ಳಲಿದ್ದು, ಈ ಮೂಲಕ ಬೇಡಿಕೆ ಈಡೇರಿಸದ ಸರಕಾರದ ವಿರುದ್ಧ ಪ್ರತಿಭಟನೆಗೆ ಮುಂದಾಗಿವೆ. ಆರು ತಿಂಗಳಿನಿಂದ ನೌಕರರ ವೇತನ ಪರಿಷ್ಕರಣೆಗೆ ಸರಕಾರ ಮೀನಮೇಷ ಎಣಿಸುತ್ತಿದ್ದು, ಕಳೆದ ವರ್ಷ ಡಿಸೆಂಬರ್ 31ರಂದು ಮುಷ್ಕರಕ್ಕೆ ನೌಕರರು ಕರೆ ನೀಡಿದ್ದರು. ಅಂದು ಸಮಾಧಾನ ಸಭೆ ನಡೆಸಿ ಬೇಡಿಕೆ ಈಡೇರಿಸುವ ಭರವಸೆ ಸರಕಾರ ನೀಡಿತ್ತು. ಆದರೆ ಇದುವರೆಗೂ ನೌಕರರ ಬೇಡಿಕೆಗೆ ರಾಜ್ಯ ಸರಕಾರ ಈಡೇರಿಸಿಲ್ಲ. ಹಾಗಾಗಿ ಆಗಸ್ಟ್ 5 ರಿಂದ ಬಸ್ ನಿಲ್ಲಿಸಿ ಮುಷ್ಕರ ಆರಂಭಿಸುತ್ತೇವೆ ಮತ್ತು ನಿಗಮಗಳ ಅಧಿಕಾರಿಗಳಿಗೆ ನೋಟಿಸ್ ಕೂಡ ಕಳುಹಿಸಲಾಗಿದೆ ಬೇಡಿಕೆ ಈಡೇರಿಸದಿದ್ದರೆ ಮುಷ್ಕರ ಮಾಡಲಾಗುವುದು ಎಂದು ಸಂಘಟನೆ ತಿಳಿಸಿದೆ.

ಖಾಸಗಿ ಬಸ್ ಮಾಲೀಕರ ಜತೆ ಸಭೆ: ಈ ನಡುವೆ ಶನಿವಾರ ಸಾರಿಗೆ ಆಯುಕ್ತ ಯೋಗೇಶ್ ನೇತೃತ್ವದಲ್ಲಿ ಖಾಸಗಿ ಮಾಲೀಕರ ಜತೆಗೆ ಸಭೆ ನಡೆಸಲು ಸಿದ್ಧತೆ ಮಾಡಿದ್ದು, ಸಾರಿಗೆ ನೌಕರರು ಬಸ್ ರಸ್ತೆಗೆ ಇಳಿಸದಿದ್ದರೆ ಪರ್ಯಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಸಭೆಯಲ್ಲಿ ಸಭೆಯಲ್ಲಿ ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತ ಯೋಗೀಶ್, ಅಪರ ಆಯುಕ್ತ ಮಲ್ಲಿಕಾರ್ಜುನ್ ಸೇರಿ ಹಿರಿಯ ಅಧಿಕಾರಿಗಳು ಭಾಗಿ ಆಗಿದ್ದರು. ಈ ವೇಳೆ ಖಾಸಗಿ ಬಸ್ ಮಾಲೀಕರಿಗೆ ಮನವಿ ಮಾಡಿರುವ ಸಾರಿಗೆ ಇಲಾಖೆ, ಮುಷ್ಕರ ಶುರುವಾದರೆ ಖಾಸಗಿ ಬಸ್ ಗಳ ಮೂಲಕ ಜನಸಾಮಾನ್ಯರಿಗೆ ತೊಂದರೆ ಆಗದಂತೆ ಸೇವೆ ಒದಗಿಸಿ ಎಂದು ಹೇಳಿದ್ದಾರೆ.

ಸಿಎಂ ನೇತೃತ್ವದಲ್ಲಿ ಸೋಮವಾರ ಸಭೆ: ಈ ನಡುವೆ ಸಾರಿಗೆ ನೌಕರರ ಮನವೊಲಿಸಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಸಭೆ ಕರೆದಿದ್ದಾರೆ. ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮಿತಿ ಕೊಠಡಿಯಲ್ಲಿ ಬೆ.11.45ಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯೊಂದಿಗೆ ಹಾಗೂ 12.15ಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸಂಘಟನೆಗಳ ಒಕ್ಕೂಟದೊಂದಿಗೆ ಸಭೆ ನಡೆಸಲು ತೀರ್ಮಾನಿಸಲಾಗಿದೆ. ಸಭೆಯಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೇರಿದಂತೆ ಸಾರಿಗೆ ನಿಗಮಗಳ ಅಧ್ಯಕ್ಷರು ಹಾಜರಿರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಖಾಸಗಿ ಸಾರಿಗೆ ಸಂಘಟನೆಗಳ ಮುಖಂಡರಿಂದ ಹಲವು ಬೇಡಿಕೆ

- ಮುಷ್ಕರದ ಅವಧಿಯಲ್ಲಿ ತಮ್ಮ ಸೇವೆಗಳನ್ನು ವಿಸ್ತರಿಸುವ ಖಾಸಗಿ ಸ್ಟೇಜ್ ಕ್ಯಾರೇಜ್ ನಿರ್ವಾಹಕರಿಗೆ ಕನಿಷ್ಠ 15 ದಿನಗಳವರೆಗೆ ರಸ್ತೆ ತೆರಿಗೆ ವಿನಾಯಿತಿ ನೀಡಬೇಕು.
- ಸಮಾನ ಪರವಾನಗಿ ವಿತರಣೆ (60:40 ನೀತಿ) 60:40 ಪರವಾನಗಿ ಅನುಪಾತವನ್ನು ಜಾರಿಗೆ ತರಲು ತಕ್ಷಣದ ಕ್ರಮಗಳನ್ನು ಪ್ರಾರಂಭಿಸಬೇಕು.
- ಇದರಲ್ಲಿ ಶೇ.60ರಷ್ಟು ಸ್ಟೇಜ್ ಕ್ಯಾರೇಜ್ ಪರವಾನಗಿಗಳನ್ನು ರಾಜ್ಯ ಸಾರಿಗೆ ಸಂಸ್ಥೆಗಳಿಗೆ ಹಂಚಲಾಗುತ್ತದೆ ಮತ್ತು ಶೇ 40 ಖಾಸಗಿ ನಿರ್ವಾಹಕರಿಗೆ ಮೀಸಲಿಡಲಾಗುತ್ತದೆ.
- ಡಿಜಿಟಲ್ ಸರ್ವೈಲೆನ್ಸ್ ಆಡಿಟ್ ಪ್ರಕರಣಗಳ ಅಡಿಯಲ್ಲಿ ವಿಧಿಸಲಾದ ದಂಡದ ಶೇ 50 ವಿನಾಯಿತಿಯನ್ನು ಖಾಸಗಿ ನಿರ್ವಾಹಕರಿಗೆ ವಿಸ್ತರಿಸಬೇಕು.
- ಅಧಿಸೂಚಿತ ಸಮಯ ಮತ್ತು ಮಾರ್ಗಗಳನ್ನು ಅನಧಿಕೃತವಾಗಿ ಅತಿಕ್ರಮಿಸುವ ಸರಕಾರಿ ಬಸ್‌ಗಳ ವಿರುದ್ಧ ತಕ್ಷಣದ ಮತ್ತು ಕಠಿಣ ಕ್ರಮ ಕೈಗೊಳ್ಳಬೇಕು.

ನಂಜನಗೂಡು: ಪೊಲೀಸರು ಎದುರು ಮಹಿಳೆ ಹೈಡ್ರಾಮಾ

ನಂಜನಗೂಡು: ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ವಿಚಾರಣೆಗಾಗಿ ಮನೆ ಬಳಿ ಬಂದ ಪೊಲೀಸ್ ಸಿಬ್ಬಂದಿ ಎದುರು ಮಹಿಳೆಯೊಬ್ಬರು ಸೀರೆ ಬಿಚ್ಚಿ ಹೈಡ್ರಾಮಾ ಮಾಡಿರುವ ಘಟನೆ ನಂಜನಗೂಡಿನಲ್ಲಿ ವರದಿಯಾಗಿದೆ.

ನಂಜನಗೂಡಿನ ಶಿರಮಳ್ಳಿ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ದೂರೊಂದಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ಪೊಲೀಸ್ ಸಿಬ್ಬಂದಿ ಬಂದಿದ್ದರು. ಈ ವೇಳೆ ಸಿಬ್ಬಂದಿ ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರಿಸಿದ ಮಹಿಳೆ ಬದಲಿಗೆ ತಾನೇ ಸೀರೆ ಬಿಚ್ಚಿಕೊಂಡು ಹೈಡ್ರಾಮಾ ಮಾಡಿದ್ದಾರೆ. ಅಲ್ಲದೆ ತನ್ನ ಸಂಬಂಧಿಕರಿಗೆ ಈ ವಿಡಿಯೊ ಸೆರೆ ಹಿಡಿಯುವಂತೆ ಹೇಳಿದ್ದಾರೆ. ಪೊಲೀಸ್ ಸಿಬ್ಬಂದಿ ಎದುರು ಸೀರೆ ಬಿಚ್ಚಿ ಅನುಚಿತವಾಗಿ ವರ್ತಿಸಿರುವ ಮಹಿಳೆಯನ್ನು ರತ್ನಮ್ಮ ಎಂದು

ಹೇಳಲಾಗಿದೆ. ಮಹಿಳೆಯ ಈ ಆಘಾತಕಾರಿ ವರ್ತನೆ ವಿಡಿಯೊ ಇದೀಗ ವೈರಲ್ ಆಗಿದೆ.

ಏನಿದು ಪ್ರಕರಣ?: ಶಿರಮಳ್ಳಿ ಗ್ರಾಮದಲ್ಲಿ ರತ್ನಮ್ಮ ಕುಟುಂಬಕ್ಕೆ ಬಹಿಷ್ಕಾರ ಹೇರಿದ್ದಾರೆಂದು ಆರೋಪಿಸಲಾಗಿತ್ತು. ಈ ಸಂಬಂಧ ರತ್ನಮ್ಮ ಮೈಸೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ನೋವು ಹೇಳಿಕೊಂಡಿದ್ದರು. ಅಲ್ಲದೆ ಎಸ್ಪಿ ಕಚೇರಿಯಲ್ಲೂ ಸಹ ದೂರು ನೀಡಿದ್ದರು. ಈ ವಿಚಾರವಾಗಿ ಹುಲ್ಲಹಳ್ಳಿ ಠಾಣೆ ಪೊಲೀಸ್ ಸಿಬ್ಬಂದಿ ಮಾಹಿತಿ ಪಡೆಯಲು ರತ್ನಮ್ಮ ಮನೆಗೆ ಭೇಟಿ ಕೊಟ್ಟ ಸಮಯದಲ್ಲಿ ರತ್ನಮ್ಮ ಈ ರೀತಿಯ ಹುಚ್ಚಾಟ ಪ್ರದರ್ಶಿಸಿದ್ದಾರೆ. ಮೂಲಗಳ ಪ್ರಕಾರ ರತ್ನಮ್ಮ ವಿರುದ್ಧವೂ ಹುಲ್ಲಹಳ್ಳಿ ಹಾಗೂ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಕೆಲ ಪ್ರಕರಣಗಳು ದಾಖಲಾಗಿವೆ ಎನ್ನಲಾಗಿದೆ.

ಮುಸುಕುಧಾರಿ ತೋರಿಸಿದ ಸ್ಥಳಗಳಲ್ಲಿ ಶೋಧ

5ನೇ ದಿನ ಕಾರ್ಯಾಚರಣೆ: ಕಳೇಬರ ಪತ್ತೆ ಇಲ್ಲ

ಧರ್ಮಸ್ಥಳ: ಮುಸುಕುಧಾರಿ ಅಜ್ಞಾತ ವ್ಯಕ್ತಿ, ದೂರುದಾರ ಸೂಚಿಸಿದ 13 ಸ್ಥಳಗಳಲ್ಲಿ 8,9 ಮತ್ತು 10ನೇ ಸ್ಥಳದ ಸಮಾಧಿಯಲ್ಲಿ ಎಸ್‌ಐಟಿಗೆ ಮೂಳೆಗಳ ಕುರುಹು ಕೂಡ ಸಿಗದೇ ಶೋಧ ಅಂತ್ಯಗೊಂಡಿದೆ.

10ನೇ ಪಾಯಿಂಟ್‌ನಲ್ಲಿ ಮೂರು ಶವಗಳನ್ನು ಹೂತುಹಾಕಲಾಗಿದೆ ಎಂದು ವಿಚಾರಣೆಯಲ್ಲಿ ಹೇಳಿದ್ದ. ಇದರಂತೆ 10ನೇ ಪಾಯಿಂಟ್‌ನಲ್ಲಿ ಉತ್ಖನನ ಕಾರ್ಯಾಚರಣೆ ನಡೆಸಲಾಗಿದೆ. ಭಾರಿ ಮಳೆ ನಡುವೆ ಕಾರ್ಯಾಚರಣೆ ನಡೆಸಲಾಗಿತ್ತು. ಆದರೆ ಒಂದೂ ಕಳೇಬರ ಪತ್ತೆಯಾಗಿಲ್ಲ. ಹೀಗಾಗಿ 10ನೇ ಪಾಯಿಂಟ್ ಕಾರ್ಯಾಚರಣೆ ಅಂತ್ಯಗೊಳಿಸಲಾಗಿದೆ. 6 ಅಡಿ ಅಗೆದರೂ ಯಾವುದೇ ಕಳೇಬರ ಪತ್ತೆಯಾಗಿಲ್ಲ, ಹೀಗಾಗಿ ಕಾರ್ಯಾಚರಣೆ ಅಂತ್ಯಗೊಳಿಸಿದ್ದಾರೆ. ಅಗೆದಿರುವ ಗುಂಡಿ ಕಾರ್ಮಿಕರು ಮುಚ್ಚಿದ್ದಾರೆ. ಐದನೇ ದಿನದ ಕಾರ್ಯಾಚರಣೆ ಅಂತ್ಯಗೊಳಿಸಿದ ಎಸ್‌ಐಟಿ ತಂಡ ಮುಸುಕುದಾರಿ ದೂರುದಾರನ ಜತೆ ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ಮರಳಿದೆ.

ಜುಲೈ 19ರಂದು ವಿಶೇಷ ತನಿಖಾ ತಂಡವನ್ನು ರಚಿಸಿತು. ಡಿಜಿಪಿ ಪ್ರಣಬ್ ಮೊಹಾಂತಿ ನೇತೃತ್ವದಲ್ಲಿ ತನಿಖೆಯನ್ನು ಆರಂಭಿಸಿತು. ಜುಲೈ 27ರಿಂದ ತನಿಖೆಯನ್ನು ಆರಂಭಿಸಲಾಗಿದೆ. ಈ ವರೆಗೆ (ಆಗಸ್ಟ್ 2)ರ ವರೆಗೆ 10 ಸೈಟುಗಳಲ್ಲಿ ಶೋಧ ಕಾರ್ಯ ನಡೆಸಲಾಗಿದೆ. ಆರನೇ ಸೈಟ್ ನಲ್ಲಿ ಸಿಕ್ಕ ಮೂಳೆಗಳನ್ನು ಬಿಟ್ಟರೆ, ಉಳಿದವುಗಳಲ್ಲಿ ಯಾವುದೇ ಅವಶೇಷಗಳು ದೊರೆತಿಲ್ಲವೆಂದು ಹೇಳಲಾಗುತ್ತಿದೆ.

ಯಾವುದೇ ಮಹತ್ವದ ಸುಳಿವು ಸಿಕ್ಕಿಲ್ಲ

ಈ ಮೂಲಕ ಸಾವಿರಾರು ಮೃತದೇಹಗಳನ್ನು ಹೂಳಲಾಗಿದೆ. ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ ಎಂಬ ಅಜ್ಞಾತ ವ್ಯಕ್ತಿಯ ದೂರಿನ ಹಿನ್ನೆಲೆಯಲ್ಲಿ ನೇತ್ರಾವತಿ ಸ್ನಾನಘಟ್ಟದ ಅಕ್ಕ ಪಕ್ಕ ಉತ್ಖನನ ಮಾಡಿದ ಎಸ್‌ಐಟಿ ಪೊಲೀಸರಿಗೆ ಯಾವುದೇ ಮಹತ್ವದ ಸುಳಿವು ಸಿಗಲಿಲ್ಲ ಎನ್ನಲಾಗಿದೆ.

ಇಂದು ಶೋಧ ಕಾರ್ಯ ಇಲ್ಲ

ಧರ್ಮಸ್ಥಳದಲ್ಲಿ ಹೂತಿಟ್ಟ ಶವಗಳ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಸುಕುಧಾರಿ ತೋರಿಸಿದ ಸ್ಥಳಗಳಲ್ಲಿ ಎಸ್‌ಐಟಿ ಶೋಧ ನಡೆಸಿದೆ. 5ನೇ ದಿನದ ಕಾರ್ಯಾಚರಣೆಯನ್ನು ಎಸ್‌ಐಟಿಗೆ ಮುಗಿಸಿದೆ. ಭಾನುವಾರದ ಹಿನ್ನೆಲೆ ಇಂದು ಶೋಧಕಾರ್ಯ ಇರುವುದಿಲ್ಲ. ಸೋಮವಾರ ಬೆಳಗ್ಗೆಯಿಂದ 11ನೇ ಪಾಯಿಂಟ್‌ನಿಂದ 13ನೇ ಪಾಯಿಂಟ್ ವರೆಗೆ ಶೋಧ ನಡೆಯಲಿದೆ. 6ನೇ ಸ್ಥಳದಲ್ಲಿ ಮಾನವನ ಕಳೇಬರ ಪತ್ತೆ ಆಗಿದ್ದು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಮೂಳೆಗಳನ್ನು ಕಳಿಸಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವಿಭಾಗ, ಚಿತ್ರದುರ್ಗ.
ಕಾರ್ಯಪಾಲಕ ಅಭಿಯಂತರರ ಕಛೇರಿ, ಧವಳಗಿರಿ ಬಡಾವಣೆ, 2ನೇ ಹಂತ, 5ನೇ ಕ್ರಾಸ್, ಚಿತ್ರದುರ್ಗ-577 501 ದೂ:08194-234970

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾತ್ರ)

1) ವರ್ಕ್ ಇಂಡೆಂಟ್ No.KUWSDB/2025-26/EL/WORK_INDENT-347/CALL-2. Date:01-08-2025. ಕಾಮಗಾರಿಯ ಹೆಸರು: ಚಿತ್ರದುರ್ಗ ನಗರಸಭೆ ಇವರ ಠೇವಣಿ ಕೊಡುಗೆ ಆಧಾರದಡಿ ಶಾಂತಿ ಸಾಗರ ಮೂಲದಿಂದ ಚಿತ್ರದುರ್ಗ ನಗರಕ್ಕೆ ನೀರು ಸರಬರಾಜು ಯೋಜನೆಯಡಿ ಮೂಲಸ್ಥಾವರದಲ್ಲಿ (ಶಾಂತಿಸಾಗರ ಜಾಕ್‌ವೆಲ್) ಅಳವಡಿಸಿರುವ ವಿದ್ಯುತ್ ಉಪಕರಣಗಳ ಪುನಃಶ್ಚೇತನ ಕಾಮಗಾರಿ. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ 16-08-2025 ರ ಸಂಜೆ 5.30 ಘಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 18-08-2025 ರಂದು ಬೆಳಿಗ್ಗೆ 11.00 ಗಂಟೆಯ ನಂತರ.
ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಚಿತ್ರದುರ್ಗ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp. karnataka.gov.in

DIPR/CTD/KSMCA/267/2025-26
ಸಹಿ/- ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ ವಿಭಾಗ, ಚಿತ್ರದುರ್ಗ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ (ಘವನಿ) ಕಚೇರಿ ಹುಬ್ಬಳ್ಳಿ

ಅಲ್ಪಾವದಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸನ್ 2025-26ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಯೋಜನೆ ಹಾಗೂ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ

ಕ್ರ. ಸಂ	ಟೆಂಡರ್ ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2025-26/IND5171	74,99,700.00	1,49,994.00	12-08-2025 ಸಮಯ ಸಂಜೆ 4:30 ಗಂಟೆ	14-08-2025 ಸಮಯ ಬೆಳಿಗ್ಗೆ 10.30 ಗಂಟೆ
2	DMA/2025-26/SE5841	85,30,000.00	1,70,600.00		

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಹೆಚ್ಚಿನ ಮಾಹಿತಿಯನ್ನು **ದಿನಾಂಕ: 05-08-2025** ರಿಂದ www.kppp.karnataka.gov.inಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಘವನಿ)
ದಿನಾಂಕ: 02.08.2025 ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
ವಾ.ಸಾ.ಇ/ಧಾರವಾಡ/499/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಹಾಗೂ ಪಡೆಯಲಿಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ಕಾಮಗಾರಿಯ ಹೆಸರು
1	ಗದಗ ಜಿಲ್ಲೆ, ಕಳಸಾಪುರ ಗ್ರಾಮದ ಕಳಸಾಪುರ 1ನೇ ಮತ್ತು 2ನೇ ಹಂತದ ಬಡಾವಣೆಯಲ್ಲಿ ಜಂಗಲ್ ಕ್ಲೀನಿಂಗ್ ಮಾಡುವ ಕಾಮಗಾರಿ. **Work Indent No:** Tender Reference No.KHB/2025-26/OW/work_indent 631 & IFT No.80/2025-26 Date: 29.07.2025. **ಟೆಂಡರ್‌ಗಿಟ್ಟ ಮೊತ್ತ:** ರೂ.16,79,293/-
2	ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸೂರ್ಯನಗರ 1ನೇ ಹಂತದಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯ ವಾರ್ಷಿಕ ನಿರ್ವಹಣೆ ಕಾಮಗಾರಿ. **Work Indent No:** Tender Reference No.KHB/2025-26/OW/work_indent 632 & IFT No.81/2025-26 Date: 30.07.2025. **ಟೆಂಡರ್‌ಗಿಟ್ಟ ಮೊತ್ತ:** ರೂ.1,55,46,544/-

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : ಕ್ರಮ ಸಂಖ್ಯೆ : 1 ಕ್ಕೆ - 12.08.2025 ಸಂಜೆ 4.00 ಗಂಟೆಯವರೆಗೆ ಹಾಗೂ ಕ್ರಮ ಸಂಖ್ಯೆ : 2 ಕ್ಕೆ - 14.08.2025 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/ 080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2161/ಆಕಾರ್/2025-26

ರೇಪಿಸ್ಟ್ ಪ್ರಜ್ವಲ್‌ಗೆ ಜೀವಿತಾವಧಿ ಜೈಲು

← ಮೊದಲಪುಟದಿಂದ

ಅದಕ್ಕೆ ಕಣ್ಣೀರಿಡುತ್ತಲೇ ಪ್ರತಿಕ್ರಿಯಿಸಿದ ಪ್ರಜ್ವಲ್, ಕಾಲೇಜಲ್ಲಿ ನಾನು ಮೆರಿಟ್ ವಿದ್ಯಾರ್ಥಿ. ನಾನು ಹಲವು ಮಹಿಳೆಯರೊಂದಿಗೆ ಈ ಕೃತ್ಯವೆಸಗಿದ್ದೇನೆ ಎಂದು ಆರೋಪಿಸಲಾಗುತ್ತಿದೆ. ಸಂಸದನಾದಾಗ ಯಾರೂ ಇಂತಹ ಆರೋಪ ಮಾಡಿಲ್ಲ. ರೇಪ್ ಮಾಡಿದ್ದೇನೆಂದು ಯಾರೂ ಹೇಳಿಲ್ಲ. ಆರು ತಿಂಗಳಿಂದ ತಂದೆ-ತಾಯಿ ನೋಡಿಲ್ಲ. ನಾನು ಮಾಡಿದ ಒಂದೇ ತಪ್ಪೇನೆಂದರೆ ರಾಜಕೀಯದಲ್ಲಿ ಬೇಗ ಬೆಳೆದದ್ದು. ಈ ವಿಚಾರದಲ್ಲಿ ಮಾಧ್ಯಮಗಳನ್ನೂ ದೂರುವುದಿಲ್ಲ. ಕೋರ್ಟ್ ಆದೇಶಕ್ಕೆ ತಲೆ ಬಾಗುತ್ತೇನೆ ಎಂದರು.

ಏನಿದು ಪ್ರಕರಣ?: ಕೆ.ಆರ್.ನಗರ ಸಂತ್ರಸ್ತೆ ಪ್ರಕರಣದಲ್ಲಿ ಪ್ರಜ್ವಲ್ ವಿರುದ್ಧ ಅತ್ಯಾಚಾರ, ಅಪಹರಣ ಪ್ರಕರಣ ದಾಖಲಾಗಿತ್ತು. ಮನೆಕೆಲಸದಾಕೆಯ ಮೇಲೆ ಅತ್ಯಾಚಾರ ಎಸಗಿದ ನಂತರ ವಿಷಯ ಹೊರಗೆ ಬರುತ್ತೆ ಎಂದು ತಿಳಿದು ಸಂತ್ರಸ್ತೆಯನ್ನು ರೇವಣ್ಣ, ಭವಾನಿ, ಸತೀಶ್ ಬಾಬು ಸೇರಿದಂತೆ 9 ಜನ ಸೇರಿ ಅಪಹರಿಸಿದ್ದರು. ಬಳಿಕ ಆಕೆಯನ್ನು ಹುಣಸೂರು ಬಳಿಯ ತೋಟದ ಮನೆಯೊಂದರಲ್ಲಿ ಕೂಡಿ ಹಾಕಲಾಗಿತ್ತು. ಇದೇ ಅಪಹರಣ ಪ್ರಕರಣದಿಂದಲೇ ರೇವಣ್ಣ ಸೇರಿದಂತೆ 8 ಜನ ಜೈಲಿಗೆ ಹೋಗಿದ್ದರು. ಬಂಧನ ಭೀತಿಯಿಂದ ತಲೆಮರೆಸಿಕೊಂಡಿದ್ದ ಭವಾನಿ ರೇವಣ್ಣ ಬಳಿಕ ನಿರೀಕ್ಷಣಾ ಜಾಮೀನು ಪಡೆದಿದ್ದರು. ಕಳೆದ ಲೋಕಸಭಾ ಚುನಾವಣೆ ವೇಳೆ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾಗಿರುವ ಅಶ್ಲೀಲ ವಿಡಿಯೋಗಳಿದ್ದ ಪೆನ್ ಡ್ರೈವ್‌ಗಳನ್ನ ಹಾಸನ ಕ್ಷೇತ್ರದಾದ್ಯಂತ ಹಂಚಲಾಗಿತ್ತು. ಬಳಿಕ ಹೊಳೆನರಸೀಪುರದ ಮಹಿಳೆಯೊಬ್ಬರು ನೀಡಿದ್ದ ದೂರಿನ ಆಧಾರದ ಮೇಲೆ ತನಿಖೆ ಆರಂಭವಾಗಿ ಪ್ರಕರಣ ಎಸ್‌ಐಟಿಗೆ ವಹಿಸಲಾಗಿತ್ತು. ವಿದೇಶದಲ್ಲಿ ತಲೆ ಮರೆಸಿಕೊಂಡು ವಾಪಸಾಗಿದ್ದ ಪ್ರಜ್ವಲನನ್ನು ಪ್ರಕರಣ ಸಂಬಂಧ 2024ರ ಮೇ 31ರಂದು ಪೊಲೀಸರು ಬಂಧಿಸಿದ್ದರು.

ಪ್ರಜ್ವಲ್ ರೇವಣ್ಣ ಶಿಕ್ಷೆಯ ವಿವರ: ಯಾವ ಸೆಕ್ಷನ್ ಅಡಿ ಎಷ್ಟು ಶಿಕ್ಷೆ, ದಂಡ?

ಐಪಿಸಿ ಸೆಕ್ಷನ್	ಸೆರೆವಾಸ	ದಂಡ
ಐಪಿಸಿ ಸೆಕ್ಷನ್ 376 (2)(ಕೆ)	ಜೀವಾವಧಿ ಶಿಕ್ಷೆ	5 ಲಕ್ಷ ರು.
376(2)(ಎನ್)	ಜೀವನ ಪರ್ಯಂತ	5 ಲಕ್ಷ ರು.
ಐಪಿಸಿ ಸೆಕ್ಷನ್ 354(ಎ)	3 ವರ್ಷ	25 ಸಾವಿರ ರು.
ಐಪಿಸಿ ಸೆಕ್ಷನ್ 354 (ಬಿ)	7 ವರ್ಷ	50 ಸಾವಿರ ರು.
ಐಪಿಸಿ ಸೆಕ್ಷನ್ 354 (ಸಿ)	3 ವರ್ಷ	25 ಸಾವಿರ ರು.
ಸೆಕ್ಷನ್ 506	2 ವರ್ಷ	10 ಸಾವಿರ ರು.
ಸೆಕ್ಷನ್ 201	3 ವರ್ಷ	25 ಸಾವಿರ ರು.
ಐಟಿ ಕಾಯಿದೆ ಸೆ.66(ಇ)	3 ವರ್ಷ	25 ಸಾವಿರ ರು.

ಆಪರೇಷನ್ ಸಿಂದೂರ ಭಾರತದ ರುದ್ರ ರೂಪ

← ಮೊದಲಪುಟದಿಂದ

ಶಿವ ಎಂದರೆ ಕಲ್ಯಾಣ, ಆದರೆ ಭಯೋತ್ಪಾದನೆ ಎಂಬ ಕೊಳಕು ತಲೆಯೆತ್ತಿದಾಗ ಮಹಾದೇವ 'ರುದ್ರ ರೂಪ' ತಾಳುತ್ತಾನೆ. ಆಪರೇಷನ್ ಸಿಂದೂರ್ ಸಮಯದಲ್ಲಿ ಜಗತ್ತು ಭಾರತದ ಈ ಸ್ವರೂಪವನ್ನು ಕಂಡಿತು ಎಂದು ಮೋದಿ ನುಡಿದರು. ಭಾರತ ಮಾತೆಯ ಪುತ್ರಿಯರ ಸಿಂದೂರ ಅಳಿಸಿದವರ ವಿರುದ್ಧ ಪ್ರತಿಕಾರ ಕ್ರಮ ಕೈಗೊಳ್ಳುವುದಾಗಿ ಸೋದರಿಯರಿಗೆ ನೀಡಿದ ನನ್ನ ವಚನವನ್ನು ಮಹಾದೇವನ ಆಶೀರ್ವಾದದಿಂದ ಈಡೇರಿಸಲಾಗಿದೆ. ಆಪರೇಷನ್ ಸಿಂದೂರ ಸೇನಾ ಕಾರ್ಯಾಚರಣೆಯ ಯಶಸ್ಸನ್ನು ಮಹಾದೇವನ ಪಾದಗಳಿಗೆ ಅರ್ಪಿಸುವೆ ಎಂದರು.

ಆಪರೇಷನ್ ಸಿಂದೂರ್ ಯಶಸ್ಸನ್ನು ಇಡೀ ದೇಶ ಸಂಭ್ರಮಿಸುತ್ತಿದ್ದರೆ, ನಮ್ಮದೇ ದೇಶದ ಕೆಲವರು ಸೇನಾ ಕಾರ್ಯಾಚರಣೆಯನ್ನು ಟೀಕಿಸುತ್ತಿದ್ದಾರೆ. ಭಾರತದ ಸೇನೆ ಪಾಕ್‌ನೊಳಕ್ಕೆ ನುಗ್ಗಿ ಹೋಗಿ ಉಗ್ರರ ನೆಲೆಗಳನ್ನು ನಾಶಪಡಿಸಿದ್ದನ್ನು ಜೀರ್ಣಿಸಿಕೊಳ್ಳಲು ಪ್ರತಿಪಕ್ಷಗಳ ನಾಯಕರಿಗೆ ಸಾಧ್ಯವಾಗುತ್ತಿಲ್ಲ. ಸಶಸ್ತ್ರ ಪಡೆಗಳ ಶೌರ್ಯವನ್ನು ಕಾಂಗ್ರೆಸ್ ಪದೇ ಪದೇ ಅವಮಾನಿಸುತ್ತಿದೆ. ಆಪರೇಷನ್ ಸಿಂದೂರವನ್ನು ತಮಾಷೆ ಎಂದು ಕರೆದಿದೆ ಎಂದು ಪ್ರಧಾನಿ ಬೇಸರ ವ್ಯಕ್ತಪಡಿಸಿದರು. ಸಿಂದೂರ ನಮ್ಮ ಸೋದರಿಯರ ಪವಿತ್ರ ಗುರುತು. ಅದನ್ನು ಮತ್ತು ಸೈನಿಕರ ಶೌರ್ಯವನ್ನು ಅವಮಾನಿಸಲು ಪ್ರತಿಪಕ್ಷಗಳವರಿಗೆಷ್ಟು ಧೈರ್ಯ?

- **ನರೇಂದ್ರ ಮೋದಿ** ಪ್ರಧಾನಿ

ನಿರಂತರ ಗಾಂಜಾ ಸೇವನೆ ಸಾಬೀತು

500ಕ್ಕೂ ಹೆಚ್ಚು ಮಂದಿ ಮಾದಕ ವ್ಯಸನಿಗಳ ವೈದ್ಯಕೀಯ ತಪಾಸಣೆ

ಮಾದಕ ವ್ಯಸನಿಗಳ ಪತ್ತೆಗಾಗಿ ನಡೆಸಲಾದ ಕಾರ್ಯಾಚರಣೆಯಲ್ಲಿ ಶನಿವಾರ 259 ಶಂಕಿತರನ್ನು ಕರೆತಂದು ವೈದ್ಯಕೀಯ ತಪಾಸಣೆ ನಡೆಸಲಾಯಿತು.

ಮೈಸೂರು: ರಾಜ್ಯವನ್ನೇ ಬೆಚ್ಚಿಬೀಳಿಸಿದ್ದ ಮೈಸೂರಿನಲ್ಲಿ ಭಾರೀ ಡ್ರಗ್ಸ್ ತಯಾರಿಕಾ ಘಟಕ ಪತ್ತೆಯಾದ ಹಿನ್ನೆಲೆಯಲ್ಲಿ ಸತತ ಕಾರ್ಯಾಚರಣೆ ನಡೆಸಿದ ಪೊಲೀಸರಿಗೆ ನೂರಕ್ಕೂ ಹೆಚ್ಚು ಮಂದಿ ಗಾಂಜಾ ವ್ಯಸನಿಗಳನ್ನು ಪತ್ತೆಹಚ್ಚಿದ್ದಾರೆ.

ಮುಂಬೈ ಪೊಲೀಸರು ಮೈಸೂರಿನಲ್ಲಿ ನಡೆಸಿದ ಕಾರ್ಯಾಚರಣೆ

ಯಲ್ಲಿ ಭಾರೀ ಡ್ರಗ್ಸ್ ತಯಾರಿಕಾ ಘಟಕ ಪತ್ತೆಯಾದ ಬೆನ್ನಲ್ಲೇ ನಗರ ಪೊಲೀಸರು ಸಹ ಡ್ರಗ್ಸ್ , ಇನ್ನಿತರ ಮಾದಕ ವಸ್ತುಗಳ ಪತ್ತೆಗಾಗಿ ಕೆಲವು ದಿನಗಳಿಂದಲೂ ಹಲವು ರೀತಿಯ ಕಾರ್ಯಾಚರಣೆ ನಡೆಸಿದ್ದರು. ಇದರ ಭಾಗವಾಗಿ ಮೈಸೂರು ನಗರದಾದ್ಯಂತ ಮಾದಕ ವ್ಯಸನಿಗಳ ಪತ್ತೆಗಾಗಿ ಮೂರ್ನಾಲ್ಕು ದಿನಗಳಿಂದಲೂ ವಿಶೇಷ ಕಾರ್ಯಾಚರಣೆ ನಡೆಸಿರುವ ಪೊಲೀಸರು, ನಗರದ ನಜರಬಾದ್ನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ 500ಕ್ಕೂ ಹೆಚ್ಚು ಮಂದಿ ಮಾದಕ ವ್ಯಸನಿಗಳ ವೈದ್ಯಕೀಯ ತಪಾಸಣೆ ನಡೆಸಿದ್ದು, ಅದರಂತೆ ಗಾಂಜಾ ಸೇವನೆ ಮಾಡಿದವರ ವಿರುದ್ಧ ಕಾನೂನು ಕ್ರಮಕೈಗೊಂಡಿದ್ದಾರೆ.

11 ಪೆಡ್ಲರ್ಸ್ ವಿರುದ್ಧ ಕೇಸ್: ಡ್ರಗ್ಸ್ ಜಾಲದ ವಿರುದ್ಧ ಕಾರ್ಯಾಚರಣೆ ನಡೆಸಿರುವ ಪೊಲೀಸರು 11 ಮಂದಿ ಡ್ರಗ್ ಪೆಡ್ಲರ್‌ಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೈಸೂರಿನ ಬಹುತೇಕ ಎಲ್ಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲೂ ಗಾಂಜಾ ಸೇವನೆ ಮಾಡಿರುವವರು ಪತ್ತೆಯಾಗಿದ್ದು, ಮಂಡಿ ಮೊಹಲ್ಲಾ, ಉದಯಗಿರಿ, ಕೆ.ಆರ್. ಠಾಣಾ, ನಜರಾಬಾದ್ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಿಂದ ಶಂಕಿತರನ್ನು ಕರೆತಂದು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ವೈದ್ಯರ ತಂಡ ತಪಾಸಣೆ

ಮಾದಕ ವ್ಯಸನಿಗಳ ಪತ್ತೆಗಾಗಿ ನಡೆಸಲಾದ ಕಾರ್ಯಾಚರಣೆಯಲ್ಲಿ ಶನಿವಾರ ಸಹ 259 ಶಂಕಿತರನ್ನು ಕರೆತಂದು ವೈದ್ಯಕೀಯ ತಪಾಸಣೆ ನಡೆಸಲಾಗಿದೆ. ಇವರುಗಳನ್ನು ಕೆ.ಆರ್.ಆಸ್ಪತ್ರೆ ವೈದ್ಯರ ತಂಡದಿಂದ ಮಾದಕ ದ್ರವ್ಯ ಸೇವನೆ ಟೆಸ್ಟ್ ಕಿಟ್‌ನಿಂದ ತಪಾಸಣೆ ನಡೆಸಲಾಗಿದ್ದು, ಇವರಲ್ಲಿ 51 ಮಂದಿ ಗಾಂಜಾ ಸೇವನೆ ಮಾಡಿರುವುದು ಸಾಬೀತಾಗಿದೆ. ಆದರೆ, ತಪಾಸಣೆಗೆ ಒಳಪಟ್ಟಿರುವ ಯಾರೊಬ್ಬರೂ ಎಂಡಿಎಂಎ ಸೇವನೆ ಮಾಡಿರುವುದು ಪತ್ತೆಯಾಗಿಲ್ಲ ಎಂದು ಮಾಹಿತಿ ನೀಡಿರುವ ಸೀಮಾ ಲಾಟ್ಕರ್, ಈ ಕಾರ್ಯಾಚರಣೆ ನಿರಂತರವಾಗಿ ಮುಂದುವರಿಯಲಿದೆ ಎಂದು ತಿಳಿಸಿದರು.

189 ಮಂದಿ ವಿರುದ್ಧ ಕ್ರಮ

ಕಳೆದ ನಾಲ್ಕು ದಿನಗಳಿಂದ ಮೈಸೂರು ನಗರ ಪೊಲೀಸರು ನಡೆಸಿದ ಮಾದಕ ವ್ಯಸನಿಗಳ ಪತ್ತೆ ಕಾರ್ಯಾಚರಣೆಯಲ್ಲಿ 541 ಮಂದಿ ಶಂಕಿತರನ್ನು ಕರೆತಂದು ತಪಾಸಣೆ ನಡೆಸಲಾಗಿದೆ. ಅದರಂತೆ ನಾಲ್ಕು ದಿನಗಳಲ್ಲಿ ಒಟ್ಟು 189 ಮಂದಿ ಗಾಂಜಾ ಸೇವನೆ ಮಾಡಿರುವುದು ಸಾಬೀತಾಗಿದ್ದು, ಗಾಂಜಾ ಸೇವನೆ ಮಾಡಿದವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದರು.

ನೀರಿನ ಟ್ಯಾಂಕ್‌ಗೆ ವಿಷ ಹಾಕಿದ ಕಿಡಿಗೇಡಿಗಳು

ಬೆಳಗಾವಿ: ಶಾಲಾ ಮುಖ್ಯ ಶಿಕ್ಷಕ ಮುಸ್ಲಿಂ ಎಂಬ ಕಾರಣಕ್ಕೆ ಆತನನ್ನು ಶಾಲೆಯಿಂದ ಎತ್ತಂಗಡಿ ಮಾಡಿಸುವ ಉದ್ದೇಶದಿಂದ ಶಾಲೆಯ ಆವರಣದಲ್ಲಿದ್ದ ಕುಡಿಯುವ ನೀರಿನ ಟ್ಯಾಂಕ್ ಗೆ ವಿಷ ಸೇರಿಸಿದ ಘಟನೆ ಸವದತ್ತಿ ತಾಲೂಕಿನ ಹೂಲಿಕಟ್ಟಿ ಗ್ರಾಮದಲ್ಲಿ ನಡೆದಿದೆ.

ಹೂಲಿಕಟ್ಟಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 41 ಮಕ್ಕಳು ವ್ಯಾಸಂಗ ಮಾಡುತ್ತಿದ್ದು ಮುಖ್ಯ ಶಿಕ್ಷಕ ಸುಲೇಮಾನ್ ಗೋರಿನಾಯಕ್ ಕೆಲಸ ಮಾಡುತ್ತಿದ್ದಾರೆ. ಇವರನ್ನು ಎತ್ತಂಗಡಿ ಮಾಡಿಸುವ

ಉದ್ದೇಶದಿಂದ ಗ್ರಾಮದ ಸಾಗರ್ ಪಾಟೀಲ್ ಎಂಬಾತ ಕೃಷ್ಣಾ ಮಾದರ ಎಂಬುವವನ ಕಡೆಯಿಂದ ಕೀಟನಾಶಕ ಪಡೆದು ಮಕ್ಕಳು ನೀರು ಕುಡಿಯುವ ಟ್ಯಾಂಕ್ ಗೆ ಬೆರೆಸಿದ್ದರು.

ಕಳೆದ ಜುಲೈ 14 ರಂದು ಕೀಟನಾಶಕ ಬೆರೆಸಿದ್ದ ನೀರು ಕುಡಿದು ಅಸ್ವಸ್ಥರಾಗಿದ್ದ 11 ಮಕ್ಕಳನ್ನು ಕೂಡಲೇ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಸದ್ಯ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀರಿಗೆ ಕೀಟನಾಶಕ ಬೆರೆಸಿದ್ದ ಪ್ರಮುಖ ಆರೋಪಿ ಸಾಗರ್ ಪಾಟೀಲ್, ಕೃಷ್ಣಾ ಮಾದರ್, ಹಾಗೂ ನಾಗನಗೌಡ ಪಾಟೀಲ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

ಬಳ್ಳಾರಿ: ಬಾಮೈದನನ್ನೇ ಕೊಂದ ಬಾವ

ಬಳ್ಳಾರಿ: ಗಂಡ-ಹೆಂಡತಿ ಜಗಳದ ರಾಜಿ ಸಂಧಾನಕ್ಕೆ ಮುಂದಾಗಿದ್ದ ಬಾಮೈದ (ಹೆಂಡತಿಯ ತಮ್ಮ)ನನ್ನು ಬಾವ (ಅಕ್ಕನ ಗಂಡ) ಕೊಚ್ಚಿಕೊಂದಿರೋ ಘಟನೆ ತಾಲೂಕಿನ ಎತ್ತಿನಬೂದಿಹಾಳ ಗ್ರಾಮದಲ್ಲಿ ಬೆಳಕಿಗೆ ಬಂದಿದೆ.

ಕಳೆದ 20 ವರ್ಷಗಳ ಹಿಂದೆ ಮಹೇಶ (27) ತನ್ನ ಅಕ್ಕ ಪದ್ಮಾವತಿಯನ್ನ ಬಸವರಾಜ (45)ನಿಗೆ ಕೊಟ್ಟು ಮದ್ವೆ ಮಾಡಿದ್ದ. ಇಬ್ಬರು ಒಂದೇ ಗ್ರಾಮದವರಾದ ಹಿನ್ನಲೆ ಅಕ್ಕಪಕ್ಕದ ಏರಿಯಾದಲ್ಲಿರುತ್ತಿದ್ದರು. ಆದ್ರೆ, ಮದುವೆಯಾದಾಗಿನಿಂದಲೂ ಬಸವರಾಜ್ ಮತ್ತು ಪದ್ಮಾವತಿ ನಿತ್ಯ ಜಗಳವಾಡುತ್ತಿದ್ರು. ಈ ಬಗ್ಗೆ ರಾಜಿ ಪಂಚಾಯಿತಿ, ಸಂಧಾನ ಎಲ್ಲವೂ ನಡೆಯುತ್ತಲೇ ಇತ್ತು. ಶುಕ್ರವಾರ ಕೂಡ ಗಂಡ-ಹೆಂಡತಿ ಮಧ್ಯೆ ಜಗಳವಾಗಿತ್ತು. ಹೀಗಾಗಿ ಮಹೇಶ್ ತನ್ನ ಅಕ್ಕಳನ್ನು ಬಳ್ಳಾರಿಗೆ ಕರೆದುಕೊಂಡು ಬಂದು ಮಹಿಳಾ ಠಾಣೆಯಲ್ಲಿ ದೌರ್ಜನ್ಯದ ಕೇಸ್ ದಾಖಲು ಮಾಡಿದ್ದ. ಇದರಿಂದ ಆಕ್ರೋಶಗೊಂಡ ಬಸವರಾಜ್ ಶುಕ್ರವಾರ ತಡರಾತ್ರಿ, ಮಹೇಶ್ ಮಲಗಿದ್ದಾಗ ಅವನ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿ ಕೊಚ್ಚಿಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯದ ಸರಕಾರಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿ, ಶಿಕ್ಷಕರ ನೇಮಕಕ್ಕೆ ಒತ್ತು | ಅತಿಥಿ ಶಿಕ್ಷಕರ ನೇಮಕಕ್ಕೂ ಅವಕಾಶ

ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಅವಕಾಶ ನೀಡಲು ವಾರ್ಷಿಕ ಮೂರು ಪರೀಕ್ಷೆ | ಬ್ಯಾಗ್ ಹೊರೆ ತಗ್ಗಿಸಲು ಸಂಭ್ರಮದ ಶನಿವಾರ

ಮಾದರಿ ಶಿಕ್ಷಣವೇ ಸರಕಾರದ ಗುರಿ

ಯಾವುದೇ ಒಂದು ರಾಜ್ಯದ ಅಭಿವೃದ್ಧಿಗೆ ಶಿಕ್ಷಣವೇ ಮೂಲ ಬುನಾದಿ. ಅದರಲ್ಲಿಯೂ ಪ್ರಾಥಮಿಕ ಮತ್ತು ಪ್ರೌಢ ತರಗತಿಗಳು, ವಿದ್ಯಾರ್ಥಿ ಹಾಗೂ ಇಡೀ ರಾಜ್ಯದ ಪ್ರಮುಖ ಎನ್ನುವುದು ಸ್ಪಷ್ಟ. ಈ ವಿಷಯವನ್ನು ಗಮನಿಸಿಯೇ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ 'ನಾಡಿಗೆ ಶಿಕ್ಷಣದ ಗ್ಯಾರಂಟಿ' ನೀಡಲು ಸರಕಾರ ಬದ್ಧವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಮಧು ಬಂಗಾರಪ್ಪ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಅಧಿಕಾರವನ್ನು ವಹಿಸಿಕೊಂಡ ದಿನದಿಂದಲೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಹಲವು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಜತೆಜತೆಗೆ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಹತ್ತು ಹಲವು ಯೋಜನೆಗಳನ್ನು ಆರಂಭಿಸಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ದಶಕಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಹಲವು ಯೋಜನೆಗಳನ್ನು ಆರಂಭಿಸಿದ್ದು, ಹಂತ-ಹಂತವಾಗಿ ಜಾರಿಗೊಳಿಸಲಾಗಿದೆ.

ಇತ್ತೀಚಿನ ದಿನದಲ್ಲಿ ಪೋಷಕರು ಖಾಸಗಿ ಶಾಲೆಗಳತ್ತ ಹೋಗುತ್ತಿರುವುದನ್ನು ಗಮನಿಸಿದ ರಾಜ್ಯ ಸರಕಾರ, ಸರಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಯ ವಾತಾವರಣ, ಮೂಲಸೌಕರ್ಯ ಹಾಗೂ ಶಿಕ್ಷಣ ಪದ್ಧತಿಯನ್ನು ನೀಡುವ ನಿಟ್ಟಿನಲ್ಲಿ ಮಧು ಬಂಗಾರಪ್ಪ ಅವರು ಹಲವು ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಇದರಲ್ಲಿ ಪ್ರಮುಖವಾಗಿ ಸಿಎಸ್‌ಆರ್ ಫಂಡ್ ಕ್ರೋಢೀಕರಣ, ಹಳೇ ವಿದ್ಯಾರ್ಥಿಗಳಿಂದ 'ಕ್ರೌಂಡ್ ಫಂಡ್'ನಂತ ವಿನೂತನ ಯೋಜನೆಗಳನ್ನು ಆರಂಭಿಸಿದ್ದಾರೆ.

ಮಾದರಿ ಶಾಲೆಗಳನ್ನು ಆರಂಭಿಸುವ ಉದ್ದೇಶದಿಂದ ಈ ಹಿಂದೆ ಆರಂಭಿಸಿದ್ದ 'ಕರ್ನಾಟಕ ಪಬ್ಲಿಕ್ ಶಾಲೆ'ಗಳಿಗೆ ಇನ್ನಷ್ಟು ಒತ್ತು ನೀಡುವ ಕಾರ್ಯಕ್ಕೆ ಸರಕಾರ ಮುಂದಾಗಿದೆ. ಇದರ ಭಾಗವಾಗಿ 2024ರ ಆ.19ರಂದು ವಿಧಾನಸೌಧದ ಬ್ಯಾಂಕ್ವೆಟ್

ಹಾಲ್‌ನಲ್ಲಿ ಸಿಎಸ್‌ಆರ್ ಶಿಕ್ಷಣ ಸಮಾವೇಶವನ್ನು ಆರಂಭಿಸಲಾಯಿತು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಾರ್ಗದರ್ಶನದಂತೆ, ಖಾಸಗಿ ಕಂಪನಿಗಳಿಂದ ಸಿಎಸ್ ಆರ್ ಫಂಡ್ ಅನ್ನು ಕ್ರೋಡೀಕರಿಸುವ ಉದ್ದೇಶದಿಂದ, ಸಿಎಸ್ ಆರ್ ಶಿಕ್ಷಣ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಪ್ರಮುಖವಾಗಿ ಸುಮಾರು 121ಕ್ಕೂ ಹೆಚ್ಚು ಸಂಸ್ಥೆಯ ಮುಖ್ಯಸ್ಥರು ಭಾಗವಹಿಸಿದ್ದರು.

ಇದರೊಂದಿಗೆ 'ನಮ್ಮ ಶಾಲೆ- ನಮ್ಮ ಜವಾಬ್ದಾರಿ' ಯೋಜನೆಯ ಮೂಲಕ ಸರಕಾರಿ ಶಾಲೆಗಳಲ್ಲಿ ಓದಿರುವ ಹಳೇ ವಿದ್ಯಾರ್ಥಿಗಳನ್ನು, ನಿವೃತ್ತ ಶಿಕ್ಷಕರಿಂದ ಶಾಲೆಗಳ ಅಭಿವೃದ್ಧಿ ಅನುದಾನ ಕ್ರೋಡೀಕರಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆರಂಭಿಸಲಾಗಿದೆ. ಶಿಕ್ಷಕರನ್ನು ನಿವೃತ್ತ ನೌಕರರನ್ನು ಐದು ಜಿಲ್ಲೆಗಳಿಂದ ಒಟ್ಟು 10 ದಾನಿಗಳನ್ನು ಸಾಂಕೇತಿಕವಾಗಿ ಸನ್ಮಾನಿಸಲಾಯಿತು. ಇನ್ನು ಮಾಜಿ ಮುಖ್ಯಮಂತ್ರಿ ದಿ. ಬಂಗಾರಪ್ಪ ಅವರು ಓದಿದ ಸರಕಾರಿ ಶಾಲೆಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು 10 ಲಕ್ಷ ದೇಣಿಗೆ ನೀಡಿದರು.

ಪೌಷ್ಠಿಕ ಆಹಾರಕ್ಕೆ ಒತ್ತು : ಇನ್ನು ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ ನೀಡುವ ಉದ್ದೇಶದಿಂದ, ಈಗಾಗಲೇ ಸರಕಾರಿ ಶಾಲೆಗಳಲ್ಲಿ ನೀಡುತ್ತಿರುವ ಬಿಸಿಯೂಟ ಯೋಜನೆಯ ಜತೆಗೆ ವಾರದ ಆರು ದಿನವೂ ಮೊಟ್ಟೆಯನ್ನು ನೀಡುವ ಯೋಜನೆ ಆರಂಭಿಸಲಾಗಿದೆ. ಒಂದು ವೇಳೆ ಮೊಟ್ಟೆಯನ್ನು ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ವಿತರಿಸಲು ತೀರ್ಮಾನಿಸಲಾಗಿದೆ. ವಾರದ ಆರು ದಿನವೂ ಮೊಟ್ಟೆ ಅಥವಾ ಬಾಳೆಹಣ್ಣು ನೀಡಲು ಮೂರು ವರ್ಷಕ್ಕೆ 1591 ಕೋಟಿ ರು. ಅಗತ್ಯವಿದೆ. ವಾರಕ್ಕೆ ಎರಡು ದಿನ ರಾಜ್ಯ ಸರಕಾರದ ವತಿಯಿಂದ ಹಾಗೂ ನಾಲ್ಕು ದಿನ

ಅಜೀಂ ಪ್ರೇಮ್‌ಜಿ ಫೌಂಡೇಶನ್ ನೀಡಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಹಾಗೇ ನೋಡಿದರೆ, ಇಡೀ ವಾರ ಮೊಟ್ಟೆ ನೀಡುವ ದೇಶದ ಏಕೈಕ ರಾಜ್ಯ ಎನ್ನುವ ಕೀರ್ತಿಗೆ ಕರ್ನಾಟಕ ಪಾತ್ರವಾಗಿದ್ದು, ಈ ಯೋಜ ನೆಯಲ್ಲಿ ರಾಜ್ಯದ ಒಟ್ಟು 53036 ಸರಕಾರಿ ಹಾಗೂ ಅನುದಾನಿತ ಶಾಲೆಗಳ 52,30,741 ವಿದ್ಯಾರ್ಥಿಗಳು ಫಲಾನುಭವಿಗಳಾಗಿದ್ದಾರೆ.

ಸಿರಿಧಾನ್ಯಗಳ ಪೌಷ್ಠಿಕ ಆಹಾರ ವಿದ್ಯಾರ್ಥಿಗಳಿಗೆ ಲಭಿಸಲು ಎನ್ನುವ ಉದ್ದೇಶದಿಂದ 2023-24ನೇ ಸಾಲಿನಿಂದ 'ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ'ದ ಪ್ರಯುಕ್ತ ರಾಜ್ಯದ ಸರಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ವಾರದಲ್ಲಿ 3 ದಿನ ಬಿಸಿಹಾಲಿನೊಂದಿಗೆ ತಲಾ 5 ಗ್ರಾಂ.ನಂತೆ ರಾಗಿ ಮಾಲ್ಟನ್ನು ಒದಗಿಸ ಲಾಗುತ್ತಿದೆ. ಶ್ರೀ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ಸಹಯೋಗ ದೊಂದಿಗೆ ಆರಂಭವಾಗಿರುವ ಈ ಯೋಜನೆಗೆ ಒಟ್ಟು 100 ಕೋಟಿ ರು. ಅಗತ್ಯವಿದ್ದು, ಯೋಜನೆ ವೆಚ್ಚದ ಶೇ.25ರಷ್ಟು ಹಣ ರಾಜ್ಯ ಸರಕಾರ ಹಾಗೂ ಇನ್ನುಳಿದ ಅನುದಾನವನ್ನು ಟ್ರಸ್ಟ್ ಭರಿಸಲಿದೆ.

- ರಾಜ್ಯದ 1419 ಸರಕಾರಿ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ತರಗತಿಗಳನ್ನು ಆರಂಭಿಸಲು ಸರಕಾರ ತೀರ್ಮಾನ
- ಒಂದರಿಂದ ಎಂಟನೇ ತರಗತಿ ವಿದ್ಯಾರ್ಥಿಗಳಿಗೆ 'ಸ್ಪೋಕನ್ ಇಂಗ್ಲಿಷ್' ತರಗತಿಗಳ ಆರಂಭ. ಇದಕ್ಕಾಗಿ ಕೆಪಿಎಸ್ ಶಾಲಾ ಶಿಕ್ಷಕರಿಗೆ ತರಬೇತಿ
- ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ 10 ಹಾಗೂ ದ್ವಿತೀಯ ಪಿಯುಸಿಯಲ್ಲಿ ಫೇಲಾದ ವಿದ್ಯಾರ್ಥಿಗಳಿಗೆ ಸರಕಾರಿ ಶಾಲೆಗಳಲ್ಲಿ ಮರುದಾಖಲಾತಿಗೆ ಅವಕಾಶ
- ಜೂನ್ ತಿಂಗಳಿನಲ್ಲಿಯೇ ಶೂ, ಸಾಕ್ಸ್ ಹಾಗೂ ಪಠ್ಯಪುಸ್ತಕ ವಿದ್ಯಾರ್ಥಿಗಳಿಗೆ ತಲುಪಲು ಇಲಾಖೆಯಿಂದ ಕ್ರಮ
- ಬೆಂಗಳೂರಿನ ಆಯ್ದ 20 ಶಾಲೆಗಳನ್ನು ಬೆಂಗಳೂರು ಪಬ್ಲಿಕ್ ಶಾಲೆಗಳನ್ನಾಗಿ ಮಾರ್ಪಾಡು ಮಾಡಲಾಗಿದೆ.
- 16 ಶಾಲಾ ಶಿಕ್ಷಣ ಇಲಾಖೆಯ ಸರಕಾರಿ ಶಾಲೆಗಳನ್ನು ರಾಜ್ಯವಲಯದ ಅನುದಾನದಡಿ ಅಭಿವೃದ್ಧಿಗೊಳಿಸಲಾಗುತ್ತಿದ್ದು, ಈ ಶಾಲೆಗಳ ಅಭಿವೃದ್ಧಿಗಾಗಿ 69.52 ಕೋಟಿ ವೆಚ್ಚಮಾಡಲಾಗುತ್ತಿದೆ.
- ಮಧ್ಯಾಹ್ನ ಉಪಾಹಾರ ಯೋಜನೆಯಲ್ಲಿ 44971 ಮುಖ್ಯ ಅಡುಗೆಯವರು, 68357 ಸಹಾಯಕ ಅಡಿಗೆಯವರು ಕಾರ್ಯನಿರ್ವಹಿಸುತ್ತಿದ್ದು, 2024-25 ನೇ ಸಾಲಿನಲ್ಲಿ 11392 ಅಡುಗೆಯವರು ಇಡಿಗಂಟು ಸೌಲಭ್ಯ
- ರಾಜ್ಯದ ಪ್ರತಿ ಶಾಲೆಯಲ್ಲಿ 'ಸಸ್ಯ ಶ್ಯಾಮಲ' ಯೋಜನೆ ಜಾರಿ; ಈ ಮೂಲಕ 50 ಲಕ್ಷ ಸಸಿಗಳನ್ನು ನೆಡುವ ಮಹತ್ವದ ಕಾರ್ಯಕ್ರಮ

ಶಿಕ್ಷಕರ ಕೊರತೆ ನೀಗಿಸಲು ಸರಕಾರ ದಿಟ್ಟ ಹೆಜ್ಜೆ

ಇನ್ನು ಸರಕಾರಿ ಶಾಲೆಗಳಲ್ಲಿರುವ ಶಿಕ್ಷಕರ ಕೊರತೆಯಿಂದ ಮಕ್ಕಳಿಗೆ ಸಮಸ್ಯೆಯಾಗುತ್ತಿತ್ತು. ಈ ಹಿಂದಿನ ಸರಕಾರಗಳು ಶಿಕ್ಷಕ ನೇಮಕಕ್ಕೆ ಕ್ರಮವಹಿಸಿದ್ದರೂ, ಅದಕ್ಕೆ ವೇಗ ನೀಡಿರಲಿಲ್ಲ. ಆದರೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ, ಶಿಕ್ಷಕರ ನೇಮಕಕೆ ಇದ್ದ ಕಾನೂನಾತ್ಮಕ ಸಮಸ್ಯೆಗಳನ್ನು ಬಗೆಹರಿಸಿ, 11494 ಶಿಕ್ಷಕರು ಕೆಲಸಕ್ಕೆ ಹಾಜರಾಗುವಂತೆ ಕ್ರಮವಹಿಸಿದ್ದಾರೆ. 14,499 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6-8ನೇ ತರಗತಿ) ನೇಮಕಾತಿಗೆ ಆದೇಶಿಸಲಾಯಿತು. ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ 13,352 ಅಭ್ಯರ್ಥಿಗಳಲ್ಲಿ 11,494 ಅಭ್ಯರ್ಥಿಗಳು ನೇಮಕಾತಿ ಆದೇಶ ಪಡೆದು ಶಾಲೆಗಳಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಉಳಿದ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿದ್ದು ನ್ಯಾಯಾಲಯದಲ್ಲಿರುವ ಅರ್ಜಿ ಇತ್ಯರ್ಥವಾದ ಬಳಿಕ ಭರ್ತಿಗೆ ಕ್ರಮವಹಿಸಲು ತೀರ್ಮಾನಿಸಲಾಗಿದೆ. ಇನ್ನು 2025-26 ನೇ ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕದಲ್ಲಿ 5267 ಶಿಕ್ಷಕರ ಹುದ್ದೆ ಹಾಗೂ ರಾಜ್ಯದ ಇತರೆ ಭಾಗಗಳಲ್ಲಿ 5000 ಹುದ್ದೆ ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಇನ್ನು ಖಾಲಿ ಹುದ್ದೆ ಭರ್ತಿ ಮಾಡುವ ತನಕ ತರಗತಿಗಳಿಗೆ ಸಮಸ್ಯೆಯಾಗಬಾರದು ಎನ್ನುವ ಕಾರಣಕ್ಕೆ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ನೇಮಿಸಲು ರಾಜ್ಯ ಸರಕಾರ ತೀರ್ಮಾನಿಸಿದ್ದು, ಅತಿಥಿ ಶಿಕ್ಷಕ ಹಾಗೂ ಉಪನ್ಯಾಸಕರ ಮಾಸಿಕ ಗೌರವಧನವನ್ನು ಎರಡು ಸಾವಿರ ರು. ಏರಿಸುವ ಮಹತ್ವದ ತೀರ್ಮಾನವನ್ನು ಕೈಗೊಂಡಿದೆ. 2025-26ನೇ ಸಾಲಿಗೆ 51,000 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಆದೇಶಿಸಲಾಗಿದೆ. ಶಿಕ್ಷಕರ ಕೊರತೆಯಿಂದ ಶಾಲೆಯ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಶಾಲಾ ಪ್ರಾರಂಭದಲ್ಲಿ 42817 ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಇದರೊಂದಿಗೆ 2022-23ನೇ ಸಾಲಿನಲ್ಲಿ, ಶಿಕ್ಷಕರ ವರ್ಗಾವಣೆ ಕಾರಣಾಂತರಗಳಿಂದ ಸ್ಥಗಿತಗೊಂಡಿತ್ತು. ಆದರೆ ವರ್ಗಾವಣೆಗೆ ಪ್ರತಿವರ್ಷ ಹಲವು ಶಿಕ್ಷಕರು ಮನವಿ ಮಾಡುತ್ತಿದ್ದರು. ಇದರ ಮಹತ್ವದ ಅರಿತ ಸರಕಾರ, ಶಿಕ್ಷಕ ಸ್ನೇಹಿ ಹಾಗೂ ಪಾರದರ್ಶಕತೆಯಿಂದ ಕೌನ್ಸೆಲಿಂಗ್ ಮುಖಾಂತರ, ಆನ್‌ಲೈನ್ ಮೂಲಕ ಸ್ವೀಕೃತವಾಗಿದ್ದು ಇದರಲ್ಲಿ ಪ್ರಾಥಮಿಕ ಕಲಾ ವಿಭಾಗದಿಂದ 23,77 ಮತ್ತು ಪ್ರೌಢಶಾಲಾ ವಿಭಾಗದಿಂದ 6882 ಒಟ್ಟು 30,629 ಶಿಕ್ಷಕರುಗಳನ್ನು ವರ್ಗಾವಣೆ ಮಾಡಲಾಯಿತು. 2024-25ನೇ ಸಾಲಿನಲ್ಲಿಯೂ ಸಹ ಒಟ್ಟು 65086 ಅರ್ಜಿಗಳನ್ನು ಸ್ವೀಕರಿಸಿದ್ದು 15,325 ಶಿಕ್ಷಕರುಗಳಿಗೆ ಪಾರದರ್ಶಕವಾಗಿ ಕೌನ್ಸೆಲಿಂಗ್ ಮೂಲಕ ಯಶಸ್ವಿಯಾಗಿ ವರ್ಗಾವಣೆ ಕೈಗೊಳ್ಳಲಾಗಿದೆ.

ವರ್ಗಾವಣೆ ಕಾರ್ಯವನ್ನು ಕೈಗೊಂಡಾಗ ಕಲ್ಯಾಣ ಕರ್ನಾಟಕದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅನೇಕ ಶಿಕ್ಷಕರು ರಾಜ್ಯದ ಬೇರೆ ಬೇರೆ ಭಾಗಗಳಿಗೆ ವರ್ಗಾವಣೆಗೊಂಡಿರುತ್ತಾರೆ. ಸರಕಾರವು ಹೊಸ ನೇಮಕಾತಿಯನ್ನು ಕೈಗೊಂಡಾಗ ಆಯ್ಕೆಯಾದ 3997 ಶಿಕ್ಷಕರನ್ನು ಕಲ್ಯಾಣ ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳಲಾಗಿದೆ. ಈ ಮೂಲಕ ಕಲ್ಯಾಣ ಕರ್ನಾಟಕದಲ್ಲಿ ವರ್ಗಾವಣೆಯಿಂದ ಉಂಟಾದ ಶಿಕ್ಷಕರ ಕೊರತೆಯನ್ನು ನೀಗಿಸಲಾಗಿದೆ.

ವಾರ್ಷಿಕ ಮೂರು ಪರೀಕ್ಷೆಗೆ ಅವಕಾಶ

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಗೆ ಸಾಮಾನ್ಯವಾಗಿ ಒಮ್ಮೆ ಅನುತ್ತೀರ್ಣರಾದರೆ ಪೂರಕ ಪರೀಕ್ಷೆಯ ಅವಕಾಶ ನೀಡಲಾಗುತ್ತಿತ್ತು. ಆದರೆ ದೇಶಕ್ಕೆ ಮಾದರಿಯಾಗುವಂತೆ ವಾರ್ಷಿಕ ಮೂರು ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ನೀಡುವ ಮಹತ್ವದ ತೀರ್ಮಾನವನ್ನು ಶಿಕ್ಷಣ ಇಲಾಖೆ ತೆಗೆದುಕೊಂಡಿತು. ಕೇವಲ ಫೇಲಾದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ, ಅಂಕವನ್ನು ಹೆಚ್ಚಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೂ ಇದು ಉತ್ತಮ ಅವಕಾಶವಾಗಿದೆ. ಇನ್ನು ಈ ಮೂರು ಪರೀಕ್ಷೆಯ ಮತ್ತೊಂದು ವಿಶೇಷವೆಂದರೆ, ಮೂರು ಪರೀಕ್ಷೆ ಬರೆದ ವಿದ್ಯಾರ್ಥಿಗಳು ಕೊನೆಯಲ್ಲಿ ಉತ್ತಮ ಅಂಕ ಪಡೆದ ಪರೀಕ್ಷೆಯ ಅಂಕವನ್ನು ಪರಿಗಣಿಸಲು ಅವಕಾಶ ನೀಡಲಾಗಿದೆ. ಮೂರು ಪರೀಕ್ಷೆಯ ಅವಕಾಶ ಜಾರಿಗೊಳಿಸಿದ ಬಳಿಕ, ಕರ್ನಾಟಕದಲ್ಲಿ ಫಲಿತಾಂಶದಲ್ಲಿ ಗಣನೀಯ ಏರಿಕೆ ಕಂಡಿದ್ದು, ವಿದ್ಯಾರ್ಥಿಗಳಿಗೂ ಅನುಕೂಲವಾಗಿದೆ. ಕರ್ನಾಟಕ ಶಿಕ್ಷಣ ಇಲಾಖೆ ಜಾರಿಗೊಳಿಸಿದ ಈ ಯೋಜನೆಯನ್ನು ಇದೀಗ ಸಿಬಿಎಸ್‌ಸಿಯೂ ಅಳವಡಿಸಿಕೊಳ್ಳುವ ಮೂಲಕ 'ಮಾದರಿ' ಎನಿಸಿಕೊಂಡಿದೆ. ಇನ್ನು ಪರೀಕ್ಷೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಹಾಗೂ ಪ್ರಾಮಾಣಿಕ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಕಳೆದ ಎರಡು ವರ್ಷದಿಂದ ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ ಕ್ಯಾಮೆರಾ ಅಳವಡಿಸಿ ವೆಬ್ ಕಾಸ್ಟ್ ಮಾಡಲಾಯಿತು. ಜಿಲ್ಲಾ ಹಾಗೂ ಕೇಂದ್ರ ಕಚೇರಿಯಲ್ಲಿ ನಿಯಂತ್ರಣಾ ಕೊಠಡಿ ನಿರ್ಮಿಸಲಾಯಿತು.

ಶಾಲೆಗಳಿಗೆ ಉಚಿತ ವಿದ್ಯುತ್, ಕುಡಿಯುವ ನೀರುಸೌಲಭ್ಯ

ಈ ಹಿಂದೆ ಸರಕಾರಿ ಶಾಲೆಗಳಿಗೆ ಉಚಿತ ನೀರು ಹಾಗೂ ವಿದ್ಯುತ್ ನೀಡುವ ಯೋಜನೆಯಿರಲಿಲ್ಲ. ಆದರೆ ಶಾಲೆಗಳಿಗೆ ನೀಡುವ ನಿರ್ವಹಣಾ ವೆಚ್ಚದಲ್ಲಿ ವಿದ್ಯುತ್ ಹಾಗೂ ಶುದ್ಧ ಕುಡಿಯುವ ನೀರು ಒದಗಿಸುವುದು ಕಷ್ಟದ ಕೆಲಸವಾಗಿದ್ದರಿಂದ ರಾಜ್ಯ ಸರಕಾರ ಕಳೆದ ವರ್ಷ ಮಹತ್ವದ ತೀರ್ಮಾನವನ್ನು ಕೈಗೊಂಡು, ಸರಕಾರಿ ಶಾಲೆಗಳಿಗೆ ಶೂನ್ಯ ಬಿಲ್‌ಗಳನ್ನು ನೀಡಲಾಗುತ್ತಿದೆ. 2024-25ನೇ ಸಾಲಿನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಒಳಪಡುವ ಸರಕಾರಿ ಶಾಲೆಗಳಿಗೆ ಮಾಸಿಕ ಬಿಲ್‌ಗಳಲ್ಲಿ ಬಳಕೆ ಮೊತ್ತವನ್ನು ನಮೂದಿಸಿ ಜುಲೈ-2024 ತಿಂಗಳಿನಿಂದ ಶೂನ್ಯ ಬಿಲ್ಲುಗಳನ್ನು ನೀಡಲಾಗುತ್ತಿದೆ. ಅದರೂ ಸರಕಾರಿ ಶಾಲೆಗಳ ವಿದ್ಯುತ್ ಸ್ಥಾವರಗಳ ನಿಖರವಾದ ಖಾತೆ ಸಂಖ್ಯೆ ಪಡೆಯಲು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶ ನಾಲಯದಿಂದ ವಿಶೇಷ ತಂತ್ರಾಂಶವನ್ನು ಅಭಿವೃದ್ಧಿಪಡಿಸ ಲಾಗಿದೆ. ಉಚಿತ ವಿದ್ಯುತ್ ನೀಡಿದ್ದರಿಂದ ರಾಜ್ಯದ ಹಲವು ಶಾಲೆಗಳಲ್ಲಿ ಶಿಕ್ಷಕರೇ ಸ್ವಯಂಪ್ರೇರಿತವಾಗಿ ಸಾಯಂಕಾಲ ಶಾಲಾ ಅವಧಿಯ ನಂತರವೂ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಶಿಕ್ಷಕರ ಈ ವಿಶೇಷ ಕಾಳಜಿಗೆ ಸ್ಥಳೀಯ ಎಸ್‌ಡಿಎಂಸಿ ಸದಸ್ಯರು ಸಹಕರಿಸುತ್ತಿದ್ದಾರೆ. ಕಂಪ್ಯೂಟರ್, ಸ್ಮಾರ್ಟ್ ತರಗತಿಗಳು, ಪ್ರಯೋಗಾಲಯ, ಫ್ಯಾನಿನ ಬಳಕೆ, ಮಧ್ಯಾಹ್ನದ ಉಪಾಹಾರ ಯೋಜನೆ ಇತ್ಯಾದಿ ವಿದ್ಯುತ್ ಶಕ್ತಿಯಿಂದ ನಡೆಯುವ ಕಾರ್ಯಗಳು ಶಾಲೆಯಲ್ಲಿ ಸುಗಮ ವಾಗಿ ನಡೆಯುತ್ತಿವೆ. ಇನ್ನು 2024-25ನೇ ಸಾಲಿನಲ್ಲಿ ಸರಕಾರಿ ಶಾಲಾ-ಕಾಲೇಜುಗಳ ಮಾಸಿಕ ಬಿಲ್ಲುಗಳಲ್ಲಿ ಬಳಕೆ ಮೊತ್ತವನ್ನು ನಮೂದಿಸಿ ಶೂನ್ಯ ಬಿಲ್ಲುಗಳನ್ನು ನೀಡುವಂತೆ ಹಾಗೂ ಬಿಲ್ಲುಗಳ ಮೊತ್ತವನ್ನು ತ್ರೈಮಾಸಿಕವಾರು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಸಂಬಂಧಪಟ್ಟ ನಿಗಮ/ಜಲ ಮಂಡಳಿಗಳು ಸಲ್ಲಿಸಿ ಮರುಪಾವತಿ ಪಡೆದುಕೊಳ್ಳುವಂತೆ ಆದೇಶಿಸಲಾಗಿರುತ್ತದೆ. ಇದರಿಂದಾಗಿ 46,829 ಸರಕಾರಿ ಶಾಲೆಗಳು ಮತ್ತು 1,234 ಪದವಿ ಪೂರ್ವ ಕಾಲೇಜುಗಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಸಿಕ್ಕಿದೆ.

2025-26ನೇ ಸಾಲಿನ ಪ್ರಮುಖ ಬಜೆಟ್ ಘೋಷಣೆ

- **ಕಲಿಕಾ ದೀಪ**

  2000 ಶಾಲೆಗಳಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯನ್ನು ಓದಲು ಗಣಿತದ ಆರಂಭಿಕ ಸಾಮರ್ಥ್ಯಗಳಿಸಲು ಎಐ ಆಧಾರಿತ ಕಾರ್ಯಕ್ರಮ

- **ಮರುಸಿಂಚನ**

  ಅತಿ ಕಡಿಮೆ ಕಲಿಕಾ ಸ್ಥರದಲ್ಲಿ ಇರುವ 6ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹೆಚ್ಚಿಸುವುದು

- **ಜ್ಞಾನ ಸೇತು**

  ವಿಜ್ಞಾನ ಮತ್ತು ಗಣಿತ ವಿಷಯಗಳ ಬೋಧನಾ ವಿಧಾನದಲ್ಲಿ ನಾವೀನ್ಯತೆ ಅಳವಡಿಕೆ 5ಸಾವಿರ ಸರಕಾರಿ ಶಾಲೆಗಳ 20 ಲಕ್ಷ ವಿದ್ಯಾರ್ಥಿಗಳು ಹಾಗೂ 15ಸಾವಿರ ಶಿಕ್ಷಕರು ಪ್ರಯೋಜನ ಪಡೆಯಲಿದ್ದಾರೆ

- **ಐ ಕೋಡ್ ಲ್ಯಾಬ್**

  ಕೋಡಿಂಗ್ ಕಲಿಕೆಗೆ ಪ್ರೋತ್ಸಾಹ 63 ಶಾಲೆಗಳನ್ನು ಹಬ್ ಶಾಲೆಗಳೆಂದು ಪರಿಗಣಿಸಿ 756 ಸ್ಪೋಕ್ ಶಾಲೆಗಳಿಗೆ ಅನುಕೂಲ ಕಲ್ಪಿಸುವುದು

- **ವಿದ್ಯಾ ವಿಜೇತ**

  ಸರಕಾರಿ ಪದವಿ ಪೂರ್ವ ಕಾಲೇಜುಗಳ 25 ಸಾವಿರ ವಿದ್ಯಾರ್ಥಿಗಳಿಗೆ 5ಕೋಟಿ ವೆಚ್ಚದಲ್ಲಿ ಜೆಇಇ, ನೀಟ್, ಸಿಇಟಿ ತರಬೇತಿ ಕಾರ್ಯಕ್ರಮ.

- **ನಿರಂತರ**

  ಆಧುನಿಕ ತಂತ್ರಜ್ಞಾನದ ಮೂಲಕ ಮುಖ ಚಹರೆ ಆಧಾರಿತ ಮಕ್ಕಳ ಹಾಜರಾತಿಯನ್ನು ಖಚಿತಪಡಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು.

ಬ್ಯಾಗ್ ಹೊರೆ ತಗ್ಗಿಸಲು ಸಂಭ್ರಮದ ಶನಿವಾರ

ಇನ್ನು ಹಲವು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಬ್ಯಾಗ್ ಹೊರೆ ತಗ್ಗಿಸಬೇಕು ಎನ್ನುವ ಚರ್ಚೆಗಳು ನಡೆಯುತ್ತಿದ್ದವು. ಆದರೆ ಅದನ್ನು ಜಾರಿಗೊಳಿಸಿದ್ದು ಮಾತ್ರ ಕಾಂಗ್ರೆಸ್ ಸರಕಾರ. 2023-24ನೇ ಸಾಲಿನಲ್ಲಿ ಅವಧಿಯಲ್ಲಿ ಬ್ಯಾಗ್ ತೂಕ ಕಡಿಮೆ ಮಾಡುವ ನಿಟ್ಟಿನಲ್ಲಿ ಸಮಿತಿ ರಚಿಸಿ, ಚರ್ಚಿಸಿ, ಪುಸ್ತಕದ ಗಾತ್ರವನ್ನು ಕಡಿಮೆ ಮಾಡಲು ತೀರ್ಮಾನಿಸಲಾಯಿತು. ಸಮಿತಿಯ ಶಿಫಾರಸ್ಸಿನಂತೆ ಪುಸ್ತಕದ ತೂಕವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ 1 ರಿಂದ 10 ನೇ ತರಗತಿಯ ಒಟ್ಟು 533 ಶೀರ್ಷಿಕೆ ಹೊಂದಿರುವ ಪುಸ್ತಕಗಳಿಂದ 832 ಶೀರ್ಷಿಕೆ ಹೊಂದಿರುವ ಪುಸ್ತಕಗಳನ್ನು ರಚಿಸಲಾಗಿದೆ. ವಿದ್ಯಾರ್ಥಿಗಳಿಗೆ ಸಿಗುವ ಜ್ಞಾನಕ್ಕೆ ಸಮಸ್ಯೆಯಾಗದಂತೆ ತೂಕವನ್ನು ತಗ್ಗಿಸುವ ಉದ್ದೇಶದಿಂದ, ಪಠ್ಯಪುಸ್ತಕದಲ್ಲಿ ಭಾಗ-1, ಭಾಗ 2 ಎಂದು ವಿಗಂಡಿಸಲಾಗಿದೆ.

ಇದರೊಂದಿಗೆ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಸಂಭ್ರಮ ವಾತಾವರಣ ಸೃಷ್ಟಿಸುವ ಹಾಗೂ ಆಟದೊಂದಿಗೆ ಪಾಠ ಮಾಡುವ ಉದ್ದೇಶದಿಂದ ಪ್ರತಿ ತಿಂಗಳ ಮೂರನೇ ಶನಿವಾರದಂದು ಬ್ಯಾಗ್ ರಹಿತ ದಿನವನ್ನಾಗಿ ಆಚರಿಸಲಾಗುತ್ತಿದೆ. ಇದರಿಂದಾಗಿ, ಮಕ್ಕಳಿಗೆ ಸಂತಸದಾಯಕ ಕಲಿಕೆಗೆ ಅವಕಾಶ ಸಿಗುತ್ತಿದೆ. ವಿದ್ಯಾರ್ಥಿಗಳಿಗಾಗಿ 10 ಸ್ವಯಂ ವಿವರಣಾತ್ಮಕ ಮಾಡ್ಯೂಲ್‌ಗಳ ರಚಿಸಲಾಗಿದ್ದು, ಅರಿವು, ಅನುಭವ ಮತ್ತು ಅವಲೋಕನ ಮೂರು ಮಾಡ್ಯೂಲ್‌ಗಳ ಮೂಲಕ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ಅವಕಾಶ ಮಾಡಿಕೊಡಲಾಗುತ್ತಿದೆ.

ನಂಬಿಕೆ, ಗೌರವ, ಸಂಸ್ಕೃತಿಯ ಬುನಾದಿ ಮೇಲೆ ಕಟ್ಟಿದ ಭಾರತ-ಭೂತಾನ್ ಸಂಬಂಧ

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಭೂತಾನ್, ಭಾರತದ ಗಡಿಗೆ ಹೊಂದಿಕೊಂಡ ದೇಶವಾದರೂ, ನಾನು ಅಲ್ಲಿಗೆ ಏಕೆ ಹೋಗಲಿಲ್ಲ ಎಂಬುದು ನನಗೆ ಇನ್ನೂ ಅರ್ಥವಾಗದ ಪ್ರಶ್ನೆ. ನೂರಾ ಒಂದು ದೇಶ ಸುತ್ತಿದ ನಂತರ ನಮ್ಮ ದೇಶಕ್ಕೆ ತಾಕಿಕೊಂಡ ಭೂತಾನ್‌ಗೆ ಇಷ್ಟು ತಡವಾಗಿ ಹೋಗುತ್ತಿರುವುದಕ್ಕೆ ನನಗೇ ವಿಷಾದವಿದೆ. ಭೂತಾನ್ ಒಂದೆಡೆ ಅಸ್ಸಾಂ ಮತ್ತು ಸಿಕ್ಕಿಂ ಜತೆಗೆ ಗಡಿಯನ್ನು ಹಂಚಿಕೊಂಡಿದೆ. ನೇಪಾಳ ಮತ್ತು ಭೂತಾನ್ ಪ್ರತ್ಯೇಕವಾಗಿರುವುದು ಸಿಕ್ಕಿಂನಿಂದಾಗಿ. ಗುವಾಹಟಿಯಿಂದ ಕೇವಲ ನಲವತ್ತು ನಿಮಿಷ ವಿಮಾನ ಪ್ರಯಾಣದ ಅಂತರದಲ್ಲಿರುವ ಭೂತಾನ್, ಭಾರತದ ಮಿತ್ರದೇಶಗಳಲ್ಲೊಂದು.

ಭಾರತ ಮತ್ತು ಭೂತಾನ್ ನಡುವಿನ ಸಂಬಂಧವು ರಾಜಕೀಯ ಅಥವಾ ಆರ್ಥಿಕ ವಿಷಯಕ್ಕೆ ಮಾತ್ರ ಸೀಮಿತವಾದುದಲ್ಲ. ಇದು ದಶಕಗಳ ಕಾಲದ ನಂಬಿಕೆ, ಪರಸ್ಪರ ಗೌರವ ಮತ್ತು ಸಾಂಸ್ಕೃತಿಕ ನಂಟಿನ ಮೇಲೆ ಆಧರಿತವಾದ ಒಂದು ವಿಶಿಷ್ಟ ಮತ್ತು ಬಲವಾದ ಸ್ನೇಹ ಸಂಬಂಧ. ಭೂತಾನ್ ಭಾರತಕ್ಕೆ ಅತ್ಯಂತ ವಿಶ್ವಾಸಾರ್ಹ ನೆರೆಹೊರೆ ದೇಶವಾಗಿದ್ದು, ಈ ಸಂಬಂಧವು 'ನೆರೆಹೊರೆಗೆ ಮೊದಲ ಆದ್ಯತೆ' (Neighbourhood First) ಎಂಬ ಭಾರತದ ನೀತಿಯ ಪ್ರಮುಖ ಭಾಗವಾಗಿದೆ.

ಭಾರತ ಮತ್ತು ಭೂತಾನ್ ನಡುವಿನ ಸಂಬಂಧದ ಬೇರುಗಳು ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಆಳವಾಗಿ ಇವೆ. ಎಂಟನೇ ಶತಮಾನದಲ್ಲಿ ಭಾರತದ ಗುರು ಪದ್ಮಸಂಭವ (ಗುರು ರಿಂಪೋಚೆ ಎಂದೂ ಪ್ರಸಿದ್ಧ) ಭೂತಾನಿಗೆ ತಾಂತ್ರಿಕ ಬೌದ್ಧ ಧರ್ಮವನ್ನು ಪರಿಚಯಿಸಿದರು. ಇದು ಎರಡೂ ದೇಶಗಳ ನಡುವಿನ ಆಧ್ಯಾತ್ಮಿಕ ಸಂಬಂಧಕ್ಕೆ ಆಧಾರವಾಯಿತು. ಅಂದಿನಿಂದ ಇಂದಿನವರೆಗೂ, ಭೂತಾನ್ ದೇಶವು ಭಾರತೀಯ ಸಂಸ್ಕೃತಿ ಮತ್ತು ಬೌದ್ಧ ಧರ್ಮದ ಅನೇಕ ಅಂಶಗಳನ್ನು ಮೈಗೂಡಿಸಿಕೊಂಡಿದೆ.

ಭೂತಾನ್ ಭಾರತಕ್ಕೆ ಕಾರ್ಯತಂತ್ರದ ದೃಷ್ಟಿಯಿಂದ ಅತ್ಯಂತ ಮಹತ್ವದ ದೇಶ. ಭಾರತ ಮತ್ತು ಚೀನಾ ನಡುವೆ ಭೂತಾನ್ ಇದೆ. ಯಾವುದೇ ಬಾಹ್ಯ ಶಕ್ತಿಯು ಭೂತಾನ್‌ನ ಪ್ರದೇಶವನ್ನು ಆಕ್ರಮಿಸದಂತೆ ಭಾರತವು ಭದ್ರತೆಯನ್ನು ಖಚಿತಪಡಿಸುತ್ತದೆ. 2017ರ ಡೋಕ್ಲಾಮ್ ಬಿಕ್ಕಟ್ಟು ಇದಕ್ಕೆ ಉತ್ತಮ ಉದಾಹರಣೆ. ಚೀನಾವು ಡೋಕ್ಲಾಮ್ ಪ್ರದೇಶದಲ್ಲಿ ರಸ್ತೆ ನಿರ್ಮಿಸಲು ಪ್ರಯತ್ನಿಸಿದಾಗ, ಭೂತಾನ್‌ನ ಸಾರ್ವಭೌಮತ್ವವನ್ನು ರಕ್ಷಿಸಲು ಭಾರತವು ಚೀನಾವನ್ನು ತಡೆಯಿತು. ಈ ಘಟನೆಯು ಭೂತಾನ್‌ನ ಭದ್ರತೆಯ ವಿಷಯದಲ್ಲಿ ಭಾರತಕ್ಕಿರುವ ಬದ್ಧತೆಗೆ ಪ್ರತೀಕವಾಯಿತು. ಭಾರತೀಯ ಮಿಲಿಟರಿ ತರಬೇತಿ ತಂಡ (IMTRAT) ಭೂತಾನ್ ಸೈನ್ಯಕ್ಕೆ ತರಬೇತಿ ನೀಡುತ್ತದೆ.

ಭಾರತವು ಭೂತಾನ್‌ನ ಅತಿದೊಡ್ಡ ಅಭಿವೃದ್ಧಿ ಪಾಲುದಾರ ದೇಶ. ಭಾರತವು ಭೂತಾನ್‌ಗೆ ಆರ್ಥಿಕ ಸಹಾಯ, ಸಾಲಗಳು ಮತ್ತು ಅನುದಾನಗಳ ರೂಪದಲ್ಲಿ ಸದಾ ಸಹಾಯಹಸ್ತ ಚಾಚುತ್ತದೆ. ಈ ಸಹಕಾರವು ಹಲವು ಪ್ರಮುಖ ಕ್ಷೇತ್ರಗಳಲ್ಲಿ ವ್ಯಾಪಿಸಿದೆ. ಭೂತಾನ್‌ನ ಆರ್ಥಿಕತೆಯ ಪ್ರಮುಖ ಆದಾಯದ ಮೂಲ ಜಲವಿದ್ಯುತ್. ಭಾರತವು ಅನೇಕ ಜಲವಿದ್ಯುತ್ ಯೋಜನೆಗಳನ್ನು ನಿರ್ಮಿಸಲು ಭೂತಾನಿಗೆ ಸಹಾಯ ಮಾಡಿದೆ ಮತ್ತು ಅಲ್ಲಿ ಉತ್ಪಾದನೆಯಾದ ವಿದ್ಯುತ್‌ನ ಮುಖ್ಯ ಖರೀದಿದಾರನಾಗಿದೆ. ಇದು ಭೂತಾನ್‌ನ ಆದಾಯಕ್ಕೆ ದೊಡ್ಡ ಕೊಡುಗೆಯನ್ನು ಸಹ ನೀಡಿದೆ. ಭಾರತವು ಭೂತಾನ್‌ನಲ್ಲಿ ರಸ್ತೆ, ಸೇತುವೆ, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಇತ್ತೀಚೆಗೆ, ಎರಡೂ ದೇಶಗಳು ಗಡಿ ವ್ಯಾಪಾರ ಮತ್ತು ಸಂಪರ್ಕವನ್ನು ಸುಧಾರಿಸಲು ಗೆಲೆಫುವಿನಲ್ಲಿ ಪ್ರಾದೇಶಿಕ ಆರ್ಥಿಕ ಕೇಂದ್ರವನ್ನು ಸ್ಥಾಪಿಸಲು ಸಹಕಾರ ನೀಡಿವೆ.

ಇತ್ತೀಚಿನ ವರ್ಷಗಳಲ್ಲಿ, ಭಾರತವು ಭೂತಾನ್‌ಗೆ ಡಿಜಿಟಲ್ ತಂತ್ರಜ್ಞಾನ ಮತ್ತು ಬಾಹ್ಯಾಕಾಶ ಸಂಶೋಧನೆಯಲ್ಲಿ ಸಹಾಯ ಮಾಡಿದೆ. ಉದಾಹರಣೆಗೆ, ಭೂತಾನ್‌ನ ಉಪಗ್ರಹ ಉಡಾವಣೆ ಮತ್ತು ದಕ್ಷಿಣ ಏಷ್ಯಾ ಉಪಗ್ರಹ ಬಳಕೆಗಾಗಿ ಭಾರತ ಸಹಾಯ ಮಾಡಿದೆ. ರೂಪೇ ಕಾರ್ಡ್ ಅನ್ನು ಭೂತಾನ್‌ನಲ್ಲಿಯೂ ಬಳಸಲು ಅವಕಾಶ ನೀಡಿ, ಡಿಜಿಟಲ್ ವಹಿವಾಟುಗಳನ್ನು ಉತ್ತೇಜಿಸಲಾಗಿದೆ. ಭಾರತವು ಭೂತಾನ್‌ನ ಅತಿದೊಡ್ಡ ವ್ಯಾಪಾರ ಪಾಲುದಾರ. ಭೂತಾನ್‌ನ ಒಟ್ಟು ವ್ಯಾಪಾರದ ಸುಮಾರು ಶೇ. 80ರಷ್ಟು ಭಾರತದೊಂದಿಗೇ ನಡೆಯುತ್ತದೆ. ಭಾರತವು ಭೂತಾನ್ ಪಾಲಿಗೆ ಸರಕುಗಳನ್ನು ಆಮದು ಮಾಡಿಕೊಳ್ಳುವ ಮುಖ್ಯ ಮೂಲವಾಗಿದೆ ಮತ್ತು ಅಲ್ಲಿನ ಜಲವಿದ್ಯುತ್, ಕೃಷಿ ಉತ್ಪನ್ನಗಳು ಮತ್ತು ಖನಿಜಗಳನ್ನು ರಫ್ತು ಮಾಡುವ ಮುಖ್ಯ ತಾಣವಾಗಿದೆ.

ಭೂತಾನಿಯರು ಭಾರತೀಯರನ್ನು ಸಹೋದರ ಸಂಬಂಧದಂತೆ ನೋಡುವುದನ್ನು ಎಲ್ಲೆಡೆ ಕಾಣಬಹುದು. ಭೂತಾನ್‌ನಲ್ಲಿ ಓಡಾಡುವಾಗ, ನಮ್ಮ ಹಿಮಾಚಲ ಅಥವಾ ಉತ್ತರಾಖಂಡ್‌ನಲ್ಲಿ ಓಡಾಡಿದ ಅನುಭವವಾಗುತ್ತದೆ. ರಸ್ತೆಯಲ್ಲಿ ಓಡಾಡುವಾಗ ಕಟ್ಟಡಗಳನ್ನು ಹೊರತುಪಡಿಸಿದರೆ, ವಾಹನಗಳೆಲ್ಲ ಭಾರತದ ರಸ್ತೆಗಳಲ್ಲಿ ಕಾಣುವಂಥವೇ. ಒಟ್ಟಾರೆಯಾಗಿ, ಭೂತಾನ್ ಮತ್ತು ಭಾರತದ ಸಂಬಂಧವು ಪರಸ್ಪರ ನಂಬಿಕೆ, ಗೌರವ ಮತ್ತು ಸಹಕಾರದ ತತ್ವಗಳ ಮೇಲೆ ನಿಂತಿದೆ. ಭೂತಾನ್ ತನ್ನ ಸಾರ್ವಭೌಮತ್ವ ಮತ್ತು ಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವಲ್ಲಿ ಭಾರತದ ಬೆಂಬಲವನ್ನು ನಂಬಿದೆ. ಅದೇ ರೀತಿ, ಭಾರತವು ತನ್ನ ನೆರೆಹೊರೆಯಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಭೂತಾನ್‌ನೊಂದಿಗೆ ಉತ್ತಮ ಸಂಬಂಧವನ್ನು ಕಾಪಾಡಿಕೊಂಡಿದೆ. ಈ ಸ್ನೇಹ ಸಂಬಂಧ ಇಂದಿನವರೆಗೂ ಒಂದು ಆದರ್ಶಪ್ರಾಯ ದ್ವಿಪಕ್ಷೀಯ ಸಂಬಂಧವಾಗಿದೆ.

ತಡವಾಗಿ ಬಂದ ಟಿವಿ

1999ರಲ್ಲಿ ಟೆಲಿವಿಷನ್ ಮತ್ತು ಇಂಟರ್ನೆಟ್ ಅನ್ನು ಪರಿಚಯಿಸಲಾದ ವಿಶ್ವದ ಕೊನೆಯ ದೇಶಗಳಲ್ಲಿ ಭೂತಾನ್ ಒಂದು ಅಂದರೆ ಆಶ್ಚರ್ಯವಾಗಬಹುದು. ಇದಕ್ಕೆ ತಾಂತ್ರಿಕ ಹಿನ್ನಡೆ ಮಾತ್ರ ಕಾರಣವಲ್ಲ. ಇದಕ್ಕೆ ಭೂತಾನ್‌ನ ವಿಶಿಷ್ಟ ನೀತಿಗಳು ಮತ್ತು ಸಂಸ್ಕೃತಿಯನ್ನು ಕಾಪಾಡಿಕೊಳ್ಳುವ ಪ್ರಯತ್ನವೂ ಒಂದು ಕಾರಣ.

ಭೂತಾನ್ ಇಷ್ಟು ವರ್ಷಗಳ ಕಾಲ ಟಿವಿ ಮತ್ತು ಇಂಟರ್ನೆಟ್‌ನಿಂದ ದೂರ ಉಳಿಯಲು ಕೆಲವು ಪ್ರಮುಖ ಕಾರಣಗಳಿವೆ. ಭೂತಾನ್‌ನ ರಾಜಮನೆತನ ಮತ್ತು ಸರಕಾರ, ಆಧುನಿಕ ತಂತ್ರಜ್ಞಾನಗಳು ಹೊರಗಿನ ಪ್ರಪಂಚದ ನಕಾರಾತ್ಮಕ ಪ್ರಭಾವಗಳನ್ನು ತಂದು, ದೇಶದ ಅನನ್ಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಹಾಳುಮಾಡಬಹುದು ಎಂದು ಆತಂಕಗೊಂಡಿತ್ತು. ತಮ್ಮ ಜನರ ಜೀವನಶೈಲಿ, ಸಂಪ್ರದಾಯ, ಪರಂಪರೆ, ಸಂಸ್ಕಾರ, ಉಡುಗೆ-ತೊಡುಗೆ ಮತ್ತು ಆಧ್ಯಾತ್ಮಿಕ ಮೌಲ್ಯಗಳು ಕಲುಷಿತವಾಗಬಾರದು ಎಂಬುದು ಅವರ ಮುಖ್ಯ ಉದ್ದೇಶವಾಗಿತ್ತು.

ಭೂತಾನ್ ಆರ್ಥಿಕ ಅಭಿವೃದ್ಧಿಗಿಂತ ಹೆಚ್ಚಾಗಿ ಜನರ ಸಂತೋಷ ಮತ್ತು ಯೋಗಕ್ಷೇಮಕ್ಕೆ ಒತ್ತು ನೀಡುತಾ ಬಂದಿದೆ. ಟಿವಿ ಮತ್ತು ಇಂಟರ್ನೆಟ್‌ನಂಥ ಮಾಧ್ಯಮಗಳು ಜನರ ಆಸೆಗಳನ್ನು ಹೆಚ್ಚಿಸಿ, ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸಿ, ಸಂತೋಷವನ್ನು ಕಡಿಮೆ ಮಾಡಬಹುದು ಎಂಬುದು ಇಲ್ಲಿನ ಜನರ ಅಭಿಪ್ರಾಯವಾಗಿತ್ತು. ಹಿಮಾಲಯದ ಕಠಿಣ ಭೂಪ್ರದೇಶದಿಂದಾಗಿ, ಟಿವಿ ಮತ್ತು ಇಂಟರ್ನೆಟ್‌ಗಾಗಿ ಅಗತ್ಯವಿರುವ ಮೂಲಸೌಕರ್ಯಗಳನ್ನು (ರಸ್ತೆ, ವಿದ್ಯುತ್, ಸಂಪರ್ಕ ತಂತಿಗಳು) ನಿರ್ಮಿಸುವುದು ಕೂಡ ಅತ್ಯಂತ ಕಷ್ಟಕರ ಮತ್ತು ದುಬಾರಿ ಕೆಲಸವಾಗಿತ್ತು. ಇದು ಸಹ ಒಂದು ಕಾರಣವಾಗಿದ್ದಿರಬಹುದು.

1999ರಲ್ಲಿ, ಆಗಿನ ರಾಜ ಜಿಗ್ಮೆ ಸಿಂಗ್ಯೆ ವಾಂಗ್ಚುಕ್ ಅವರು ತಮ್ಮ ಪಟ್ಟಾಭಿಷೇಕದ 25ನೇ ವಾರ್ಷಿಕೋತ್ಸವದಂದು ಟಿವಿ ಮತ್ತು ಇಂಟರ್ನೆಟ್ ಅನ್ನು ಅಧಿಕೃತವಾಗಿ ಆರಂಭಿಸಲು ಸಮ್ಮತಿಸಿದರು. ಜಗತ್ತು ತಂತ್ರಜ್ಞಾನದಲ್ಲಿ ವೇಗವಾಗಿ ಮುನ್ನಡೆಯುತ್ತಿರುವುದರಿಂದ, ಭೂತಾನ್ ಸಂಪೂರ್ಣವಾಗಿ ಅದರಿಂದ ದೂರ ಉಳಿದರೆ ಅಭಿವೃದ್ಧಿಯಲ್ಲಿ ಹಿಂದುಳಿಯುತ್ತದೆ ಎಂದು ವಾಂಗ್ಚುಕ್ ಭಾವಿಸಿದ್ದರು. ಟಿವಿ ಮತ್ತು ಇಂಟರ್ನೆಟ್ ಮೂಲಕ ಜನರು ಜಗತ್ತಿನ ವಿದ್ಯಮಾನಗಳನ್ನು, ಹೊಸ ಜ್ಞಾನವನ್ನು ಮತ್ತು ಮಾಹಿತಿಗಳನ್ನು ಪಡೆಯಬಹುದು ಎಂದು ಅವರು ನಂಬಿದ್ದರು. ಇದು ದೇಶದ ಪ್ರಗತಿಗೆ ಸಹಾಯ ಮಾಡುತ್ತದೆ ಎಂದು ಅವರು ಪ್ರತಿಪಾದಿಸಿದರು.

ಟಿವಿ ಮತ್ತು ಇಂಟರ್ನೆಟ್ ಪ್ರಾರಂಭಿಸುವಾಗ, ವಾಂಗ್ಚುಕ್ ತಮ್ಮ ಭಾಷಣದಲ್ಲಿ, 'ಈ ತಂತ್ರಜ್ಞಾನಗಳು ಒಳ್ಳೆಯದನ್ನೂ, ಕೆಟ್ಟದನ್ನೂ ತರುತ್ತವೆ' ಎಂದು ಜನರಿಗೆ ಎಚ್ಚರಿಕೆ ನೀಡಿ, 'ಜನರು ಜಾಗರೂಕರಾಗಿ ಮತ್ತು ವಿವೇಚನೆಯಿಂದ ಅವುಗಳನ್ನು ಬಳಸಬೇಕು' ಎಂದು ಕಿವಿಮಾತು ಹೇಳಿದ್ದರು.

ಟಿವಿ ಮತ್ತು ಇಂಟರ್ನೆಟ್ ಬಂದ ನಂತರ, ಭೂತಾನ್‌ನಲ್ಲಿ ತ್ವರಿತ ಬದಲಾವಣೆಗಳು ಆದವು. ಜನರು ಜಾಗತಿಕ ಸುದ್ದಿ, ಶಿಕ್ಷಣ ಮತ್ತು ಹೊಸ ಕಲ್ಪನೆಗಳನ್ನು ತಿಳಿದುಕೊಳ್ಳಲು ಪ್ರಾರಂಭಿಸಿದರು. ಇದು ಭೂತಾನ್‌ನ ಡಿಜಿಟಲ್ ಬೆಳವಣಿಗೆಗೆ ದಾರಿಯಾಯಿತು. ಇಂದು, ಭೂತಾನ್‌ನ ಬಹುತೇಕ ಜನರು ಇಂಟರ್ನೆಟ್ ಮತ್ತು ಮೊಬೈಲ್ ಫೋನ್‌ಗಳನ್ನು ಬಳಸುತ್ತಿದ್ದಾರೆ. ಆದರೆ ಇದರಿಂದ ನಕಾರಾತ್ಮಕ ಪರಿಣಾಮಗಳೂ ಆಗಿವೆ ಎಂಬುದನ್ನು ಭೂತಾನಿಯರು ಒಪ್ಪುತ್ತಾರೆ. ವಾಂಗ್ಚುಕ್ ಮೊದಲೇ ಎಚ್ಚರಿಕೆ ನೀಡಿದಂತೆ, ಕೆಲವು ನಕಾರಾತ್ಮಕ ಪರಿಣಾಮಗಳೂ ಕಾಣಿಸಿಕೊಂಡವು. ಹೊರಗಿನ ಪ್ರಭಾವದಿಂದ ಪಾಶ್ಚಾತ್ಯ ಉಡುಗೆ-ತೊಡುಗೆ, ಸಂಗೀತ ಮತ್ತು ಜೀವನಶೈಲಿ ಯುವಕರ ಮೇಲೆ ಪ್ರಭಾವ ಬೀರಲು ಶುರುವಾಯಿತು. 1999ರ ನಂತರ ಅಪರಾಧ ಪ್ರಮಾಣದಲ್ಲಿ ಸ್ವಲ್ಪ ಹೆಚ್ಚಳವಾಯಿತು.

ಒಟ್ಟಾರೆಯಾಗಿ, ಭೂತಾನ್‌ನ ಈ ನಿರ್ಧಾರವು ಆಧುನಿಕತೆ ಮತ್ತು ಸಂಪ್ರದಾಯದ ನಡುವೆ ಸಮತೋಲನವನ್ನು ಸಾಧಿಸುವ ಒಂದು ಪ್ರಯತ್ನವಾಗಿತ್ತು. ಭೂತಾನ್ ತನ್ನ ಅನನ್ಯ ಸಂಸ್ಕೃತಿಯನ್ನು ಕಾಪಾಡಿಕೊಳ್ಳುತ್ತಲೇ, ಜಾಗತಿಕ ಸಮುದಾಯದೊಂದಿಗೆ ಸೇರಿಕೊಳ್ಳಲು ನಿರ್ಧರಿಸಿದ್ದು ಒಂದು ಕ್ರಾಂತಿಕಾರಿ ಹೆಜ್ಜೆಯೇ.

ರಾಜರ ಸರಳ ಜೀವನ

ಭೂತಾನ್‌ನ ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ನಡುವಿನ ಸಂಬಂಧ ಜಗತ್ತಿನಲ್ಲಿಯೇ ವಿಶಿಷ್ಟವಾದದ್ದು. ಸಾಮಾನ್ಯವಾಗಿ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಆಗ್ರಹಿಸಿ, ಜನರು ರಾಜರ ವಿರುದ್ಧ ಬೀದಿಗಿಳಿದು ಹೋರಾಡಿದ್ದನ್ನು ಜಗತ್ತಿನ ಅನೇಕ ಕಡೆಗಳಲ್ಲಿ ನೋಡಿದ್ದೇವೆ. ಆದರೆ, ಭೂತಾನ್‌ನಲ್ಲಿ ಸ್ವತಃ ರಾಜರೇ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಮುಂದಾದರು.

ಭೂತಾನ್‌ನಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಪ್ರಕ್ರಿಯೆ ದಿಢೀರನೆ ನಡೆದದ್ದಲ್ಲ, ಇದು ದಶಕಗಳ ಕಾಲ ನಡೆದ ಒಂದು ಯೋಜಿತ ಪ್ರಕ್ರಿಯೆ. ಮೂರನೇ ರಾಜ ಜಿಗ್ಮೆ ದೋರ್ಜಿ ವಾಂಗ್ಚುಕ್ ಅವರನ್ನು 'ಆಧುನಿಕ ಭೂತಾನ್‌ನ ಜನಕ' ಎಂದು ಕರೆಯಲಾಗುತ್ತದೆ. 1953ರಲ್ಲಿ ಇವರು 'ರಾಷ್ಟ್ರೀಯ ಸಭೆ'ಯನ್ನು (National Assembly) ಸ್ಥಾಪಿಸಿ, ತಮ್ಮ ಪರಮಾಧಿಕಾರ (veto)ವನ್ನು ಕಡಿಮೆ ಮಾಡಿಕೊಂಡರು. ಇದು ಪ್ರಜಾಪ್ರಭುತ್ವದತ್ತ ಇಟ್ಟ ಮೊದಲ ಹೆಜ್ಜೆ.

ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್ಚುಕ್ 1998ರಲ್ಲಿ ತಮ್ಮ ಬಹುತೇಕ ಆಡಳಿತ ಅಧಿಕಾರವನ್ನು ಸಚಿವರ ಮಂಡಳಿಗೆ ವರ್ಗಾಯಿಸಿದರು. ಅದರ ಜತೆಗೆ, 'ಸಂಸತ್ತಿನ ಮೂರನೇ ಎರಡರಷ್ಟು ಸದಸ್ಯರು ಬೇಡ ಎಂದಲ್ಲಿ ರಾಜನು ಅಧಿಕಾರವನ್ನು ಬಿಟ್ಟುಕೊಡಬೇಕಾಗುತ್ತದೆ' ಎಂಬ ಕಾನೂನನ್ನು ಜಾರಿಗೆ ತಂದರು. ಈ ನಿರ್ಧಾರ ಪ್ರಪಂಚದಲ್ಲಿಯೇ ಒಂದು ಅಚ್ಚರಿಯ ನಡೆಯಾಗಿತ್ತು. 2008ರಲ್ಲಿ ನಾಲ್ಕನೇ ರಾಜರು ತಮ್ಮ ಮಗ ಜಿಗ್ಮೆ ಖೇಸರ್ ನಾಮ್ಗ್ಯಾಲ್ ವಾಂಗ್ಚುಕ್‌ಗೆ ಸಿಂಹಾಸನವನ್ನು ಬಿಟ್ಟುಕೊಟ್ಟರು. ಈ ಸಂದರ್ಭದಲ್ಲಿ ಸಂವಿಧಾನವನ್ನು ಅಳವಡಿಸಿಕೊಂಡು ಭೂತಾನ್ ಒಂದು ಸಾಂವಿಧಾನಿಕ ರಾಜಪ್ರಭುತ್ವಕ್ಕೆ ಬದಲಾಯಿತು. ಇದು ಭೂತಾನ್‌ನ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವಾಗಿತ್ತು.

ಭೂತಾನ್ ರಾಜರನ್ನು ಅವರ ಜನಪ್ರಿಯತೆ ಮತ್ತು ಸರಳತೆಯಿಂದ ಗುರುತಿಸಲಾಗುತ್ತದೆ. ಈಗಿನ ರಾಜ ಜಿಗ್ಮೆ ಖೇಸರ್ ಮತ್ತು ರಾಣಿ ಜೆಟ್ಸನ್ ಪೆಮಾ ಅವರು ಆಗಾಗ ಹಳ್ಳಿಗಳಿಗೆ ಭೇಟಿ ನೀಡಿ ಜನರ ಯೋಗಕ್ಷೇಮವನ್ನು ವಿಚಾರಿಸುತ್ತಾರೆ. ಜನರ ಸಮಸ್ಯೆಗಳನ್ನು ನೇರವಾಗಿ ಕೇಳಿ ತಿಳಿದುಕೊಳ್ಳುತ್ತಾರೆ. ಈ ಕಾರಣದಿಂದಾಗಿ, ಭೂತಾನಿ ಜನರು ಅವರನ್ನು ಕೇವಲ ರಾಜರಂತೆ ನೋಡದೇ, ತಮ್ಮ ಕುಟುಂಬದ ಸದಸ್ಯರಂತೆ ಪ್ರೀತಿಸುತ್ತಾರೆ. ಥಿಂಪುವಿನ ಜನಪ್ರಿಯ ಮಾರುಕಟ್ಟೆಯಲ್ಲಿ ತರಕಾರಿ ಖರೀದಿಸುವಾಗ ನಿಮ್ಮ ಮುಂದೆ ಅಥವಾ ಹಿಂದೆ ರಾಜ ಮತ್ತು ರಾಣಿ ಇದ್ದರೆ, ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರೆ ಆಶ್ಚರ್ಯಪಡಬೇಕಿಲ್ಲ!

ಈಗಿನ ರಾಜ ಮತ್ತು ರಾಣಿ, ಸಾರ್ವಜನಿಕ ಜೀವನದಲ್ಲಿ ಬಹಳ ಸರಳವಾಗಿ ಮತ್ತು ಸಾಮಾನ್ಯರಂತೆ ಕಾಣಿಸಿಕೊಳ್ಳುತ್ತಾರೆ. ಅಲ್ಲಿನ ರಾಜಮನೆತನ ತಮ್ಮನ್ನು ದೇಶದ ಜನರ ಸೇವಕರೆಂದು ಪರಿಗಣಿಸುತ್ತದೆ. ಅವರು ಜನರಿಂದ ದೂರವಿರಲು ಬಯಸುವುದಿಲ್ಲ, ಬದಲಾಗಿ ಅವರೊಂದಿಗೆ ಬೆರೆಯಲು, ಅವರ ಜೀವನಶೈಲಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಅವರ ಸಮಸ್ಯೆಗಳನ್ನು ನೇರವಾಗಿ ತಿಳಿದುಕೊಳ್ಳಲು ಇಷ್ಟಪಡುತ್ತಾರೆ. ರಾಜ ಮತ್ತು ರಾಣಿಯ ಸರಳ ಜೀವನಶೈಲಿ ಈ ತತ್ವಕ್ಕೆ ಒಂದು ಉತ್ತಮ ಉದಾಹರಣೆ. ಆಡಂಬರ ಮತ್ತು ಐಷಾರಾಮಿ ಜೀವನದಿಂದ ದೂರವಿದ್ದು, ತಮ್ಮ ಸಂತೋಷ ಮತ್ತು ಜನರ ಸಂತೋಷಕ್ಕಾಗಿ ಸರಳ ಜೀವನ ನಡೆಸುತ್ತಾರೆ.

ಭೂತಾನಿ ಜನರು ತಮ್ಮ ರಾಜಮನೆತನವನ್ನು ಅಪಾರವಾಗಿ ಪ್ರೀತಿಸುತ್ತಾರೆ ಮತ್ತು ಗೌರವಿಸುತ್ತಾರೆ. ರಾಜ ಮತ್ತು ರಾಣಿ ತಮ್ಮ ಪ್ರಜೆಗಳಿಗೆ ಕುಟುಂಬದ ಸದಸ್ಯರಂತೆ. ಹೀಗಾಗಿ, ಸಾರ್ವಜನಿಕವಾಗಿ ಅವರನ್ನು ಕಂಡಾಗ ಜನರು ಕೂಗಾಡುವುದು, ಸುತ್ತುವರಿಯುವುದು ಅಥವಾ ಸೆಲ್ಫಿಗಾಗಿ ಮುತ್ತಿಕೊಳ್ಳುವುದು ಸಾಮಾನ್ಯವಾಗಿ ನಡೆಯುವುದಿಲ್ಲ. ಬದಲಾಗಿ, ವಿನಯದಿಂದ ನಮಸ್ಕರಿಸಿ ಮುಂದೆ ಹೋಗುತ್ತಾರೆ.

ಭೂತಾನಿ ಸಂಸ್ಕೃತಿಯಲ್ಲಿ ಗೌರವ ಮತ್ತು ವಿನಯಕ್ಕೆ ಹೆಚ್ಚಿನ ಮಹತ್ವವಿದೆ. ರಾಜ ಮತ್ತು ರಾಣಿ ಜನರಲ್ಲಿ ಪ್ರೀತಿ, ಗೌರವ ಮತ್ತು ವಿನಯದ ಭಾವನೆಯನ್ನು ತುಂಬಿದ್ದಾರೆ. ಅದಕ್ಕಾಗಿಯೇ ಅವರು ಯಾವುದೇ ಭದ್ರತಾ ಸಿಬ್ಬಂದಿಯಿಲ್ಲದೆ ಸರಳವಾಗಿ ಓಡಾಡಿದರೂ ಯಾವುದೇ ಸಮಸ್ಯೆ ಉದ್ಭವಿಸುವುದಿಲ್ಲ. ಇದು ಭೂತಾನ್‌ನ ವಿಶಿಷ್ಟ ಸಂಸ್ಕೃತಿಯ ಒಂದು ಅಪರೂಪದ ಉದಾಹರಣೆ. ಇಲ್ಲಿ ರಾಜಮನೆತನದ ಸದಸ್ಯರು ಸಾಮಾನ್ಯ ಜನರೊಂದಿಗೆ ಬದುಕುತ್ತಾರೆ ಮತ್ತು ಅವರ ಸುಖ-ದುಃಖಗಳಲ್ಲಿ ಭಾಗಿಯಾಗುತ್ತಾರೆ. ಇದು ಜಗತ್ತಿನ ಬೇರೆ ಯಾವ ದೇಶದಲ್ಲಿಯೂ ಕಾಣಸಿಗದ ಒಂದು ವಿಶಿಷ್ಟ ಮತ್ತು ಸುಂದರ ಸಂಬಂಧ.

ಭೂತಾನ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದರೂ, ರಾಜನು ದೇಶದ ಭದ್ರತೆ, ಸಾರ್ವಭೌಮತೆ ಮತ್ತು ಸಂಸ್ಕೃತಿಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾನೆ. ಸಂಸತ್ತಿನಲ್ಲಿ ಅಂಗೀಕಾರವಾಗುವ ಕಾನೂನುಗಳಿಗೆ ರಾಜನ ಒಪ್ಪಿಗೆ ಬೇಕಾಗುತ್ತದೆ. ಒಟ್ಟಾರೆಯಾಗಿ, ಭೂತಾನ್‌ನಲ್ಲಿ ಪ್ರಜಾಪ್ರಭುತ್ವವನ್ನು ಜನರು ರಾಜನಿಂದ ಕೇಳಿಕೊಂಡಿದ್ದಲ್ಲ, ಬದಲಾಗಿ ರಾಜರೇ ಸ್ವತಃ ತಮ್ಮ ಅಧಿಕಾರವನ್ನು ತ್ಯಾಗ ಮಾಡಿ ಜನರಿಗೆ ನೀಡಿದ್ದು. ಇದು ರಾಜಮನೆತನಕ್ಕೆ ಜನರ ಮೇಲಿರುವ ನಂಬಿಕೆ ಮತ್ತು ದೇಶದ ಭವಿಷ್ಯದ ಬಗ್ಗೆ ಅವರಿಗಿರುವ ದೂರದೃಷ್ಟಿಯನ್ನು ತೋರಿಸುತ್ತದೆ. ಈ ವಿಶಿಷ್ಟ ಮಾದರಿಯು ಭೂತಾನ್‌ನ ವಿಶಿಷ್ಟ ಸಂಸ್ಕೃತಿ ಮತ್ತು ಸಂತೋಷದ ಪರಿಕಲ್ಪನೆಗೆ ನಿಕಟವಾಗಿ ಸಂಬಂಧಿಸಿದೆ.

ಕಾರ್ಬನ್ ನೆಗೆಟಿವ್ ದೇಶ

ಭೂತಾನ್‌ನ ಇನ್ನೊಂದು ವೈಶಿಷ್ಟ್ಯವನ್ನು ಹೇಳಬೇಕು. ಅದು ಜಗತ್ತಿನ ಏಕೈಕ 'ಕಾರ್ಬನ್ ನೆಗೆಟಿವ್' ದೇಶ. ಇದರರ್ಥ, ಅದು ವಾತಾವರಣಕ್ಕೆ ಬಿಡುಗಡೆ ಮಾಡುವ ಇಂಗಾಲದ ಡೈಆಕ್ಸೈಡ್‌ಗಿಂತ ಹೆಚ್ಚು ಆಮ್ಲಜನಕವನ್ನು ಉತ್ಪಾದಿಸುತ್ತದೆ. ಈ ಒಂದು ಸಂಗತಿಯೇ ಭೂತಾನ್‌ನ ಪರಿಸರ ಪ್ರಜ್ಞೆ ಮತ್ತು ಅದರ ನೀತಿಗಳನ್ನು ಎತ್ತಿ ತೋರಿಸುತ್ತದೆ. ಇದು ಕೇವಲ ಕಾಕತಾಳೀಯವಲ್ಲ, ಬದಲಾಗಿ ಇದು ಒಂದು ದೀರ್ಘಕಾಲಿಕ ಯೋಜಿತ ಬದ್ಧತೆಯ ಫಲಿತಾಂಶವಾಗಿದೆ.

ಭೂತಾನ್ ದೇಶವು 'ಕಾರ್ಬನ್ ನೆಗೆಟಿವ್' ಆಗಿರುವುದಕ್ಕೆ ಮುಖ್ಯ ಕಾರಣ ಸಂವಿಧಾನದ ಕಾನೂನು. ಭೂತಾನ್‌ನ ಸಂವಿಧಾನದ ಪ್ರಕಾರ, ದೇಶದ ಒಟ್ಟು ಭೂಪ್ರದೇಶದ ಕನಿಷ್ಠ ಶೇ. 60ರಷ್ಟು ಭಾಗವು ಅರಣ್ಯಗಳಿಂದ ಆವೃತವಾಗಿರಬೇಕು. ಪ್ರಸ್ತುತ, ಈ ಪ್ರಮಾಣ ಶೇ.70ಕ್ಕಿಂತಲೂ ಹೆಚ್ಚಿದೆ. ಈ ಕಾನೂನು ಅರಣ್ಯಗಳನ್ನು ರಕ್ಷಿಸಲು ಮತ್ತು ಕಾಡಿನ ಪ್ರಮಾಣವನ್ನು ಹೆಚ್ಚಿಸಲಿಕ್ಕಾಗಿನ ಒಂದು ದೃಢವಾದ ಬದ್ಧತೆಯನ್ನು ತೋರಿಸುತ್ತದೆ. ಹೆಚ್ಚು ಅರಣ್ಯವಿದ್ದರೆ, ವಾತಾವರಣದಲ್ಲಿನ ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ, ಇದರಿಂದ ಆಮ್ಲಜನಕದ ಪ್ರಮಾಣ ಹೆಚ್ಚುತ್ತದೆ.

ಭೂತಾನ್‌ನ ಬಹುಪಾಲು ವಿದ್ಯುತ್ ಉತ್ಪಾದನೆಯು ಜಲವಿದ್ಯುತ್ ಮೂಲದಿಂದ ಬರುತ್ತದೆ. ಇದು ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆಗೆ ಕಾರಣವಾಗುವ ಕಲ್ಲಿದ್ದಲು ಅಥವಾ ಇತರ ಪಳೆಯುಳಿಕೆ ಇಂಧನಗಳನ್ನು ಬಳಸುವುದಿಲ್ಲ. ಈ ಶುದ್ಧ ಇಂಧನ ಮೂಲವು ದೇಶದ ಇಂಗಾಲ ಹೊರಸೂಸುವಿಕೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಭೂತಾನ್ ತನ್ನ ಜಲವಿದ್ಯುತ್ ಅನ್ನು ಭಾರತಕ್ಕೆ ರಫ್ತು ಮಾಡುತ್ತದೆ. ಇದು ಭಾರತದ ಇಂಧನ ಅಗತ್ಯಗಳನ್ನು ಪೂರೈಸುವುದರ ಜತೆಗೆ, ಪಳೆಯುಳಿಕೆ ಇಂಧನಗಳ ಬಳಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಪರಿಸರವನ್ನು ಸ್ವಚ್ಛವಾಗಿಡಲು ಮತ್ತು ಮಾಲಿನ್ಯವನ್ನು ಕಡಿಮೆ ಮಾಡಲು ಪ್ಲಾಸ್ಟಿಕ್ ಚೀಲಗಳನ್ನು ನಿಷೇಧಿಸಲಾಗಿದೆ. ಭೂತಾನ್ ಸಂಪೂರ್ಣವಾಗಿ ಸಾವಯವ ಕೃಷಿಗೆ ಪರಿವರ್ತನೆಯಾಗಲು ಪ್ರಯತ್ನಿಸುತ್ತಿದೆ. ಇದು ರಾಸಾಯನಿಕಗಳ ಬಳಕೆಯನ್ನು ಕಡಿಮೆ ಮಾಡುತ್ತದೆ ಮತ್ತು ಮಣ್ಣಿನ ಗುಣಮಟ್ಟವನ್ನು ಕಾಪಾಡುತ್ತದೆ. 'ಕಡಿಮೆ ಪ್ರವಾಸಿಗರು, ಹೆಚ್ಚು ಆದಾಯ' ಎಂಬ ನೀತಿಯನ್ನು ಅನುಸರಿಸುವುದರಿಂದ, ಪ್ರವಾಸೋದ್ಯಮದಿಂದಾಗುವ ಪರಿಸರ ಹಾನಿ ಕಡಿಮೆಯಾಗಿದೆ. ಪ್ರವಾಸಿಗರಿಗೆ ನಿರ್ದಿಷ್ಟ ಶುಲ್ಕವನ್ನು ವಿಧಿಸಿ, ಪರಿಸರವನ್ನು ಕಾಪಾಡಿಕೊಳ್ಳಲು ಬಳಸಲಾಗುತ್ತದೆ.

ಜಗತ್ತಿನಲ್ಲಿ ಹವಾಮಾನ ಬದಲಾವಣೆ ಒಂದು ದೊಡ್ಡ ಸಮಸ್ಯೆಯಾಗಿರುವಾಗ, ಭೂತಾನ್‌ನ ಈ ವೈಶಿಷ್ಟ್ಯವು ಇಡೀ ಜಗತ್ತಿಗೆ ಒಂದು ಆದರ್ಶವಾಗಿದೆ, ಮಾದರಿಯಾಗಿದೆ. ಇದು ಕೇವಲ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದಷ್ಟೇ ಅಲ್ಲ, ಜತೆಗೆ ಜಗತ್ತಿಗೆ ಶುದ್ಧ ಆಮ್ಲಜನಕವನ್ನೂ ಒದಗಿಸುತ್ತದೆ. ಭೂತಾನ್‌ನ ಈ ಬದ್ಧತೆ ಅದರ 'ಒಟ್ಟು ರಾಷ್ಟ್ರೀಯ ಸಂತೋಷ' (Gross National Happiness- GNH) ತತ್ವಕ್ಕೆ ಸಂಬಂಧಿಸಿದೆ. ಪ್ರಕೃತಿಯನ್ನು ರಕ್ಷಿಸುವುದು ಜನರ ಯೋಗಕ್ಷೇಮದ ಪ್ರಮುಖ ಭಾಗ ಎಂದು ಭೂತಾನ್ ನಂಬುತ್ತದೆ. ಹೀಗಾಗಿ, ಭೂತಾನ್‌ನ ಪರಿಸರ-ಸ್ನೇಹಿ ಜೀವನಶೈಲಿ ಮತ್ತು ನೀತಿಗಳು ಇಡೀ ಜಗತ್ತಿಗೆ ಒಂದು ಪ್ರೇರಣೆಯಾಗಿದೆ.

ಮಾನವೀಯ ಸಂಬಂಧವೇ ಮುಖ್ಯ

ಭೂತಾನ್‌ನ ವಿಶಿಷ್ಟ ಸಂಸ್ಕೃತಿ ಮತ್ತು ಸರಳ ಜೀವನಶೈಲಿಗೆ ಸಂಬಂಧಿಸಿದಂತೆ ಒಂದು ತಮಾಷೆಯ ಪ್ರಸಂಗವಿದೆ. ಅದು ಎಷ್ಟು ನಿಜವೋ ಗೊತ್ತಿಲ್ಲ. ಒಬ್ಬ ಪ್ರವಾಸಿಗ ಭೂತಾನ್ ರಾಜಧಾನಿ ಥಿಂಪುವಿಗೆ ಬಂದು, ಅಲ್ಲಿ ಟ್ರಾಫಿಕ್ ಲೈಟ್ ಇಲ್ಲದಿರುವುದನ್ನು ನೋಡಿ ಆಶ್ಚರ್ಯಪಟ್ಟ. ಅವನು ಸ್ಥಳೀಯ ಅಧಿಕಾರಿಯನ್ನು ಕೇಳಿದ, ''ನಿಮಗೆ ಟ್ರಾಫಿಕ್ ಲೈಟ್ ಹಾಕುವುದಕ್ಕೆ ಹಣದ ಸಮಸ್ಯೆ ಇದೆಯೇ?''

ಅದಕ್ಕೆ ಅಧಿಕಾರಿ ನಕ್ಕು, ''ಇಲ್ಲ ಸರ್, ನಮಗೆ ಹಣದ ಸಮಸ್ಯೆಯಿಲ್ಲ. ನಾವು ಟ್ರಾಫಿಕ್ ಲೈಟ್‌ಗಳನ್ನು ಅಳವಡಿಸಿದ್ದೆವು. ಆದರೆ ನಮ್ಮ ಜನ 'ಟ್ರಾಫಿಕ್ ಲೈಟ್‌ಗೆ ಏಕೆ ಗೌರವ ಕೊಡಬೇಕು?' ಎಂದು ಕೇಳಿದರು. 'ಅವು ಕೇವಲ ಕೆಂಪು, ಹಳದಿ ಮತ್ತು ಹಸಿರು ಬಣ್ಣಗಳಲ್ಲವೇ? ಅವು ನಮ್ಮ ಯಜಮಾನರಲ್ಲ, ಅವು ನಮ್ಮ ಪೊಲೀಸರು ಮತ್ತು ನಮ್ಮ ರಾಜರಂತೆ ಬುದ್ಧಿವಂತಿಕೆಯಿಂದ ವರ್ತಿಸುವುದಿಲ್ಲ. ಅವುಗಳನ್ನು ನಾವು ಏಕೆ ನಂಬಬೇಕು?' ಎಂದು ಕೇಳಿದರು. ಹೀಗಾಗಿ ಅವುಗಳನ್ನು ತೆಗೆದುಹಾಕಬೇಕಾಯಿತು. ನಾವು ಯಂತ್ರಗಳಿಗೆ ನಮ್ಮ ಜೀವನವನ್ನು ನಿಯಂತ್ರಿಸಲು ಬಿಡುವುದಿಲ್ಲ, ನಮ್ಮ ಸಂಸ್ಕೃತಿಯನ್ನು ಕಾಪಾಡುತ್ತೇವೆ!'' ಎಂದರಂತೆ.

ಇನ್ನೊಂದು ಪ್ರಸಂಗ. ಒಬ್ಬ ವಿದೇಶಿ ಪ್ರವಾಸಿ ಭೂತಾನ್‌ನ ಕಾಡಿನಲ್ಲಿ ಹೋಗುತ್ತಿದ್ದಾಗ, ಒಂದು ಪುಟ್ಟ ಗಿಡವನ್ನು ಕಿತ್ತು, ಅದರ ಎಲೆಗಳನ್ನು ನೋಡಿ, ಹತ್ತಿರದಲ್ಲಿದ್ದ ಸ್ಥಳೀಯನಿಗೆ ಕೇಳಿದ- ''ಈ ಎಲೆಗಳು ತುಂಬಾ ಸುಂದರವಾಗಿವೆ, ಇವುಗಳನ್ನು ಕಿತ್ತರೆ ಏನಾಗುತ್ತದೆ?''

ಅದಕ್ಕೆ ಆ ಸ್ಥಳೀಯ ನಗುತ್ತಾ ಉತ್ತರಿಸಿದ- ''ನಿಮಗೆ ಏನೂ ಆಗುವುದಿಲ್ಲ. ಆದರೆ, ನೀವು ಆ ಗಿಡವನ್ನು ಕಿತ್ತರೆ, ಅದು ಭೂತಾನ್‌ನ ಸಂವಿಧಾನವನ್ನು ಉಲ್ಲಂಘಿಸಿದಂತೆ. ನಮ್ಮ ದೇಶದ ಕಾನೂನಿನ ಪ್ರಕಾರ, ಗಿಡಮರಗಳು ನಮ್ಮೆಲ್ಲರ ಕುಟುಂಬದ ಸದಸ್ಯರಿದ್ದಂತೆ. ನೀವು ಅವುಗಳನ್ನು ಹಾಳು ಮಾಡಿದರೆ, ನೀವು ಕುಟುಂಬ ಸದಸ್ಯನಿಗೆ ನೋವುಂಟು ಮಾಡಿದಂತೆ''. ಈ ಪ್ರಸಂಗವು ಭೂತಾನ್‌ನ ಪರಿಸರ ಸಂರಕ್ಷಣೆಯ ಬದ್ಧತೆ ಎಷ್ಟು ಗಟ್ಟಿಯಾಗಿದೆ ಎಂಬುದನ್ನು ಹಾಸ್ಯದ ಮೂಲಕ ಹೇಳುತ್ತದೆ.

ಮಹಾಭಾರತ ಕಥೆ ಹೆಣೆಯಲಿಕ್ಕೆ ಹಾವುಗಳೇ ಹಗ್ಗವಾದುವೇ?

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅನಂತ, ವಾಸುಕಿ, ಶೇಷ, ಪದ್ಮನಾಭ, ಕಂಬಲ, ಶಂಖಪಾಲ, ಧೃತರಾಷ್ಟ್ರ, ತಕ್ಷಕ, ಕಾಲಿಯ- ಇವರೇ 'ನವನಾಗ' ಎಂದು ಗುರುತಿಸಲ್ಪಡುವವರು; ಮೊನ್ನೆ ನಾಗರಪಂಚಮಿಯಂದು ಪೂಜೆಗೊಂಡವರು. ಪುರಾಣಗಳ ಪ್ರಕಾರ ಇವರೆಲ್ಲರೂ ಕಶ್ಯಪ-ಕದ್ರೂ ದಂಪತಿಯ ಮಕ್ಕಳು. ಈ ಪಟ್ಟಿಯಲ್ಲಿ ಮೊದಲ ಮೂವರು ಲೋಕಕಂಟಕರಾಗಿ ಅಲ್ಲ ಲೋಕೋದ್ಧಾರಕರಾಗಿಯೇ ಕಾಣಿಸಿಕೊಂಡವರು. ಅನಂತನು ಶ್ರೀಮನ್ನಾರಾಯಣನ ಹಾಸಿಗೆಯಾಗಿ, ವಾಸುಕಿಯು ಸಮುದ್ರ ಮಥನದ ವೇಳೆ ಮಂದರಪರ್ವತವೆಂಬ ಕಡಗೋಲಿಗೆ ಹಗ್ಗವಾಗಿ, ಮತ್ತು ಶೇಷನು ಭೂಮಿಯನ್ನು ಸದಾಕಾಲ ತನ್ನ ತಲೆಯ ಮೇಲೆ ಹೊತ್ತವನಾಗಿ. ಅನಂತ ಮತ್ತು ಆದಿಶೇಷ ಇಬ್ಬರು ಬೇರೆಬೇರೆನಾ ಅಥವಾ ಒಬ್ಬರೇನಾ ಎಂಬ ಜಿಜ್ಞಾಸೆಯಿದೆ. ಅವರಿಬ್ಬರ ವಿವರಗಳು ಒಂದೇ ರೀತಿ ಇರುವುದರಿಂದ. ಹಾಗೆಯೇ, ಭಗವದ್ಗೀತೆಯಲ್ಲಿ ಶ್ರೀಕೃಷ್ಣನು 'ಸರ್ಪಗಳ ಪೈಕಿ ನಾನು ವಾಸುಕಿಯು' ಎಂದು ಒಂದು ಶ್ಲೋಕದಲ್ಲಿ ಮತ್ತು ತತ್‌ಕ್ಷಣವೇ ಮುಂದಿನ ಶ್ಲೋಕದಲ್ಲಿ 'ನಾಗಗಳ ಪೈಕಿ ನಾನು ಅನಂತನು' ಎಂದು ಹೇಳಿರುವುದರಿಂದ ನಾಗ ಬೇರೆ ಮತ್ತು ಸರ್ಪ ಬೇರೆನಾ ಎಂಬೊಂದು ಜಿಜ್ಞಾಸೆಯೂ ಮನದಲ್ಲಿ ಮೂಡುತ್ತದೆ. ಪ್ರಾಜ್ಞರು ಅದಕ್ಕೆ ಬೇರೆಬೇರೆ ವ್ಯಾಖ್ಯಾನಗಳನ್ನೂ ಕೊಡುತ್ತಾರೆ. ಆದರೆ ನಾವೀಗ ಅದನ್ನೆಲ್ಲ ಒಮ್ಮೆ ಬದಿಗಿಟ್ಟು, ನವನಾಗಗಳ ಪಟ್ಟಿಯಲ್ಲಿ ಅನಂತನೂ ವಾಸುಕಿಯೂ ಇರುವುದರಿಂದ ಸದ್ಯಕ್ಕೆ ಸ್ಥೂಲವಾಗಿ ಎಲ್ಲ ಒಂದೇ ಎಂದುಕೊಳ್ಳೋಣ. ಅಲ್ಲದೇ ಇವರೆಲ್ಲ ಭೌತಿಕವಾಗಿ ನಾವೀಗ ನೋಡುವ ಹಾವುಗಳಂತೆಯೇ ಕಾಣುತ್ತಿದ್ದರು ಎಂದೇನಿಲ್ಲ. ನಾಗಶಕ್ತಿಯುಳ್ಳ ದೇವತೆಗಳಂತೆ ಕಂಡುಬರುತ್ತಿದ್ದರು ಎಂದು ಊಹಿಸಲಿಕ್ಕೆ ಅಡ್ಡಿಯಿಲ್ಲ.

ಅಂದಹಾಗೆ ಈ ಪಟ್ಟಿಯಲ್ಲಿರುವ ಪದ್ಮನಾಭ, ಕಂಬಲ, ಮತ್ತು ಶಂಖಪಾಲರ ಬಗ್ಗೆ ಹೆಚ್ಚೇನೂ ಕಥೆಗಳಿದ್ದಂತಿಲ್ಲ. ಹಾಗೆಯೇ ಈ ಪಟ್ಟಿಯಲ್ಲಿರುವ ಧೃತರಾಷ್ಟ್ರನೆಂದರೆ ದುರ್ಯೋಧನನ ತಂದೆ ಹಸ್ತಿನಾಪುರದ ಅಂಧದೊರೆ ಅಲ್ಲವೆಂದು ಗಮನಿಸಬೇಕು. ಸರ್ಪರಾಜನಾದ ಧೃತರಾಷ್ಟ್ರನ ಬಳಿ ಸಂಜೀವಕರತ್ನ ಕೊಡುವಂತೆ ಚಿತ್ರಾಂಗದೆ ಕೇಳಿದ್ದಳು, ಆತ ನಿರಾಕರಿಸಲಾಗಿ ಬಭ್ರುವಾಹನನೇ ಆತನೊಡನೆ ಕಾದಾಡಿ ಸಂಜೀವಕವನ್ನು ಪಡೆದನು, ತನ್ಮೂಲಕ ಅರ್ಜುನನನ್ನು ಬದುಕಿಸಿದನು- ಎಂಬ ಪ್ರಸಂಗದಲ್ಲಷ್ಟೇ ಧೃತರಾಷ್ಟ್ರನೆಂಬ ಸರ್ಪದ ಉಲ್ಲೇಖ ಬರುತ್ತದೆ. ಕಾಲಿಯನ ಕಥೆ-ಗರುಡನ ನಿತ್ಯಸರ್ಪಭಕ್ಷಣಕ್ಕೆ ವಿರೋಧ ಒಡ್ಡಿದ್ದು, ಗರುಡನು ಕಾಲಿಯನನ್ನು ಅಟ್ಟಿಸಿಕೊಂಡು ಬಂದಾಗ ಯಮುನಾ ನದಿಯ ಕಾಳಿಂದಿ ಮಡುವಿನಲ್ಲಿ ಅಡಗಿದ್ದು, ಅಲ್ಲಿ ವಿಷಜ್ವಾಲೆಯಿಂದಾಗಿ ಮಡುವಿನ ನೀರೆಲ್ಲ ವಿಷಮಯವಾದದ್ದು, ನೀರನ್ನು ಕುಡಿದ ಪ್ರಾಣಿಗಳು ಸಾಯತೊಡಗಿದ್ದು, ಆಮೇಲೆ ಬಲರಾಮನೊಡನೆ ಬಾಲಕೃಷ್ಣನು ಅಲ್ಲಿಗೆ ಬಂದು ಕಾಲಿಯನ ಹೆಡೆಗಳ ಮೇಲೆ ನಾಟ್ಯವಾಡಿದ್ದು, ನಾಗಕನ್ಯೆಯರು ಪತಿಭಿಕ್ಷೆ ಬೇಡಿದ್ದು, ಕೃಷ್ಣನು ಕಾಲಿಯನಿಗೆ ಅಭಯವಿತ್ತು ಪಾತಾಳಕ್ಕೆ ಅಟ್ಟಿದ್ದು- ಹೆಚ್ಚು ಪ್ರಸಿದ್ಧವಾದ ಕಥೆಯೇ.

ತಕ್ಷಕ ಮಾತ್ರ ಇವರೆಲ್ಲರಿಗಿಂತ ತುಸು ಭಿನ್ನ ಮತ್ತು ವಿಶೇಷವಾದವನು. ಮಹಾಭಾರತದುದ್ದಕ್ಕೂ ತಕ್ಷಕನ ಉಲ್ಲೇಖ ಬೇರೆಬೇರೆ ಪ್ರಸಂಗಗಳಲ್ಲಿ ಬರುತ್ತದೆ. ಹಾಗೆ ನೋಡಿದರೆ, ಒಂದು ಕಥೆಯಾಗಿ ಮಹಾಭಾರತ ಆರಂಭ ಆಗುವುದಕ್ಕೂ ತಕ್ಷಕನೇ ಕಾರಣ; ಘಟನಾವಳಿ ಪ್ರಕಾರ ಮಹಾಭಾರತದ ಅಂತ್ಯವಾದದ್ದೂ ತಕ್ಷಕನಿಂದಲೇ ಎಂದು ಕೂಡ ಹೇಳಬಹುದು. ಹೇಗೆ ಗೊತ್ತೇ? ಮಹಾಭಾರತವನ್ನು ವೇದವ್ಯಾಸರು ರಚಿಸಿದ್ದು ಮತ್ತು ಗಣೇಶನು ಅವರಿಂದ ನಿರಂತರವಾಗಿ ಉಕ್ತಲೇಖನದಂತೆ ಬರೆದದ್ದು ಹೌದಾದರೂ, ಮಹಾಭಾರತ ಮಹಾಕಾವ್ಯದ ಮೊತ್ತಮೊದಲ ಸಾರ್ವಜನಿಕ ನಿರೂಪಣೆ ಆದದ್ದು, ಅಂದರೆ ಒಂದು ಕಥೆಯಂತೆ ಅದನ್ನು ಜನರೆದುರಿಗೆ ಹೇಳಿದ್ದು ವ್ಯಾಸಶಿಷ್ಯ ವೈಶಂಪಾಯನ ಮಹರ್ಷಿ. ಜನಮೇಜಯನು ಆಯೋಜಿಸಿದ್ದ ಸರ್ಪಯಜ್ಞದ ಸಂದರ್ಭದಲ್ಲಿ. ಆ ಯಜ್ಞ ನಡೆದದ್ದೇ ತಕ್ಷಕನನ್ನು ಕೊಲ್ಲುವುದಕ್ಕಾಗಿ! ತಕ್ಷಕ ಅದರಲ್ಲಿ ಸಾಯಲಿಲ್ಲವೆನ್ನುವುದು ಬೇರೆ ಮಾತು. ಹಾಗೆಯೇ, ಘಟನಾವಳಿ ಪ್ರಕಾರ ಮಹಾಭಾರತ ಅಂತ್ಯವಾದದ್ದೂ ಕುರುಕ್ಷೇತ್ರ ಯುದ್ಧಸಮಯದಲ್ಲಿ ಇದ್ದವರ ಪೈಕಿ ಕಟ್ಟಕಡೆಯವನಾದ, ಅಭಿಮನ್ಯು-ಉತ್ತರೆಯರ ಸುಪುತ್ರನಾದ ಪರೀಕ್ಷಿತನನ್ನು ತಕ್ಷಕನು ಕೊಲ್ಲುವುದರ ಮೂಲಕ! ಅಂದರೆ ಮಹಾಭಾರತವನ್ನು ಚಕ್ರಪಥವಾಗಿ ಸುತ್ತಿಕೊಂಡವನು ತಕ್ಷಕ. ಆತನೊಬ್ಬನೇ ಅಲ್ಲ, ಮಹಾಭಾರತದ ಬೇರೆಬೇರೆ ಪ್ರಸಂಗಗಳನ್ನು ಹೆಣೆಯುವುದಕ್ಕೆ, ಶಾಪ-ಸೇಡು-ಪ್ರತೀಕಾರ ಮತ್ತು ಮೋಕ್ಷಗಳ ಹಂತಗಳನ್ನು ಕೌಶಲದಿಂದ ಜೋಡಿಸುವುದಕ್ಕೆ, ಸರ್ಪಗಳನ್ನು ಹೇಗೆ ಬಳಸಿಕೊಳ್ಳಲಾಗಿದೆ ಎಂದು ಗಮನಿಸಿದರೆ ನಿಜಕ್ಕೂ ಆಶ್ಚರ್ಯವಾಗುತ್ತದೆ.

ಜನಮೇಜಯನ ಸರ್ಪಯಜ್ಞವು ತಕ್ಷಕ ಮತ್ತು ಅವನ ಸರ್ಪಕುಲದ ಸಂಬಂಧಿಕರೆಲ್ಲರನ್ನೂ ನಾಶ ಮಾಡಲಿಕ್ಕೆಂದೇ ಆಯೋಜನೆಯಾದದ್ದು. ಆ ಯಜ್ಞದಲ್ಲಿ ಚಂಡಭಾರ್ಗವ, ಪಿಂಗಳ, ಜೈಮಿನಿ, ಅಂಗಿರಸ, ಅಸಿತ, ದೇವಲ, ಉದ್ದಾಲಕ, ಶ್ವೇತಕೇತು, ಕಹೋಳ, ನಾರದ ಮುಂತಾದ ಘಟಾನುಘಟಿ ಋಷಿಮುನಿಗಳು ಹೋತೃ, ಅಧ್ವರ್ಯು, ಉದ್ಗಾತೃ, ಋತ್ವಿಜ, ಸದಸ್ಯ ಮುಂತಾದ ಬೇರೆಬೇರೆ ಜವಾಬ್ದಾರಿಗಳಿಂದ ಭಾಗಿಯಾಗಿದ್ದರು.



ಹೋಮ ಮಾಡುವಾಗ ಸರ್ಪಗಳು ಒಂದರಹಿಂದೆ ಒಂದು ಬಂದು ಅಗ್ನಿಕುಂಡದಲ್ಲಿ ಬಿದ್ದು ಬೂದಿಯಾಗಿದ್ದವು. ಅಷ್ಟರಲ್ಲಿ ತಕ್ಷಕನೂ ಸೇರಿದಂತೆ ಉಳಿದ ಸರ್ಪಗಳೆಲ್ಲ ತಮ್ಮ ಸಹೋದರಿ ಜರತ್ಕಾರುವಿನ ನೆರವು ಕೇಳಲಾಗಿ ಆಕೆ ತನ್ನ ಮಗನಾದ ಆಸ್ತೀಕನನ್ನು ಜನಮೇಜಯನಲ್ಲಿಗೆ ಕಳುಹಿಸಿ ಸರ್ಪಯಜ್ಞ ನಿಲ್ಲಿಸುವ ಹಾಗೆ ಹೇಳಿದಳು. ಆಸ್ತೀಕನು ಜನಮೇಜಯನ ಯಾಗಶಾಲೆಯನ್ನು ಹೊಕ್ಕು, ಪ್ರಾಣಿಹಿಂಸೆ ತಕ್ಕುದಲ್ಲವೆಂದು ಬೋಧಿಸಿ ತನ್ನ ವಿದ್ಯಾಬಲದಿಂದ ಜನಮೇಜಯನ ಮನಗೆದ್ದು ಸರ್ಪಯಜ್ಞವನ್ನು ನಿಲ್ಲಿಸಿದನು. ಅಷ್ಟಾಗಿ, ಜನಮೇಜಯ ತಕ್ಷಕನನ್ನು ನಾಶಪಡಿಸಲು ಬಯಸಿದ್ದೇಕೆ? ಏಕೆಂದರೆ, ಜನಮೇಜಯನ ತಂದೆ ಪರೀಕ್ಷಿತನನ್ನು ತಕ್ಷಕನೇ ಹಣ್ಣಿನೊಳಗಿನ ಹುಳದ ರೂಪದಲ್ಲಿ ಬಂದು ಆಮೇಲೆ ಹಠಾತ್ತನೆ ನಿಜರೂಪದಲ್ಲಿ ಕಾಣಿಸಿಕೊಂಡು ಕತ್ತನ್ನು ಸುತ್ತುವರಿದು ಉಸಿರುಗಟ್ಟಿಸಿ ಸಾಯಿಸಿದ್ದನು. ಅದಕ್ಕೆ ಕಾರಣವೇನು? ಋಷಿ ಶೃಂಗಿಯ ಶಾಪ. ಶೃಂಗಿ ಯಾರು? ಅವನೇಕೆ ಪರೀಕ್ಷಿತನನ್ನು ಒಂದು ವಾರದೊಳಗೆ ಸರ್ಪ ಕಚ್ಚಿ ಸಾಯುವಂತೆ ಶಪಿಸಿದನು?

ಅದಕ್ಕೂ ಒಂದು ಸರ್ಪವೇ ಕಾರಣ! ನಿರ್ದಿಷ್ಟವಾಗಿ ಹೇಳಬೇಕೆಂದರೆ ಒಂದು ಸತ್ತ ಹಾವು. ಪರೀಕ್ಷಿತ ಒಮ್ಮೆ ಬೇಟೆಗೆ ಹೋಗಿದ್ದಾಗ ಶಮೀಕ ಮುನಿಯ ಆಶ್ರಮವನ್ನು ಹೊಕ್ಕನು. ಸಮಾಧಿಸ್ಥನಾಗಿದ್ದ ಮುನಿಯು ಈತನನ್ನು ಗೌರವಿಸಲಿಲ್ಲ. ಬೇರಾರೂ ಅಲ್ಲಿರಲಿಲ್ಲ. ಅದು ಉದ್ದೇಶಪೂರ್ವಕ ಅವಮಾನವೆಂದು ತಿಳಿದ ಪರೀಕ್ಷಿತನು ಸಮೀಪದಲ್ಲಿ ಸತ್ತುಬಿದ್ದಿದ್ದ ಒಂದು ಹಾವನ್ನು ಬಾಣದಿಂದೆತ್ತಿ ಶಮೀಕನ ಕೊರಳಿಗೆ ಮಾಲೆಹಾಕಿ ಹೋದನು. ಸ್ವಲ್ಪ ಹೊತ್ತಿನಲ್ಲೇ ಶಮೀಕಪುತ್ರ ಶೃಂಗಿಯು ಅಲ್ಲಿಗೆ ಬಂದು ಆ ದೃಶ್ಯವನ್ನು ನೋಡಿ ಸಿಟ್ಟುಗೊಂಡು ''ನಮ್ಮ ತಂದೆಯ ಕೊರಳಿಗೆ ಸತ್ತ ಹಾವನ್ನು ಹಾಕಿ ಬ್ರಾಹ್ಮಣಸಂತತಿಗೇ ಅವಮಾನ ಮಾಡಿದವ ಇಂದಿನಿಂದ ಏಳು ದಿನಗಳೊಳಗಾಗಿ ಸರ್ಪ ಕಚ್ಚಿ ಸಾಯಲಿ!'' ಎಂದು ಶಪಿಸಿದನು. ಬಳಿಕ ಸಮಾಧಿಸ್ಥಿತಿಯಿಂದ ಎಚ್ಚೆತ್ತ ಶಮೀಕನು ತನ್ನ ಮಗನ ಅಚಾತುರ್ಯಕ್ಕೆ ಚಿಂತಿಸಿ, ತನ್ನ ಶಿಷ್ಯರನ್ನು ಪರೀಕ್ಷಿತನಲ್ಲಿಗೆ ಕಳುಹಿಸಿ, ಶೃಂಗಿಯ ಶಾಪವನ್ನು ಆತನಿಗೆ ತಿಳಿಸಿ, ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡಿಕೊಳ್ಳುವಂತೆ ಹೇಳಿಕಳುಹಿಸಿದನು. ಪರೀಕ್ಷಿತ ಒಡನೆಯೇ ತನ್ನ ದುಷ್ಕಾರ್ಯಕ್ಕೆ ಮರುಗಿ, ಪುತ್ರ ಜನಮೇಜಯನನ್ನು ರಾಜ್ಯದಲ್ಲಿ ನಿಲ್ಲಿಸಿ, ಸರ್ಪಗಳಿಗೆ ಅಗಮ್ಯವಾದ ರೀತಿಯಲ್ಲಿ ಸಮುದ್ರದ ನಡುವೆ ಒಂದು ಎತ್ತರವಾದ ಸೌಧವನ್ನು ಕಲ್ಪಿಸಿ ಪ್ರಾಯೋಪವಿಷ್ಟನಾದನು. ವ್ಯಾಸಪುತ್ರನಾದ ಶುಕಮುನಿಯಿಂದ ಭಾಗವತ ಕಥಾಶ್ರವಣ ಮಾಡಿದನು. ಕಡೆಗೆ ಏಳನೆಯ ದಿನ ಪರೀಕ್ಷಿತನ ಸಂದರ್ಶನಾರ್ಥ ಬಂದ ಬ್ರಾಹ್ಮಣರು ತಂದುಕೊಟ್ಟ ಹಣ್ಣಿನಲ್ಲಿ ತಕ್ಷಕ ಒಂದು ಹುಳುವಾಗಿ ಸೇರಿಕೊಂಡನು. ಪರೀಕ್ಷಿತನು ಆ ಹಣ್ಣನ್ನು ಮೂಸಿನೋಡಿದಾಗ ತಕ್ಷಕ ಹೊರಬಂದು ಪರೀಕ್ಷಿತನನ್ನು ಸಾಯಿಸಿದನು.

ಶೃಂಗಿಯೇನೂ ಪರೀಕ್ಷಿತನ ಸಾವು ತಕ್ಷಕನಿಂದಲೇ ಆಗಲಿ ಎಂದಿರಲಿಲ್ಲ, ಆದರೆ ತಕ್ಷಕನೇ ಆ ಕಾರ್ಯಕ್ಕೆ ಮುಂದಾದನೇಕೆ? ಕಾರಣವಿದೆ! ಅವನು ಸರ್ಪಗಳ ರಾಜನಾಗಿದ್ದ ಎಂಬುದೊಂದೇ ಅಲ್ಲ, ಹಿಂದೆ ಅಗ್ನಿಯ ಕೋರಿಕೆಯಂತೆ ಕೃಷ್ಣನ ಸಹಾಯದಿಂದ ಅರ್ಜುನನು ಖಾಂಡವ ವನವನ್ನು ಸುಟ್ಟಿದ್ದನಷ್ಟೆ? ಖಾಂಡವವನ್ನು ನುಂಗುವ ಆ ಉರಿಯುತ್ತಿರುವ ಬೆಂಕಿಯಿಂದ ತಕ್ಷಕನೇನೋ ತಪ್ಪಿಸಿಕೊಂಡಿದ್ದನು. ಆದರೆ ಅವನ ಹೆಂಡತಿ ತಪ್ಪಿಸಿಕೊಂಡು ಹೋಗುವ ಉದ್ದೇಶದಿಂದ ಹಾರಿ ಹೋಗುತ್ತಿರುವಾಗ ಅರ್ಜುನನು ಅವಳ ತಲೆಯನ್ನು ಕತ್ತರಿಸಿದ್ದನು. ಅದರಿಂದಾಗಿ ತಕ್ಷಕನಲ್ಲಿ ಸೇಡಿನ ಬೆಂಕಿ ಉರಿಯುತ್ತಿತ್ತು. ಅರ್ಜುನನನ್ನು ಹೇಗೂ ಕೊಲ್ಲಲಾಗಲಿಲ್ಲ, ಈಗವನ ಮೊಮ್ಮಗನನ್ನಾದರೂ ಕೊಲ್ಲುತ್ತೇನೆಂದು ತಕ್ಷಕ ನಿರ್ಧರಿಸಿದನು. ಖಾಂಡವ ವನದ ಕಥೆ ಅಲ್ಲಿಗೇ ಮುಗಿಯುವುದಿಲ್ಲ. ತಕ್ಷಕನ ಮಗ ಅಶ್ವಸೇನನೂ ಬೆಂಕಿಯಿಂದ ತಪ್ಪಿಸಿಕೊಂಡಿದ್ದನು. ಅವನು ಒಂದು ದಶಕಕ್ಕೂ ಹೆಚ್ಚು ಕಾಲ ತನ್ನ ಸಮಯಕ್ಕಾಗಿ ಕಾದಿದ್ದನು. ಅಂತಿಮವಾಗಿ ಕರ್ಣನ ಬತ್ತಳಿಕೆಯಲ್ಲಿ ಬಾಣವೊಂದರ ತಲೆಯಲ್ಲಡಗಿ, ನಾಗಾಸ್ತ್ರವಾಗಿ ಹೊಂಚುಹಾಕಿದ್ದನು. ಕುರುಕ್ಷೇತ್ರ ಸಮರದ ಹದಿನೇಳನೆಯ ದಿನದಂದು ಕರ್ಣನು ಅರ್ಜುನನ ಮೇಲೆ ಆ ಅಸ್ತ್ರಪ್ರಯೋಗ ಮಾಡಿದನು. ಅದು ಗುರಿ ತಪ್ಪಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಕೃಷ್ಣನು ಅದ್ಭುತ ಚಾಕಚಕ್ಯತೆಯಿಂದ ಭೂಮಿಯನ್ನು ಕಾಲಿನಿಂದ ಒತ್ತಿದನು. ಅರ್ಜುನನ ರಥ ಕೆಲವು ಇಂಚುಗಳಷ್ಟು ತಗ್ಗಿತು. ಎದೆಗೆ ಬಂದುಬೀಳಬೇಕಿದ್ದ ಬಾಣ ಅರ್ಜುನನ ಕಿರೀಟವನ್ನಷ್ಟೇ ಹಾರಿಸಿಕೊಂಡು ಹೋಯಿತು.

ಇನ್ನೊಂದು ಸ್ವಾರಸ್ಯವೆಂದರೆ ಜನಮೇಜಯನಿಗೆ ತಂದೆ ಪರೀಕ್ಷಿತನ ಸಾವಿನ ವಿವರ ತಿಳಿಸಿದ್ದು, ಸರ್ಪಕುಲವನ್ನು ನಾಶಪಡಿಸುವಂತೆ ಕಿವಿಯೂದಿದ್ದು, ಆತನ ಮಂತ್ರಿಮಂಡಲದವರಾಗಲೀ ರಾಜಪುರೋಹಿತರಾಗಲೀ ಅಲ್ಲ. ಮತ್ತ್ಯಾರು? ಉತ್ತಂಕನೆಂಬೊಬ್ಬ ಋಷಿ. ಅವನೇಕೆ ಹಾಗೆ ಮಾಡಿದನು? ಅದಕ್ಕೂ ತಕ್ಷಕನೇ ಕಾರಣ! ಉತ್ತಂಕನಿಗೆ ತಕ್ಷಕನ ಮೇಲೆ ಸೇಡು ಇತ್ತು. ಅವನು ಜನಮೇಜಯನ ಆಸ್ಥಾನಕ್ಕೆ ಹೋದನು. ತಕ್ಷಕನ ಮೇಲೆ ಸೇಡು ತೀರಿಸಿಕೊಳ್ಳುವ ಬದಲು ಕ್ಷುಲ್ಲಕ ಅನ್ವೇಷಣೆಗಳಲ್ಲಿ ಸಮಯವನ್ನು ವ್ಯರ್ಥ ಮಾಡುತ್ತಿದ್ದುದಕ್ಕಾಗಿ ಜನಮೇಜಯನನ್ನು ಗದರಿಸಿದನು. ಈ ಉತ್ತಂಕ ಒಬ್ಬ ಋಷಿ. ಬೈದ ಎಂಬ ಮಹರ್ಷಿಯ ಶಿಷ್ಯರಲ್ಲೊಬ್ಬನು. ಅಂದರೆ ಪಾಂಡವರ ಪುರೋಹಿತನಾಗಿದ್ದ ಧೌಮ್ಯ ಋಷಿಯ ಶಿಷ್ಯನ ಶಿಷ್ಯ. ಪೌಷ್ಯರಾಜನ ರಾಣಿ ಧರಿಸಿದ್ದ ಕುಂಡಲಗಳನ್ನು ಗುರುದಕ್ಷಿಣಾ ರೂಪವಾಗಿ ತಂದುಕೊಡಬೇಕೆಂದು ಉತ್ತಂಕನಿಗೆ ಗುರುಪತ್ನಿಯಿಂದ ಆದೇಶ ಆಗಿತ್ತು. ಪೌಷ್ಯನಲ್ಲಿಗೆ ಹೋಗಿ ಅವನಲ್ಲಿ ಬೇಡಿಕೊಂಡು ಕುಂಡಲಗಳನ್ನು ಪಡೆಯುವುದಕ್ಕೆ ಉತ್ತಂಕ ಯಶಸ್ವಿಯಾಗಿದ್ದನು ಕೂಡ. ಆದರೆ ಮಾರ್ಗಮಧ್ಯದಲ್ಲಿ ಉತ್ತಂಕನ ಕೈಯಿಂದ ತಕ್ಷಕನು ಅವುಗಳನ್ನು ಅಪಹರಿಸಿದ್ದನು. ಏಕೆಂದರೆ ತಕ್ಷಕನಿಗೂ ಅವೇ ಕುಂಡಲಗಳ ಮೇಲೆ ಆಸೆ ಇತ್ತು. ಉತ್ತಂಕನು ಪಾತಾಳ ಲೋಕವನ್ನು ಹೊಕ್ಕು ಸರ್ಪಗಳನ್ನು ಹೊಗಳಿ, ಮತ್ತೆ ಆ ಕುಂಡಲಗಳನ್ನು ಪಡೆದು ಗುರುಪತ್ನಿಗೆ ಒಪ್ಪಿಸಿದ್ದನು. ಆದರೂ ತಕ್ಷಕನ ಮೇಲೆ ಅವನಲ್ಲಿದ್ದ ಸೇಡು ಹಾಗೆಯೇ ಇತ್ತು. ಇದೀಗ ಜನಮೇಜಯನ ಆಸ್ಥಾನಕ್ಕೆ ಹೋಗಿ ಸರ್ಪಯಜ್ಞ ಮಾಡುವಂತೆ ಪ್ರಚೋದಿಸಲು ಅದು ಹೇತುವಾಯಿತು.

ಜನಮೇಜಯನ ರಾಜಪುರೋಹಿತನ ಹೆಸರು ಸೋಮಶ್ರವ. ಈತನ ತಂದೆ ಶ್ರುತಶ್ರವಸ. ತಾಯಿ ಒಬ್ಬ ಸರ್ಪಿಣಿ. ಶ್ರುತಶ್ರವಸನ ರೇತಸ್ಸನ್ನು ಒಂದು ಹೆಣ್ಣು ಹಾವು ಕುಡಿದಿದ್ದರಿಂದ ಗರ್ಭ ನಿಂತು ಸೋಮಶ್ರವನ ಜನನ ಆಗಿತ್ತು. ಇದರಲ್ಲಿ ಸೇಡು, ಶಾಪ, ಪ್ರತೀಕಾರದ ಅಂಶಗಳೇನೂ ಇಲ್ಲವಾದರೂ ವೇದವ್ಯಾಸರು ಇಲ್ಲಿಯೂ ಸರ್ಪದ ಎಳೆಯಿಂದಲೇ ಕಥೆಯನ್ನು ಹೆಣೆದಿದ್ದಂತೂ ಹೌದು. ತಕ್ಷಕನದೇ ಮುಖ್ಯ ಭೂಮಿಕೆ. ಅವನು ಮತ್ತು ಮಿಕ್ಕುಳಿದ ಸರ್ಪಗಳು ಜನಮೇಜಯನ ಸರ್ಪಯಾಗದಲ್ಲಿ ವಿನಾಶದ ಅಪಾಯವನ್ನು ಅನುಭವಿಸುವಂತಾಗುವುದಕ್ಕೆ ಇನ್ನೂ ಒಂದು ಕಾರಣವಿದೆ. ಅದಕ್ಕೆ ನಾವು ತಕ್ಷಕನ ಮೂಲವನ್ನೇ ತಡಕಾಡಬೇಕಾಗುತ್ತದೆ. ತಕ್ಷಕನು ಕಶ್ಯಪ ಋಷಿಯ ಇಬ್ಬರು ಪತ್ನಿಯರಲ್ಲಿ ಒಬ್ಬಳಾದ ಕದ್ರೂವಿನ ನಾಲ್ಕನೆಯ ಮಗ. ಕಶ್ಯಪನ ಇನ್ನೊಬ್ಬ ಪತ್ನಿ ವಿನತೆ. ಅವಳ ಮೊದಲ ಮಗ ಹೆಳವನಾಗಿ ಹುಟ್ಟಿ ಸೂರ್ಯನ ರಥಚಾಲಕನಾದ ಅರುಣ; ಎರಡನೆಯವನು ಗರುಡ. ಕದ್ರೂವಿನ ಗಂಡುಮಕ್ಕಳು ಸರ್ಪಗಳು. ಒಬ್ಬ ಹೆಣ್ಣುಮಗಳೂ ಇದ್ದಳು, ಜರತ್ಕಾರು ಎಂದು ಅವಳ ಹೆಸರು. ಇಂದ್ರನ ಕುದುರೆ ಉಚ್ಚೈಃಶ್ರವಸ್ಸು ಪೂರ್ಣ ಬೆಳ್ಳಗಿದೆಯೆಂದು ವಿನತೆಯೂ, ಇಲ್ಲ ಅದರ ಬಾಲ ಕಪ್ಪಗಿದೆ ಎಂದು ಕದ್ರೂವೂ ಒಮ್ಮೆ ಪಂಥ ಕಟ್ಟಿದ್ದರು. ತಾನು ಹೇಳಿದ್ದು ನಿಜವಾಗಿ ಪಂಥದಲ್ಲಿ ಗೆಲ್ಲಬೇಕೆಂಬ ಕಾರಣಕ್ಕೆ ಕದ್ರು, ರಾತೋರಾತ್ರಿ ತನ್ನ ಮಕ್ಕಳನ್ನು ಕರೆದು ಅವರಲ್ಲಿ ಯಾರಾದರೊಬ್ಬರು ಕುದುರೆಯ ಬಾಲಕ್ಕೆ ಸುತ್ತಿಕೊಂಡರೆ, ಮಾರನೆದಿನ ತಾನು ಮತ್ತು ವಿನತೆ ದೂರದಿಂದ ನೋಡಿದಾಗ ಅದು ಕಪ್ಪುಬಾಲವೆಂದೇ ಕಾಣುತ್ತದೆ, ತಾನು ಗೆಲ್ಲಬಹುದಾಗುತ್ತದೆ ಎಂದಿದ್ದಳು. ಕರ್ಕೋಟಕನೊಬ್ಬನನ್ನು ಬಿಟ್ಟು ಬೇರಾರೂ ಆ ಅಧರ್ಮಪ್ರವೃತ್ತಿಗೆ ಒಪ್ಪಿರಲಿಲ್ಲ. ಕದ್ರೂ ಅವರನ್ನೆಲ್ಲ ನಾಶವಾಗುವಂತೆ ಶಪಿಸಿದ್ದಳು. ಅದು ಕೂಡ ಜನಮೇಜಯನ ಸರ್ಪಯಜ್ಞಕ್ಕೊಂದು ನಿಮಿತ್ತವೇ.

ಶಾಪದ ಪರಿಣಾಮವನ್ನು ತಪ್ಪಿಸುವ ಅಥವಾ ತಗ್ಗಿಸುವ ಸಂಭಾವ್ಯ ಮಾರ್ಗಗಳ ಕುರಿತು ಸರ್ಪಗಳು ಚರ್ಚಿಸಿದ್ದವು. ಕೊನೆಗೆ ತಮ್ಮ ಸಹೋದರಿ ಜರತ್ಕಾರುವನ್ನು ಜರತ್ಕಾರು ಎಂದೇ ಹೆಸರಿರುವ ಬ್ರಾಹ್ಮಣನಿಗೆ ಮದುವೆ ಮಾಡಲು ನಿರ್ಧರಿಸಿದರು. ಆ ಜರತ್ಕಾರು ದಂಪತಿಗೆ ಹುಟ್ಟಿದವನೇ ಆಸ್ತೀಕ. ಜನಮೇಜಯನ ಸರ್ಪಯಜ್ಞವನ್ನು ಅಕಾಲಿಕವಾಗಿ ಕೊನೆಗೊಳಿಸಿ, ಆ ಮೂಲಕ ಸರ್ಪಗಳನ್ನು ವಿನಾಶದಿಂದ ರಕ್ಷಿಸಿದವನು. ಆಸ್ತೀಕನೇ ಆಪದ್ಬಾಂಧವನಾಗಿ ಬಂದದ್ದೆಂಬುದನ್ನೂ ವೇದವ್ಯಾಸರು ನೇರವಾಗಿ ಹೇಳುವುದಿಲ್ಲ. ರುರು ಎಂಬುವವನು ತನ್ನ ತಂದೆ ಪ್ರಮತಿಯಿಂದ ಕೇಳಿದ ಕಥೆಯ ಮೂಲಕ ಹೇಳುತ್ತಾರೆ. ರುರು ಏಕೆ ಕಥೆ ಹೇಳುವಂತೆ ತಂದೆಯನ್ನು ಕೇಳುತ್ತಾನೆ? ಅದ್ಯಾವ ಕಥೆ? ಗಮನಿಸಿದರೆ ಅಲ್ಲಿಯೂ ಹಾವುಗಳೇ! ಖಗಮನೆಂಬೊಬ್ಬ ಬ್ರಾಹ್ಮಣ. ಆತನ ಸಹಪಾಠಿ ಸಹಸ್ರಪಾದ ಒಮ್ಮೆ ಹುಲ್ಲಿನಿಂದ ಹಾವಿನಾಕಾರ ಮಾಡಿ ಖಗಮನ ಮೇಲೆ ಎಸೆದಿದ್ದನು. ಹೆದರಿದ ಖಗಮನು ಸಹಸ್ರಪಾದನಿಗೆ ''ನೀನು ವಿಷವಿಲ್ಲದ ನೀರುಹಾವಾಗಿ ಜನಿಸು!'' ಎಂದು ಶಾಪವಿತ್ತಿದ್ದನು. ಖಿನ್ನನಾದ ಸಹಸ್ರಪಾದನು ಶಾಪವಿಮೋಚನೆ ಕೇಳಲಾಗಿ ''ರುರುವೆಂಬ ಋಷಿಯ ಮೂಲಕ ಪೆಟ್ಟು ತಿಂದು ಮರಳಿ ಮನುಷ್ಯಜನ್ಮ ಪಡೆಯುವೆ'' ಎಂದಿದ್ದನು. ನೀರುಹಾವಾಗಿ ಹುಟ್ಟಿದವನೇ ಡುಂಡುಭ. ಮುಂದೆ ರುರು ಆ ನೀರುಹಾವನ್ನು ಹೊಡೆಯಲಿಕ್ಕೆಂದು ಕೋಲೆತ್ತಿದಾಗ ಡುಂಡುಭ ಮನುಷ್ಯರೂಪವನ್ನು ತಾಳಿ ''ನನ್ನನ್ನೇಕೆ ಹೊಡೆಯಲಿಕ್ಕೆ ಯತ್ನಿಸಿದೆ?'' ಎಂದು ರುರುವನ್ನು ಕೇಳಿದನು. ಆಗ ರುರು ''ನನ್ನ ಹೆಂಡತಿ ಸರ್ಪ ದಂಶದಿಂದ ಮೃತಳಾದಳು. ಹಾಗಾಗಿ ನಾನು ಕಂಡ ಹಾವುಗಳನ್ನೆಲ್ಲ ಕೊಲ್ಲುತ್ತಿದ್ದೇನೆ'' ಎಂದನು.

ರುರು ಯಾರೆಂದರೆ ಚ್ಯವನ ಮಹರ್ಷಿ ಮತ್ತು ಸುಕನ್ಯೆಯರ ಮೊಮ್ಮಗ. ಪ್ರಮತಿ ಮತ್ತು ಘೃತಾಚಿಯರ ಮಗ. ವಿಶ್ವಾವಸುವೆಂಬ ಗಂಧರ್ವನಿಂದ ಮೇನಕೆಯಲ್ಲಿ ಹುಟ್ಟಿದ ಪ್ರಮದ್ವರೆಯೊಡನೆ ರುರುವಿನ ವಿವಾಹವಾಗುವುದಿತ್ತು. ಪ್ರಮದ್ವರೆಯ ಸಾಕುತಂದೆ ಸ್ಥೂಲಕೇಶನೆಂಬ ಮುನಿ. ಒಮ್ಮೆ ಪ್ರಮದ್ವರೆಯು ಸಖಿಯರೊಡನೆ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ಹಾವು ಕಚ್ಚಿ ಸತ್ತಳು. ಸುತ್ತಮುತ್ತಲಿನ ಮುನಿಗಳು ಅವಳ ಶವವನ್ನು ಸ್ಥೂಲಕೇಶನಲ್ಲಿಗೆ ತಂದರು. ಅಲ್ಲಿಗೆ ಬಂದ ರುರು, ಯಮನ ಒಪ್ಪಿಗೆಯಂತೆ ತನ್ನ ಆಯುಷ್ಯದಲ್ಲಿ ಅರ್ಧಭಾಗವನ್ನು ಪ್ರಮದ್ವರೆಗೆ ಕೊಟ್ಟು ಅವಳನ್ನು ಬದುಕಿಸಿ ಮದುವೆಯಾದನು. ಹಾಗಾಗಿ ರುರುವಿಗೂ ಹಾವುಗಳ ಮೇಲೆ ದ್ವೇಷ ಇತ್ತು.

ಒಟ್ಟಿನಲ್ಲಿ ಮಹಾಭಾರತವನ್ನು ನಾವು ಕೇವಲ ಯುದ್ಧ, ರಾಜಕೀಯ, ಪಗಡೆಯಾಟ, ಭಗವದ್ಗೀತೆಯೆಂಬ ತತ್ವಶಾಸ್ತ್ರದ ಕಾವ್ಯವೆಂದು ನೋಡುವುದು ಅಪೂರ್ಣವಾಗುತ್ತದೆ. ನಿಜವಾಗಿ ಅದೊಂದು ಒಡನಾಟ, ಶಾಪ, ಪ್ರತೀಕಾರ, ಪರಿಪಕ್ವತೆ ಮತ್ತು ಧರ್ಮಪಾಲನೆಯ ಕಥೆಯಾಗಿದೆ. ಕಥೆಯ ಆದಿಗೂ ಅಂತ್ಯಕ್ಕೂ ಸರ್ಪಗಳನ್ನೇ ಕಾರಣವಾಗಿಸಿ ಸರ್ಪಗಳ ನಿರಂತರ ಉಲ್ಲೇಖ ಮತ್ತು ಪಾತ್ರವು, ಕಾವ್ಯದ ದೀರ್ಘಗತಿಯನ್ನು ಗಾಢವಾಗಿ ಕಟ್ಟಿ ಬೆಳೆಸುತ್ತದೆ. ಸರ್ಪಗಳು ಇಲ್ಲಿ ಕೇವಲ ಜೀವಿಗಳಷ್ಟೇ ಅಲ್ಲ, ಅವುಗಳ ಮೂಲಕ ಶಾಶ್ವತ ಶಕ್ತಿಯನ್ನೂ ಪ್ರತಿಬಿಂಬಿಸಲಾಗಿದೆ. ಪೌರಾಣಿಕ ಚಕ್ರಪಥದ ಅನನ್ಯತೆ ಮತ್ತು ಭಾರತೀಯ ಕಾವ್ಯಪದ್ಧತಿಯ ಶ್ರೇಷ್ಠತೆ ಮೆರೆದಿವೆ.

ಇಂತು, ಶ್ರಾವಣ ಮಾಸದ ಎರಡನೆಯ ಭಾನುವಾರದಲ್ಲೊಂದು ಪುರಾಣಕಥನ/ವಾಚನ/ಶ್ರವಣ ಸಮಾಪ್ತವಾದುದು.

ಅಲ್ಲಿರುವುದು ನಮ್ಮನೆ... ಇಲ್ಲಿ ಬಂದೆ ಸುಮ್ಮನೆ!



ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ನಾವೀಗ ಪಟ್ಟಣವಾಸಿಗಳಾಗಿದ್ದರೂ, ನಮಗೆಲ್ಲ ನಮ್ಮ ಹಳ್ಳಿಗಳೆಂದರೆ ಪ್ರೀತಿ. ಇಂದಿಗೂ ಊರಿಗೆ ಹೋಗುವುದೆಂದರೆ, ಅದು ನವವಿವಾಹಿತೆಯೊಬ್ಬಳು ತವರುಮನೆಗೆ ಹೋಗುವ ಸಂಭ್ರಮದಂತಿರುತ್ತದೆ.

ಕರ್ನಾಟಕದ ಹಳ್ಳಿಗಳೆಂದರೆ, ಸಾಮಾನ್ಯವಾಗಿ ವಿವಿಧ ಜಾತಿವರ್ಗಗಳ, ಕುಲಕಸುಬುಗಳನ್ನು ಮಾಡುವ ಜನರು ತುಂಬಿರುವ ಕಾಲವಿತ್ತು. ಕೃಷಿಯನ್ನೇ ಪ್ರಧಾನ ಕಸುಬಾಗಿಟ್ಟುಕೊಂಡು ಜೀವನ ನಿರ್ವಹಿಸುವ ಒಂದಷ್ಟು ಕುಟುಂಬಗಳ ಸಮೂಹ ಅದಾಗಿರುತ್ತಿತ್ತು. ಹಳ್ಳಿಗಳ ಮನೆಮನೆಗಳಲ್ಲೂ, ಅಜ್ಜ-ಅಜ್ಜಿಯರಂಥ ಅನುಭವಸ್ಥ ಹಿರಿಯ ಜೀವಗಳು ಇರುತ್ತಿದ್ದವು. ಜತೆಗೆ, ಮುಂದಿನ 2 ತಲೆಮಾರಿನವರು ಅಂದರೆ, ಮಕ್ಕಳು-ಮೊಮ್ಮಕ್ಕಳು ಆ ಮನೆಯಲ್ಲಿ ವಾಸಿಸುತ್ತ ಆನಂದದಿಂದ ಜೀವನ ಸಾಗಿಸುವ ಕಾಲವೊಂದಿತ್ತು. 40-50 ಜನ ಒಟ್ಟಾಗಿ ಜೀವಿಸುವ ಅವಿಭಕ್ತ ಕುಟುಂಬಗಳು ಹೆಚ್ಚಾಗಿದ್ದ ಕಾಲವದು. ಆ ಮನೆಯ ಹಿರಿಯನೇ ಅವಿಭಕ್ತ ಕುಟುಂಬದ ರಕ್ಷಾಕರ್ತನಾಗಿರುತ್ತಿದ್ದ. ಆತನ ಮಾತೆಂದರೆ ಮನೆಯವರಿಗೆ ವೇದವಾಕ್ಯವಾಗಿರುತ್ತಿತ್ತು. ನಮ್ಮ ತಾತನ ತಲೆಮಾರಿನ ಹಳ್ಳಿಯ ಬದುಕನ್ನು ಒಂದು ಕ್ಷಣ ಅವಲೋಕಿಸಿದರೆ ಇಂದಿನ ಹಳ್ಳಿಗಳ ಬಗ್ಗೆ ಬೇಸರವಾಗುತ್ತದೆ.

ಹಿಂದೆ ಹಳ್ಳಿಗಳಲ್ಲಿ ಆಧುನಿಕತೆಯ ಸ್ಪರ್ಶವೂ ಇರುತ್ತಿರಲಿಲ್ಲ. ಆಗ, ಅಲ್ಲಿನವರು ತಮ್ಮ ಜೀವಿತಾವಧಿಯನ್ನೆಲ್ಲಾ ತಮ್ಮ ಕಸುಬು, ಕುಟುಂಬ ಜೀವನವನ್ನು ಸಾಗಿಸುವುದರಲ್ಲೇ ಕಳೆದುಬಿಡುತ್ತಿದ್ದರು. ಮಳೆಗಾಲದ ಪ್ರಾರಂಭಕ್ಕೂ ಮುನ್ನ ಹತ್ತಿರದ ಪಟ್ಟಣಗಳಿಗೆ ತೆರಳಿ ಮಳೆಗಾಲಕ್ಕೆ ಸಾಕಾಗುವಷ್ಟು ಕಿರಾಣಿ ಸಾಮಾನುಗಳನ್ನು ಸಂಗ್ರಹ ಮಾಡಿಟ್ಟುಕೊಳ್ಳುತ್ತಿದ್ದರು. ಮಳೆಗಾಲವೂ ಹಾಗೇ ಇರುತ್ತಿತ್ತು, ಶುರುವಾದ ಮೇಲೆ ಬಿಡುವೇ ಇರುತ್ತಿರಲಿಲ್ಲ. ಅದು ಸಾರಿಗೆ ವ್ಯವಸ್ಥೆ ಸರಿಯಾಗಿ ಇರುತ್ತಿರದ ಕಾಲವಾದ್ದರಿಂದ ಪಟ್ಟಣಕ್ಕೆ ಹೋಗಿಬರುವುದು ಅಸಾಧ್ಯವೇ ಆಗಿತ್ತು.

ಬಹುತೇಕ ಹಳ್ಳಿಗಳಲ್ಲಿ ವಿದ್ಯುತ್ತಿನ ಸರಬರಾಜೇ ಇರುತ್ತಿರಲಿಲ್ಲ, ಇದ್ದರೂ ಮಳೆಗಾಲದಲ್ಲಿ ಒಂದು ದಿನವಿದ್ದರೆ ಮೂರು ದಿನ ಇರುತ್ತಿರಲಿಲ್ಲ. ಎಲ್ಲರ ಮನೆಗಳಲ್ಲಿ ಮೇಣದ ಬತ್ತಿಯೂ ಇರುತ್ತಿರಲಿಲ್ಲ, ಸೀಮೆಎಣ್ಣೆ ಬಳಸಿ ಉರಿಯುತ್ತಿದ್ದ ಚಿಮಣಿ-ಲಾಟೀನುಗಳೇ ಬೆಳಕಿಗೆ ಸಾಧನವಾಗಿತ್ತು. ಮನರಂಜನೆ ಹಾಗೂ ದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ರೇಡಿಯೋ ಬಿಟ್ಟರೆ ಇನ್ನಾವುದೇ ಸಾಧನವಿರುತ್ತಿರಲಿಲ್ಲ. ಮನೆಯ ಹೆಂಗಸರು ಅಡುಗೆ ಮಾಡಲು, ನೀರೆತ್ತಲು ಹಾಗೂ ಬಟ್ಟೆ ತೊಳೆಯಲು ರಟ್ಟೆಯನ್ನು ಮಾತ್ರ ನಂಬಬೇಕಿತ್ತು. ಅವರ ಸಹಾಯಕ್ಕೆ ಯಾವ ಆಧುನಿಕ ಉಪಕರಣಗಳೂ ಇರುತ್ತಿರಲಿಲ್ಲ. ಇನ್ನು, ಹಳ್ಳಿಯ ರಸ್ತೆಗಳ ಕಥೆಯನ್ನಂತೂ ಕೇಳುವುದೇ ಬೇಡ.

ಆಗ ಇಂದಿನಂತೆ ಆಧುನಿಕ ಕೃಷಿಯಂತ್ರಗಳ ಆವಿಷ್ಕಾರವಾಗಿರಲಿಲ್ಲ. ಆದರೆ, ಕೃಷಿ ಕೂಲಿಕಾರರಿಗೆ ಕೊರತೆಯಿರಲಿಲ್ಲ. ಅನೇಕ ಹಳ್ಳಿಗಳಲ್ಲಿ ಒಬ್ಬರ ಮನೆಯ ಕೆಲಸಕ್ಕೆ ಇನ್ನೊಬ್ಬರು ಹೋಗುವುದು, ಮತ್ತೆ ಇವರಮನೆ ಕೆಲಸಕ್ಕೆ ಅವರು ಬಂದು ಅದನ್ನು ತೀರಿಸುವ 'ಮುರಿಯಾಳು' ಪದ್ಧತಿಯಿತ್ತು. ಇದನ್ನು ಅಳವಡಿಸಿಕೊಂಡ ಹಳ್ಳಿಗರಿಗೆ ತಮ್ಮ ಕೆಲಸಕ್ಕೆ ಹಣ ಖರ್ಚು ಮಾಡುವ ಅಗತ್ಯಬರುತ್ತಿರಲಿಲ್ಲ. ಎಲ್ಲರೂ ಎಲ್ಲರ ಕೆಲಸದಲ್ಲೂ ನೆರವಾಗುತ್ತಿದ್ದರು. ಮನೆಗಳಲ್ಲಿ ಮದುವೆ ಮುಂತಾದ ಸಮಾರಂಭಗಳಾದರೆ, ಎರಡು ದಿನ ಊರಿನ ಯಾರ ಮನೆಯಲ್ಲೂ ಅಡುಗೆ ಮಾಡುತ್ತಿರಲಿಲ್ಲ. ಎಲ್ಲರೂ ಮದುವೆಮನೆಗೆ ಬಂದು ತಮಗೆ ವಹಿಸಿದ ಕೆಲಸಮಾಡಿ, ಅಲ್ಲೇ ಊಟಮಾಡಿ ಹೋಗುವುದು ರೂಢಿಯಾಗಿತ್ತು. ಹಳ್ಳಿಗರಲ್ಲಿ ಸಣ್ಣಪುಟ್ಟ ಜಗಳಗಳಿದ್ದರೂ, ಅಂದು ಒಂದು ರೀತಿಯ ಒಗ್ಗಟ್ಟಿರುತ್ತಿತ್ತು. ಅವರು ಆರಾಧಿಸುವ ಗ್ರಾಮದೇವರುಗಳಿಗೆ ವಾರ್ಷಿಕ ಪೂಜೆ ಸಲ್ಲುತ್ತಿತ್ತು. ಇಂಥ ತೇರು-ಜಾತ್ರೆಗಳಲ್ಲಿ ನಾಟಕ, ಭಜನೆ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡೆಗಳು ನಡೆಯುತ್ತಿದ್ದವು. ಇಂದಿಗೂ ಕೆಲವೊಂದು ಹಳ್ಳಿಗಳಲ್ಲಿನ ತಾತ-ಅಜ್ಜಿಯರನ್ನು ನೋಡಿದರೆ, ಅವರು ಯಾವುದಾದರೊಂದು ಕಲೆಯಲ್ಲಿ ಪ್ರವೀಣರಿರುತ್ತಾರೆ. ಜಾನಪದ ಹಾಡುಗಳು, ಕಥೆ-ಹರಿಕಥೆ ಹೀಗೆ ಬೇರೆ ಬೇರೆ ಊರಿಗೆ ಅದರದ್ದೇ ಆದ ಸಾಂಸ್ಕೃತಿಕ ಗುರುತು ಇರುತ್ತಿತ್ತು.

ಇನ್ನು, ನಾಟಿ ಔಷಧಿ ತಯಾರಿಸಿ ಬೇರೆ ಬೇರೆ ರೋಗಕ್ಕೆ ಕೊಡುವ ಸಿದ್ಧೌಷಧಿಯ ಪರಿಣತರೂ ಹಳ್ಳಿಗಳಲ್ಲಿ ಸಿಗುತ್ತಿದ್ದರು. ಅಲೋಪತಿ ಪದ್ಧತಿಯ ಮೇಲಿನ ಅವಲಂಬನೆ ತೀರಾ ಕಡಿಮೆಯಿದ್ದ ಕಾಲವದು. ಹತ್ತಿರದ ಪೇಟೆ ಪಟ್ಟಣಗಳಲ್ಲೂ ಆಸ್ಪತ್ರೆಗಳು ಕಡಿಮೆಯೇ. ಇಂದಿನಂತೆ ದೂರವಾಣಿ-ದೂರದರ್ಶನಗಳಿರಲಿಲ್ಲ, ಎಲ್ಲರ ಮನೆಯಲ್ಲೂ ಹಸು ಎಮ್ಮೆಗಳ ಸಾಕಣೆ ಇರುತ್ತಿದ್ದರಿಂದ ಹಾಲು-ಮೊಸರು, ಬೆಣ್ಣೆ-ತುಪ್ಪಕ್ಕೆ ಕೊರತೆಯಿರುತ್ತಿರಲಿಲ್ಲ. ಇಂದಿನಂತೆ ದ್ವೇಷ-ಅಸೂಯೆ ಜಾಸ್ತಿಯಿರಲಿಲ್ಲ, ಒಬ್ಬರಿಗೊಬ್ಬರು ಮಾದರಿಯಾಗಿ ಜೀವಿಸುತ್ತಿದ್ದರು.

ಆದರೆ, ಇಂದಿನ ಹಳ್ಳಿಗಳಲ್ಲಿ ಆಧುನಿಕತೆಯಿದೆ, ದೂರವಾಣಿ ದೂರದರ್ಶನಗಳು ಸೇರಿದಂತೆ, ಪಟ್ಟಣಗಳಲ್ಲಿ ದೊರೆಯುವ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುತ್ತಿವೆ. ರಸ್ತೆಗಳು, ಸಂಚಾರ ವ್ಯವಸ್ಥೆ ಬಹಳಮಟ್ಟಿಗೆ ಸುಧಾರಿಸಿವೆ. ಪ್ರತಿ ಮನೆಗೆ ಎರಡರಂತೆ ಮೋಟಾರ್ ಬೈಕುಗಳಿವೆ. ಕಾರು-ಜೀಪುಗಳು ಅನೇಕ ಮನೆಗಳಲ್ಲಿವೆ. ಈಗಲೂ ಕೃಷಿ ಎನ್ನುವುದು ಲಾಭದಾಯಕವಾಗಿಲ್ಲದಿದ್ದರೂ, ಮೊದಲಿಗೆ ಹೋಲಿಸಿದರೆ, ಈಗ ಬೆಳೆದ ಫಸಲಿಗೆ ತಕ್ಕಮಟ್ಟಿನ ಬೆಲೆಯೂ ಸಿಗುತ್ತಿವೆ. ಬೆಳೆಸಾಲ, ಬೆಳೆ ಕೈಕೊಟ್ಟರೆ ಬೆಳೆವಿಮೆಗಳು ಸರಕಾರದಿಂದ ನೇರವಾಗಿ ರೈತರ ಖಾತೆಗೆ ವರ್ಗಾವಣೆಯಾಗುತ್ತಿವೆ. ಇನ್ನು ಗ್ಯಾರಂಟಿ ಭಾಗ್ಯಗಳಿಂದಾಗಿ, ದುಡ್ಡು, ಧಾನ್ಯ, ವಿದ್ಯುತ್ ಸರಬರಾಜುಗಳು ಬಡವರಿಗೆ ಪುಕ್ಕಟೆಯಾಗಿ ಸಿಗುತ್ತಿವೆ. ಹಾಗಾಗಿ ಕೃಷಿಕಾರ್ಮಿಕರು ಆಲಸಿಗಳಾಗುತ್ತಿದ್ದಾರೆ ಎನ್ನುವ ಮಾತುಗಳನ್ನೂ ಕೇಳುತ್ತೇವೆ. ಹಳ್ಳಿಯಲ್ಲಿ ಈಗ ಒಂದು ರೀತಿಯಲ್ಲಿ ಸುಖವಿದೆ. ಎಲ್ಲವೂ ಇದೆ, ಆದರೆ ಏನೋ ಇಲ್ಲ!

ದಿನದಿಂದ ದಿನಕ್ಕೆ ಹಳ್ಳಿಗಳ ಚಿತ್ರಣ ಮಾತ್ರ ಸಂಪೂರ್ಣ ಬದಲಾಗುತ್ತಿದೆ. ಇಂದು ಯಾರ ಮನೆಗಳಲ್ಲೂ ಹಸುಕರುಗಳಿಲ್ಲ, ಅವರೂ ಹಾಲನ್ನು ಕೊಳ್ಳುವ ಪರಿಸ್ಥಿತಿ ಇದೆ. ಮನೆಗಳಲ್ಲಿ ಹಸುಕರುಗಳಿಲ್ಲದ ಕಾರಣ, ಕೃಷಿಗೆ ಹೆಚ್ಚಾಗಿ ಬಳಸುತ್ತಿದ್ದ ನೈಸರ್ಗಿಕ ಗೊಬ್ಬರಗಳು ಸಿಗದೇ, ರಾಸಾಯನಿಕ ಗೊಬ್ಬರಗಳನ್ನೇ ಸಾಮಾನ್ಯವಾಗಿ ಎಲ್ಲರೂ ಬಳಸುವಂತಾಗಿದೆ. ಒಂದು ತಲೆಮಾರಿನ, ವಯಸ್ಸಾದವರು ಮಾತ್ರ ಹಳ್ಳಿಗಳಲ್ಲಿ ನಮಗೆ ಇಂದು ಕಾಣಸಿಗುತ್ತಾರೆ. ಎಲ್ಲಿ ನೋಡಿದರೂ ಮುದುಕರೇ ಕಾಣುತ್ತಿದ್ದಾರೆ ಎನ್ನಬಹುದು, ಅವರ ಕಾಲಾನಂತರ ಆ ಮನೆತನದ ಗತಿಯೇನು ಎನ್ನುವುದು ದೊಡ್ಡ ಪ್ರಶ್ನೆಯಾಗಿಯೇ ಉಳಿದುಬಿಡುತ್ತದೆ. ಈಗ ಹಳ್ಳಿಯಲ್ಲಿರುವ ಹಿರಿಯ ಜೀವಗಳೂ, ವೈದ್ಯಕೀಯ ಹಾಗೂ ಇನ್ನಿತರ ಕಾರಣಗಳಿಗಾಗಿ, ಹಳ್ಳಿಗಳಲ್ಲಿನ ತಮ್ಮ ಸ್ವಂತ ಮನೆಯನ್ನು ಬಿಟ್ಟು, ಹತ್ತಿರದ ಪಟ್ಟಣಗಳಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಅಲ್ಲಿ ನಿಂತು ಕೆಲಸ ಮಾಡಿಸುವುದು ಅಸಾಧ್ಯವಾದ್ದರಿಂದ, ತಮ್ಮ ಜಮೀನಿನ ಕೆಲಸ ಹಾಗೂ ಬೆಳೆಕೊಯ್ಲನ್ನು ಗುತ್ತಿಗೆ ನೀಡಿ, ಬಂದಷ್ಟು ಹಣ ಸಾಕು ಎಂದುಕೊಂಡಿದ್ದಾರೆ.

ಇನ್ನು, ವಿದ್ಯಾವಂತ ಯುವಕರಂತೂ ಪಟ್ಟಣ ಸೇರಿ ಬಹಳ ಕಾಲವಾಯಿತು. ಅವರು ಇಂದು ಮಹಾನಗರಗಳು ಅಥವಾ ವಿದೇಶದಲ್ಲಿದ್ದಾರೆ. ಹಳ್ಳಿಯಲ್ಲಿ ಜನಸಂಖ್ಯೆ ದಿನದಿಂದ ದಿನಕ್ಕೆ ಕೃಶವಾಗುತ್ತಿದೆ. ಕರ್ನಾಟಕದ ಒಟ್ಟೂ ಆರು ಕೋಟಿ ಜನಸಂಖ್ಯೆಯಲ್ಲಿ, ಸುಮಾರು ಒಂದೂವರೆ ಕೋಟಿಜನ, ಅಂದರೆ ಸುಮಾರು 25 ಪ್ರತಿಶತ ಜನ ಬೆಂಗಳೂರಿನಲ್ಲೇ ಇದ್ದಾರೆ ಎಂತಾದರೆ, ಉಳಿದ ಎರಡು ಮತ್ತು ಮೂರನೇ ಸ್ತರದ ನಗರವಾಸಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ, ಅದು ಸುಮಾರು 60 ಪ್ರತಿಶತವಾಗಬಹುದು. ಹಾಗಾಗಿ, ಹಳ್ಳಿಯ ಸರಕಾರಿ ಶಾಲೆಗಳು, ಆರೋಗ್ಯ ಕೇಂದ್ರಗಳು ಮುಚ್ಚುವ ಸ್ಥಿತಿಯಲ್ಲಿವೆ. ಕೃಷಿ ಕೂಲಿಕಾರರಂತೂ ಸಿಗುವುದೇ ಇಲ್ಲ ಎಂಬ ದೂರು ಸಾಮಾನ್ಯವಾಗಿದೆ.

ಮೊದಲೆಲ್ಲ, ತಮಗಿರುವ 2-3 ಮಕ್ಕಳಲ್ಲಿ, ಒಬ್ಬಿಬ್ಬರು ಮಾತ್ರ ನಗರಗಳಲ್ಲಿ ಕೆಲಸ ಮಾಡುವವರಾಗಿದ್ದರೆ, ಒಂದಿಬ್ಬರು ಮನೆಯಲ್ಲೇ ಉಳಿದು, ತಂದೆಗೆ ಸಹಕಾರಿಯಾಗಿ ನಿಂತು, ಪಾರಂಪರಿಕ ಕೃಷಿಯನ್ನೂ, ಮನೆತನದ ಸಂಪ್ರದಾಯಗಳನ್ನೂ ಪಾಲಿಸುತ್ತಾ, ಹಳ್ಳಿಯಲ್ಲೇ ಇರುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿ ಬೇರೆಯದೇ ಆಗಿದೆ. ಇರುವವನು ಒಬ್ಬನೇ ಮಗ ಅಥವಾ ಮಗಳು ಅಂತಾದಮೇಲೆ, ಅವರು ಚೆನ್ನಾಗಿ ಓದಬೇಕು ಮತ್ತು ಒಳ್ಳೆಯ ಕೆಲಸದಲ್ಲಿ ಇರಬೇಕು ಎನ್ನುವುದಾದಾಗ, ಮನೆಯಲ್ಲಿರುವವರಾರು?

ಹಳ್ಳಿಯಲ್ಲಿರುವ ಹಿರಿಯ ಜೀವಿಗಳಿಗೆ, ಕೋವಿಡ್ ಕಾಲಘಟ್ಟವು ಒಂದು ರೀತಿಯಲ್ಲಿ ಸಮಾಧಾನ ತಂದಿತ್ತು. ಶಹರದಲ್ಲಿ ವಾಸಿಸುವ ಮಕ್ಕಳು ಮತ್ತು ಅವರ ಕುಟುಂಬ, ಅನ್ಯಮಾರ್ಗವಿಲ್ಲದೇ ಆಗ ಹಳ್ಳಿಗೆ ಮರಳಿತ್ತು. ಆರೆಂಟು ತಿಂಗಳುಗಳು ಅವರು ಮನೆಯಿಂದಲೇ ಕೆಲಸಮಾಡುತ್ತಿದ್ದರು. ಮಕ್ಕಳು-ಮೊಮ್ಮಕ್ಕಳ ಜತೆಗೆ ಹಿರಿಯರು ಅತ್ಯಂತ ಸಂತೋಷದಿಂದ ಕಾಲ ಕಳೆದರು. ಮಕ್ಕಳೂ ತಮ್ಮ ಸಂಬಳದ ಸ್ವಲ್ಪ ಪಾಲನ್ನು ತಮ್ಮ ಮೂಲಮನೆ, ಜಮೀನಿನ ಅಭಿವೃದ್ಧಿ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿ ತಂದೆ-ತಾಯಿಯರ ಜತೆಗೆ ಕಾಲ ಕಳೆಯುವಂತಾಗಿತ್ತು. ಅಂತೂ ಕೋವಿಡ್ ಕಾಲದಲ್ಲಿ ಪಟ್ಟಣವಾಸಿಗಳೆಲ್ಲ ಮನೆಗೆ ಮರಳಿದ್ದರಿಂದ, ಹಳ್ಳಿಗಳು ಜೀವಕಳೆ ತುಂಬಿಕೊಂಡು ನಳನಳಿಸುತ್ತಿದ್ದವು. ಕೋವಿಡ್ ಮಹಾಮಾರಿಯು ಜಗತ್ತಿಗೆ ಮಹಾಶಾಪವಾಗಿ ಪರಿಣಮಿಸಿದ್ದರೂ, ನಮ್ಮ ಹಳ್ಳಿಗರಿಗೆ ಮಾತ್ರ ಒಂದು ರೀತಿಯಲ್ಲಿ ವರವಾಗಿತ್ತು. ಆದರೆ, ಇದು ಅಲ್ಪಕಾಲದ ಆನಂದ ಮಾತ್ರವಾಗಿತ್ತು. ವರ್ಷದ ನಂತರ ಮನೆಯ ಮಕ್ಕಳೆಲ್ಲ ಮತ್ತೆ ಶಹರ ಸೇರಿ ಮನೆ ಬರಿದಾಯ್ತು.

ಇನ್ನೂ ಒಂದು ದೊಡ್ಡ ಸಮಸ್ಯೆಯೆಂದರೆ, ಹಳ್ಳಿಗಳಲ್ಲೇ ಉಳಿದು ಕೃಷಿ ಕೆಲಸ ಮಾಡಿ ಅಥವಾ ಮಾಡಿಸಿಕೊಂಡಿರುವ ಶ್ರೀಮಂತ ಯುವಕರಿಗೆ ಇಂದು ಹುಡುಗಿಯನ್ನು ಕೊಡುವವರಿಲ್ಲದಾಗಿ ಶಾದಿಭಾಗ್ಯವಿಲ್ಲದಂತಾಗಿದ್ದು. ಹೆಣ್ಣುಮಕ್ಕಳು ಒಳ್ಳೆಯ ವಿದ್ಯಾಭ್ಯಾಸ ಮಾಡಿ ನಗರಗಳಲ್ಲಿ ಉತ್ತಮ ಕೆಲಸ ಮಾಡಿಕೊಂಡಿರುವುದರಿಂದ, ಹಳ್ಳಿಗೆ ಮರಳಲು ಸ್ವಾಭಾವಿಕವಾಗಿ ಮನಸ್ಸು ಮಾಡುತ್ತಿಲ್ಲ. ಇನ್ನು, ಹಳ್ಳಿಗಳಲ್ಲೇ ಇರುವ ಹೆಣ್ಣುಮಕ್ಕಳು, ಪಟ್ಟಣದಲ್ಲಿರುವ ವರನನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ಹಳ್ಳಿಗಳ ಯುವಕರ ಪಾಡು ಹೇಳತೀರದ್ದಾಗಿದೆ. ಮದುವೆಯೇ ಆಗದಿದ್ದ ಮೇಲೆ ಮಕ್ಕಳಾಗುವುದೆಲ್ಲಿಂದ? ಅವರ ಸಂತತಿ ಮುಂದುವರಿಯುವುದು ಹೇಗೆ? ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡದಿರುವುದೇ ಲೇಸು ಎನಿಸುತ್ತಿದೆ. ಅಂತೂ, ವಿವಿಧ ಜನಾಂಗಗಳು ತಮ್ಮ ನಾಶಕ್ಕೆ ದಿನಗಣನೆ ಮಾಡುವಂತಾಗಿದೆ. ಇವಕ್ಕೆಲ್ಲ ಯಾರಲ್ಲೂ ಉತ್ತರವಿಲ್ಲ. 'ಅವರು ಹಾಗೆ ಮಾಡಬೇಕು, ಇವರು ಹಾಗೆ ಮಾಡಬಾರದು' ಎಂದು ಉಪದೇಶ ಮಾಡುವವರು ಸಾವಿರವಿದ್ದಾರೆ; 'ಆದರೆ ನಿಮ್ಮ ಮಗಳನ್ನು ಹಳ್ಳಿಯಲ್ಲಿ ವಾಸಿಸುವ ಯುವಕರಿಗೆ ಕೊಟ್ಟು ಮದುವೆ ಮಾಡುತ್ತೀರಾ?' ಎಂದರೆ, 'ಅದು ಹೇಗೆ ಸಾಧ್ಯ ಮಾರಾಯ್ರೆ?' ಎನ್ನುತ್ತಾರೆ. ಇದು ನಮಗೆ ಅಪರಿಹಾರ್ಯವಾದ ಅಂದರೆ ನಮ್ಮ ನಿಯಂತ್ರಣಕ್ಕೆ ಸಿಗದ ಸಂಗತಿಯಾದ್ದರಿಂದ, ದುಃಖಿಸಿ ಪ್ರಯೋಜನವಿಲ್ಲ. ಕಾಲಪ್ರವಾಹದ ಜತೆಗೆ ತೇಲಿಹೋಗುವುದೊಂದೇ ನಮಗೆ ಉಳಿದಿರುವ ದಾರಿಯಾಗಿದೆ.

ನಮ್ಮ ದೇಶದ ಹಳ್ಳಿಗಳು ಪುರಾತನ ಕಾಲದಿಂದಲೂ ಕಲೆ, ಸಂಸ್ಕೃತಿಯ ತವರೂರು. ಇದು ಹುಟ್ಟಿರುವುದು ಹಳ್ಳಿಗಳಿಂದಲೇ ಎಂದರೂ ತಪ್ಪಾಗಲಾರದು. ಇಂಥ ಚಟುವಟಿಕೆಗಳು ಹೆಚ್ಚಾಗಿ ಪ್ರದರ್ಶನಗೊಳ್ಳುವುದು ಅಲ್ಲಿನ ಹಬ್ಬ-ಜಾತ್ರೆಗಳಲ್ಲಾಗಿತ್ತು. ಲಾಗಾಯ್ತಿನಿಂದ ಆಚರಿಸಿಕೊಂಡು ಬಂದ ಹಳ್ಳಿಯ ಹಬ್ಬ-ಜಾತ್ರೆಗಳು ಕಳೆ ಕಳೆದುಕೊಂಡು ಇಂದು ಅಂತೂ ಇಂತೂ ನಡೆಯುತ್ತಿವೆ, ಯಾವಾಗ ನಿಲ್ಲುತ್ತವೋ ಗೊತ್ತಿಲ್ಲ. ಹೀಗಾದರೆ, ನಮ್ಮ ಪುರಾತನ ಕಲೆ-ಸಂಸ್ಕೃತಿಗಳು ಮುಂದಿನ ಪೀಳಿಗೆಗೆ ಕಥೆ ಹೇಳಿ ತಿಳಿಸುವಂತಾಗುತ್ತದೆ ಅಷ್ಟೇ.

ಹಳ್ಳಿಗಳು ಎದುರಿಸುತ್ತಿರುವ ಇನ್ನೊಂದು ಗಂಭೀರ ಸವಾಲಿನ ಕುರಿತು ಹೇಳುವುದಾದರೆ, ಅನೇಕ ಹಳ್ಳಿಗಳಲ್ಲಿ, ತಲೆಮಾರುಗಳನ್ನು ದಾಟುತ್ತಾ, ಪರಂಪರೆಯಿಂದ ಬಂದ ಕೃಷಿ ಜಮೀನುಗಳು ಇಂದು ಮಾರಾಟಕ್ಕೆ ಸಿದ್ಧವಾಗಿ ನಿಂತಿವೆ. ಮಕ್ಕಳು ಮೊಮ್ಮಕ್ಕಳು ಹುಟ್ಟಿಬೆಳೆದ ನೂರಾರು ವರ್ಷಗಳ ಹಿಂದಿನ ಮನೆ, 'ಹೋಮ್ ಸ್ಟೇ' ಆಗಿ ಪರಿವರ್ತಿತವಾಗುತ್ತಿವೆ. ಪೂಜೆ ಪುನಸ್ಕಾರಗಳಾಗುತ್ತಿದ್ದ ಮನೆಗಳಲ್ಲಿ, ಇಂದು ಪ್ರವಾಸಿಗರಿಂದ ಎಣ್ಣೆಪಾರ್ಟಿಗಳು ನಡೆಯುತ್ತಿವೆ. ಕೊಡಗು, ಚಿಕ್ಕಮಗಳೂರು ಮುಂತಾದ ಕಡೆ ಸಾವಿರಾರು ಎಕರೆ ಜಮೀನುಗಳು ಈಗಾಗಲೇ ಪರಭಾರೆಯಾಗಿ, ರಾಜಕಾರಣಿಗಳ, ಉದ್ಯೋಗಪತಿಗಳ ಪಾಲಾಗಿ 'ರೆಸಾರ್ಟ್'ಗಳಾಗಿವೆ. ಅಳಿದುಳಿದ ಜಮೀನುಗಳೂ ಮಾರಾಟದ ವಿವಿಧ ಹಂತಗಳಲ್ಲಿವೆ. ಶಿವಮೊಗ್ಗ, ಉತ್ತರಕನ್ನಡ, ದಕ್ಷಿಣಕನ್ನಡ ಜಿಲ್ಲೆಗಳೂ ಇದಕ್ಕೆ ಹೊರತಾಗಿಲ್ಲ.

ಬೇಕಾದಷ್ಟು ದುಡ್ಡಿರುವುದರಿಂದ, ಯಾವ ಬೆಲೆಗಾದರೂ ಸರಿ ಕೃಷಿ ಜಮೀನನ್ನು ಖರೀದಿಸಲು ತಯಾರಿರುವ ಮಂದಿ ಸಾಕಷ್ಟಿದ್ದಾರೆ. ಹಳ್ಳಿಗರ ಇಂದಿನ ಅನಿವಾರ್ಯತೆಗಳನ್ನು ಬಳಸಿಕೊಂಡು, ಅವರ ಜಮೀನನ್ನು ಕೈತಪ್ಪಿಸುವ ಕೆಲಸ ಸತತವಾಗಿ ನಡೆಯುತ್ತಿದೆ. ಭೂಮಿ ಎನ್ನುವುದು ಬೆಳೆಯುವುದಿಲ್ಲ, ಅದು ಇದ್ದಷ್ಟೇ ಇರುವ ವಸ್ತುವಾಗಿದೆ. ಹಾಗಾಗಿಯೇ, ನಮಗಾಗಿ ನಮ್ಮ ಹಿರಿಯರು ಮಾಡಿಟ್ಟ ಮಣ್ಣನ್ನು ಉಳಿಸಿಕೊಳ್ಳುವಲ್ಲಿ ಸರ್ವಪ್ರಯತ್ನ ಮಾಡಬೇಕಿದೆ. ಒಮ್ಮೆ ಮಾರಾಟವಾದ ನಮ್ಮ ಜಮೀನು, ನಾಳೆ ಕೊಳ್ಳಲು ಬೇಕಾದಷ್ಟು ಹಣ ನಮ್ಮ ಬಳಿ ಬಂದರೂ, ಜಮೀನು ಮತ್ತೆ ನಮಗೆ ಯಾವ ಕಾರಣಕ್ಕೂ ಮರಳಿ ಸಿಗುವುದಿಲ್ಲ. ಜಮೀನನ್ನು ಬಳಸಲು ಇಂದು ನಿಮಗೆ ಸಾಧ್ಯವಾಗದಿರಬಹುದು; ಆದರೆ ಮುಂದೊಂದು ದಿನ, ಪಟ್ಟಣಗಳು 'ನೀವು ಹೋಗಿ' ಎನ್ನುವ ಸಮಯ ಬಂದಾಗ, ನಾವು ಅಥವಾ ನಮ್ಮ ಮುಂದಿನ ತಲೆಮಾರು ಮರಳಿ ಮಣ್ಣಿನೆಡೆಗೆ ಹೊರಳಬೇಕಾದಾಗ, ನಮ್ಮದು ಅಂತ ಉಳಿಯುವುದು ಈ ಪಿತ್ರಾರ್ಜಿತ ಭೂಮಿ ಮಾತ್ರ. ಅದುವೇ ಶಾಶ್ವತ. ಅಲ್ಲಿರುವುದು ಮಾತ್ರವೇ ನಮ್ಮನೆ, ಇಲ್ಲಿಗೆ ಬಂದಿದ್ದು ಸುಮ್ಮನೆ ಎನ್ನುವುದನ್ನು ನಾವು ಅರಿತರೆ ಒಳಿತು.

ಹಾಗಾಗಿ, ಇಂದು ನಮ್ಮ ಅಗತ್ಯ ಅನಿವಾರ್ಯತೆಗಳಿಗಾಗಿ ಮಾರಾಟಕ್ಕೆ ಇಟ್ಟಿದ್ದು ಬರೇ ಭೂಮಿಯನ್ನಲ್ಲ, ನಮ್ಮ ಪುರಾತನತೆಯನ್ನು, ನಮಗುಣಿಸಿದ ಪರಂಪರೆಯ ಕೈಯನ್ನು, ನಮ್ಮ ಹಿರಿಯರ ನಂಬಿಕೆಯನ್ನು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ತಾಯಿಬೇರನ್ನು ಎನ್ನುವುದನ್ನು ನೆನಪಿನಲ್ಲಿಡಬೇಕಾಗಿದೆ. ನಾಳೆ ನಮ್ಮ ಮುಂದಿನ ತಲೆಮಾರು ಶಪಿಸುವುದನ್ನು ತಪ್ಪಿಸಿಕೊಳ್ಳಬೇಕಾದರೆ, ನಾವು ಶತಾಯಗತಾಯ, ನಮ್ಮ ಪೂರ್ವಿಕರ ಬೆವರು ತಾಕಿದ ಭೂಮಿಯನ್ನು ಉಳಿಸಿಕೊಳ್ಳುವಲ್ಲಿ ಶ್ರಮವಹಿಸಬೇಕಾಗಿದೆ ಎನ್ನುವುದು ಈ ಅಂಕಣಬರಹದ ಆಶಯ. ನಮ್ಮ ಊರು ನಮ್ಮ ಹೆಮ್ಮೆಯಾಗಿ ಉಳಿಯಬೇಕಾದರೆ, ನಮ್ಮ ಭೂಮಿ ನಮ್ಮಲ್ಲಿ ಉಳಿಯಬೇಕಾಗಿದೆ.

ಪ್ರಜ್ವಲ್ ರೇಪಣ್ಣ: ಆಸನದ ಗೌಡ್ರು

ಸಿನಿಗನ್ನಡ

ಇತ್ತೀಚೆಗೆ ಪ್ಯಾನ್ ಇಂಡಿಯಾ ಸಿನಿಮಾಗಳು ಹೆಚ್ಚಾಗಿ ರಿಮೇಕ್ ಸಿನಿಮಾಗಳ ಹಾವಳಿ ಕೊಂಚ ಕಡಿಮೆ ಆದಂತಿತ್ತು. ಆದರೆ ಅದು ಅಷ್ಟು ಸುಲಭವಾಗಿ ಹೋಗುವ ಚಾಳಿ ಅಲ್ಲ ಅನ್ನೋದು ಮತ್ತೆ ಪ್ರೂವ್ ಆಗ್ತಾ ಇದೆ. ಕನ್ನಡ ಸಿನಿಮಾಗಳು 'ಬಿಫೋರ್ ಕೆಜಿಎಫ್, ಆಫ್ಟರ್ ಕೆಜಿಎಫ್' ಅನ್ನೋ ಹೊಸ ಚಾಪ್ಟರ್ ತೆರೆಯುತ್ತಿವೆ ಎಂದು ಕನಸು ಕಾಣುತ್ತಿದ್ದವರಿಗೆ ಈ ರಿಮೇಕ್ ಹಾವಳಿ ನೋಡಿ ಬೇಸರವಾಗಿದೆ. ಕನ್ನಡ ಸಿನಿಮಾಪ್ರಿಯರ ಇಂಥ ಕನಸಿಗೆ ಇತ್ತೀಚೆಗೆ ಭಂಗ ತಂದಿದ್ದು ನಮ್ಮದೇ ಕನಸುಗಾರ ರವಿ ಚಂದ್ರನ್. ಮಲಯಾಳಂನ 'ಜೋಸೆಫ್' ಚಿತ್ರವನ್ನು ಕನ್ನಡದಲ್ಲಿ 'ರವಿ ಬೋಪಣ್ಣ' ಆಗಿಸಿದ್ದ ರವಿಚಂದ್ರನ್ ಅವರ ಈ ಸಿನಿಮಾ ನೋಡಿ, 'ನಮ್ಮ ಶೋಮ್ಯಾನ್ ಹಿಂಗ್ಯಾಕಾದ್ರು?' ಅಂತ ಅನೇಕರು ಮುಖ ಸಿಂಡರಿಸಿಕೊಂಡಿದ್ದರು.

ತುಂಟರಗಾಳಿ

ಹರಿ ಪರಾಕ್
vveditoped@gmail.com

ಅದ್ಯಾವ ಲೆವೆಲ್ಲಿಗೆ ಈ ಸಿನಿಮಾದಲ್ಲಿ ಬದಲಾವಣೆಯಾಗಿತ್ತು ಅಂದ್ರೆ ಚಿತ್ರವನ್ನು ಕನ್ನಡದ ನೇಟಿವಿಟಿಗೆ ತಕ್ಕಂತೆ ಅಲ್ಲದೆ, ತಮ್ಮ ನಾಟಿತನಕ್ಕೆ ತಕ್ಕಂತೆ ರವಿಚಂದ್ರನ್ ಬದಲಾವಣೆ ಮಾಡಿಕೊಂಡಿದ್ರು. ಆದರೂ ಆ ಸಿನಿಮಾ ಇನ್ನಿಲ್ಲದಂತೆ ಸೋತ ನಂತರ ಮತ್ತೊಂದು ರಿಮೇಕ್ ಸಿನಿಮಾ ಬಂದಿತ್ತು. ಅದು ಡಾಲಿ ಧನಂಜಯ ಅವರ 'ಮಾನ್ಸೂನ್ ರಾಗ' ಸಿನಿಮಾ. ಈ ಸಿನಿಮಾದ ಬಗ್ಗೆ ಪ್ರೇಕ್ಷಕ ಒಳ್ಳೆಯ ಮಾತೇ ಹೇಳಿದರೂ ಅವರ ಅಸಮಾಧಾನಕ್ಕೆ ಕಾರಣ ಅಂದ್ರೆ ಚಿತ್ರತಂಡ ಸಿನಿಮಾ ಬಿಡುಗಡೆಗೆ ಮುನ್ನ ಇದು ರಿಮೇಕ್ ಅಂತ ಎಲ್ಲೂ ಹೇಳದೇ ಇದ್ದಿದ್ದು. ತೆಲುಗು ಸಿನಿಮಾ ಒಂದನ್ನು ಕಾಪಿ ಮಾಡಿದ್ದ 'ಮಾನ್ಸೂನ್ ರಾಗ' ಸಿನಿಮಾ ತಂಡ ಹೀಗೆ ಮಾಡಿದ್ದು ಯಾಕೆ ಅಂತ ಎಲ್ಲರಿಗೂ ಆಶ್ಚರ್ಯ. ಸಾಮಾನ್ಯವಾಗಿ ಹಕ್ಕು ತೆಗೆದುಕೊಂಡು ರಿಮೇಕ್ ಮಾಡುವವರು ಒಂದು ಕಡೆ ಆದ್ರೆ, ಕದ್ದು ರಿಮೇಕ್ ಮಾಡೋರು ಇನ್ನೊಂದು ಕಡೆ. ಆದರೆ ಈ ಸಿನಿಮಾ ನೋಡಿದವರಿಗೆ ಇದು ಹಕ್ಕುಗಳನ್ನು ಖರೀದಿಸಿಯೇ ಮಾಡಿರೋ ಸಿನಿಮಾ ಅಂತ ಗೊತ್ತಾಗುತ್ತೆ. ಆದ್ರೆ ಸಿನಿಮಾ ತಂಡ ಈ ಸತ್ಯವನ್ನು ಬಚ್ಚಿಟ್ಟಿದ್ದು ಮಾತ್ರ ಯಾವ ಪುರುಷಾರ್ಥಕ್ಕೆ ಅನ್ನೋದು ಯಾರಿಗೂ ಅರ್ಥ ಆಗ್ತಿಲ್ಲ. ಈಗಲೂ ಕದ್ದು ಮುಚ್ಚಿ ಆದ್ರೂ, ರಿಮೇಕ್ ಹಾವಳಿ ಇನ್ನೂ ಜೀವಂತ ಇದೆ. ಆದರೆ ಅವ್ಯಾವುವೂ ದೊಡ್ಡ ಸಿನಿಮಾಗಳಲ್ಲ ಅನ್ನೋದು ಸಮಾಧಾನ.

ಲೂಸ್ ಟಾಕ್ ▸▸ ಪ್ರಜ್ವಲ್ ರೇವಣ್ಣ

- **ಹಲೋ, ನಮಸ್ಕಾರ, ಏನ್ ಸಮಾಚಾರ ಪ್ರಜ್ವಲ್ ರೇಪಣ್ಣ ಅವ್ರೇ?... ಸಾರಿ, ರೇವಣ್ಣ ಅವ್ರೇ**
- ಹುಷಾರು ಕಣ್ರೀ, ತಪ್ಪು ಮಾಡಿ ಸಾರಿ ಕೇಳಿದ್ರೆ, ಕೋರ್ಟ್ ಸುಮ್ನೆ ಬಿಡಲ್ಲ, ಶಿಕ್ಷೆ ಕೊಟ್ಟೇ ಕೊಡುತ್ತೆ.
- **ಅದ್ ನಿಜ, ಆದ್ರೆ ನೀವೇನ್ ತೀರಾ ಮನೆ ಅಡುಗೆ ಕೆಲಸದವಳನ್ನೂ ಬಿಟ್ಟಿಲ್ಲವಂತಲ್ಲ?**
- ಏನ್ ಮಾಡೋದು, ಹೊಸರುಚಿ ನೋಡೋಣ ಅಂತ ಹೋದೆ.
- **ಒಬ್ಬ ಸಂಸದ ಆಗಿ ಇಂಥ ಕೆಲಸನಾ ನೀವು ಮಾಡೋದು?**
- ಏನ್ ಮಾಡೋದು some-ಸಲ ಹಿಂಗಾಗಿಬಿಡುತ್ತೆ.
- **ಓಹೋ, ಬೇಕಿತ್ತಾ, ಅಂತೂ ತಾತನ ಹೆಸರು ಹಾಳು ಮಾಡಿಬಿಟ್ರಲ್ಲ?**
- ನಾನೆಲ್ಲಿ ಹಾಳು ಮಾಡಿದೆ. ಅವರು 'ಹಾಸನ'ದ ಗೌಡ್ರು ಅಂತ ಹೆಸರು ಮಾಡಿದ್ರು, ನಾನು 'ಆಸನ'ದ ಗೌಡ ಅಂತ ಹೆಸರು ಮಾಡಿದೆ.
- **ಅಂತೂ ಇಂತೂ ಕೃಷ್ಣ ಜನ್ಮಸ್ಥಾನಕ್ಕೆ ಸೇರೋ ಕಾಲ ಬಂತು ಅನ್ನಿ..**
- ಆ ಕೃಷ್ಣ ಜೈಲಲ್ಲಿ ಹುಟ್ಟಿ ಆಮೇಲೆ ಹೊರಗೆ ಬಂದು ಕೃಷ್ಣಲೀಲೆ ತೋರಿಸಿದ. ನಾನು ಕೃಷ್ಣಲೀಲೆ ತೋರಿಸಿ ಜೈಲಿಗೆ ಬಂದೆ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮುಗೆ ಯಾವಾಗ್ಲೂ ಇನ್ನೊಬ್ಬರನ್ನು ಹೀಯಾಳಿಸಿ ಮಾತಾಡೋದು ಅಭ್ಯಾಸ ಆಗಿತ್ತು. ಮನೆಯಲ್ಲಿ ಹೆಂಡತಿ ಏನೇ ಹೇಳಿದ್ರೂ, ಅವಳ ಮಾತಿಗೆ ಮರ್ಯಾದೆ ಕೊಡದೆ 'ಮೈ ಫುಟ್' ಅಂತಿದ್ದ. ಆಫೀಸಿನಲ್ಲೂ, ಯಾರು ಏನ್ ಒಳ್ಳೆ ಕೆಲಸ ಮಾಡಿದ್ರೂ, ಅದನ್ನು ಇನ್ನೊಬ್ಬರು ಯಾರಾದ್ರೂ, ಹೊಗಳಿದ್ರೆ ಸಾಕು, 'ಅಯ್ಯೋ, ಅದೇನ್ ಮಹಾ, ಮೈ ಫುಟ್' ಅಂತಲೇ ಮಾತು ಶುರುಮಾಡ್ತಾ ಇದ್ದ. ಹಾಗಾಗಿ ಖೇಮು ಕಂಡ್ರೆ ಆಫೀಸಿನಲ್ಲಿ ಯಾರಿಗೂ ಇಷ್ಟ ಇರಲಿಲ್ಲ. ಆದರೆ ಅವನ ಬಾಯಿ ಮುಚ್ಚಿಸೋಕಾಗದೆ ಒಳಗೊಳಗೇ ಬಯ್ಕೊಂಡು ಸುಮ್ನೆ ಇರ್ತಿದ್ರು. ಒಂದು ದಿನ ಆಫೀಸಿನಲ್ಲಿ ಖೇಮು ಸಹೋದ್ಯೋಗಿಯಾಗಿದ್ದ ಸೋಮು ಬೆಳಗ್ಗೆನೇ ಬಂದವನು ಎಲ್ಲರಿಗೂ 'ಇಲ್ಲಿ ನೋಡಿ' ಅಂತ ಒಂದು ಗಿಣಿ ತೋರಿಸುತ್ತಿದ್ದ. ಎಲ್ಲರೂ 'ಏನು ಈ ಗಿಣಿ ವಿಶೇಷ?' ಅಂತ ಕೇಳಿದ್ರು. ಅದಕ್ಕೆ ಸೋಮು 'ಇದು ಡೆಡ್ಲಿ ಗಿಣಿ, ಇದರ ಕರಾಮತ್ತು, ನೀವೇ ನೋಡಿ' ಅಂತ ಗಿಣಿಯನ್ನ ಟೇಬಲ್ ಮೇಲಿಟ್ಟು ಅದರ ಕಡೆ ನೋಡಿ, 'ಡೆಡ್ಲಿ ಗಿಣಿ, ಟೇಬಲ್' ಅಂದ. ಏನಾಶ್ಚರ್ಯ, ಗಿಣಿ ತನ್ನ ಕೊಕ್ಕಿನಿಂದ ಆ ಇಡೀ ಟೇಬಲ್ ಅನ್ನು ಕುಕ್ಕಿ ಕುಕ್ಕಿ ಎರಡೇ ಕ್ಷಣದಲ್ಲಿ ಪುಡಿ ಮಾಡಿಬಿಡ್ತು. ಎಲ್ಲರೂ ದಂಗು ಬಡಿದು ಹೋದರು. ಆಫೀಸಿನ ಜವಾನ 'ಡೆಡ್ಲಿ ಗಿಣಿ, ವಿಂಡೋ' ಅಂದ. ಗಿಣಿ ಒಂದೇ ಕ್ಷಣದಲ್ಲಿ ಇಡೀ ಕಿಟಕಿಯನ್ನು ಕುಕ್ಕಿ ಕುಕ್ಕಿ ಪುಡಿ ಮಾಡಿಬಿಡ್ತು. ಅಷ್ಟರಲ್ಲಿ ಖೇಮು ಆಫೀಸಿಗೆ ಬಂದ. ಎಲ್ಲರೂ ಸುತ್ತುವರಿದು ನಿಂತಿರೋದು ನೋಡಿ, 'ಏನ್ ನಡೀತಾ ಇದೆ ಇಲ್ಲಿ?' ಅಂತ ಕೇಳಿದ. ಅದಕ್ಕೆ ಒಬ್ಬ ಎಂಪ್ಲಾಯಿ, 'ಸರ್, ಇದು ಡೆಡ್ಲಿ ಗಿಣಿ' ಅಂದ. ಅದನ್ನು ಕೇಳಿದವನೇ ಖೇಮು ಎಂದಿನಂತೆ ಹೇಳಿದ 'ಡೆಡ್ಲಿ ಗಿಣಿ? ಮೈ ಫುಟ್'.

ಲೈನ್ ಮ್ಯಾನ್

- **ಮತ್ತೆ ಮತ್ತೆ ದೇಶದ್ರೋಹಿ ಕೆಲಸ ಮಾಡಲು 'ಪ್ರಯತ್ನ' ಮಾಡುವವನು**
- 'ಟ್ರೈ'ಟರ್
- **ಕರಾಟೆ ಕಲಿತ ಹುಡುಗಿ**
- ಹೊಡೆದಾಡುವಾ ಕಾಮನಬಿಲ್ಲು
- **ಎಣ್ಣೆ ಹೊಡೆಯುವ ಪಂಜಾಬಿ ಹುಡುಗಿ**
- ಪಂಜಾಬಿ 'ಕುಡಿ'
- **ದುಬೈನಲ್ಲಿ ಹಾಲು ಮಾರೋನು**
- ಮಿಲ್ಕ್ 'ಶೇಕ್'
- **ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್‌ಗಳನ್ನು ಹೆಚ್ಚಾಗಿ ಉಪಯೋಗಿಸುವ ದೇಶ**
- 'ಉಜ್ಜೇ'ಕಿಸ್ತಾನ್
- **ಟ್ರಾಫಿಕ್ ಅತಿರೇಕ**
- ಹಂಪ್ ಅಡ್ಡ ಬಂದ್ರೂ ಹಾರ್ನ್ ಮಾಡೋದು
- **ಸಣ್ಣ ಪುಟ್ಟ ಸಾಲ ಕೊಡುವ ಕೆಲಸ ಮಾಡುವವನ ಮಾತು**
- ಕಾಯಕವೇ ಕೈಸಾಲ
- **ಹಳಸಿದ ಆಹಾರ ತಿಂದು ಗಟ್ಟಿಮುಟ್ಟಾಗಿರುವವನ ಮಾತು**
- 'ಬೂಸ್ಟ್' ಈಸ್ ದ ಸೀಕ್ರೆಟ್ ಆಫ್ ಮೈ ಎನರ್ಜಿ
- **ಪ್ರಾಣಿಗಳು ಯಾರನ್ನಾದರೂ ಕೊಂದರೆ ಅವುಗಳನ್ನೇಕೆ ಜೈಲಿಗೆ ಹಾಕಲ್ಲ?**
- ಯಾಕಂದ್ರೆ ಅವು 'ಬಾಲಾ'ಪರಾಧಿಗಳು
- **ಗಾಂಧಾರಿಗೆ ನೂರು ಮಕ್ಕಳಾದಾಗ ಆಗಿದ್ದು**
- 'ಬಸಿರು' ಕ್ರಾಂತಿ

ಕ್ಲೈಮ್ಯಾಕ್ಸ್‌ಗೆ ಕಾಲಿಟ್ಟಿತು ಕಳ್ಳಬೆಕ್ಕಿನ ಕಥನ...

ರಸದೌತಣ

ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ವಿದ್ಯಾರ್ಥಿನಿಲಯದ ಅಡುಗೆ ಭಟ್ಟ 'ನಳಪಾಕ'ನನ್ನು ಕೆಲಸದಿಂದ ತೆಗೆಯಲಾಗಿದೆ ಎಂಬ ವರ್ತಮಾನವನ್ನು ಮೊಬೈಲ್ ಫೋನಿನ ಮೂಲಕ ಸ್ವತಃ ಅವನ ಬಾಯಿಂದಲೇ ಕೇಳಿದ ಶಿಷ್ಯರು ನಿಜಕ್ಕೂ ಅಪ್ರತಿಭರಾಗಿದ್ದರು. ಕಾರಣ, ಒಂದು ಸ್ಥಾಪಿತ ವ್ಯವಸ್ಥೆಯೊಳಗೆ ಏನಾದರೊಂದು 'ಮಹತ್ಕಾರ್ಯ' ನಡೆದು ಪ್ರಸಿದ್ಧಿ ಒದಗಿದಾಗ ಅದರ ಶ್ರೇಯವನ್ನು ತಮ್ಮದಾಗಿಸಿಕೊಳ್ಳಲು 'ನಾ ಮುಂದು, ತಾ ಮುಂದು' ಎಂಬ ರೀತಿಯಲ್ಲಿ ಆ ವ್ಯವಸ್ಥೆಯ ಸಹಭಾಗಿಗಳು ಹಾತೊರೆಯುವುದುಂಟು. ಕೆಲವೊಮ್ಮೆಯಂತೂ, ಆ 'ಮಹತ್ಕಾರ್ಯ'ದ ಹತ್ತಿರ ಹತ್ತಿರಕ್ಕೂ ಸುಳಿಯದವರು, 'ನಮ್ಮದೂ ಒಂದು ಕೈ ಇರಲಿ' ಎನ್ನುವಂತೆ ಆ ಪ್ರಸಿದ್ಧಿಯಲ್ಲಿ ಪಾಲು ತೆಗೆದುಕೊಳ್ಳಲು ಕೈಚಾಚುವುದುಂಟು. ಇದು ಈ ವ್ಯಾವಹಾರಿಕ ಜಗತ್ತಿನಲ್ಲಿ ಕಾಣಬರುವ 'ಸ್ವಾರ್ಥಲೇಪಿತ' ನಡೆಯೇ ಸರಿ. ಆದರಿಲ್ಲಿ ಶಾರದೆಯ ಕಥಾನಕದಲ್ಲಿ ಜರುಗಿರುವುದು ಯಾವುದೇ 'ಮಹತ್ಕಾರ್ಯ'ವಲ್ಲ, ಇಲ್ಲಿ ಆಗಿರುವುದು ಒಂದು 'ಅಸಹಜ ಎಡವಟ್ಟು'! ಇಷ್ಟಾಗಿಯೂ, ಒಂದಿಷ್ಟು ಮಂದಿ ಒಬ್ಬರಾದ ಮೇಲೆ ಒಬ್ಬರಂತೆ ತಾವಾಗಿಯೇ ಮುಂದೆ ಬಂದು ಇಲ್ಲವೇ ಫೋನ್ ಕರೆ ಮಾಡಿ, ತಮ್ಮ ಕಡೆಯಿಂದ ಆಗಿರಬಹುದಾದ ತಪ್ಪನ್ನು ಒಪ್ಪಿಕೊಳ್ಳಲು ಹೀಗೆ ಹಾತೊರೆಯುತ್ತಿರುವುದೇಕೆ? ಅದಕ್ಕೆ ಕಾರಣವಾಗಿರುವ ಶಕ್ತಿಯಾದರೂ ಯಾವುದು? ಎಂದು ಶಿಷ್ಯರು ತಮ್ಮತಮ್ಮಲ್ಲೇ ಪ್ರಶ್ನಿಸಿಕೊಳ್ಳುತ್ತಿದ್ದರು...

''ನಿಮ್ಮ ಮನಸ್ಸಿನ ಗೊಂದಲ ನನಗರ್ಥವಾಯಿತು...'' ಎಂಬ ದನಿ ತೇಲಿಬಂದಾಗಲೇ ಶಿಷ್ಯರು ಕಲ್ಪನಾಲೋಕದಿಂದ ವಾಸ್ತವಕ್ಕೆ ಬಂದಿದ್ದು. ಆ ದನಿ ಅವಧೂತರದ್ದು. ಕೆಲ ಕ್ಷಣದ ಮುಂಚೆ ಶಿಷ್ಯರೆಡೆಗೆ ನೋಡುತ್ತಾ ''ಕಳ್ಳಬೆಕ್ಕಿನ ಬೇಟೆ ಎಂಬ ಲೀಗ್ ಮ್ಯಾಚ್‌ನಲ್ಲಿ ಮೊದಲ ವಿಕೆಟ್ ಬಿತ್ತು...'' ಎಂದು ಹೇಳಿ ಕಣ್ಣು ಮಿಟುಕಿಸಿದ್ದ ಅವಧೂತರು, ಶಿಷ್ಯರು ತಮ್ಮದೇ ಕಲ್ಪನಾಲೋಕದಲ್ಲಿ ವಿಹರಿಸುವುದಕ್ಕೆ ಅನುವುಮಾಡಿಕೊಟ್ಟಿದ್ದರು. ಶಿಷ್ಯರಲ್ಲಿನ 'ವಿಶ್ಲೇಷಣಾ' ಮತ್ತು 'ವಿಚಕ್ಷಣಾ' ಸಾಮರ್ಥ್ಯಗಳಿಗೆ ಸಾಣೆ ಹಿಡಿಯಲೆಂದು ಅವಧೂತರು ಆಗಾಗ ಹೀಗೆ ಪ್ರಾಯೋಗಿಕ ಪರೀಕ್ಷೆಗಳನ್ನು ಒಡ್ಡುವುದು ವಾಡಿಕೆಯಾಗಿತ್ತು. ಅಂತೆಯೇ, ತಮ್ಮದೇ ಆದ ಲೆಕ್ಕಾಚಾರಗಳಲ್ಲಿ ಮುಳುಗಿದ್ದ ಶಿಷ್ಯರನ್ನು ಉದ್ದೇಶಿಸಿ ಅವಧೂತರು, ''ಅಯ್ಯಾ, ನಿನ್ನೆಯ ಕಥನಭಾಗದಲ್ಲಿ ನಾನೊಂದು ಮಾತು ಹೇಳಿದ್ದೆ, ನೆನಪಿದೆಯೇ? 'ಸಂಕಷ್ಟಕ್ಕೆ ಸಿಲುಕಿದ ಆರ್ತಜೀವದ ಪ್ರಾರ್ಥನೆಯು ನಿಜಕ್ಕೂ ಪ್ರಾಮಾಣಿಕವಾಗಿದ್ದರೆ, ನೈತಿಕತೆಯ ಭಂಡಾರವನ್ನೇ ತುಂಬಿಕೊಂಡಿದ್ದರೆ, ಯಾವ ಗುರು ಅಥವಾ ದೇವರನ್ನು ಉದ್ದೇಶಿಸಿ ಅದರ ಸಲ್ಲಿಕೆಯಾಗಿರುತ್ತದೋ ಅಂಥ ಉದ್ದೇಶಿತ ದಿವ್ಯಶಕ್ತಿಗಳು ಆ ಪ್ರಾರ್ಥನೆಗೆ ಓಗೊಡುತ್ತವೆ. ಅದರ ಪರಿಣಾಮವಾಗಿ, ಸಂತ್ರಸ್ತರ ಸಂಕಟ-ಸಂಕಷ್ಟಗಳಿಗೆ ಕಾರಣರಾದವರೆಲ್ಲಾ ಆ ಪ್ರಕರಣದಲ್ಲಿ ಸಾಕ್ಷ್ಯ ಹೇಳುವುದಕ್ಕೆ ಬರಬೇಕಾಗುತ್ತದೆ' ಎಂದು ನಿನ್ನೆ ನಾನು ನಿಮಗೆ ಹೇಳಿದ್ದೆ, ಅಲ್ಲವೇ? ಅಂತೆಯೇ, ಹತಭಾಗ್ಯೆ ಶಾರದೆಯ ಕಥನದಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಪಾತ್ರಧಾರಿಗಳಾಗಿರುವ ಸಂಸ್ಥೆಯ ಮ್ಯಾನೇಜರ್, ಮಠದ ಸ್ವಾಮೀಜಿ, ಪಟ್ಟಣದ ಪ್ರಭಾವಿ ರಾಜಕಾರಣಿ, ಸರ್ಕಲ್ ಇನ್ಸ್‌ಪೆಕ್ಟರ್, ಅಡುಗೆಭಟ್ಟ 'ನಳಪಾಕ' ಮುಂತಾದ ಪಾತ್ರಗಳನ್ನೆಲ್ಲಾ ಆ ದೈವನಿರ್ಮಿತ ಅಗೋಚರ ನ್ಯಾಯಾಲಯವೇ ಹೀಗೆ 'ಸಾಕ್ಷ್ಯ ಹೇಳಲು' ಕರೆಸಿಕೊಳ್ಳುತ್ತಿದೆ ಕಣ್ರಯ್ಯಾ...'' ಎಂದು ಹೇಳಿ ನಕ್ಕರು.

ಈ ಮಾತಿಗೆ ಶಿಷ್ಯರಲ್ಲೊಬ್ಬರು ಕುತೂಹಲಭರಿತರಾಗಿ, ''ಆದರೆ ಗುರುಗಳೇ, ನೀವೇ ಉಲ್ಲೇಖಿಸಿದಂತೆ ಶಾರದೆಯ ವಿಷಯದಲ್ಲಿ ಅಸಭ್ಯವಾಗಿ ನಡೆದುಕೊಂಡಿದ್ದು, ಆಕೆಯನ್ನು ಅನೈತಿಕ ಕಾರ್ಯಕ್ಕೆ ಎಳೆಯಲು ಯತ್ನಿಸಿದ್ದು 'ಒಬ್ಬ ವ್ಯಕ್ತಿ' ಮಾತ್ರವೇ. ಕಥನಕ್ರಮದಲ್ಲಿ ನೀವೇ ಹೇಳುತ್ತಾ ಹೋದಂತೆ, ಸಂಸ್ಥೆಯ ಆವರಣದಲ್ಲಿ ಸೇರಿಕೊಂಡಿರುವ ಈ 'ಕಳ್ಳಬೆಕ್ಕನ್ನು' ಓಡಿಸಿಬಿಟ್ಟರೆ, ಅಲ್ಲಿ ಆವರಿಸಿಕೊಂಡಿರುವ ನಕಾರಾತ್ಮಕ ಛಾಯೆ ನಿವಾರಣೆಯಾಗುವುದರ ಜತೆಜತೆಗೆ, ಸಂತ್ರಸ್ತೆ ಶಾರದೆಗೆ ನ್ಯಾಯವೂ ಸಿಗಬೇಕಾದ್ದು ಕ್ರಮ. ಅಂದರೆ, ಅನೈತಿಕ ಕಾರ್ಯಕ್ಕೆ ಮುಂದಾದ ಕಳ್ಳಬೆಕ್ಕಿನಲ್ಲಿ ಮಾತ್ರವೇ ತಪ್ಪಿತಸ್ಥ ಭಾವನೆಯಿರಬೇಕು ಮತ್ತು ಅದು ಮಾತ್ರವೇ ಶಿಕ್ಷೆಗೆ ಕೊರಳೊಡ್ಡಬೇಕು, ಅಲ್ಲವೇ? ಆದರೆ ಈ ಪ್ರಸಂಗದಲ್ಲಿ ಸಂಸ್ಥೆಯ ಮ್ಯಾನೇಜರ್, ಮಠದ ಸ್ವಾಮೀಜಿ, ಪಟ್ಟಣದ ರಾಜಕಾರಣಿ, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ವಿದ್ಯಾರ್ಥಿನಿಲಯದ ಅಡುಗೆಭಟ್ಟ ಇಷ್ಟೂ ಮಂದಿ ಪೈಪೋಟಿಗೆ ಬಿದ್ದವರಂತೆ ಹೀಗೆ ನಿಮ್ಮಲ್ಲಿ ಅಹವಾಲು ಸಲ್ಲಿಸಿ ತಪ್ಪನ್ನು ಒಪ್ಪಿಕೊಳ್ಳುತ್ತಿರುವುದೇಕೆ? ಅಲ್ಲಿಗೆ, ಒಂದು 'ಕಳ್ಳಬೆಕ್ಕು' ಶುರುಹಚ್ಚಿಕೊಂಡ ಅನೈತಿಕ ಕಾರ್ಯವನ್ನು ಇವರೆಲ್ಲ ಮುಂದುವರಿಸಿದರು ಎಂದು ಭಾವಿಸಬೇಕೇ? ಒಂದೊಮ್ಮೆ ಹಾಗಿದ್ದರೆ, ಸಂಸ್ಥೆಯ ಆವರಣದಲ್ಲಿ ತೂರಿಕೊಂಡಿರುವ ಕಳ್ಳಬೆಕ್ಕು ಒಂದಲ್ಲ, ಹಲವಾರು ಎಂದಾಯಿತಲ್ಲಾ ಗುರುಗಳೇ? ಅಲ್ಲಿಗೆ ಯಾವ್ಯಾವ ಕಳ್ಳಬೆಕ್ಕನ್ನು ತೊಲಗಿಸಿ ಸಂಸ್ಥೆಯ ಆವರಣವನ್ನು ಚೊಕ್ಕಗೊಳಿಸಬೇಕಾಗುತ್ತೆ? ಅಥವಾ ಮತ್ತೊಂದು ಕೋನದಲ್ಲಿ ವಿಶ್ಲೇಷಿಸಿದರೆ, ನೋಡನೋಡುತ್ತಿದ್ದಂತೆಯೇ ಅಡುಗೆಭಟ್ಟ 'ನಳಪಾಕ'ನನ್ನು ಈಗ ಕೆಲಸದಿಂದ ತೆಗೆದುಹಾಕಲಾಗಿದೆ ಎಂದರೆ, ಅಮಾಯಕಿ ಶಾರದೆಯನ್ನು ತನಗೆ ಆಹಾರವಾಗಬಲ್ಲ ಹಸಿಮಾಂಸ ಎಂದು ಭಾವಿಸಿ ಮೇಲೆರಗಲು ಹವಣಿಸಿದ ರಣಹದ್ದು ಈ 'ನಳಪಾಕ'ನೇ, ಆ ಕಾರಣಕ್ಕೇ ಅವನ ಕೆಲಸ ಹೋಯಿತು ಎಂದು ನಾವು ಲೆಕ್ಕಿಸಬೇಕೇ?'' ಎಂದು ಪ್ರಶ್ನೆಗಳ ಸರಮಾಲೆಯನ್ನೇ ಅವಧೂತರ ಕೊರಳಿಗೆ ಹಾಕಿಬಿಟ್ಟರು!

ಭಾಗ-12

ಶಿಷ್ಯರೊಬ್ಬರು ತಮ್ಮ 'ವಿಶ್ಲೇಷಣಾ' ಮತ್ತು 'ವಿಚಕ್ಷಣಾ' ಸಾಮರ್ಥ್ಯಗಳಿಗೆ ಸಮರ್ಥವಾಗೇ ಸಾಣೆ ಹಿಡಿದುಕೊಂಡಿದ್ದಾರೆ ಎಂಬುದು ಅವಧೂತರಿಗೆ ಖಾತ್ರಿಯಾಯಿತು. ಆ ಸಂತಸ ಮತ್ತು ಸಮಾಧಾನದಲ್ಲೇ ಅವರ ಬೆನ್ನು ತಟ್ಟಿದ ಅವಧೂತರು, ''ಭೇಷ್, ದಿನಗಳೆದಂತೆ ನಿಮ್ಮಲ್ಲಿ ಶ್ರದ್ಧೆ, ಏಕಾಗ್ರತೆ ಕೆನೆಗಟ್ಟುತ್ತಿವೆ. ಶಾರದೆಯ ಕಥಾಶ್ರವಣದಲ್ಲಿ ನೀವು ಇಷ್ಟು ಆಳಕ್ಕಿಳಿದಿರುವುದೇ ಇದಕ್ಕೆ ಸಾಕ್ಷಿ. ನಾನು ಮೊದಲೇ ಹೇಳಿದಂತೆ, ಗುರುಗಳು ನೀಡಿದ ಸೂಚನೆಯನ್ನು ಚಾಚೂತಪ್ಪದೆ ಅನುಸರಿಸುವ ವಿನಯವನ್ನು ರೂಢಿಸಿಕೊಳ್ಳಬೇಕಾದ್ದು ಶಿಷ್ಯರ ಧರ್ಮ; ಹಾಗಂತ ಅದು ಹೇಳಿದ್ದಕ್ಕೆಲ್ಲಾ ಗೋಣುಹಾಕಿ, ಕತ್ತುಬಗ್ಗಿಸಿಕೊಂಡು ಹಿಂಬಾಲಿಸುವ 'ಕುರಿಮಂದೆ'ಯ ಚಿತ್ತಸ್ಥಿತಿ ಆಗಬಾರದು. ವಿನಯಕ್ಕೂ, ಕುರಿಮಂದೆಯ ಚಿತ್ತಸ್ಥಿತಿಗೂ ನಡುವೆ ಒಂದು ತೆಳುವಾದ ಗೆರೆಯಿದೆ, ಅದನ್ನು ಅರಿತು ಗುರುತಿಸಿದವನೇ ಜಾಣ. ಇದೇ ರೀತಿಯಲ್ಲಿ, ಗುರುವಿನ ಆದೇಶವನ್ನು ಪಾಲಿಸದೆಯೇ 'ಎದುರು ಜವಾಬು' ನೀಡುವುದು ಶಿಷ್ಯನ 'ಧಾರ್ಷ್ಟ್ಯ' ಎನಿಸಿಕೊಳ್ಳುತ್ತದೆ; ಆದರೆ, ಜಿಜ್ಞಾಸೆ ತಲೆದೋರಿದಾಗೆಲ್ಲಾ ಹೀಗೆ ಪ್ರಶ್ನಿಸಿ ಅದನ್ನು ಬಗೆಹರಿಸಿಕೊಳ್ಳುವ 'ಧೈರ್ಯ'ವೂ ಶಿಷ್ಯನಲ್ಲಿ ಮನೆಮಾಡಿರಬೇಕು. ಇಲ್ಲೂ ಅಷ್ಟೇ, 'ಧಾರ್ಷ್ಟ್ಯ'ಕ್ಕೂ, 'ಧೈರ್ಯ'ಕ್ಕೂ ನಡುವೆ ಒಂದು ತೆಳುವಾದ ಗೆರೆಯಿದೆ, ಅದನ್ನು ಗುರುತಿಸಿದವನೂ ಜಾಣ ಎನಿಸಿಕೊಳ್ಳುತ್ತಾನೆ. ಈ 'ವಿನಯ' ಮತ್ತು 'ಧೈರ್ಯ'ವನ್ನು ನೀವು ಐಹಿಕ ಪ್ರಪಂಚದಲ್ಲಿ ಮಾತ್ರವಲ್ಲದೆ, ಆಧ್ಯಾತ್ಮಿಕ ಸಾಧನಾ ಪ್ರಪಂಚದಲ್ಲೂ ಹದವರಿತು, ವಿವೇಚನೆಯೊಂದಿಗೆ ಬಳಸಬೇಕು. ಈ ಮಾತನ್ನ ಪಾಲಿಸ್ತೀರಾ ಸ್ವಾಮೀ..?'' ಎನ್ನುತ್ತಾ ಆ ಶಿಷ್ಯರ ತಲೆಯ ಮೇಲೆ ಒಮ್ಮೆ ಕೈಯಾಡಿಸಿದರು. ಅಷ್ಟೇ! ಆ ಶಿಷ್ಯರ ಕಂಗಳಿಂದ ದಳದಳನೆ ನೀರು ಸುರಿಯಲು ಆರಂಭಿಸಿತು. ಅದು ಮಾಮೂಲಿ ಕಣ್ಣೀರಲ್ಲ, ಧನ್ಯತಾಭಾವದಿಂದ ಉಕ್ಕಿದ ಚೈತನ್ಯ-ಚಿಲುಮೆ...

ಈಗ, ಅವಧೂತರು ಮತ್ತು ಶಿಷ್ಯರ ನಡುವೆ ಕೆಲಕ್ಷಣ ಮೌನಸಾಮ್ರಾಜ್ಯದ್ದೇ ದರ್ಬಾರು. ಕಾರಣ, ಅವಧೂತರು ಒಬ್ಬ ಶಿಷ್ಯನನ್ನು ಉದ್ದೇಶಿಸಿ ಆ ಮಾತುಗಳನ್ನು ಹೇಳಿದ್ದರೂ ಅದೊಂದು 'ಸರ್ವಾನ್ವಯಿ' ಮಾರ್ಗದರ್ಶನವಾಗಿತ್ತು, ದಿವ್ಯಸಂದೇಶವಾಗಿತ್ತು. ಶಿಷ್ಯರೆಲ್ಲಾ ಕಣ್ಣು ಮುಚ್ಚಿಕೊಂಡು ಅದನ್ನು ಮನದಾಳಕ್ಕೆ ಇಳಿಸಿಕೊಳ್ಳುತ್ತಿದ್ದರು. ಅದೊಂದು ರೀತಿಯ ಅನುಪಮ ಅನುಸಂಧಾನ. ಮನದ ವಾತಾವರಣದಲ್ಲಿ ಸಂಕ್ಷೋಭೆ ತಗ್ಗಿ, ಮೌನ ಮತ್ತು ಪ್ರಶಾಂತತೆ ಆವರಿಸಿದಾಗಲೇ ತಾನೇ ಅಲ್ಲಿ ದಿವ್ಯಜ್ಯೋತಿ ಠಿಕಾಣಿ ಹೂಡುವುದಕ್ಕೆ ಸಾಧ್ಯವಾಗೋದು? ಅಂಥ ಅನುಭೂತಿಯಲ್ಲಿ ಶಿಷ್ಯರು ವಿಹರಿಸುತ್ತಿದ್ದರು...

ಕೆಲ ಕ್ಷಣದ ನಂತರ ಅವಧೂತರು ಗಂಟಲು ಸರಿಮಾಡಿಕೊಂಡರು. ಅದು, ಆ ಶಿಷ್ಯರು ಎತ್ತಿದ ಪ್ರಶ್ನೆಗಳಿಗೆ ಉತ್ತರಿಸುವ ಸಂದರ್ಭ ಬಂತು ಎಂಬುದರ ಸೂಚಕವಾಗಿತ್ತು. ಹೀಗಾಗಿ ಕಣ್ಣು ತೆರೆದ ಶಿಷ್ಯರು ಕಥಾಶ್ರವಣಕ್ಕೆ ಸಜ್ಜಾದರು, ಅವಧೂತರು ಮಾತಿಗೆ ಶುರುವಿಟ್ಟುಕೊಂಡರು....

''ರಾಯರೇ, ನಿಮ್ಮ ಪ್ರಶ್ನೆ ಮತ್ತು ಗ್ರಹಿಕೆ ಸರಿಯಾಗೇ ಇದೆ. ಶಾರದೆಯನ್ನು ಅನೈತಿಕ ವ್ಯವಹಾರಕ್ಕೆ ಎಳೆಯಲು ಯತ್ನಿಸಿದ ಮಹಾನುಭಾವರು 'ಏಕವ್ಯಕ್ತಿ'ಯೇ. ಆ ಕಳ್ಳಬೆಕ್ಕನ್ನು ಸಂಸ್ಥೆಯ ಆವರಣದಿಂದ ತೊಲಗಿಸಿದರೆ ಅಲ್ಲಿನ ನಕಾರಾತ್ಮಕ ಛಾಯೆಯೂ ತೊಲಗಿ ಶಾರದೆಗೂ ನ್ಯಾಯ ಸಿಗುತ್ತದೆ ಎಂಬುದೂ ದಿಟವೇ. ಹೀಗಿರುವಾಗ, ಇನ್ನೊಂದಿಷ್ಟು ಪಾತ್ರಗಳು ತಾವಾಗೇ ಧಾವಿಸಿ ಬಂದು ತಪ್ಪೊಪ್ಪಿಕೊಂಡಿದ್ದೇಕೆ? ಅನೈತಿಕ ಕಾರ್ಯದ ಮುಂದುವರಿಕೆಯಲ್ಲಿ ಅವರೂ ಸಹಭಾಗಿಗಳಾಗಿ, ಹೆಚ್ಚುವರಿ ಕಳ್ಳಬೆಕ್ಕುಗಳು ಎನಿಸಿಕೊಂಡುಬಿಟ್ಟರೇ? ಅವರೆಲ್ಲರನ್ನೂ ಅಲ್ಲಿಂದ ತೊಲಗಿಸಬೇಕೇ? ಎಂಬ ನಿಮ್ಮ ತರ್ಕ ಸರಿಯಾಗೇ ಇದೆ. ಆದರೆ, ಮತ್ತೊಂದು ಮುಖ್ಯ ಸಂಗತಿಯನ್ನು ನೀವು ಮನದಟ್ಟು ಮಾಡಿಕೊಳ್ಳಬೇಕು. ದುಷ್ಕೃತ್ಯದಲ್ಲಿ ತೊಡಗಿಸಿಕೊಂಡವನು ಹೇಗೆ 'ಅಪರಾಧಿ' ಎನಿಸಿಕೊಳ್ಳುತ್ತಾನೋ, ಅಂಥ ಕೃತ್ಯಕ್ಕೆ ಒತ್ತಾಸೆಯಾಗಿ ನಿಂತವರು ಅಥವಾ ಅದನ್ನು ವಿರೋಧಿಸದವರು ಕೂಡ ಪರೋಕ್ಷವಾಗಿ 'ಅಪರಾಧಿ'ಗಳೇ ಆಗಿಬಿಡುತ್ತಾರೆ. ಶಾರದೆಯನ್ನು ಅನೈತಿಕ ಕಾರ್ಯಕ್ಕೆಳೆಯಲು ಯತ್ನಿಸಿದ ಮಹಾನುಭಾವರು ಇಲ್ಲಿರೋದು ಒಬ್ಬರೇ; ಮಿಕ್ಕವರು ತಮ್ಮದೇ ನೆಲೆಯಲ್ಲಿ ಅದಕ್ಕೆ ಇಂಬುಕೊಟ್ಟಿದ್ದರಿಂದ ಅಥವಾ ಅವರ ಸ್ವಾರ್ಥವು ಅದಕ್ಕೆ ಹಾಸಿಗೆ ಹಾಸಿಕೊಟ್ಟಿದ್ದರಿಂದ ತಪ್ಪಿತಸ್ಥ ಭಾವನೆ ಅವರನ್ನು ಕಾಡತೊಡಗಿತು. ಹೀಗಾಗಿ ಒಬ್ಬರಾದ ಮೇಲೊಬ್ಬರು ಪೈಪೋಟಿಯಲ್ಲಿ ಬಂದು ತಪ್ಪೊಪ್ಪಿಕೊಳ್ಳಲು ಶುರುಮಾಡಿದರು... '' ಎಂದು ಹೇಳಿ ಅರೆಕ್ಷಣ ನಿಲ್ಲಿಸಿದರು.

ಆಗ ಶಿಷ್ಯರೊಬ್ಬರು, ''ಈ ಅನೈತಿಕ ಕಾರ್ಯದಲ್ಲಿ ಅಡುಗೆ ಭಟ್ಟ 'ನಳಪಾಕ' ನೇರಭಾಗಿ ಎಂದು ಸಂಸ್ಥೆಯವರಿಗೆ ಗೊತ್ತಾಗಿದ್ದಕ್ಕೇ ಅವನನ್ನು ಕೆಲಸದಿಂದ ಕಿತ್ತೊಗೆದಿದ್ದಾರೆ ಅಲ್ಲವೇ ಗುರುಗಳೇ? ಅದಕ್ಕೇ ತಾನೇ, ಅವನು ನಿಮಗೆ ಫೋನ್ ಮಾಡಿ ಗೋಳಾಡಿದ್ದು? ಅದನ್ನು ಆಲಿಸಿದ ನೀವು 'ನಳಪಾಕ'ನಿಗೆ 'ಮಾಡಿದ್ದುಣ್ಣೋ ಮಹಾರಾಯಾ ಎಂಬ ನಿನ್ನದೇ ಡೈಲಾಗನ್ನು ನಿನಗೇ ಹೇಳಬೇಕಾದ ಕಾಲ ಬಂದಿದೆಯಪ್ಪಾ' ಎಂದು ತಿರುಗೇಟು ನೀಡಿ ಫೋನ್ ಕರೆಯನ್ನು ಕೊನೆಗೊಳಿಸಿದಿರಲ್ಲಾ...! ಅಲ್ಲಿಗೆ, ಸಂಸ್ಥೆಯ ಆವರಣದಲ್ಲಿ ತೂರಿಕೊಂಡಿದ್ದ ಕಳ್ಳಬೆಕ್ಕನ್ನು ತೊಲಗಿಸಿದಂತೆ ಆಯಿತಲ್ಲಾ? ಶಾರದೆಯ ಕಥನಕ್ಕೆ ಕೊನೆಗೂ ಕ್ಲೈಮ್ಯಾಕ್ಸ್ ನೀಡಿದಿರಲ್ಲಾ ಗುರುಗಳೇ...'' ಎಂದು ಹುರುಪಿನಿಂದ ಕೇಳಿದರು.

ಈ ಮಾತಿಗೆ ಅವಧೂತರು ಇನ್ನೇನು ಪ್ರತಿಕ್ರಿಯಿಸಬೇಕು ಎನ್ನುವಷ್ಟರಲ್ಲಿ, 'ಭರ್...' ಎಂದು ಧೂಳೆಬ್ಬಿಸಿಕೊಂಡು ಬಂದ ಕಾರೊಂದು ಅವಧೂತರ ಮನೆಯ ಬೀದಿಬಾಗಿಲ ಬಳಿ ನಿಂತಿತು.

ಆ ಸದ್ದು ಕೇಳಿ ಅವಧೂತರು ಶಿಷ್ಯರೊಂದಿಗೆ ಹಿತ್ತಲಿನಿಂದ ಮನೆಯ ಹಜಾರದ ಕಿಟಕಿಯ ಬಳಿಗೆ ಬಂದು ಹೊರಗೆ ಕಣ್ಣು ಹಾಯಿಸಿದರು. ಒಂದು ದಿನದ ಹಿಂದೆ ಬಂದಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಕಾರಿನ ಮುಂಬಾಗಿಲಿನಿಂದ ಇಳಿದರೆ, ನಂತರ ನೆಲದ ಮೇಲೆ ಪಾದವೂರಿದ್ದು ಪಟ್ಟಣದ ಪ್ರಭಾವಿ ರಾಜಕಾರಣಿ. ತರುವಾಯದಲ್ಲಿ, ತೆರೆಯುವುದೋ ಬೇಡವೋ ಎಂಬಷ್ಟು ನಿಧಾನವಾಗಿ ಕಾರಿನ ಹಿಂಬಾಗಿಲು ತೆರೆದುಕೊಂಡಿತು. ಅದನ್ನು ಸರಿಸಿಕೊಂಡು ಕೆಳಗಿಳಿದಾತ ಒಬ್ಬ ಕಟ್ಟುಮಸ್ತಾದ ಆಸಾಮಿ...

ಅವಧೂತರು ಆ ಆಸಾಮಿಯ ಕಡೆಗೆ ಬೆರಳುಮಾಡಿ ತೋರಿಸಿ, ''ನೀವು ಊಹಿಸಿದ 'ನಳಪಾಕ' ಅಲ್ಲ ಸ್ವಾಮೀ ಕಳ್ಳಬೆಕ್ಕು... ಎದುರಿಗೆ ನಿಂತಿದೆ ನೋಡಿ 'ಕಥೆಯ ಸಸ್ಪೆನ್ಸು ಮತ್ತು ಕ್ಲೈಮ್ಯಾಕ್ಸು' ಎಂದು ನಿಗೂಢವಾಗಿ ನುಡಿದರು!

ಕೆಲಕ್ಷಣದ ಹಿಂದಷ್ಟೇ ಅವಧೂತರನ್ನು ಪ್ರಶ್ನಿಸಿದ್ದ ಶಿಷ್ಯರು, ಆ ಆಸಾಮಿಯ ಚಹರೆಯನ್ನೊಮ್ಮೆ ದಿಟ್ಟಿಸಿ ನೋಡಿ, ''ಅರೆ! ಇವರಾ....?!'' ಎಂದು ಉದ್ಗರಿಸಿ ಬಾಯಿ ಮೇಲೆ ಬೆರಳಿಟ್ಟುಕೊಂಡರು...!

(ಮುಂದುವರಿಯುವುದು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue:90

ಸಮಾಚಾರ ಸಣ್ಣದಲ್ಲ

ಬಿಹಾರ: ಮತ್ತೆ ಸೇತುವೆ ಕುಸಿತ

ಜಮುಯಿ: ಬಿಹಾರದಲ್ಲಿ ಸೇತುವೆ ಕುಸಿತ ಪ್ರಸಂಗ ಮರುಕಳಿಸಿದೆ. ಜಮುಯಿ ಜಿಲ್ಲೆಯ ಉಲಾಯಿ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ಹಳೆಯ ಸೇತುವೆಯ ಒಂದು ಭಾಗ ಶುಕ್ರವಾರ ಕುಸಿದಿದೆ. ಸೇತುವೆ ಶಿಥಿಲವಾಗಿದ್ದ ಕಾರಣ ಕಳೆದ ವರ್ಷ ಮುಚ್ಚಲಾಗಿತ್ತು. ಸೇತುವೆ ಬಳಕೆಯಲ್ಲಿಲ್ಲದ ಕಾರಣ ಯಾವುದೇ ಸಾವು ನೋವು ಉಂಟಾಗಿಲ್ಲ. ಹೊಸ ಸೇತುವೆ ನಿರ್ಮಿಸಲಾಗುತ್ತಿದೆ ಎಂದು ಜಮುಯಿ ಜಿಲ್ಲಾಧಿಕಾರಿ ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.

ಕೇರಳದ ಇಬ್ಬರು ನನ್‌ಗಳಿಗೆ ಜಾಮೀನು

ಬಿಲಾಸ್‌ಪುರ: ಮೂವರು ಬಾಲಕಿಯರ ಕಳ್ಳಸಾಗಣೆ ಮತ್ತು ಬಲವಂತ ಮತಾಂತರ ಆರೋಪದಡಿ ಛತ್ತೀಸ್‌ಗಢದಲ್ಲಿ ಬಂಧಿತರಾಗಿರುವ ಕೇರಳದ ಇಬ್ಬರು ಕ್ಯಾಥೊಲಿಕ್ ನನ್‌ಗಳು ಸೇರಿದಂತೆ ಮೂವರಿಗೆ ಬಿಲಾಸ್‌ಪುರ ವಿಶೇಷ ನ್ಯಾಯಾಲಯ ಶನಿವಾರ ಷರತ್ತುಬದ್ಧ ಜಾಮೀನು ನೀಡಿದೆ. ಕೇರಳದ ನನ್‌ಗಳಾದ ಪ್ರೀತಿ ಮೆರಿರ್, ವಂದನಾ ಫ್ರಾನ್ಸಿಸ್ ಮತ್ತು ಸುಕಮನ್ ಮಾಂಡವಿ ಎಂಬವರಿಗೆ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಿರಾಜುದ್ದೀನ್ ಖುರೇಷಿ ಅವರು ಜಾಮೀನು ಮಂಜೂರು ಮಾಡಿದರು. ಪಾಸ್‌ಪೋರ್ಟ್‌ಗಳನ್ನು ನ್ಯಾಯಾಲಯಕ್ಕೆ ಒಪ್ಪಿಸಬೇಕು. ತಲಾ 50,000 ರು.ಗಳ ಬಾಂಡ್, ಜತೆಗೆ ಇಬ್ಬರು ವ್ಯಕ್ತಿಗಳ ಶ್ಯೂರಿಟ್ಟಿ ಒದಗಿಸುವಂತೆ ನ್ಯಾಯಾಲಯ ಷರತ್ತು ವಿಧಿಸಿದೆ.

ಐಐಟಿ-ಬಾಂಬೆಯ ವಿದ್ಯಾರ್ಥಿ ಆತ್ಮಹತ್ಯೆ

ಮುಂಬೈ: ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಬಾಂಬೆ ವಿದ್ಯಾರ್ಥಿ ಕಾಲೇಜು ಕ್ಯಾಂಪಸ್‌ನಲ್ಲಿರುವ ಹಾಸ್ಟೆಲ್ ಕಟ್ಟಡದಿಂದ ಶುಕ್ರವಾರ ನಸುಕಿನ 2.30ರಲ್ಲಿ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಟ್ಟಡದ ತಾರಸಿಯಿಂದ ಜಿಗಿದ ದೆಹಲಿ ಮೂಲದ 22 ವರ್ಷದ ವಿದ್ಯಾರ್ಥಿಯನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ವೈದ್ಯರು, ವಿದ್ಯಾರ್ಥಿ ಅದಾಗಲೇ ಮೃತಪಟ್ಟಿದ್ದಾನೆ ಎಂದು ಹೇಳಿದ್ದಾರೆ. ಮುಂಬೈ ಪೊಲೀಸರು ಸಾವಿಗೆ ಕಾರಣ ಕಂಡುಕೊಳ್ಳಲು ತನಿಖೆ ಆರಂಭಿಸಿದ್ದಾರೆ.

ಮೆದುಳಿಗೆ ಗಾಯ: ರಾಮದಾಸ್ ಆಸ್ಪತ್ರೆಗೆ

ರಾಂಚಿ: ಮನೆಯ ಸ್ನಾನಗೃಹದಲ್ಲಿ ಜಾರಿಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿರುವ ಜಾರ್ಖಂಡ್ ಶಿಕ್ಷಣ ಸಚಿವ ರಾಮದಾಸ್ ಸೊರೇನ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದೆಹಲಿ ಆಸ್ಪತ್ರೆಗೆ ಹೆಲಿಕಾಪ್ಟರ್‌ನಲ್ಲಿ ಶನಿವಾರ ಬೆಳಗ್ಗೆ ಕರೆದೊಯ್ಯಲಾಗಿದೆ. ಮೊದಲು ಸೊರೇನ್ ಅವರನ್ನು ಶನಿವಾರ ಬೆಳಗ್ಗೆ ಜೆಮ್‌ಶೆಡ್‌ಪುರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಜಾರಿಬಿದ್ದಾಗ ತಲೆಗೆ ಪೆಟ್ಟು ಬಿದ್ದು ಮೆದುಳಿನಲ್ಲಿ ತೀವ್ರ ಸ್ವರೂಪದ ಗಾಯವಾಗಿ ರಕ್ತ ಹೆಪ್ಪುಗಟ್ಟಿದೆ ಎಂದು ವೈದ್ಯರು ತಿಳಿಸಿದ ಬಳಿಕ ದೆಹಲಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ರಾಜ್ಯ ಆರೋಗ್ಯ ಸಚಿವ ಅನ್ಸಾರಿ ಹೇಳಿದ್ದಾರೆ.

ಶಿಬು ಸೊರೇನ್ ಅಸ್ವಸ್ಥ

ದೆಹಲಿ: ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ದೆಹಲಿಯ ಗಂಗಾ ರಾಮ್ ಆಸ್ಪತ್ರೆಯಲ್ಲಿ ವೆಂಟಿಲೇಟರ್‌ನಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

81 ವರ್ಷದ ಶಿಬು ಸೊರೇನ್ ಅವರಿಗೆ ಮೂತ್ರಪಿಂಡ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಜೂ.24ರಂದು ದೆಹಲಿಯ ಆಸ್ಪತ್ರೆಗೆ ದಾಖಲಿಸಲಾ ಗಿತ್ತು. ತಂದೆ ಶಿಬು ಸೊರೇನ್ ಅವರ ಆರೋಗ್ಯ ಸಮಸ್ಯೆಗಳನ್ನು ವೈದ್ಯರ ತಂಡ ಪರಿಶೀಲಿಸುತ್ತಿದೆ ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ.

ನಿವಾಸ ತೆರವು ಮಾಡಿದ ಮಾಜಿ ಸಿಜೆಐ ಡಿವೈಸಿ

ದೆಹಲಿ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ(ಸಿಜೆಐ)ಗೆ ಮೀಸಲಾದ ದೆಹಲಿಯ ಕೃಷ್ಣಮೆನನ್ ಮಾರ್ಗದ ಅಧಿಕೃತ ಬಂಗಲೆ ಸಂಖ್ಯೆ 5, ನಿವೃತ್ತರಾದ 9 ತಿಂಗಳುಗಳ ಬಳಿಕ ಮಾಜಿ ಸಿಜೆಐ ಡಿ.ವೈ.ಚಂದ್ರಚೂಡ್ ಶನಿವಾರ ಖಾಲಿ ಮಾಡಿದರು. ಭಾರತದ 50ನೇ ಸಿಜೆಐ ಆಗಿದ್ದ ನ್ಯಾ.ಚಂದ್ರಚೂಡ್ 2024ರ ನ.8ರಂದು ತಮ್ಮ ಹುದ್ದೆಯಿಂದ ನಿವೃತ್ತರಾದರು. ಆ ಬಳಿಕವೂ ಅವಧಿ ಮೀರಿ ಅಧಿಕೃತ ನಿವಾಸದಲ್ಲಿ ಉಳಿದುಕೊಂಡಿದ್ದು ವಿವಾದಕ್ಕೆ ಕಾರಣ ವಾಗಿತ್ತು. 'ನಮ್ಮ ವಸ್ತುಗಳೆಲ್ಲಾ ಪ್ಯಾಕ್ ಆಗಿವೆ. ಶೀಘ್ರವೇ ಸರಕಾರಿ ವಸತಿ ಸೌಕರ್ಯಕ್ಕೆ ತೆರಳುವೆ' ಎಂದು ಜು.7ರಂದು ನ್ಯಾ.ಚಂದ್ರಚೂಡ್ ತಿಳಿಸಿದ್ದರು.

{ ಸೋನಿಯಾ ಗಾಂಧಿ } ಕಾಂಗ್ರೆಸ್ ನಾಯಕಿ

ಬಿಜೆಪಿ ಬಹಳ ದಿನದಿಂದ ವಿರೋಧಿಸುತ್ತಿದ್ದ ಚೌಕಟ್ಟು ಕೆಡವಲು ಸಜ್ಜಾಗಿದೆ. ಅಧಿಕಾರ ಬಳಸಿ ಸಂವಿಧಾನಕ್ಕೇ ಮುತ್ತಿಗೆ ಹಾಕಿದೆ. ಪ್ರಜಾಪ್ರಭುತ್ವ ಗಣರಾಜ್ಯ ಭಾರತವನ್ನು ಕೆಲ ಪ್ರಬಲರಿಗಾಗಿ ದೇವಪ್ರಭುತ್ವ ಕಾರ್ಪೊರೇಟ್ ರಾಜ್ಯವಾಗಿಸಲು ಸೈದ್ಧಾಂತಿಕ ದಂಗೆ ಶುರುವಿಟ್ಟಿದೆ. ಸಂಸತ್, ಕೋರ್ಟ್, ರಸ್ತೆಯಲ್ಲೂ ಸಂವಿಧಾನ ದುರ್ಬಲಗೊಳಿಸಲು ಸಂಚು ನಡೆದಿದೆ.

ಹಿಮಾಚಲ ಪ್ರದೇಶ ಸತತ ಮಳೆ, ಪ್ರವಾಹ, ಭೂಕುಸಿತ | ಪಾರ್ವತಿ ನದಿ ಹರಿವು ಹೆಚ್ಚಿದ್ದರಿಂದ ಅಣೆಕಟ್ಟೆ ಕುಸಿತ

ಹಿ.ಪ್ರ: ಅಣೆಕಟ್ಟೆ ಕುಸಿತ, ಕೊಚ್ಚಿ ಹೋದ ವಾಹನ

ಶಿಮ್ಲಾ: ಸತತ ಮೇಘಸ್ಫೋಟದಿಂದ ತತ್ತರಿಸಿರುವ ಹಿಮಾಚಲ ಪ್ರದೇಶ ರಾಜ್ಯದಲ್ಲಿ ಮತ್ತೆ ಭಾರಿ ಮಳೆಯಾಗುತ್ತಿದ್ದು, ಭಾರೀ ಪ್ರವಾಹ ಉಂಟಾಗಿದೆ. ಪ್ರವಾಹದ ರಭಸಕ್ಕೆ ಕುಲು ಜಿಲ್ಲೆಯ ಮಲಾನಾ-ಐ ಜಲವಿದ್ಯುತ್ ಯೋಜನೆಯ ಕಾಫರ್ ಅಣೆಕಟ್ಟೆ ಒಡೆದಿದೆ. ಪರಿಣಾಮ ನದಿ ಪಾತ್ರದಲ್ಲಿ ದಿಢೀರ್ ಪ್ರವಾಹ ಸೃಷ್ಟಿಯಾಗಿದ್ದು, ದೊಡ್ಡ ಟ್ರಕ್‌ಗಳು ಸೇರಿದಂತೆ ಹಲವಾರು ವಾಹನಗಳು ಕೊಚ್ಚಿಕೊಂಡು ಹೋಗಿವೆ.

ನದಿ ಪಾತ್ರದ ರಸ್ತೆಯಲ್ಲಿ ನಿಲುಗಡೆಯಾಗಿದ್ದ ಕ್ರೇನ್, ಟ್ರಕ್, ರಾಕ್ ಬ್ರೇಕರ್ ಟ್ರಕ್ ಮತ್ತು ಹಲವು ಕಾರುಗಳು ಹಾಗೂ ಅಣೆಕಟ್ಟು ಬಳಿ ಇದ್ದ ಭಾರೀ ಯಂತ್ರೋಪಕರಣಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿವೆ. ಅದೃಷ್ಟವಶಾತ್ ಅವಘಡದಲ್ಲಿ ಸಾವು-ನೋವು ಸಂಭವಿಸಿಲ್ಲ. ಅಣೆಕಟ್ಟೆ ಕುಸಿದು ವಾಹನಗಳು ಕೊಚ್ಚಿಹೋಗುತ್ತಿರುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ವಿಡಿಯೋ ವೈರಲ್ ಆಗಿದೆ.

ನದಿ ಹರಿವೇ ಕಾರಣ: ರಾಜ್ಯದಲ್ಲಿ ಸತತ ಮಳೆಯಾಗುತ್ತಿದ್ದು, ಅಲ್ಲಲ್ಲಿ ಭೂ ಕುಸಿತವಾಗುತ್ತಿದೆ. ಭುಂತರ್ ಬಳಿ ಬಿಯಾಸ್ ನದಿಗೆ ವಿಲೀನವಾಗುವ ಪಾರ್ವತಿ ನದಿಯ ನೀರಿನ ಹರಿವು ಅಪಾಯಕಾರಿ ಮಟ್ಟಕ್ಕೇರಿದೆ. ಒಳಹರಿವು ಹೆಚ್ಚಾಗಿದ್ದರಿಂದಲೇ ಅಣೆಕಟ್ಟೆ ಕುಸಿದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈವರೆಗೆ: ಈ ಮೊದಲು ಮಂಡಿ ಜಿಲ್ಲೆಯ ಪಾಂಡೋಹ್ ಅಣೆಕಟ್ಟೆ ಬಳಿ ಚಂಡೀಗಢ-ಮನಾಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತವಾಗಿ ವಾಹನ ಸಂಚಾರ ಪೂರ್ಣ ನಿರ್ಬಂಧಿಸಲಾಗಿದೆ. ಸತತ ಮಳೆಯಿಂದ ರಾಜ್ಯದಲ್ಲಿ ಒಟ್ಟು 383 ರಸ್ತೆ ಹಾನಿಗೊಂಡಿವೆ, 747 ವಿದ್ಯುತ್ ಪರಿವರ್ತಕ ಹಾಳಾಗಿವೆ. ಮಳೆ ಸಂಬಂಧಿ ಅವಘಡಗಳಲ್ಲಿ ಈ ಮುಂಗಾರಿನಲ್ಲಿ ಒಟ್ಟು 173 ಜನರು ಸಾವನ್ನಪ್ಪಿದ್ದಾರೆ.

ಹಿಮಾಚಲ ಪ್ರದೇಶ ಪರಿಸ್ಥಿತಿಗೆ ಸುಪ್ರೀಂ ಕಳವಳ | ಪರಿಸರ ಸಮತೋಲನ ಕಾಯ್ದುಕೊಳ್ಳದ್ದಕ್ಕೆ ಕಿಡಿ

ಹೀಗೇ ಆದರೆ ಇಡೀ ರಾಜ್ಯವೇ ಕಣ್ಮರೆ: ಸುಪ್ರೀಂಕೋರ್ಟ್

ದೆಹಲಿ: 'ಹಿಮಾಚಲ ಪ್ರದೇಶದಲ್ಲಿನ ಸದ್ಯದ ಪರಿಸ್ಥಿತಿ ಬಹಳ ಆತಂಕಕಾರಿಯಾಗಿದೆ. ಇದೇ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಇಡೀ ರಾಜ್ಯವೇ ಭೂಪಟದಿಂದ ಕಣ್ಮರೆಯಾಗಿ ಬಿಡುತ್ತದೆ' ಎಂದು ಸುಪ್ರೀಂ ಕೋರ್ಟ್ ಶನಿವಾರ ತೀವ್ರ ಕಳವಳ ವ್ಯಕ್ತಪಡಿಸಿದೆ.

'ಅಭಿವೃದ್ಧಿ ಹೆಸರಿನಲ್ಲಿ ಪ್ರಕೃತಿಯ ಮೇಲೆ ಈ ಬಗೆಯಲ್ಲಿ ಪ್ರಹಾರ ನಡೆಸುವುದು, ಪರಿಸರವನ್ನು ಶೋಷಣೆ ಮಾಡುವುದು ಸರ್ವಥಾ ತರವಲ್ಲ. ರಾಜ್ಯವೊಂದು ಅಭಿವೃದ್ಧಿ ಮತ್ತು ಆದಾಯ ಗಳಿಕೆ ಎಂಬ ವಿಚಾರಗಳ ಬಗೆಗಷ್ಟೇ ಗಮನ ಹರಿಸಿದರೆ ಪರಿಸರದ ಸಂರಕ್ಷಣೆ ಅಸಾಧ್ಯ' ಎಂದು ಕಟು ಶಬ್ದಗಳಿಂದ ಸುಪ್ರೀಂ ಕೋರ್ಟ್ ಖಂಡಿಸಿದೆ.

ಹಿಮಾಚಲ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ನಿರಂತರ ನಡೆಯುತ್ತಿರುವ ಅರಣ್ಯ ನಾಶ ಹಾಗೂ ಪರಿಸರ ಅಸಮತೋಲನವನ್ನು ಸುಪ್ರೀಂ ಕೋರ್ಟ್ ತೀವ್ರವಾಗಿ ಖಂಡಿಸಿದೆ. ಹಿಮಾಚಲ ಪ್ರದೇಶದ ಪರಿಸ್ಥಿತಿ ಪೂರ್ಣ ಹದಗೆಟ್ಟಿದೆ. ಪರಿಸ್ಥಿತಿ ಕೈಮೀರಿದೆ ಎಂದು ನ್ಯಾಯಾಲಯ ಬಹಳ ಕಳವಳ ವ್ಯಕ್ತಪಡಿಸಿದೆ. ತಕ್ಷಣವೇ ಎಚ್ಚೆತ್ತುಕೊಂಡು ಪರಿಸ್ಥಿತಿ ಬದಲಿಸದೇ ಇದ್ದರೆ ಇಡೀ ರಾಜ್ಯವೇ ಇಲ್ಲದಂತಾಗುತ್ತದೆ. ಆ ದಿನಗಳು ದೂರವೇನೂ ಇಲ್ಲ ಎಂದು ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ಮತ್ತು ನ್ಯಾ. ಆರ್.ಮಹಾದೇವನ್ ಅವರ ಪೀಠ ಹೇಳಿದೆ. ಹಿಮಾಚಲ ಪ್ರದೇಶ ಹೈಕೋರ್ಟ್ ಆದೇಶದ ವಿರುದ್ಧದ ರಾಜ್ಯ ಸರಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳು ಈ ಅಭಿಪ್ರಾಯ ವ್ಯಕ್ತಪಡಿಸಿದರು.

2025ರ ಜೂನ್‌ನಲ್ಲಿ ಹಿಮಾಚಲ ಪ್ರದೇಶದ ಕೆಲವು ವಲಯಗಳನ್ನು 'ಹಸಿರು ಪ್ರದೇಶ' ಎಂದು ಘೋಷಿಸಿ ರಾಜ್ಯ ಸರಕಾರ ಅಧಿಸೂಚನೆ ಹೊರಡಿಸಿತ್ತು. ಈ ಅಧಿಸೂಚನೆ ಮೂಲಕ ರಾಜ್ಯದ ನಿರ್ದಿಷ್ಟ ಅರಣ್ಯ ಪ್ರದೇಶಗಳಲ್ಲಿ ನಿರ್ಮಾಣ ಚಟುವಟಿಕೆಗಳನ್ನು ತಡೆಯುವುದು ರಾಜ್ಯ ಸರಕಾರದ ಉದ್ದೇಶವಾಗಿದೆ. ಸರಕಾರದ ಅಧಿಸೂಚನೆ ಪ್ರಶ್ನಿಸಿ ಕೆಲವರು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲು ಹೈಕೋರ್ಟ್ ನಿರಾಕರಿಸಿತ್ತು. ಬಳಿಕ ಸುಪ್ರೀಂ ಕೋರ್ಟ್ ಮೊರೆ ಹೋಗಲಾಗಿತ್ತು. ಹೈಕೋರ್ಟ್ ನಿಲುವಿನಲ್ಲಿ ಹಸ್ತಕ್ಷೇಪ ಮಾಡಲು ಈಗ ಸುಪ್ರೀಂ ಕೋರ್ಟ್ ಕೂಡಾ ನಿರಾಕರಿಸಿದೆ.

ಹಲವು ವರ್ಷಗಳಿಂದ ಪ್ರಕೃತಿ ವಿಕೋಪ: ಗಮನ ಸೆಳೆದ ಪೀಠ

ಹಿಮಾಚಲ ಪ್ರದೇಶ ರಾಜ್ಯದ ಪರಿಸ್ಥಿತಿ ತೀರಾ ಹದಗೆಟ್ಟಿದೆ. ತೀವ್ರ ಸ್ವರೂಪದ ಪರಿಸರ ಅಸಮತೋಲನಕ್ಕೆ ಒಳಗಾಗಿದೆ. ಇದು ಹಲವು ವರ್ಷಗಳಿಂದ ಗಂಭೀರ ನೈಸರ್ಗಿಕ ವಿಕೋಪಗಳಿಗೆ ಕಾರಣವಾಗಿದೆ. ರಾಜ್ಯದ ಈಗಿನ ಪರಿಸ್ಥಿತಿಗೆ ಪ್ರಕೃತಿಯನ್ನಷ್ಟೇ ದೂಷಿಸುವುದು ಸರಿಯಲ್ಲ. ಪರ್ವತಗಳು ಮತ್ತು ಮಣ್ಣಿನ ನಿರಂತರ ಸವಕಳಿ, ಭೂಕುಸಿತ, ರಸ್ತೆ, ಮನೆ ಮತ್ತು ದೊಡ್ಡ ಕಟ್ಟಡಗಳ ಕುಸಿತ ವಿದ್ಯಮಾನಗಳಿಗೆ ಮಾನವರೇ ಕಾರಣ, ಪ್ರಕೃತಿ ಅಲ್ಲ. ಹಿಮಾಲಯ ಪರ್ವತಗಳ ಪದತಳದ ಈ ರಾಜ್ಯದಲ್ಲಿ ಅಭಿವೃದ್ಧಿ ಯೋಜನೆ ಕೈಗೊಳ್ಳುವ ಮುನ್ನ ಭೂವಿಜ್ಞಾನಿಗಳು, ಪರಿಸರ ತಜ್ಞರು ಮತ್ತು ಸ್ಥಳೀಯರ ಅಭಿಪ್ರಾಯ ಪಡೆಯುವುದು ಮುಖ್ಯ ಎಂದು ಕೋರ್ಟ್ ಆದೇಶಿಸಿದೆ.

ಸದಾ ಆದಾಯವೇ ಸರ್ವಸ್ವವಲ್ಲ: ಸುಪ್ರೀಂ

'ಆದಾಯವೇ ಸರ್ವಸ್ವವಲ್ಲ, ಹಣ ಗಳಿಸುವುದೇ ಅಭಿವೃದ್ಧಿ ಅಲ್ಲ' ಎಂದು ರಾಜ್ಯ ಮತ್ತು ಕೇಂದ್ರ ಸರಕಾರಗಳನ್ನು ಉದ್ದೇಶಿಸಿ ಹೇಳಿರುವ ನ್ಯಾಯಾಲಯ, ಆದಾಯಕ್ಕಿಂತ

ಪ್ರಕೃತಿ ರಕ್ಷಣೆ ಬಹಳ ಮುಖ್ಯ ಎಂದಿದೆ. ಈ ಸಂಗತಿಯನ್ನು ಅರ್ಜಿದಾರರಿಗೆ ಮನವರಿಕೆ ಮಾಡಿಕೊಡಲು ಬಯಸುತ್ತೇವೆ. ಪರಿಸರ ಮತ್ತು ಪರಿಸರ ವಿಜ್ಞಾನವನ್ನು ಬಲಿಕೊಟ್ಟು ಆದಾಯ ಗಳಿಸಲು ಸಾಧ್ಯವಿಲ್ಲ ಎಂದು ದ್ವಿಸದಸ್ಯ ಪೀಠ ಹೇಳಿದೆ. ಹಿಮಾಚಲ ಪ್ರದೇ ಶದಲ್ಲಿ ಪ್ರವಾಸೋದ್ಯಮವೇ ಪ್ರಮುಖ ಆದಾಯ ಮೂಲವಾಗಿದೆ. ಆದರೆ ಪ್ರವಾ ಸೋದ್ಯಮದ ಅನಿಯಂತ್ರಿತ ಬೆಳವಣಿಗೆ ರಾಜ್ಯದ ಪರಿಸರದ ಮೇಲೆ ನಕಾರಾತ್ಮಕ ಪರಿ ಣಾಮ ಬೀರಿದೆ. ಪ್ರವಾಸೋದ್ಯಮದ ಒತ್ತಡ ವನ್ನು ನಿಯಂತ್ರಿಸದೇ ಇದ್ದರೆ ಅದು ರಾಜ್ಯದ ಪರಿಸರ ಮತ್ತು ಸಾಮಾಜಿಕ ರಚನೆಯನ್ನೇ ಹಾಳು ಮಾಡಿಬಿಡುತ್ತದೆ. ಸರಕಾರ ಹಾಗೂ ಸ್ಥಳೀಯ ಆಡಳಿತ ಈ ಬಗ್ಗೆ ಗಮನ ವಹಿ ಸಬೇಕಿದೆ ಎಂದು ನ್ಯಾಯಾಲಯ ಹೇಳಿದೆ.

ರಷ್ಯಾ ತೈಲ ಸ್ಥಗಿತ: ಟ್ರಂಪ್ ಹೇಳಿಕೆ ಅಲ್ಲಗಳೆದ ಭಾರತ

ದೆಹಲಿ: 'ಭಾರತ ಇನ್ನು ಮುಂದೆ ರಷ್ಯಾದಿಂದ ತೈಲ ಖರೀದಿಸುವುದಿಲ್ಲ ಎಂಬುದು ನನಗೆ ತಿಳಿದುಬಂದಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಆದರೆ, ಟ್ರಂಪ್ ಹೇಳಿಕೆಯನ್ನು ಭಾರತ ಸರಕಾರ ಶನಿವಾರ ಸ್ಪಷ್ಟವಾಗಿ ನಿರಾಕರಿಸಿದೆ.

ಆ.7ರಿಂದ ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳ ಮೇಲೆ ಶೇ.25ರಷ್ಟು ರಫ್ತು ಸುಂಕ ವಿಧಿಸುವ ಬೆದರಿಕೆ ಹಾಕಿರುವ ಟ್ರಂಪ್, ಹೇಗಾದರೂ ಮಾಡಿ ಭಾರತ ರಷ್ಯಾದಿಂದ ಕಚ್ಚಾತೈಲ ಖರಿದಿಸುವುದನ್ನು ಕೊನೆಗೊಳಿಸುವಂತೆ ಮಾಡಬೇಕು ಎಂಬ ಹಪಾಹಪಿಯಲ್ಲಿದ್ದಾರೆ. ಆದರೆ, ಉಕ್ರೇನ್ ಮೇಲೆ ಯುದ್ಧ ಆರಂಭಿಸಿದಾಗ ರಷ್ಯಾ ಮೇಲೆ ಅಮೆರಿಕ ಮತ್ತು ಯೂರೋಪ್ ದೇಶಗಳು ನಿರ್ಬಂಧ ವಿಧಿಸಿದ್ದರಿಂದ ಕಚ್ಚಾತೈಲ ಮಾರಾಟ ರಷ್ಯಾಗೆ ಕಷ್ಟವಾಯಿತು. ಆಗಿನಿಂದಲೂ ಭಾರತ ರಷ್ಯಾದಿಂದ ಬಹಳ ಕಡಿಮೆ ಬೆಲೆಗೆ ಕಚ್ಚಾತೈಲವನ್ನು ರಷ್ಯಾದಿಂದ ಖರೀದಿಸುತ್ತಿದೆ. ರಷ್ಯಾದೊಂದಿಗಿನ ಇಂಧನ ಒಪ್ಪಂದ ಕೊನೆಗೊಳಿಸುವಂತೆ ಭಾರತದ ಮೇಲೆ ಟ್ರಂಪ್ ಒತ್ತಡ ಹಾಕುತ್ತಿದ್ದರೂ ಅದಕ್ಕೆ ಕಿವಿಗೊಡದ ಭಾರತ ರಷ್ಯಾದಿಂದ ಕಚ್ಚಾತೈಲ ಖರೀದಿ ಮುಂದುವರೆಸಿದೆ. ಕಚ್ಚಾತೈಲ ಖರೀದಿ ನಿರ್ಧಾರ ಧಾರಣೆ, ತೈಲದ ಗುಣಮಟ್ಟ, ದಾಸ್ತಾನು ಪ್ರಮಾಣ, ಸಾಗಣೆ ವೆಚ್ಚ ಮತ್ತಿತರ ಅಂಶಗಳನ್ನು ಅವಲಂಬಿಸಿರುತ್ತದೆ ಎಂದು ಭಾರತೀಯ ತೈಲ ಸಂಸ್ಕರಣಾಗಾರರು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿರುವುದಾಗಿ ಸುದ್ದಿಸಂಸ್ಥೆ ವರದಿ ಮಾಡಿದೆ. ಭಾರತ ತನ್ನ ಅಗತ್ಯದ ಶೇ.85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಹಾಗಾಗಿಯೇ ವಿಶ್ವದ 3ನೇ ಅತಿದೊಡ್ಡ ಇಂಧನ ಖರೀದಿ ರಾಷ್ಟ್ರ ಎನಿಸಿಕೊಂಡಿದೆ. ಹಾಗಾಗಿಯೇ ಭಾರತದ ಕಚ್ಚಾತೈಲ ಮಾರುಕಟ್ಟೆ ಮೇಲೆ ಅಮೆರಿಕದ ವಾರೆ ನೋಟ ಹರಿದಿದೆ.

ವಾರಾಣಸಿ 2200 ಕೋಟಿ ರು. ಅಭಿವೃದ್ಧಿ ಯೋಜನೆ

ಪ್ರಧಾನಿ ಸ್ವಕ್ಷೇತ್ರಕ್ಕೆ ಬಂಪರ್ ಕೊಡುಗೆ!

ವಾರಾಣಸಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಆಗಮಿಸಿದ ಪ್ರಧಾನಿ ಮೋದಿ ಅವರಿಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಬೆಳ್ಳಿಯ ಶಿವನ ಸರ್ಪಭೂಷಿತ ಲಿಂಗ ನೀಡಿ ಗೌರವ ಸಮರ್ಪಿಸಿದರು.

ವಾರಾಣಸಿ: ಪ್ರಧಾನಿ ನರೇಂದ್ರ ಮೋದಿ ಅವರು ತಾವು ಪ್ರತಿನಿಧಿಸುವ ಲೋಕಸಭಾ ಕ್ಷೇತ್ರ, ಉತ್ತರ ಪ್ರದೇಶದ ವಾರಣಾಸಿಯಲ್ಲಿ 2200 ಕೋಟಿ ರು.ಗಳ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು, ಹಾಗೂ ಪೂರ್ಣಗೊಂಡ ಯೋಜನೆಗಳ ಉದ್ಘಾಟನೆ ಮಾಡಿದರು.

ಇದು ಅವರ ಲೋಕಸಭೆ ಕ್ಷೇತ್ರಕ್ಕೆ 51ನೇ ಭೇಟಿಯಾಗಿದೆ. ಈ ಬಾರಿಯ ಭೇಟಿಯಲ್ಲಿ ಮೋದಿ ಅವರು ಮೋಹನ್ ಸರಾಯ್ ಛಿತೌನಿ-ಶೂಲ್ ಟಂಕೇಶ್ವರ ರಸ್ತೆ ಅಗಲೀಕರಣ, ಹರ್ದತ್ ಪುರದಲ್ಲಿ ರೈಲ್ವೆ ಮೇಲು ಸೇತುವೆ ಉದ್ಘಾಟನೆ ಸೇರಿದಂತೆ ಬಹುದೊಡ್ಡ ಮಟ್ಟದ ಯೋಜನೆಗಳಿಗೆ ಚಾಲನೆ ನೀಡಿದರು. ಪ್ರಧಾನಮಂತ್ರಿ ಜಲಜೀವನ್ ಮಿಷನ್‌ನಡಿ 47 ಹಳ್ಳಿಗಳಿಗೆ ಕುಡಿವ ನೀರಿನ ಯೋಜನೆಗಳ ಉದ್ಘಾಟನೆ ಮಾಡಿದರು. ಕ್ಷೇತ್ರದಲ್ಲಿ ವಿದ್ಯುತ್ ಮೂಲಸೌಕರ್ಯ ಬಲಪಡಿಸುವ ಉದ್ದೇಶದಿಂದ ಪ್ರಧಾನಿ ಮೋದಿ ಸ್ಮಾರ್ಟ್ ವಿತರಣಾ ಯೋಜನೆಯಡಿ ವಿವಿಧ ಕಾಮಗಾರಿಗಳು ಮತ್ತು 880 ಕೋಟಿ ರು.ಗೂ ಹೆಚ್ಚಿನ ಮೊತ್ತದ ವಿದ್ಯುತ್ ಮೂಲಸೌಕರ್ಯ ಕಾಮಗಾರಿಗಳಿಗೆ ಶುಂಕಸ್ಥಾಪನೆ ನೆರವೇರಿಸಿದರು. ನದಿ ದಂಡೆಯ 8 ಘಟ್ಟಗಳ ಪುನರ್ ಅಭಿವೃದ್ಧಿ, ಕಾಳಿಕಾ ಧಾಮದ ಅಭಿವೃದ್ಧಿ ಕಾರ್ಯಕ್ಕೂ ಚಾಲನೆ ನೀಡಿದರು. ಮಹಾಮನ ಪಂಡಿತ್ ಮದನಮೋಹನ ಮಾಳವೀಯ ಕ್ಯಾನ್ಸರ್ ಮತ್ತು ಹೋಮಿ ಬಾಬಾ ಕ್ಯಾನ್ಸರ್ ಆಸ್ಪತ್ರೆಯಲ್ಲಿ ರೊಬೋಟಿಕ್ ಸರ್ಜರಿ ಮತ್ತು ಸಿಟಿ ಸ್ಕ್ಯಾನ್ ಸೌಲಭ್ಯಗಳಿಗೆ ಚಾಲನೆ ನೀಡಿದರು. ಹೋಮಿಯೋಪತಿ ಕಾಲೇಜು-ಆಸ್ಪತ್ರೆ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಮತಪಟ್ಟಿಯಲ್ಲಿ ಹೆಸರಿಲ್ಲ ಎಂದ ತೇಜಸ್ವಿಗೆ ತಿವಿದ ಚು.ಆಯೋಗ

ಪಟನಾ: ಕೇಂದ್ರ ಚುನಾವಣಾ ಆಯೋಗ ಶುಕ್ರವಾರ(ಆ.1) ಪ್ರಕಟಿಸಿದ ಬಿಹಾರ ರಾಜ್ಯದ ಪರಿಷ್ಕೃತ ಮತದಾರರ ಕರಡು ಪಟ್ಟಿಯಲ್ಲಿ ನನ್ನ ಹೆಸರೇ ಕಾಣೆಯಾಗಿದೆ. ನಾನು ಮುಂಬರುವ ವಿಧಾನಸಭೆ ಚುನಾವಣೆಗೆ ಸ್ಪರ್ಧೆ ಮಾಡಬಾರದು ಎಂಬ ಕಾರಣಕ್ಕೆ ಹೀಗೆ ಸಂಚು ಮಾಡಲಾಗಿದೆ ಎಂದು ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ನಾಯಕ, ಮಾಜಿ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಶನಿವಾರ ಸುಯದ್ದಿಗೋಷ್ಠಿ ನಡೆಸಿದ ಆರೋಪಿಸಿದ್ದಾರೆ.

ನಾನು ಹೆಸರಿನ ಮೂಲಕ, ಮತ್ತೊಮ್ಮೆ ವೋಟರ್ ಐಡಿ ಸಂಖ್ಯೆ ಮೂಲಕ ಶೋಧಿಸಿದೆ. ನನ್ನ ಸಹಾಯಕರೂ ಶೋಧ ನಡೆಸಿದರು. ಆದರೆ, ಚುನಾವಣಾ ಆಯೋಗ ಪ್ರಕಟಿಸಿದ ಪರಿಷ್ಕೃತ ಮತದಾರರ ಕರಡು ಪಟ್ಟಿಯಲ್ಲಿ ಹೆಸರೇ ಕಾಣುತ್ತಿಲ್ಲ. ರಾಜ್ಯದಲ್ಲಿ ಇತ್ತೀಚೆಗೆ ಮತದಾರರ ಪಟ್ಟಿಯ 'ವಿಶೇಷ ಕ್ಷಿಪ್ರ ಪರಿಷ್ಕರಣೆ'(ಎಸ್‌ಐಆರ್) ವೇಳೆ ನಾನು ದಾಖಲೆಗಳು ಮತ್ತು ದೃಢೀಕರಣ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಿದ್ದೆ. ಹಾಗಿದ್ದರೂ ನನ್ನ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ತೇಜಸ್ವಿ ಗಂಭೀರ ಆರೋಪ ಮಾಡಿದರು.

ಆಯೋಗ ತಿರುಗೇಟು: ಅದರ ಬೆನ್ನಲ್ಲೇ ಪ್ರತಿಕ್ರಿಯಿಸಿದ ಕೇಂದ್ರ ಚುನಾವಣಾ ಆಯೋಗ, ಪಟನಾ ಪಶುವೈದ್ಯಕೀಯ ಕಾಲೇಜು ಮತಗಟ್ಟೆಯ ಮತದಾರರ ಪಟ್ಟಿಯಲ್ಲಿ ತೇಜಸ್ವಿ ಯಾದವ್ ಹೆಸರಿದೆ ಎಂದು ದೃಢಪಡಿಸಿದೆ. ಮತದಾರರ ಪಟ್ಟಿಯಲ್ಲಿ ತೇಜಸ್ವಿ ಯಾದವ್ ಹೆಸರು ಫೋಟೊ ಸಮೇತ ಇರುವ ದಾಖಲೆಯನ್ನೂ 'ಎಕ್ಸ್' ಖಾತೆಯಲ್ಲಿ ಪ್ರಕಟಿಸಿ ತೇಜಸ್ವಿ ಯಾದವ್ ಅವರ ಆರೋಪ ಚೇಷ್ಟೆಯ ಕೆಲಸವಾಗಿದೆ ಎಂದು ಕಿಡಿ ಕಾರಿದೆ. 'ಕರಡು ಮತದಾರರ ಪಟ್ಟಿಯಲ್ಲಿ ಹೆಸರಿಲ್ಲ ಎಂದು ತೇಜಸ್ವಿ ಯಾದವ್ ದುರುದ್ದೇಶಪೂರಿತ ಹೇಳಿಕೆ ನೀಡಿದ್ದಾರೆ. ಅವರ ಹೆಸರು ಕರಡು ಮತದಾರರ ಪಟ್ಟಿಯ ಕ್ರಮ ಸಂಖ್ಯೆ 416ರಲ್ಲಿದೆ' ಎಂದು ಮಾಜಿ ಡಿಸಿಎಂಗೆ ಮೃದುವಾಗಿಯೇ ತಿವಿದಿದೆ.

ಡಿಜಿಟಲ್ ಪಾವತಿ ಮೌಲ್ಯ ಶೇ.4 ವೃದ್ಧಿ | 31 ದಿನಕ್ಕೆ 1947 ಕೋಟಿ ವಹಿವಾಟು

ಜುಲೈ ಯುಪಿಐ ಪಾವತಿ 25.10 ಲಕ್ಷ ಕೋಟಿ ರು.!

ದೆಹಲಿ: ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿರುವ, ವಿವಿಧ ದೇಶಗಳ ಪ್ರಮುಖ ನಾಯಕರ ಮೆಚ್ಚುಗೆಯನ್ನೂ ಗಳಿಸಿರುವ 'ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್'(ಯುಪಿಐ-ಏಕೀಕೃತ ಪಾವತಿ ವ್ಯವಸ್ಥೆ) ವಹಿವಾಟು ಪ್ರಮಾಣ ಜುಲೈ ತಿಂಗಳಲ್ಲಿ 25.10 ಲಕ್ಷ ಕೋಟಿ ರು.ಗಳಿಗೆ ಮುಟ್ಟಿದ್ದು, ಹೊಸ ದಾಖಲೆ ಬರೆದಿದೆ. ಡಿಜಿಟಲ್ ವಹಿವಾಟು ಮೌಲ್ಯ ಹಿಂದಿನ ತಿಂಗಳಿಗಿಂತ ಶೇ.4ರಷ್ಟು ವೃದ್ಧಿ ಕಂಡಿದೆ.

ಜುಲೈ ಮಾಸದ 31 ದಿನಗಳಲ್ಲಿನ ಡಿಜಿಟಲ್ ವಹಿವಾಟು ಪ್ರಮಾಣ 1947 ಕೋಟಿ ಸಂಖ್ಯೆಯಷ್ಟಿದೆ. ಹಿಂದಿನ ತಿಂಗಳಿಗೆ ಹೋಲಿಸಿದರೆ ವಹಿವಾಟು ಸಂಖ್ಯೆ ಶೇ.6ರಷ್ಟು ಹೆಚ್ಚಾಗಿದೆ.

ವರ್ಷದಿಂದ ವರ್ಷಕ್ಕೆ: 2024ರ ಜುಲೈನಲ್ಲಿನ ವಹಿವಾಟು ಪ್ರಮಾಣಕ್ಕೆ ಹೋಲಿಸಿದರೆ 2025ರ ಜುಲೈನಲ್ಲಿ ಶೇ.35ರಷ್ಟು ದಾಖಲೆ ಪ್ರಮಾಣದ ಹೆಚ್ಚಳವಾಗಿದೆ. ವಹಿವಾಟು ಮೌಲ್ಯದ ಲೆಕ್ಕದಲ್ಲಿಯೂ ಶೇ.22ರಷ್ಟು ವೃದ್ಧಿ ಕಾಣಬಂದಿದೆ. ಇದು ಡಿಜಿಟಲ್ ಹಣ ವಿನಿಮಯ ವ್ಯವಸ್ಥೆಯ ಜನಪ್ರಿಯತೆಗೆ ಸಾಕ್ಷಿಯಾಗಿದೆ ಎಂದು 'ಭಾರತೀಯ ರಾಷ್ಟ್ರೀಯ ಪಾವತಿ ನಿಗಮ'(ಎನ್‌ಪಿಸಿಐ) ತಿಳಿಸಿದೆ. ಯುಪಿಐ ವಹಿವಾಟು ಜೂನ್‌ನಲ್ಲಿ 24.04 ಲಕ್ಷ ಕೋಟಿ ರು.ಗಳಷ್ಟಿತ್ತು. 1840 ಕೋಟಿ ಸಂಖ್ಯೆಯ ವಹಿವಾಟುಗಳು ನಡೆದಿವೆ.

ಐಎಂಪಿಎಸ್: ಜುಲೈನಲ್ಲಿ 'ಕ್ಷಿಪ್ರ ಪಾವತಿ ಸೇವೆ' (ಐಎಂಪಿಎಸ್) ವಹಿವಾಟು ಸಂಖ್ಯೆ 48.20 ಕೋಟಿಗಳಷ್ಟಿತ್ತು. ಜೂನ್‌ನಲ್ಲಿ 44.80 ಕೋಟಿಗಳಷ್ಟಿತ್ತು. ಮಾಸಿಕ ಶೇ.8ರಷ್ಟು ಹೆಚ್ಚಳವಾಗಿದೆ. ಐಎಂಪಿಎಸ್ ವಹಿವಾಟು ಮೌಲ್ಯ 6.31 ಲಕ್ಷ ಕೋಟಿ ರು.ಗಳಷ್ಟಿದೆ. ಜೂನ್‌ನಲ್ಲಿ 6.06 ಲಕ್ಷ ಕೋಟಿ ರು.ಗಳಷ್ಟಿತ್ತು. ಮಾಸಿಕ ಶೇ.4ರಷ್ಟು ವೃದ್ಧಿ ಕಂಡಿದೆ. ಮೇ ತಿಂಗಳಲ್ಲಿ 6.41 ಲಕ್ಷ ಕೋಟಿ ರು. ಮೌಲ್ಯದ 46.40 ಕೋಟಿ ಐಎಂಪಿಎಸ್ ವಹಿವಾಟುಗಳು ನಡೆದಿವೆ. ದಿನನಿತ್ಯದ ಐಎಂಪಿಎಸ್ ವಹಿವಾಟು ಸಂಖ್ಯೆ 1.49 ಕೋಟಿಯಿಂದ 1.56 ಕೋಟಿಗೆ ಏರಿಕೆಯಾಗಿದೆ. ದಿನದ ವಹಿವಾಟು ಮೌಲ್ಯವೂ 20,212 ಕೋಟಿ ರು.ಗಳಿಂದ 20,368 ಕೋಟಿ ರು.ಗಳಿಗೆ ಏರಿಕೆ ಕಂಡಿದೆ.

ಫಾಸ್ಟ್ಯಾಗ್ ವಹಿವಾಟು ಇಳಿಕೆ!

ಫಾಸ್ಟ್ಯಾಗ್ ವಹಿವಾಟು ಜುಲೈನಲ್ಲಿ ಶೇ.4ರಷ್ಟು ಇಳಿಕೆ ಕಂಡಿದೆ. ಜೂನ್‌ನಲ್ಲಿ 38.60 ಕೋಟಿಯಷ್ಟಿದ್ದ ಫಾಸ್ಟ್ಯಾಗ್ ವಹಿವಾಟು ಜುಲೈನಲ್ಲಿ 37.10 ಕೋಟಿ ವಹಿವಾಟಿಗೆ ಇಳಿಕೆಯಾಗಿದೆ. ವಹಿವಾಟು ಮೌಲ್ಯದ ಲೆಕ್ಕದಲ್ಲಿ ನೋಡುವುದಾದರೆ ಜೂನ್‌ನಲ್ಲಿ 6,783 ಕೋಟಿ ರು.ಗಳಷ್ಟಿದ್ದ ಫಾಸ್ಟ್ಯಾಗ್ ವಹಿವಾಟು ಮೌಲ್ಯ ಶೇ.2ರಷ್ಟು ಇಳಿಕೆಯಾಗಿ ಜುಲೈನಲ್ಲಿ 6,669 ಕೋಟಿ ರು.ಗೆ ತಗ್ಗಿದೆ. ಮೇ ತಿಂಗಳಲ್ಲಿ ಫಾಸ್ಟ್ಯಾಗ್ ವಹಿವಾಟು ಜೂನ್-ಜುಲೈಗಿಂತಲೂ ಜಾಸ್ತಿ ಇದ್ದಿತು. 40.40 ಕೋಟಿ ವಹಿವಾಟಾಗಿ 7,087 ಕೋಟಿ ರು. ಶುಲ್ಕ ಸಂಗ್ರಹವಾಗಿತ್ತು.

ಕುಲ್ಗಾಂ: 3 ಲಷ್ಕರೆ ಉಗ್ರರು ಹತ

ಕುಲ್ಗಾಂ: ಜಮ್ಮು-ಕಾಶ್ಮೀರದ ಕುಲ್ಗಾಂ ಜಿಲ್ಲೆಯ ಅಖಾಲ್ ಅರಣ್ಯ ಪ್ರದೇಶದಲ್ಲಿ ಅಡಗಿದ್ದ 3 ಉಗ್ರರನ್ನು ಭದ್ರತಾ ಪಡೆಗಳ ಜಂಟಿ ಕಾರ್ಯಾಚರಣೆಯಲ್ಲಿ ಶನಿವಾರ ಸಂಜೆ ವೇಳೆಗೆ ಹೊಡೆದುರುಳಿಸಲಾಗಿದೆ.

ಪಾಕ್ ಮೂಲದ ನಿಷೇಧಿತ ಲಷ್ಕರ್-ಎ-ತಯ್ಯಬಾ(ಎಲ್‌ಇಟಿ) ಉಗ್ರ ಸಂಘಟನೆಯ ಮತ್ತೊಂದು ಮುಖವಾದ 'ದಿ ರೆಸಿಸ್ಟೆನ್ಸ್ ಫ್ರಂಟ್'(ಟಿಆರ್‌ಎಫ್) ಜತೆ ನಂಟು ಹೊಂದಿರುವ ಮೂವರು ಯೋಧರು ಅಖಾಲ್ ಅರಣ್ಯದಲ್ಲಿ ಅಡಗಿಕೊಂಡಿದ್ದಾರೆ ಎಂಬ ಗುಪ್ತಚರ ಮಾಹಿತಿ ಆಧರಿಸಿ ಶನಿವಾರ ನಸುಕಿನಲ್ಲೇ 'ಆಪರೇಷನ್ ಅಖಾಲ್' ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಲಾಯಿತು. ಭಾರತೀಯ ಸೇನೆ, ಸಿಆರ್‌ಪಿಎಫ್ ಮತ್ತು ಜಮ್ಮು-ಕಾಶ್ಮೀರ ಪೊಲೀಸರ ತಂಡ ಜಂಟಿ ಕಾರ್ಯಾಚರಣೆ ನಡೆಸಿದ್ದಾಗ ಉಗ್ರರು ಗುಂಡು ಹಾರಿಸಿದರು. ಬಳಿಕ ಶನಿವಾರ ಸಂಜೆಯವರೆಗೂ ಭದ್ರತಾ ಪಡೆಗಳು ದಾಳಿ ಮುಂದುವರಿಸಿದವು. ಪರಿಣಾಮ ಮೂವರೂ ಉಗ್ರರನ್ನು ಕೊಲ್ಲಲಾಗಿದೆ. ಹತರಾದ ಮೂವರೂ ಉಗ್ರರು ಗುರುತು ಈವರೆಗೂ ಪತ್ತೆಯಾಗಿಲ್ಲ ಎಂದು 'ಚಿನಾರ್ ಕಾರ್ಪ್ಸ್' ಎಕ್ಸ್ ಖಾತೆಯಲ್ಲಿ ವಿವರಿಸಲಾಗಿದೆ. 'ಆಪರೇಷನ್ ಅಖಾಲ್' ಹೆಸರಿನಲ್ಲಿ ಕಾರ್ಯಾಚರಣೆ ಸಂಜೆಯವ ರೆಗೂ ಮುಂದುವರಿದಿತ್ತು. ಭದ್ರತಾ ಪಡೆಗಳ ಯೋಧರು, ಉಗ್ರರು ಅಡ ಗಿದ್ದ ಅರಣ್ಯ ಪ್ರದೇಶದಲ್ಲಿ ಉಗ್ರರು ಯಾರಾದರೂ ಉಳಿದುಕೊಂಡಿದ್ದಾರಾ ಎಂದು ಶೋಧ ಕಾರ್ಯ ಮುಂದುವರೆಸಿದ್ದಾರೆ ಎಂದು ತಿಳಿದುಬಂದಿದೆ.

ರಾಜ ಎನಿಸಿಕೊಳ್ಳಲು ನಾನು ಬಯಸಲ್ಲ!

ದೆಹಲಿ: ರಾಜನಾಗಲು, ರಾಜ ಎನಿಸಿಕೊಳ್ಳಲು ಬಯಸುವುದಿಲ್ಲ. ನಾನು ಅಂಥ ಪರಿಕಲ್ಪನೆಯನ್ನೇ ವಿರೋಧಿಸುತ್ತೇನೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಹೇಳಿದ್ದಾರೆ.



'ಸಾಂವಿಧಾನಿಕ ಸವಾಲು: ದೃಷ್ಟಿಕೋನ ಮತ್ತು ಮಾರ್ಗಗಳು' ವಿಚಾರಗೋಷ್ಠಿ ಉದ್ಘಾಟಿಸಿದ ಅವರು ಸಭಿಕರ ಘೋಷಣೆಗೆ ಪ್ರತಿಕ್ರಿಯಿಸಿದರು.

ರಾಹುಲ್ ಭಾಷಣ ಆರಂಭಿಸಿದಾಗ ಸಭಿಕರು, 'ಇಸ್ ದೇಶ್ ಕಾ ರಾಜಾ ಕೈಸಾ ಹೋ? ರಾಹುಲ್ ಗಾಂಧಿ ಜೈಸಾ ಹೋ' ಎಂದು ಘೋಷಣೆ ಕೂಗಿದರು. ಅದಕ್ಕೆ ಪ್ರತಿಕ್ರಿಯಿಸಿದ ರಾಹುಲ್, 'ನೋ ಬಾಸ್, ಮೈ ರಾಜಾ ನಹೀಂ ಹೂ. ರಾಜಾ ಬನಾನೇ ಭೀ ನಹಿಂ ಚಾಹತಾ ಹೂ. ಮೈ ರಾಜಾ ಕೇ, ವೋ ಕಾನ್ಸೆಪ್ಟ್ ಕೆ ಭೀ ಎಗೆನೆಸ್ಟ್ ಹೂ'(ಇಲ್ಲ ಬಾಸ್, ನಾನು ರಾಜನಲ್ಲ. ನಾನು ರಾಜನಾಗಲು ಬಯಸುವುದಿಲ್ಲ. ರಾಜ ಮತ್ತು ಆ ಪರಿಕಲ್ಪನೆಗೆ ವಿರುದ್ಧವಾಗಿದ್ದೇನೆ) ಎಂದು ಪ್ರತಿಕ್ರಿಯಿಸಿದರು. ಈ ಹಿಂದೆ ಪ್ರಧಾನಿ ಮೋದಿ ಅವರನ್ನು 'ರಾಜ' ಎಂದು ಕರೆದು ವ್ಯಂಗ್ಯವಾಡಿದ್ದ ರಾಹುಲ್, ಮೋದಿ ಜನರ ಧ್ವನಿ ಕೇಳುತ್ತಿಲ್ಲ ಎಂದು ಆರೋಪಿಸಿದ್ದರು.

ಕಾನ್ಪುರ ಬಳಿ ಹಳಿ ತಪ್ಪಿದ ಸಬರಮತಿ

ಕಾನ್ಪುರ: ಉತ್ತರ ಪ್ರದೇಶದ ಕಾನ್ಪುರ ಬಳಿ ಸಬರಮತಿ ಜನಸಾಧಾರಣ ಎಕ್ಸ್‌ಪ್ರೆಸ್(ರೈಲುಗಾಡಿ ಸಂಖ್ಯೆ 15269) ಶನಿವಾರ ಹಳಿ ತಪ್ಪಿದೆ. ರೈಲು ಮಾರ್ಗ ಸಂಖ್ಯೆ 4ರ ಹಳಿಗೆ

ಬದಲಾವಣೆಗೊಳ್ಳುತ್ತಿದ್ದಾಗ ಹಳಿ ತಪ್ಪಿದೆ. ಲೋಕೊ ಪೈಲಟ್ ತಕ್ಷಣವೇ ಬ್ರೇಕ್ ಹಾಕಿದ್ದರಿಂದ ದೊಡ್ಡ ಅನಾಹುತವಾಗುವುದು ಸ್ವಲ್ಪದರಲ್ಲೇ ತಪ್ಪಿದೆ. ಅದೃಷ್ಟವಶಾತ್ ಎಲ್ಲಾ ಪ್ರಯಾಣಿಕರು ಸುರಕ್ಷಿತರಾಗಿದ್ದಾರೆ. ಯಾವುದೇ ಸಾವು-ನೋವು ವರದಿಯಾಗಿಲ್ಲ ಎಂದು ರೈಲ್ವೆ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಜನಸಾಧಾರಣ ಎಕ್ಸ್‌ಪ್ರೆಸ್ ರೈಲು ಉತ್ತರ ಪ್ರದೇಶದ ಪಂಕಿ ನಿಲ್ದಾಣದಿಂದ ಗುಜರಾತ್‌ನ ಭೌಲ್‌ಪುರದತ್ತ ಸಂಚರಿಸುತ್ತಿತ್ತು. ರೈಲಿನ ಕೊನೆಯ ಎರಡು ಬೋಗಿಗಳು ಹಳಿ ತಪ್ಪಿದವು. ಸ್ಥಳದಿಂದ ಬೋಗಿಗಳನ್ನು ತೆರವುಗೊಳಿಸಿ ಹಳಿಗಳ ದುರಸ್ತಿ ಮಾಡಲಾಗಿದೆ. ಮತ್ತು ಪರಿಹಾರ ತಂಡಗಳು ಸ್ಥಳದಲ್ಲಿ ಸಕ್ರಿಯವಾಗಿವೆ ಎಂದು ರೈಲ್ವೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮ.ಪ್ರ: ಜಲಪಾತಕ್ಕೆ ಮೂರು ವಿದ್ಯಾರ್ಥಿ ಬಲಿ

ಭೋಪಾಲ್: ಮಧ್ಯಪ್ರದೇಶದ ನರಸಿಂಗಪುರ ಜಿಲ್ಲೆಯಲ್ಲಿನ ಹತಿನಾಲಾ-ಬಿಲ್ಥಾ ಜಲಪಾತದಲ್ಲಿ ಸ್ನಾನಕ್ಕಿಳಿದ 2 ಬೇರೆ ಶಾಲೆಗಳ 12ನೇ ತರಗತಿಯ ಮೂರು ವಿದ್ಯಾರ್ಥಿಗಳು

ಮುಳುಗಿ ಸಾವನ್ನಪ್ಪಿದ್ದಾರೆ. ತನ್ಮಯ್ ಶರ್ಮಾ, ಅಶ್ವಿನ್ ಜಾಟ್, ಅಕ್ಷತ್ ಸೋನಿ ಮೃತರು.

ಪ್ರವಾಸೋದ್ಯಮ ಇಲಾಖೆಯ ರಸಪ್ರಶ್ನೆ ಸ್ಪರ್ಧೆ ಕಾರಣ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ನರಸಿಂಗಪುರ ನಗರವಾಸಿಗಳಾದ ವಿದ್ಯಾರ್ಥಿಗಳು ಶಾಲೆಗೆ ಹೋಗುವುದಾಗಿ ಮನೆಯಲ್ಲಿ ಹೇಳಿ 40 ಕಿಮೀ ದೂರದ ಜಲಪಾತದ ಬಳಿ ತೆರಳಿದ್ದರು. ವಿದ್ಯಾರ್ಥಿಗಳು ತೆರಳಿದ್ದ ಸ್ಕೂಟರ್‌ನಲ್ಲಿ ಜಿಪಿಎಸ್ ವ್ಯವಸ್ಥೆ ಇದ್ದುದರಿಂದ ವಿದ್ಯಾರ್ಥಿಗಳು ಜಲಪಾತದ ಬಳಿ ತೆರಳಿರುವುದು ತಿಳಿಯಿತು. ಜಲಪಾತದ ಬಳಿ ವಿದ್ಯಾರ್ಥಿಗಳ ಸಮವಸ್ತ್ರ ಮತ್ತು ಬ್ಯಾಗ್, ಸ್ಕೂಟರ್ ಪತ್ತೆಯಾದ ನಂತರ ಈಜು ನಿಪುಣರನ್ನು ನೀರಿಗಿಳಿಸಿ ಶೋಧಿಸಿದಾಗ ನೀರಿನಾಳದಲ್ಲಿ 3 ಶವಗಳು ಸಿಕ್ಕವು ಎಂದು ಪೊಲೀಸರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಮೆರಿಕದಲ್ಲಿ ಭಾರತ 8 ಕಾನ್ಸುಲರ್ ಕಚೇರಿ

ನ್ಯೂಯಾರ್ಕ್: ಹೆಚ್ಚುವರಿ ಸುಂಕ ಸಮರ ನಡೆದಿರುವ ಮಧ್ಯೆಯೇ ಭಾರತ ಸರಕಾರ, ಅಮೆರಿಕದ 8 ನಗರಗಳಲ್ಲಿ ಹೊಸದಾಗಿ ಕಾನ್ಸುಲರ್ ಕಚೇರಿಗಳನ್ನು ತೆರೆದಿದೆ. ಅಲ್ಲದೇ, ಲಾಸ್‌ಏಂಜಲೀಸ್



ನಗರದಲ್ಲಿಯೂ ಮತ್ತೊಂದು ಕಾನ್ಸುಲ್ ಕಚೇರಿ ತೆರೆಯಲೂ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಯೋಜಿಸಿದೆ. ಹೊಸ ಕಚೇರಿಗಳು ಅಮೆರಿಕದಲ್ಲಿನ ಭಾರತ ಮೂಲದ ಜನರಿಗೆ ವೀಸಾ, ಜೀವಿತಾವಧಿ ಪ್ರಮಾಣಪತ್ರ, ಜನನ ಪ್ರಮಾಣಪತ್ರ, ವಿವಾಹ ಪ್ರಮಾಣಪತ್ರ, ಪಾಸ್‌ಪೋರ್ಟ್, ಪೊಲೀಸ್ ಕ್ಲಿಯರೆನ್ಸ್ ಮತ್ತಿತರ ದಾಖಲೆ ಪತ್ರಗಳನ್ನು ಒದಗಿಸುವ ಸೇವೆಗಳು ಭಾರತೀಯರಿಗೆ ಸರಾಗವಾಗಿ ಲಭಿಸುವಂತೆ ಮಾಡಲಿವೆ ಎಂದು ಹೇಳಲಾಗಿದೆ. ಡೆಟ್ರಾಯ್ಟ್, ಎಡಿಸನ್, ಒರ್ಲಾಂಡೊ, ಬಾಸ್ಟನ್, ಕೊಲಂಬಸ್, ಡಲ್ಲಾಸ್, ರಾಲಿ, ಸ್ಯಾನ್‌ಜೋಸ್ ನಗರಗಳಲ್ಲಿ ಭಾರತದ ಹೊಸ ಕಾನ್ಸುಲ್ ಕಚೇರಿಗಳನ್ನು ತೆರೆಯಲಾಗಿದೆ. ಎಂಟೂ ಹೊಸ ಕಚೇರಿಗಳನ್ನು ಅಮೆರಿಕದಲ್ಲಿರುವ ಭಾರತದ ರಾಯಭಾರಿ ವಿನಯ್ ಕ್ವಾತ್ರಾ ಅವರು ಶನಿವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು. 17 ಕಾನ್ಸುಲರ್ ಕಚೇರಿ ಹೊಂದಿದಂತೆ ಆಗಿದೆ.

ಸಮಾಚಾರ ಸಣ್ಣದಲ್ಲ

ನಕಲಿ ಚಿನ್ನದ ನಾಣ್ಯ ನೀಡಿದ ಇಬ್ಬರ ಬಂಧನ

ದಾವಣಗೆರೆ: ಅರ್ಧ ಕೆ.ಜಿ. ನಕಲಿ ಚಿನ್ನದ ನಾಣ್ಯಗಳನ್ನು ನೀಡಿ 8 ಲಕ್ಷ ದೋಚಿ ಪರಾರಿಯಾಗಿದ್ದ ಆರೋಪಿಗಳಲ್ಲಿ ಇಬ್ಬರನ್ನು ಜಗಳೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 7.5 ಲಕ್ಷ ನಗದು ಹಾಗೂ 2 ಗ್ರಾಂ ಅಸಲಿ ಮತ್ತು 505 ಗ್ರಾಂ ನಕಲಿ ಚಿನ್ನದ ನಾಣ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ. ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಬಟನಳ್ಳಿ ಗ್ರಾಮದ ಪ್ರಕಾಶ್ (29) ಹಾಗೂ ಮಾರಪ್ಪ (58) ಬಂಧಿತರು. ಪ್ರಕರಣದ ಪ್ರಮುಖ ಆರೋಪಿ ಸುರೇಶ್‌ಗೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ತೆಲಂಗಾಣದ ನಾಲಗೊಂಡಾ ಜಿಲ್ಲೆಯ ಚಳಕುರ್ತಿ ತಾಂಡಾದ ರಮಾವತ್ ಭಾಸ್ಕರ್ ವಂಚನೆಗೆ ಒಳಗಾದವರು. ಈ ಸಂಬಂಧ ಜಗಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಹೋರಾಟಕ್ಕೆ ಮಂಡ್ಯದ 5 ಸಾವಿರ ಮಂದಿ

ಮಂಡ್ಯ: ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನ ನಡೆದಿರುವ ಸಂಬಂಧ ಆ.5ರಂದು ಕಾಂಗ್ರೆಸ್ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಷ್ಟ್ರಮಟ್ಟದ ಬೃಹತ್ ಪ್ರತಿಭಟನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಈ ಪ್ರತಿಭಟನೆಗೆ ಮಂಡ್ಯ ಜಿಲ್ಲೆಯಿಂದ 5 ಸಾವಿರ ಜನರು ಬರಬೇಕೆಂದು ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ ಅವರು ಮತಗಳ್ಳತನವಾಗಿರುವ ಸಂಬಂಧ ಈಗಾಗಲೇ ಅಭಿಪ್ರಾಯ ವ್ಯಕ್ತಪಡಿಸಿ, ಉದಯಪುರ ಲೋಕಸಭಾ ಕ್ಷೇತ್ರದಲ್ಲಿ ಮತದಾನದ ಸಂಶೋಧನೆ ನಡೆಸಲಾಗಿ ಸಾಬೀತಾದ ಕಾರಣದಿಂದ ಪ್ರತಿಭಟನೆಯ ಮೂಲಕ ರಾಷ್ಟ್ರವ್ಯಾಪಿ ಜಾಗೃತಿ ಮೂಡಿಸಲಾಗುವುದು ಎಂದರು. ಉದಯಪುರ ಲೋಕಸಭಾ ಕ್ಷೇತ್ರದಲ್ಲಿ ಮತದಾನದ ಸಂಶೋಧನೆ ಆಧಾರದ ಮೇಲೆ ಚುನಾವಣಾ ಆಯೋಗಕ್ಕೆ ದೂರು ನೀಡಿದರೂ ದೂರು ಸ್ವೀಕರಿಸದ ಕಾರಣ ಪ್ರತಿಭಟನೆಯ ಮೂಲಕ ಚುನಾವಣಾ ಆಯೋಗದ ವೈಫಲ್ಯ ಹಾಗೂ ಕೇಂದ್ರಾಡಳಿತದ ಬಿಜೆಪಿ ಚುನಾವಣಾ ಆಯೋಗದ ದುರುಪಯೋಗವನ್ನು ಖಂಡಿಸಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಪ್ರಜ್ವಲ್‌ಗೆ ಮೊಬೈಲೇ ಮುಳುವು | ತಾನೇ ಸೆರೆ ಹಿಡಿದ ವಿಡಿಯೊಗಳೇ ಕಂಟಕ | ಇನ್ನಷ್ಟು ಪ್ರಕರಣಗಳ ತನಿಖೆಗೆ ಎಸ್‌ಐಟಿ ಸಿದ್ಧತೆ

ಸ್ವಯಂಕೃತ ಅಪರಾಧ: ಪ್ರಜ್ವಲ್ ಜೈಲು ಪಾಲು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಅತ್ಯಾಚಾರ ಪ್ರಕರಣ ಸಂಬಂಧ ಹಾಸನ ಮಾಜಿ ಸಂಸದ ಪ್ರಜ್ವಲ್‌ಗೆ ಜೀವಿತಾವಧಿಯ ಶಿಕ್ಷೆಯ ತೀರ್ಪು ಹೊರಬಿದ್ದಿದ್ದು, ಇನ್ನೂ 3 ಪ್ರಮುಖ ಪ್ರಕರಣ ಬಾಕಿ ಇದೆ. ಇವುಗಳಲ್ಲಿ ಮೂರನೇ ಪ್ರಕರಣದ ವಿಚಾರಣೆಯೂ ಆರಂಭವಾಗಿದೆ. ಈಗ ಆದೇಶ ಹೊರಬಿದ್ದಿರುವುದು ಎರಡನೇ ಪ್ರಕರಣದ್ದು, ಹೀಗಿದ್ದರೂ ಕೊನೆಯುಸಿರು ಇರುವ ತನಕ ಪ್ರಜ್ವಲ್ ಹೊರಗೆ ಬರುವಂತಿಲ್ಲ ಎಂದು ತನಿಖೆಯ ಹೊಣೆ ಹೊತ್ತ ಎಸ್‌ಐಟಿ ಹೇಳಿದೆ.

ನ್ಯಾಯಾಧೀಶರಾದ ಸಂತೋಷ್ ಗಜಾನನ್ ಭಟ್ ಅವರ ಪೀಠದಿಂದ ಮತ್ತೊಂದು ಪ್ರಕರಣದ ವಿಚಾರಣೆ ಆರಂಭವಾಗಿದ್ದು, ಇದೂ ಕೂಡ ಅತ್ಯಾಚಾರ ಪ್ರಕರಣದ್ದಾಗಿದೆ. ಹಾಸನ ಮೂಲದ ಸಂತ್ರಸ್ತೆ ಕೂಡ ನ್ಯಾಯಾಲಯದಲ್ಲಿ ಹಾಜರಾಗಿದ್ದಾರೆ. ತನಿಖೆಯ ಹೊಣೆ ಹೊತ್ತ ಎಸ್‌ಐಟಿ ತಂಡ ಐದು ಪ್ರಕರಣದ ತನಿಖೆ ನಡೆಸಿದೆ. ಈಗ ನಾಲ್ಕು ಕೇಸ್‌ಗಳಲ್ಲಿ ಒಂದು ಪ್ರಕರಣದ ವಿಚಾರಣೆ ನಡೆದು ಜನಪ್ರತಿನಿಧಿಗಳ ನ್ಯಾಯಾಲಯ ತೀರ್ಪು ನೀಡಿದೆ. ಇದರ ಬೆನ್ನಲ್ಲೇ ಪ್ರಜ್ವಲ್ ರೇವಣ್ಣ ಮತ್ತೊಂದು ಪ್ರಕರಣದ ವಿಚಾರಣೆ ಎದುರಿಸಬೇಕಾಗಿದೆ.

ಮೊಬೈಲೇ ಮುಳುವು: ಸ್ವಯಂಕೃತ ಅಪರಾಧ: ಅತ್ಯಾಚಾರ ಪ್ರಕರಣದಲ್ಲಿ ಪ್ರಜ್ವಲ್‌ಗೆ ಶಿಕ್ಷೆ ಪ್ರಕಟವಾಗಿರುವುದು ತಾನು ಮಾಡಿಕೊಂಡ ಸ್ವಯಂಕೃತ ಅಪರಾಧದಿಂದಲೇ. ಅಪರಾಧಿಗೆ ತನ್ನ ಮೊಬೈಲೇ ಮುಳುವಾಗಿ ಕಾಡಿದ್ದಲ್ಲದೆ, ಸಂತ್ರಸ್ತೆ ಬಟ್ಟೆ ಮೇಲೆ ಪ್ರಜ್ವಲ್ ವೀರ್ಯದ ಕಲೆಯೂ ಪ್ರಮುಖ ಸಾಕ್ಷಿಯಾಗಿ ಪರಿಗಣಿಸಲಾಗಿದೆ.

ಎಸ್‌ಐಟಿ ತನಿಖೆ ವೇಳೆ ಅತ್ಯಾಚಾರ ನಡೆದಿರೋದು ದೃಢವಾಗಿತ್ತು. ಅತ್ಯಾಚಾರಕ್ಕೆ ಒಳಗಾಗಿದ್ದ ಸಂತ್ರಸ್ತೆಯ ಒಳ ಉಡುಪಿನಲ್ಲಿ ಪ್ರಜ್ವಲ್ ವೀರ್ಯದ ಕಲೆ ಇದ್ದು, ಅದು ಆತನದ್ದೇ ಎನ್ನುವುದು ದೃಢವಾಗಿತ್ತು. ಅಲ್ಲದೇ ಸಂತ್ರಸ್ತೆ ಕೂಡ ಆತನೇ ಬೆದರಿಸಿ ಅತ್ಯಾಚಾರ ಮಾಡಿದ್ದಾಗಿ ಹೇಳಿದ್ದಳು. ಇದಲ್ಲದೆ ತಾಂತ್ರಿಕವಾಗಿ ಮುಳುವಾಗಿದ್ದೇ ಆತನ ಮೊಬೈಲ್ ವಿಡಿಯೊಗಳು. ತಾನೇ ಸೆರೆ ಹಿಡಿದ ಲೈಂಗಿಕ ದೌರ್ಜನ್ಯದ ವಿಡಿಯೊಗಳಿಂದಲೇ ಪ್ರಜ್ವಲ್ ರೇವಣ್ಣ ಶಿಕ್ಷೆಗೆ ಒಳಗಾಗುವಂತಾಗಿದೆ. ಇದಕ್ಕೆ ಪೂರಕವಾಗಿ ತನ್ನದಲ್ಲ ಎಂದು ವಾದ ಮಂಡನೆಯಾಗಿದ್ದರೂ, ವಿಧಿವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ಪರೀಕ್ಷೆಯಲ್ಲಿ ವಿಡಿಯೊ ದೃಢಪಟ್ಟಿತ್ತು.

ರಾಜ್ಯ ಸರಕಾರ ಈ ಪ್ರಕರಣಗಳ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿತ್ತು. ಎಸ್‌ಐಟಿಯು ಸಂತ್ರಸ್ತೆಯರ ಹೇಳಿಕೆಗಳನ್ನು ದಾಖಲಿಸಿ, ತಾಂತ್ರಿಕ ಸಾಕ್ಷ್ಯಗಳನ್ನು ಸಂಗ್ರಹಿಸಿ ದೋಷಾರೋಪ ಪಟ್ಟಿ ಸಲ್ಲಿಸಿತು. ಪ್ರಜ್ವಲ್ ಮೊಬೈಲ್‌ನಿಂದ ಪಡೆದ ವಿಡಿಯೊ ತುಣುಕುಗಳು ಪ್ರಕರಣದಲ್ಲಿ ಪ್ರಮುಖ ಸಾಕ್ಷ್ಯವಾದವು.

ಪ್ರಜ್ವಲ್ ರೇವಣ್ಣ ಜಾಮೀನು ಕೋರಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರೂ, ವಿಚಾರಣಾ ನ್ಯಾಯಾಲಯದಲ್ಲಿ ಮೊದಲು ಜಾಮೀನು ಕೋರಬೇಕು ಎಂದು ಸೂಚಿಸಿ ಅರ್ಜಿ ವಜಾ ಮಾಡಿದ್ದು, ಮತ್ತೊಮ್ಮೆ ವಿಶೇಷ ನ್ಯಾಯಾಲಯದಲ್ಲಿ ವಾದ ಮಂಡನೆಯಾಗಿತ್ತು. ಇದೇ ವೇಳೆ ಎಚ್.ಡಿ.ರೇವಣ್ಣ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ ಹಾಗೂ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಭವಾನಿ ರೇವಣ್ಣ ಜಾಮೀನಿನ ಮೇಲೆ ಹೊರಗಿದ್ದಾರೆ.

> ಎರಡು ವಾರದಲ್ಲಿ ಪೆನ್‌ಡ್ರೈವ್ ಹಂಚಿಕೆ ಮಾಡಿದ ಪ್ರಕರಣದ ಚಾರ್ಜ್‌ಶೀಟ್ ಸಲ್ಲಿಕೆ ಮಾಡಲಾಗುತ್ತದೆ. ಅದರಲ್ಲಿ ಯಾರೆಲ್ಲ ಆರೋಪಿಗಳಿದ್ದಾರೆ ಎನ್ನುವುದು ತಿಳಿಯಲಿದೆ. ಈಗಿನ ತೀರ್ಪು ಬಂದ ಪ್ರಕರಣದಲ್ಲಿ ಕೊನೆವರೆಗೂ ನಮ್ಮ ಜತೆ ನಿಂತು ಶಿಕ್ಷೆ ನೀಡುವವರೆಗೆ ಮಹಿಳೆ ಇದ್ದರು. ನ್ಯಾಯಾಲಯದಲ್ಲಿ ನಮಗೆ ವಾದ ಮಾಡಲು ಮಹಿಳೆ ಸಹಕಾರ ನೀಡಿದರು.
> -ಬಿ.ಕೆ.ಸಿಂಗ್, ಎಸ್‌ಐಟಿ ಮುಖ್ಯಸ್ಥ

ಮುಖಭಂಗ

ಪ್ರಜ್ವಲ್ ರೇವಣ್ಣ ರಾಜಕೀಯ ಹಿನ್ನಲೆ ಇರುವ ಪ್ರತಿಷ್ಠಿತ ಕುಟುಂಬದ ಕುಡಿ. ದೇವೇಗೌಡರು ಸುಧೀರ್ಘ ರಾಜಕೀಯ ಹಾಗೂ ಮಾಜಿ ಪ್ರಧಾನಿಯಾಗಿದ್ದವರು. ಅವರ ಚಿಕ್ಕಪ್ಪ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಕೇಂದ್ರ ಸಚಿವರು. ಮಾತ್ರವಲ್ಲ ಅವರ ತಂದೆ ರೇವಣ್ಣ ಕೂಡ ಮಾಜಿ ಸಚಿವ ಹಾಗೂ ರಾಜ್ಯದ ಪ್ರಭಾವಿ ರಾಜಕಾರಣಿ ಇಷ್ಟೆಲ್ಲ ಹಿನ್ನೆಲೆ ಹೊಂದಿರುವ ಪ್ರಜ್ವಲ್ ರೇವಣ್ಣ ತಮ್ಮದೇ ಸ್ವಯಂಕೃತ ಅಪರಾಧದಿಂದ ಇಡೀ ಕುಟುಂಬದ ಮಾನ ಹರಾಜು ಹಾಕಿದ್ದಾರೆ. ಸ್ವತಃ ಮಾಜಿ ಸಿಎಂ ಕುಮಾರಸ್ವಾಮಿಯವರೇ ಕಾನೂನಿ ಪ್ರಕಾರ ಶಿಕ್ಷೆಯಾಗಲಿ ಎಂದು ಹೇಳಿಕೆ ನೀಡುವ ಮೂಲಕ ಹಾಗೂ ತಮಗೂ ರೇವಣ್ಣ ಕುಟುಂಬಕ್ಕೂ ಸಂಬಂಧವಿಲ್ಲ ಎನ್ನುವ ಮೂಲಕ ಮುಖಭಂಗದಿಂದ ಜಾರಿಕೊಂಡಿದ್ದಾರೆ.

ಆರ್ಥಿಕ ದುರ್ಬಲರ ಮೇಲೆ ಪ್ರಬಲರ ಅನ್ಯಾಯ

ಕೊನೆಯುಸಿರು ಇರುವ ತನಕ ಪ್ರಜ್ವಲ್ ಹೊರಗೆ ಬರುವಂತಿಲ್ಲ: ಎಸ್‌ಐಟಿ

ಐದು ಪ್ರಕರಣದ ತನಿಖೆ ಪೂರ್ಣಗೊಂಡಿದೆ, ಚಾರ್ಜ್‌ಶೀಟ್ ಆಗಿದೆ. ಇದರ ಆಧಾರದಲ್ಲಿ ಕೊನೆಯುಸಿರು ಇರುವ ತನಕ ಅಪರಾಧಿ ಹೊರಗೆ ಬರುವಂತಿಲ್ಲ ಎಂದು ಎಸ್‌ಐಟಿ ಮುಖ್ಯಸ್ಥ ಬಿಜಯ್ ಕುಮಾರ್ ಸಿಂಗ್ ಹೇಳಿದ್ದಾರೆ. ಸಿಐಡಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂತ್ರಸ್ತೆ ಸಾಮಾಜಿಕವಾಗಿ ಕೆಳಸ್ಥಾನದಲ್ಲಿ ಇದ್ದರು. ಆರೋಪಿ ಸಮಾಜದಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದನು. ನ್ಯಾಯ ಬೇಕು ಅಂತ ಸಂತ್ರಸ್ಥೆ ನಮ್ಮ ಜತೆ ನಿಂತು ಇಂತ ತೀರ್ಪಿಗೆ ಕಾರಣಭೂತರಾಗಿದ್ದಾರೆ ಎಂದು ಪ್ರಶಂಶಿಸಿದರು.

ತನಿಖೆ ಆಧಾರದಂತೆ ಪ್ರಕರಣದಲ್ಲಿ ಎಲ್ಲಾ ಶಿಕ್ಷೆಗಳು ಕಠಿಣ ಶಿಕ್ಷೆಯಾಗಲಿವೆ. ನಮಗೆ ಒತ್ತಡ ಇತ್ತು ಎಂದು ಹೇಳಲ್ಲ, ಸವಾಲುಗಳು ಇದ್ದವು. 4 ವರ್ಷ ನಂತರ ಕೇಸ್ ನಮಗೆ ಬಂದಿತ್ತು. ವೈಜ್ಞಾನಿಕವಾಗಿ ಸಾಕ್ಷಿಗಳನ್ನು ಸಂಗ್ರಹಿಸಿದ್ದೇವೆ. ಬಳಿಕ ಸರಿಯಾದ ಕ್ರಮದಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದೆವು. ಪೆನ್ ಡ್ರೈವ್, ವಿಡಿಯೊ ಹರಿಬಿಟ್ಟವರ ಬಗ್ಗೆ ಪ್ರತ್ಯೇಕ ಕೇಸ್ ಆಗಿದೆ. ಅದು ಕೂಡ ಗೊತ್ತಾಗಿದೆ, ಚಾರ್ಜ್‌ಶೀಟ್ ಆಗುತ್ತದೆ ಎಂದರು. ಸಾಮಾಜಿಕವಾಗಿ, ಆರ್ಥಿಕವಾಗಿ ಕೆಳಗೆ ಇರುವ ಮಹಿಳೆ ಮೇಲೆ ಎಲ್ಲ ರೀತಿಯಿಂದಲೂ ಪ್ರಬಲರಾಗಿದ್ದ ಪ್ರಜ್ವಲ್ ರೇವಣ್ಣ ಅವರು ಅನ್ಯಾಯ ಎಸಗಿದ್ದರು. ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ. ಹಾಸನದಲ್ಲಿ ಪೆನ್‌ಡ್ರೈವ್‌ಗಳನ್ನು ಹಂಚಿಕೆ ಮಾಡಲಾಗಿತ್ತು. ಇದರಲ್ಲಿ ಬಹಳ ಮಹಿಳೆಯರ ಅಶ್ಲೀಲ ವಿಡಿಯೊಗಳು ಇದ್ದವು. ಒಟ್ಟು ಆರು ಪ್ರಕರಣಗಳು ದಾಖಲಾಗಿದ್ದವು. ಹೀಗಾಗಿ ರಾಜ್ಯ ಸರಕಾರ ಎಸ್‌ಐಟಿ ಅನ್ನು ರಚನೆ ಮಾಡಿತ್ತು. ಇದರಲ್ಲಿ ನಾನು, ಸೀಮಾ ಹಾಗೂ ಸುಮಾನ್ ಅವರು ಇದ್ದರು. 4 ಜನ ಸಂತ್ರಸ್ತರು ಮುಂದೆ ಬಂದು ದೂರು ದಾಖಲು ಮಾಡಿದ್ದರು. ಇದರಲ್ಲಿ ಒಂದು ಹೊಳೆನರಸೀಪುರ, ಕೆ.ಆರ್. ನಗರ, ಹಾಸನದಲ್ಲಿ ಸೇರಿ ಒಟ್ಟು 6 ಪ್ರಕರಣಗಳು ನಾವು ತೆಗೆದುಕೊಂಡಿದ್ದೆವು. ಕಳೆದ ವರ್ಷ ಡಿಸೆಂಬರ್ 31 ರಂದು ನಮಗೆ ಪ್ರಕರಣಗಳನ್ನು ಒಪ್ಪಿಸಲಾಗಿತ್ತು. ಜ.3 ರಿಂದ ಒಂದು ಕೇಸ್ ನಿಂದ ಟ್ರಯಲ್ ಪ್ರಾರಂಭವಾಯಿತು. ಪ್ರಜ್ವಲ್‌ಗೆ ಕಠಿಣ ಶಿಕ್ಷೆಯನ್ನು ಕೋರ್ಟ್ ವಿಧಿಸಿದೆ. ಆಗಸ್ಟ್ 2 ಅಂದರೆ ಇಲ್ಲಿವರೆಗೆ 1 ವರ್ಷ 4 ತಿಂಗಳ ನಂತರ ಕೋರ್ಟ್ ತೀರ್ಪು ಬಂದಿದೆ ಎಂದರು.

ಒಟ್ಟು ನಾಲ್ಕು ಕೇಸ್

ಪ್ರಕರಣ 1: ಹೊಳೆನರಸೀಪುರ ಟೌನ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ
ತಂದೆ ರೇವಣ್ಣ, ಹಾಗೂ ಪ್ರಜ್ವಲ್ ರೇವಣ್ಣ ವಿರುದ್ಧ ದಾಖಲಾಗಿದ್ದ ಮೊದಲ ಕೇಸ್
2024 ಏಪ್ರಿಲ್ 28 ರಂದು ದಾಖಲಾಗಿದ್ದ ಕೇಸ್
ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ
ಪ್ರಜ್ವಲ್ ರೇವಣ್ಣ ವಿರುದ್ಧ ಅತ್ಯಾಚಾರ ಆರೋಪ

ಪ್ರಕರಣ 2: ಸಿಐಡಿ ಸೈಬರ್ ಕ್ರೈಮ್ ಠಾಣೆಯಲ್ಲಿ ಮೇ 7 ರಂದು ದಾಖಲಾಗಿದ್ದ ಕೇಸ್
ಕೆ.ಆರ್.ನಗರ ಮೂಲದ ಸಂತ್ರಸ್ತೆ ನೀಡಿದ್ದ ದೂರು
ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ ಪ್ರಕರಣ
ಅತ್ಯಾಚಾರ ಎಸಗಿ ಮೊಬೈಲ್‌ನಲ್ಲಿ ವಿಡಿಯೊ ಸೆರೆ ಆರೋಪ

ಪ್ರಕರಣ 3: ಹಾಸನ ಮೂಲದ ಮಹಿಳೆಯೊಬ್ಬರು ದಾಖಲು ಮಾಡಿದ್ದ ಕೇಸ್
ಸಿಐಡಿ ಸೈಬರ್ ಕ್ರೈಮ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ
2014ಮೇ ತಿಂಗಳಲ್ಲೆ ದಾಖಲಾಗಿದ್ದ ಮೂರನೇ ಕೇಸ್, ಅತ್ಯಾಚಾರ ಎಸಗಿ ವಿಡಿಯೊ ಮಾಡಿದ ಆರೋಪ

ಪ್ರಕರಣ 4: ಕೆ.ಆರ್.ನಗರ ಠಾಣೆಯಲ್ಲಿ ದಾಖಲಾಗಿದ್ದ ಕೇಸ್
ಸಂತ್ರಸ್ತೆಯನ್ನ ಕಿಡ್ನಾಪ್ ಮಾಡಿದ ಆರೋಪದಡಿ ಎಫ್‌ಐಆರ್
2024 ಜೂನ್ 10 ರಂದು ದಾಖಲಾಗಿದ್ದ ಕೇಸ್

ಎಸ್‌ಐಟಿ ತಂಡ

ಪ್ರಜ್ವಲ್ ವಿರುದ್ಧ ದಾಖಲಾದ ಪ್ರಕರಣಗಳ ತನಿಖೆಗೆ ಎಸ್‌ಐಟಿ ರಚನೆ ಮಾಡಲಾಗಿತ್ತು. ಎಸ್‌ಐಟಿ ಮುಖ್ಯಸ್ಥರಾದ ಎಡಿಜಿಪಿ ಬಿ.ಕೆ. ಸಿಂಗ್ ನೇತೃತ್ವ ವಹಿಸಿಕೊಂಡಿದ್ದರು. ತಂಡದಲ್ಲಿ ಇಬ್ಬರು ಮಹಿಳಾ ಐಪಿಎಸ್ ಅಧಿಕಾರಿಗಳಾದ ಸೀಮಾ ಲಾಟ್ಕರ್ ಹಾಗೂ ಸುಮನಾ.ಡಿ ಪನ್ನೇಕರ್ ತನಿಖೆ ಉಸ್ತುವಾರಿ ವಹಿಸಿಕೊಂಡಿದ್ದರು.

ವಾದ: ಬಿ. ಎನ್. ಜಗದೀಶ್ (ಎಸ್‌ಪಿಪಿ)

- ಸಾಕ್ಷ್ಯಾಧಾರ ನಾಶಕ್ಕೆ ಪ್ರಯತ್ನಿಸಲಾಗಿದೆ. ಅಪರಾಧಿಯ ಕುಟುಂಬದವರು ಸಂತ್ರಸ್ತೆಯನ್ನೇ ಅಪಹರಿಸಿ, ತಮಗೆ ಬೇಕಾದ ರೀತಿ ಹೇಳಿಕೆ ಪಡೆದುಕೊಂಡಿದ್ದಾರೆ.
- ಸಂತ್ರಸ್ತೆಗೆ ಬೆದರಿಕೆಯೊಡ್ಡಿ ಸಾಕ್ಷ್ಯನಾಶಕ್ಕೆ ಯತ್ನಿಸಲಾಗಿದೆ. ಇವೆಲ್ಲವೂ ಗಂಭೀರ ಅಪರಾಧವಾಗಿದೆ. ಸಾಲದಕ್ಕೆ ಕೋರ್ಟ್ ವಿಚಾರಣೆಯನ್ನೂ ವಿಳಂಬ ಮಾಡುವ ಯತ್ನವೂ ನಡೆದಿತ್ತು.
- ಅಪರಾಧಿಯ ಮೇಲೆ ಮತ್ತಷ್ಟು ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಬೇರೆ ಬೇರೆ ಮಹಿಳೆಯರ ಮೇಲಿನ ಅತ್ಯಾಚಾರದ ವಿಡಿಯೊಗಳಿವೆ.
- ಹಣ ಅಧಿಕಾರ ಇರುವ ಇವರಿಗೆ ಕಡಿಮೆ ಶಿಕ್ಷೆಯಾಗಬಾರದು. ಅಪರಾಧಿಗೆ ಯಾವುದೇ ರೀತಿ ಕನಿಕರ ತೋರಬಾರದು. ಅಪರಾಧಿಯ ವಕ್ರ ಮನಸ್ಥಿತಿ ಗಮನದಲ್ಲಿಟ್ಟುಕೊಳ್ಳಬೇಕು.
- ಗರಿಷ್ಠ ಪ್ರಮಾಣದ ಶಿಕ್ಷೆಯನ್ನೇ ಅಪರಾಧಿ ಪ್ರಜ್ವಲ್ ರೇವಣ್ಣಗೆ ನೀಡಬೇಕು. ಜೀವನಪರ್ಯಂತ ಸೆರೆವಾಸದ ಶಿಕ್ಷೆ ವಿಧಿಸಬೇಕು.

ಪ್ರತಿವಾದ: ವಕೀಲರಾದ ನಳೀನಾ ಮಾಯೇಗೌಡ (ಪ್ರಜ್ವಲ್ ರೇವಣ್ಣ ಪರ)

- ಯುವ ಸಂಸದನಾಗಿ ಪ್ರಜ್ವಲ್ ಜನಸೇವೆ ಮಾಡಿದ್ದಾರೆ. ಹಣ ಮಾಡಬೇಕೆಂಬ ಉದ್ದೇಶದಿಂದ ರಾಜಕಾರಣಕ್ಕೆ ಬಂದವರಲ್ಲ. ಆರೋಪಿಯ ರಾಜಕೀಯ ಸ್ಥಾನಮಾನ ಶಿಕ್ಷೆಗೆ ಕಾರಣವಾಗಬಾರದು.
- ಇಷ್ಟು ದಿನ ಅವರು (ಪ್ರಜ್ವಲ್) ಸಂಪಾದಿಸಿದ್ದ ಒಳ್ಳೆಯ ಹೆಸರು ಏನಾಗಬೇಕು. ಪ್ರಜ್ವಲ್ ಯುವಕನಾಗಿದ್ದು ಆತನ ಭವಿಷ್ಯವನ್ನೂ ಗಮನಿಸಬೇಕು.
- ಸಂತ್ರಸ್ತೆ ಸಮಾಜದಿಂದ ತಿರಸ್ಕೃತಗೊಂಡವರಲ್ಲ. ಸಂಸಾರದೊಂದಿಗೆ ಎಂದಿನಂತೆ ಜೀವನ ಸಾಗಿಸುತ್ತಿದ್ದಾರೆ.
- ಚುನಾವಣಾ ಸಂದರ್ಭದಲ್ಲಿಯೇ ವಿಡಿಯೊ ಹರಿಬಿಡಲಾಗಿದ್ದು, ಪ್ರಜ್ವಲ್ ವಿರುದ್ಧ ರಾಜಕೀಯ ಪಿತೂರಿ ನಡೆಸಲಾಗಿದೆ. ಈಗಾಗಲೇ ಮಾಧ್ಯಮಗಳಲ್ಲಿ ತೇಜೋವಧೆ ಆಗಿದೆ.
- ವಯಸ್ಸಾದ ತಂದೆ-ತಾಯಿ ಇದ್ದಾರೆ. ಅವರ ತಾತ ಮಾಜಿ ಪ್ರಧಾನಿಯಾಗಿದ್ದಾರೆ. ನ್ಯಾಯಾಲಯ ವಿಧಿಸುವ ಶಿಕ್ಷೆಯಿಂದ ಪ್ರಜ್ವಲ್ ಅವರ ಭವಿಷ್ಯಕ್ಕೆ ಹಾನಿಯಾಗಬಾರದು.

ಪ್ರಜ್ವಲ್ ರೇವಣ್ಣ ಮುಂದಿನ ಕಾನೂನು ಹೋರಾಟಗಳು?



- ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಪ್ರಜ್ವಲ್ ರೇವಣ್ಣ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು. ತೀರ್ಪು ರದ್ದು ಪಡಿಸಲು ಮನವಿ ಮಾಡಿಕೊಳ್ಳಬಹುದು.
- ಮೇಲ್ಮನವಿ ವಿಚಾರಣೆ ಹೈಕೋರ್ಟ್‌ನಲ್ಲಿ ಮುಗಿಯುವವರೆಗೂ ಈಗ ನೀಡಿರುವ ತೀರ್ಪಿಗೆ ತಡೆಯಾಜ್ಞೆ ನೀಡಿ, ಶಿಕ್ಷೆ ಅಮಾನತ್ತಿನಲ್ಲಿ ಇಡಬಹುದು. ಒಂದು ವೇಳೆ ವಿಶೇಷ ಕೋರ್ಟ್ ತೀರ್ಪುಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದರೆ ಪ್ರಜ್ವಲ್ ರೇವಣ್ಣಗೆ ತಾತ್ಕಾಲಿಕ ರಿಲೀಫ್ ಸಿಗಲೂಬಹುದು
- ಬಾಕಿ ಇರುವ 3 ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣ ಜೈಲಿನಲ್ಲಿ ಇರಬೇಕಾಗುತ್ತದೆ. ಈ ಮೂರು ಪ್ರಕರಣಗಳಲ್ಲಿ ನ್ಯಾಯಾಲಯದಿಂದ ತೀರ್ಪು ಬಂದು, ನಿರಪರಾಧಿಯಾದರೆ ಮಾತ್ರ ಪ್ರಜ್ವಲ್ ರೇವಣ್ಣಗೆ ರಿಲೀಫ್ ಇರುತ್ತದೆ.

ಅತ್ಯಾಚಾರ ಪ್ರಕರಣದ ಕಾಲಾವಧಿ

- ಏ. 24,2024: 2024ರ ಲೋಕಸಭಾ ಚುನಾವಣೆಗೂ ಮುನ್ನ ಪ್ರಜ್ವಲ್ ರೇವಣ್ಣ ಅವರದ್ದ ಎನ್ನಲಾದ ಅಶ್ಲೀಲ ವಿಡಿಯೊ ವೈರಲ್
- ಏ. 28,2024: ಮನೆಕೆಲಸದಾಕೆ ದೂರಿನ ಆಧಾರದ ಮೇಲೆ ಎಚ್.ಡಿ.ರೇವಣ್ಣ ಮತ್ತು ಪ್ರಜ್ವಲ್ ವಿರುದ್ಧ ಲೈಂಗಿಕ ಕಿರುಕುಳ, ಕ್ರಿಮಿನಲ್ ಬೆದರಿಕೆ ಪ್ರಕರಣ ದಾಖಲು, ಎಸ್‌ಐಟಿಗೆ ರವಾನೆ.
- ಏ.29, 2024: ದೂರುದಾರ ಮಹಿಳೆ ನಾಪತ್ತೆ, ಪ್ರಜ್ವಲ್ ಪೋಷಕರ ವಿರುದ್ಧ ಮಹಿಳೆ ಅಪಹರಣ ಆರೋಪ
- ಏ. 30,2024: ಜೆಡಿಎಸ್ ಪಕ್ಷದಿಂದ ಪ್ರಜ್ವಲ್ ರೇವಣ್ಣ ಅಮಾನತು.
- ಮೇ.2, 202: ಪೊಲೀಸರಿಂದ ಪ್ರಜ್ವಲ್ ರೇವಣ್ಣ ವಿರುದ್ಧ ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲು. ತಲೆ ಮರೆಸಿಕೊಂಡ ಪ್ರಜ್ವಲ್ ಪತ್ತೆಗೆ ಲುಕ್‌ಔಟ್ ನೋಟಿಸ್.
- ಮೇ.4, 2024: ಹೊಳೆನರಸೀಪುರದ ತೋಟದ ಮನೆಯಲ್ಲಿ ಅಪಹರಣಕ್ಕೆ ಒಳಗಾಗಿದ್ದ ದೂರುದಾರೆಯನ್ನು ರಕ್ಷಿಸಿದ ಎಸ್‌ಐಟಿ.
- ಮೇ. 30, 2024: ಪ್ರಜ್ವಲ್ ಭಾರತಕ್ಕೆ ಹಿಂದಿರುಗುವ ಪ್ರಕ್ರಿಯೆ ಆರಂಭ.
- ಮೇ. 31, 2024: ಎಸ್‌ಐಟಿ ಅಧಿಕಾರಿಗಳಿಂದ ಬೆಂಗಳೂರಿನಲ್ಲಿ ಪ್ರಜ್ವಲ್ ರೇವಣ್ಣ ಬಂಧನ.
- ಜೂ.26,2024: ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯದಿಂದ ಪ್ರಜ್ವಲ್ ರೇವಣ್ಣಗೆ ಜಾಮೀನು ನಿರಾಕರಣೆ.
- ಜು. 5, 2024: ಪ್ರಜ್ವಲ್ ಜಾಮೀನಿಗಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆ, ಎಸ್‌ಐಟಿಯಿಂದ ಆಕ್ಷೇಪಣೆ ಕೋರಿದ ಹೈಕೋರ್ಟ್.
- ಆ.23, 2024 ಪ್ರಜ್ವಲ್ ವಿರುದ್ಧ ಅತ್ಯಾಚಾರ ಪ್ರಕರಣ, ಎಚ್.ಡಿ.ರೇವಣ್ಣ ವಿರುದ್ಧ ಲೈಂಗಿಕ ಕಿರುಕುಳ ಆರೋಪದ ಮೇಲೆ ಎಸ್‌ಐಟಿಯಿಂದ ಮೊದಲ ಆರೋಪ ಪಟ್ಟಿ ಸಲ್ಲಿಕೆ.
- ಸೆ. 9, 2024: ಪ್ರಕರಣದಲ್ಲಿ 113 ಸಾಕ್ಷಿಗಳನ್ನು ಒಳಗೊಂಡ 1,632 ಪುಟಗಳ ಎರಡನೇ ಚಾರ್ಜ್‌ಶೀಟ್ ಸಲ್ಲಿಸಿದ ಎಸ್‌ಐಟಿ.
- ಅ. 21, 2024: ಹೈಕೋರ್ಟ್ 2 ಅತ್ಯಾಚಾರ ಪ್ರಕರಣ, ಒಂದು ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಮತ್ತೆ ಜಾಮೀನು ನಿರಾಕರಣೆ.
- ಜ. 16, 2025: ಅತ್ಯಾಚಾರ ಪ್ರಕರಣದಲ್ಲಿ ಎಫ್‌ಎಸ್‌ಎಲ್ ವರದಿಯಭಾಗವಾಗಿರುವ ಡಿಜಿಟಲ್ ಡೇಟಾದ ಕ್ಲೋನ್ ಮಾಡಿದ ಪ್ರತಿಯನ್ನು ಕೋರಿದ ಪ್ರಜ್ವಲ್ ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ತಿರಸ್ಕಾರ.
- ಜು. 30, 2025: ವಿಶೇಷ ನ್ಯಾಯಾಲಯವು ಸ್ಪಷ್ಟೀಕರಣ ಹಾಗೂ ದಾಖಲೆ ಕೋರಿ ಆ.1ಕ್ಕೆ ತೀರ್ಪು ಮುಂದೂಡಿಕೆ.
- ಆ. 1, 2025: ವಿಶೇಷ ನ್ಯಾಯಾಲಯದಿಂದ ಆರೋಪಿ ಪ್ರಜ್ವಲ್ ವಿರುದ್ಧ ತೀರ್ಪು. ದೋಷಿ ಎಂದು ಪರಿಗಣನೆ.
- ಆ.2, 2025: ಪ್ರಜ್ವಲ್‌ಗೆ ಜೀವಾವಧಿ ಶಿಕ್ಷೆ ಪ್ರಕಟ.

ಅರ್ಜುನನ ಹೆಸರು ಚಿರಸ್ಥಾಯಿಯಾಗಿ ಉಳಿಸಲು ಪ್ರಶಸ್ತಿ ಸ್ಥಾಪನೆ

ಮಾವುತರಿಗೆ ನಾಳೆ ಅರ್ಜುನ ಪ್ರಶಸ್ತಿ ಪ್ರದಾನ

ಬೀದರ್: ಹಾಸನದ ಯಸಳೂರು ಬಳಿ ಪುಂಡಾನೆ ಸೆರೆ ಕಾರ್ಯಾಚರಣೆ ವೇಳೆ ಹುತಾತ್ಮನಾದ ದಸರಾ ಆನೆ ಅರ್ಜುನನ ಹೆಸರಲ್ಲಿ ವಾರ್ಷಿಕ ಪ್ರಶಸ್ತಿ ಸ್ಥಾಪಿಸಲಾಗಿದ್ದು, ನಾಡಿದ್ದು (ಆ.4) ಗಜಪಯಣದ ವೇಳೆ ಮಾವುತ, ಸಿಬ್ಬಂದಿಗೆ ಪ್ರಥಮ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅರಣ್ಯಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಚ್.ಡಿ. ಕೋಟೆ ಶಾಸಕ ಅನಿಲ್ ಕುಮಾರ್ ಸಿ ಅವರು ಅರ್ಜುನನ ಹೆಸರಲ್ಲಿ ವಾರ್ಷಿಕ ಪ್ರಶಸ್ತಿ ಸ್ಥಾಪಿಸುವ ಸಲಹೆ ನೀಡಿದ್ದರು. ಈ ಸಲಹೆ ಪುರಸ್ಕರಿಸಿ, ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟುವ ಹಾಗೂ ವನ್ಯಪ್ರಾಣಿಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿರುವ ಹಾಗೂ ಸೆರೆಹಿಡಿಯುವ ಆನೆಗಳನ್ನು ಪಳಗಿಸಿ ಆರೈಕೆ ಮಾಡುವಲ್ಲಿ ಯಶಸ್ವಿಯಾಗಿರುವ ಮಾವುತ, ಸಿಬ್ಬಂದಿಗಳನ್ನು ಗುರುತಿಸಿ ಪ್ರತಿವರ್ಷ ನಡೆಯುವ ಗಜಪಯಣದ ಸಂದರ್ಭದಲ್ಲಿ 'ಅರ್ಜುನ ಆನೆ' ಪ್ರಶಸ್ತಿ ಪ್ರದಾನ ಮಾಡಲು ತೀರ್ಮಾನಿಸಲಾಗಿದೆ ಎಂದರು.

1968ರಲ್ಲಿ ಕಾಕನಕೋಟೆಯಲ್ಲಿ ನಡೆದ ಖೆಡ್ಡಾ ಕಾರ್ಯಾಚರಣೆಯಲ್ಲಿ ಸೆರೆಹಿಡಿಯಲಾಗಿದ್ದ ಅರ್ಜುನ 22 ಬಾರಿ ಜಂಬೂಸವಾರಿಯಲ್ಲಿ ಭಾಗಿಯಾಗಿ, 8 ಬಾರಿ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯನ್ನು ಹೊತ್ತು, ದೇಶದ ಜನರ ಮನ ಗೆದ್ದಿದ್ದ. ಅರಣ್ಯ ಸಿಬ್ಬಂದಿ ಪ್ರಾಣ ಉಳಿಸಲು ಪ್ರಾಣತ್ಯಾಗ ಮಾಡಿದ ಅರ್ಜುನನ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಈ ಪ್ರಶಸ್ತಿ ಸ್ಥಾಪಿಸಲಾಗಿದೆ ಎಂದರು.

ಮಾವುತ ಗುಂಡ, ಕವಾಡಿ ನಂಜುಂಡಸ್ವಾಮಿಗೆ ಪ್ರಶಸ್ತಿ

ನಾಡಿದ್ದು ವೀರನಹೊಸಹಳ್ಳಿಯಲ್ಲಿ ನಡೆಯಲಿರುವ ಗಜ ಪಯಣದ ಸಂದರ್ಭದಲ್ಲಿ ಹಾಸನ, ಸಕಲೇಶಪುರ, ಕೊಡಗು ಮೊದಲಾದ ಕಡೆಗಳಲ್ಲಿ ಆನೆ ಮತ್ತು ವನ್ಯಜೀವಿ ಸೆರೆ ಕಾರ್ಯಾಚರಣೆಗಳಲ್ಲಿ ಯಶಸ್ವಿಯಾಗಿ ಭಾಗಿಯಾಗಿರುವ ಭೀಮ ಆನೆಯ ಮಾವುತ ಗುಂಡ ಹಾಗೂ ಕವಾಡಿ ನಂಜುಂಡಸ್ವಾಮಿ ಅವರಿಗೆ 2025ರ ಸಾಲಿನ ಅರ್ಜುನ ಆನೆ ಪ್ರಶಸ್ತಿ ನೀಡಲು 2025ರ ದಸರಾ ಆನೆಗಳ ಆಯ್ಕೆ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ರಾಷ್ಟ್ರದ ಮತದಾರರ ಪಟ್ಟಿಯಲ್ಲೇ ಅಕ್ರಮ

ಮಡಿಕೇರಿ: ಇಡೀ ರಾಷ್ಟ್ರದಲ್ಲಿ ಮತದಾರರ ಪಟ್ಟಿಯಲ್ಲಿ ಅಕ್ರಮ ನಡೆದಿದೆ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ ಹರಿಪ್ರಸಾದ್ ಬಾಂಬ್ ಸಿಡಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬೆಂಗಳೂರಿನಲ್ಲಿ ಪ್ರತಿಭಟನೆ ಹಮ್ಮಿಕೊಂಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಕೊಡಗಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಹಾಗೂ ಚುನಾವಣಾ ಆಯೋಗದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.
ರಾಜ್ಯದಲ್ಲಿ ಮಾತ್ರವಲ್ಲ ಇಡೀ ರಾಷ್ಟ್ರದಲ್ಲೇ ಮತದಾರರ ಪಟ್ಟಿಯಲ್ಲಿ ಅಕ್ರಮ ಮಾಡಿರುವುದು ಕಂಡುಬರುತ್ತಿದೆ. ಚುನಾವಣಾ ಆಯೋಗ ಅಂತೂ ನಾವು ಪಕ್ಷ ಸೇರಲ್ಲ, ಹೊರಗೆ ನಿಂತು ಬೆಂಬಲ ಕೊಡುತ್ತೇವೆ ಅನ್ನೋ ಪರಿಸ್ಥಿತಿಗೆ ಬಂದಿದೆ. ಮಹಾರಾಷ್ಟ್ರದಲ್ಲಿ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆ ನಡೆಯುವ ಸಮಯದಲ್ಲಿ ಸುಮಾರು 60 ಲಕ್ಷ ಮತದಾರರ ಸಂಖ್ಯೆ ಜಾಸ್ತಿಯಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ವಿದ್ಯಾರ್ಥಿನಿ ಕೆನ್ನೆಗೆ ಮುತ್ತಿಟ್ಟ ಕ್ಯಾಂಟೀನ್ ಮಾಲೀಕ?

ಕಲಬುರಗಿ: ದೇಶದ ಪ್ರಸಿದ್ಧ ಕೇಂದ್ರಿಯ ವಿಶ್ವವಿದ್ಯಾಲಯವಾಗಿರುವ ಕಲಬುರಗಿಯ ಆಳಂದ ತಾಲೂಕಿನ ಕಡಗಂಚಿ ಬಳಿಯ ಕರ್ನಾಟಕ ಕೇಂದ್ರಿಯ ವಿವಿಯು ದಿನೇದಿನೇ ಒಂದಿಲ್ಲೊಂದು ವಿವಾದದಿಂದ ಸುದ್ದಿಯಾಗುತ್ತಿದೆ. ಇತ್ತೀಚಿಗೆ ಯುವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಮಾಸುವ ಮುನ್ನವೇ ಈಗ ಮತ್ತೊಂದು ಘಟನೆ ಬೆಳಕಿಗೆ ಬಂದಿದೆ.

ವಿದ್ಯಾರ್ಥಿನಿ ಮೇಲೆ ವಿಶ್ವವಿದ್ಯಾಲಯ ಕ್ಯಾಂಟೀನ್ ಮಾಲೀಕನಿಂದ ಲೈಂಗಿಕ ದೌರ್ಜನ್ಯ ಕೃತ್ಯ ನಡೆದಿದೆ ಎನ್ನುವ ಆರೋಪ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದಲ್ಲಿ ಕೇಳಿಬಂದಿದೆ. ಸಂತ್ರಸ್ತ ವಿದ್ಯಾರ್ಥಿನಿ ಇಮೇಲ್ ಮೂಲಕ ವಿವಿಯ ಆಡಳಿತ ಮಂಡಳಿಗೆ ದೂರು ನೀಡಿದ್ದಾಳೆ ಎನ್ನುವ ಮಾಹಿತಿ ತಿಳಿದುಬಂದಿದೆ. ಎಂ.ಎ ಎಕಾನಾಮಿಕ್ಸ್ ವಿದ್ಯಾರ್ಥಿನಿ ಮೇಲೆ ಆಂಧ್ರಪ್ರದೇಶದ ಮೂಲದ ಆದಿಕೇಶವಲು ಎನ್ನುವ ಕ್ಯಾಂಟೀನ್ ಮಾಲೀಕ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎನ್ನುವ ಗಂಭೀರ ಆರೋಪ ಕೇಳಿಬಂದಿದೆ.

ಮಗಳ ಸಮಾನ ಎನ್ನುತಲೇ ಕೆನ್ನೆಗೆ ಮುತ್ತಿಟ್ಟ ?: ವಿದ್ಯಾರ್ಥಿನಿ ಏಕೆ ಕಿಸ್ ಮಾಡಿದ್ದೀರಿ ಎನ್ನುವ ಪ್ರಶ್ನೆಗೆ ಕ್ಯಾಂಟೀನ್ ಮಾಲೀಕ ಉತ್ತರಿಸದೆ, (ಐ ವಿಲ್ ಕಾಲ್ ಯು ಬೇಟಾ) ನಾನು ನಿನ್ನನ್ನು ಮಗಳ ಎಂದು ಕರೆಯುತ್ತೇನೆ ಎಂದು ಹೇಳಿ ಮುತ್ತಿಟ್ಟ ವಿಚಾರವನ್ನು ಮರೆಮಾಚಲು ಯತ್ನಿಸಿದ್ದಾನೆ. ಆದರೆ, ಆತ ನನ್ನನ್ನು ಒಳ್ಳೆಯ ರೀತಿಯಲ್ಲಿ ಮುಟ್ಟದೆ ಕೆಟ್ಟ ರೀತಿಯಲ್ಲಿ ಮುಟ್ಟಿದಂತೆ ಭಾಸವಾಗಿದೆ ಎಂದು ವಿದ್ಯಾರ್ಥಿನಿ ಕ್ಯಾಂಟೀನ್ ಓನರ್ ವಿರುದ್ಧ ಆರೋಪಿಸಿ ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗೆ ಕಳೆದ ಜುಲೈ 16ರಂದೇ ದೂರು ಸಲ್ಲಿಸಿದ್ದಾಳೆ.

ಕ್ಯಾಂಟೀನ್ ಗುತ್ತಿಗೆ ರದ್ದು

ಕಳೆದ ಏಪ್ರಿಲ್ 16ರಂದು ಲೈಂಗಿಕ ದೌರ್ಜನ್ಯ ಘಟನೆ ನಡೆದರು, ವಿಚಾರ ತಡವಾಗಿ ಬೆಳಕಿಗೆ ಬಂದಿದೆ. ಈ ವಿಚಾರ ಇಮೇಲ್ ಮೂಲಕ ತಿಳಿಯುತಲ್ಲೇ ಎಚ್ಚೆತ್ತುಕೊಂಡ ಸಿಯುಕೆ ಆಡಳಿತ ಮಂಡಳಿ ಕೂಡಲೇ, ಆಂಧ್ರಪ್ರದೇಶದ ಆದಿಕೇಶವಲು ಅವರಿಗೆ ನೀಡಿದ ಕ್ಯಾಂಟೀನ್ ಗುತ್ತಿಗೆ ರದ್ದುಗೊಳಿಸಿ, ಕ್ಯಾಂಟೀನ್ ಮಾಲೀಕನನ್ನು ಕ್ಯಾಂಪಸ್ ನಿಂದ ಹೊರ ಹಾಕಲಾಗಿದೆ ಎಂದು ತಿಳಿದುಬಂದಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಧರ್ಮಸ್ಥಳದಲ್ಲಿ ಅವಶೇಷಗಳ ಶೋಧ ಕಾರ್ಯಾಚರಣೆ

ಸುಹಾಸ್ ಶೆಟ್ಟಿ ಹತ್ಯೆ ಕೇಸ್: 14 ಕಡೆ ಎನ್‌ಐಎ ದಾಳಿ

ಮಂಗಳೂರು: ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರಿನ ಬಜಪೆ ಹಾಗೂ ಸುರತ್ಕಲ್‌ನ 14 ಕಡೆ ಎನ್‌ಐಎ ದಾಳಿ ನಡೆಸಿದೆ.

ಬಜಪೆ ಪೊಲೀಸ್ ಠಾಣಾ ವ್ಯಾಪ್ತಿಯ 10 ಕಡೆ, ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯ 4 ಕಡೆ ಎನ್‌ಐಎ ದಾಳಿ ಮಾಡಿದೆ. ಕೊಲೆ ಆರೋಪಿಗಳು ಹಾಗೂ ಎಸ್ಡಿಪಿಐ ಮುಖಂಡರ ಮನೆಗೆ ಎನ್‌ಐಎ ಅಧಿಕಾರಿಗಳು ದಾಳಿ ನಡೆಸಿದ್ದು, ಹಲವು ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ. ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ನಿಷೇಧಿತ ಸಂಘಟನೆ ಪಿಎಫ್‌ಐ ಕಾರ್ಯಕರ್ತರು ಶಾಮೀಲಾಗಿರುವ ಆರೋಪ ಕೇಳಿಬಂದಿದೆ. ಇದರಿಂದಾಗಿ ಈ ಪ್ರಕರಣದ ತನಿಖೆಯನ್ನು ಕೇಂದ್ರ ಗೃಹ ಇಲಾಖೆ ಎನ್‌ಐಎ ತನಿಖೆಗೆ ವಹಿಸಿತ್ತು. ಮೇ 1 ರಂದು ಫಾಜಿಲ್ ಹತ್ಯೆಯ ಆರೋಪಿ ಸುಹಾಸ್ ಶೆಟ್ಟಿಯನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಈ ಹತ್ಯೆಗೆ ದೇಶ, ವಿದೇಶಗಳಿಂದ ಫಂಡಿಂಗ್ ಆಗಿದೆ. ರಾಜ್ಯದ ಪೊಲೀಸ್ ಇಲಾಖೆಯಿಂದ ನಿಷ್ಪಕ್ಷಪಾತವಾಗಿ ತನಿಖೆ ನಡೆಸಲು ಸಾಧ್ಯವಿಲ್ಲ. ಹೀಗಾಗಿ ಎನ್‌ಐಎಗೆ ಒಪ್ಪಿಸಬೇಕೆಂದು ಆಗ್ರಹಿಸಿ ಬಿಜೆಪಿ, ಸೇರಿದಂತೆ ಹಿಂದೂಪರ ಕಾರ್ಯಕರ್ತರು ಆಗ್ರಹಿಸಿದ್ದರು.

ಗಾಜನೂರಿನಲ್ಲಿ ನಾಗಮ್ಮ ಅಂತ್ಯಕ್ರಿಯೆ

ಚಾಮರಾಜನಗರ: ಕನ್ನಡ ಚಿತ್ರರಂಗದ ವರನಟ ಡಾ.ರಾಜ್ ಕುಮಾರ್ ಅವರ ಸಹೋದರಿ, ದೊಡ್ಮನೆಯ ಹಿರಿಜೀವವಾಗಿದ್ದ ನಾಗಮ್ಮ ಅವರ ಅಂತಿಮ ವಿಧಿವಿಧಾನಗಳು ಶನಿವಾರ ಮಧ್ಯಾಹ್ನ 2 ರ ಸುಮಾರಿಗೆ ನಡೆಯಿತು.

ದೊಡ್ಮನೆ ಹಿರಿಕೊಂಡಿ, ರಾಜ್ ಪರಿವಾರದ ಮಕ್ಕಳನ್ನು ಎತ್ತು ಆಡಿಸಿ ಬೆಳೆಸಿದ್ದ ಎಲ್ಲರ ಅಕ್ಕರೆಯ ನಾಗಮ್ಮ ವಯೋಸಹಜವಾಗಿ ಶುಕ್ರವಾರ ನಿಧನರಾದರು. ಅಣ್ಣಾವ್ರು ಬಹಳ ಪ್ರೀತಿಯಿಂದ ಕಟ್ಟಿಸಿದ ಮನೆಯಲ್ಲಿ ನಾಗಮ್ಮರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ತಮಿಳುನಾಡಿನ ತಾಳವಾಡಿ ತಾಲೂಕಿನ ಗಾಜನೂರಿನ ತೋಟದಲ್ಲಿ ನಾಗಮ್ಮರ ಪುತ್ರರು, ಡಾ. ಶಿವರಾಜ್ ಕುಮಾರ್ ಹಾಗೂ ಗೀತಾ ಶಿವರಾಜ್ ಕುಮಾರ್, ಪುತ್ರಿ ಹಾಗೂ ಅಶ್ವಿನಿ ಪುನೀತ್ ರಾಜ್ ಕುಮಾರ್, ರಾಘಣ್ಣ ಕುಟುಂಬದ ಸದಸ್ಯರು ಹಾಗೂ ಬಂಧು-ಬಳಗ ನಾಗಮ್ಮಗೆ ಅಂತಿಮ ನಮನ ಸಲ್ಲಿಸಿ, ಕಂಬನಿ ಮಿಡಿದರು.

ವರನಟ ಡಾ.ರಾಜ್ ಕುಮಾರ್ ಹಾಗೂ ಸಹೋದರಿ ನಾಗಮ್ಮ ಗುಂಬಳ್ಳಿ ಸಮೀಪದ ಮಠದಲ್ಲಿ ಗುರುವಿನ ಮಕ್ಕಳ ದೀಕ್ಷೆ ಪಡೆದಿದ್ದರಿಂದ ಗುರುಮಠದ ಸಂಪ್ರದಾಯದಂತೆ ವಿಧಿ ವಿಧಾನವನ್ನು ಮಠದ ರಾಘವೇಂದ್ರ ಸ್ವಾಮಿ ನೇತೃತ್ವದ ತಂಡ ನೆರವೇರಿಸಿದರು.

ಪತಿ ವೆಂಕಟೇಗೌಡ ಸಮಾಧಿ ಪಕ್ಕದಲ್ಲೇ ವಿಧಿವಿಧಾನದಂತೆ ಪಾರ್ಥಿವ ಶರೀರಕ್ಕೆ ಪೂಜೆ ಸಲ್ಲಿಸಿ ಮಣ್ಣು ಮಾಡಲಾಯಿತು.

ನಾಗತ್ತೆ ನೆನೆದು ನಟ ಶಿವಣ್ಣ ಭಾವುಕ: : ತಮ್ಮನ್ನು ಆಡಿಸಿ ಬೆಳೆಸಿದ ನಾಗಮ್ಮ ಪಾರ್ಥೀವ ಶರೀರ ಕಂಡು ನಟ ಶಿವರಾಜ್ ಕುಮಾರ್ ಭಾವುಕರಾದರು. ಮದ್ರಾಸ್ ಹಾಗೂ ಗಾಜನೂರಿನಲ್ಲಿ ಯಾವಗಲೂ ನಮ್ಮ ಜತೆಗೆ ನಾಗತ್ತೆ ಇರುತ್ತಿದ್ದರು. ಅಪ್ಪಾಜಿ ಕುಟುಂಬದಿಂದ ಇದ್ದ ಹಿರಿಯರು ಇವರೊಬ್ಬರೇ ಎಂದು ಕಂಬನಿ ಮಿಡಿದರು. ಒಟ್ಟಿನಲ್ಲಿ ದೊಡ್ಮನೆಯ ಹಿರಿಯರಾಗಿ, ಎಲ್ಲರನ್ನೂ ಆಡಿಸಿ ಬೆಳೆಸಿ ಮಕ್ಕಳಲ್ಲಿ ಅಣ್ಣಾವ್ರನ್ನು ಕಾಣುತ್ತಿದ್ದ ಹಿರಿಜೀವ ಮಣ್ಣಲ್ಲಿ ಲೀನವಾದರು.

ಶಿವರಾಜಕುಮಾರ್ ಅವರು ಗಾಜನೂರಿನಲ್ಲಿ ಸೋದರತ್ತೆ ನಾಗಮ್ಮ ಅವರಸಮಾಧಿಗೆ ಅಂತಿಮ ವಿಧಿ ವಿಧಾನ ನೆರವೇರಿಸಿದರು.

ಸಮಾಚಾರ ಸಣ್ಣದಲ್ಲ

ನವೋದಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಕಲಬುರಗಿ: 2025-26ನೇ ಸಾಲಿಗೆ ಕೋರವಾರ (ಕಲಬುರಗಿ-02) ಜವಾಹರ ನವೋದಯ ವಿದ್ಯಾಲಯದಲ್ಲಿ 11ನೇ ತರಗತಿಯಲ್ಲಿ ಖಾಲಿ ಉಳಿದ ಸ್ಥಾನಗಳಿಗೆ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಹಾಗೂ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕೋರವಾರ (ಕಲಬುರಗಿ-02) ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರು ತಿಳಿಸಿದ್ದಾರೆ. ಕೋರವಾರ ನವೋದಯ ವಿದ್ಯಾಲಯಕ್ಕೆ ಒಳಪಡುವ ತಾಲೂಕುಗಳಾದ ಚಿಂಚೋಳಿ, ಚಿತ್ತಾಪೂರ ಹಾಗೂ ಸೇಡಂನ ಶೈಕ್ಷಣಿಕ ವರ್ಷ 2024-25ನೇ ಸಾಲಿನಲ್ಲಿ ಸರಕಾರಿ ಮತ್ತು ಸರಕಾರದಿಂದ ಮಾನ್ಯತೆ ಪಡೆದ ಪ್ರೌಢಶಾಲೆಯಲ್ಲಿ 10 ನೇ ತರಗತಿಯಲ್ಲಿ ಓದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. 2024-25 ನೇ ಸಾಲಿನಲ್ಲಿ ಶೇ.60ರಷ್ಟು ಅಂಕ ಪಡೆದ (ವಿಜ್ಞಾನ ಮತ್ತು ಗಣಿತ ವಿಷಯದಲ್ಲಿ) ವಿಜ್ಞಾನ ವಿಭಾಗಕ್ಕೆ ಸೇರಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಅಭ್ಯರ್ಥಿಗಳು www.navodaya.gov.in ಜಾಲತಾಣದ ಲಿಂಕ್ ಮೂಲಕ ಆನ್‌ಲೈನ್ ಮೂಲಕ ಆ.10 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂ.8951741851ಗೆ ಸಂಪರ್ಕಿಸಲು ಕೋರಲಾಗಿದೆ.

ಪ್ರಾಧ್ಯಾಪಕಿ ಪಲ್ಲವಿಗೆ ಪಿಎಚ್.ಡಿ ಪದವಿ

ಕಲಬುರಗಿ: ಶರಣಬಸವ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗ ಸಹಾಯಕ ಪ್ರಾಧ್ಯಾಪಕಿ ಪಲ್ಲವಿ.ಎಸ್ ಪೊಲೀಸ್ ಪಾಟೀಲ್ ಅವರು ಸಲ್ಲಿಸಿದ "BOUNDARY LAYER NANO FLUID FLOW OVER A MOVING/ STRETCHING SHEET

'ಮಹಾಪ್ರಬಂಧಕ್ಕೆ ಪ್ರತಿಷ್ಠಿತ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿದೆ. ದೊಡ್ಡಪ್ಪ ಅಪ್ಪ ಎಂಜಿನಿಯರಿಂಗ್ ಕಾಲೇಜಿನ ಗಣಿತ ವಿಭಾಗದ ಪ್ರಾಧ್ಯಾಪಕರಾದ ವೀಣಾ.ಎಂ.ಬಸನಗೌಡ ಮಾರ್ಗದರ್ಶಕರಾಗಿದ್ದರು

ಡಿ.ದೇವರಾಜ ಅರಸು ಜಯಂತಿ ಆ.20ಕ್ಕೆ

ಕಲಬುರಗಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಆ.20ರಂದು ಡಿ. ದೇವರಾಜ ಅರಸುರವರ 110ನೇ ಜನ್ಮದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಆ.6ರಂದು ಬೆಳಗ್ಗೆ 11.30 ಗಂಟೆಗೆ ಕಲಬುರಗಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಲಿದ್ದು, ಕಲಬುರಗಿ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು, ವಿವಿಧ ಸಂಘ-ಸಂಸ್ಥೆಗಳ ಅಧ್ಯಕ್ಷರುಗಳು ಈ ಸಭೆಗೆ ಹಾಜರಾಗಿ ಸೂಕ್ತ ಸಲಹೆಗಳನ್ನು ನೀಡುವಂತೆ ಕಲಬುರಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಆ.8ರಂದು ತಾಪಂ ಕೆಡಿಪಿ ಸಭೆ

ಕಲಬುರಗಿ: ತಾಪಂ ನ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯು ಆ. 8ರಂದು ಬೆಳಗ್ಗೆ 11 ಗಂಟೆಗೆ ಕಲಬುರಗಿ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಕಲಬುರಗಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಜರುಗಲಿದೆ. ಮೇಲ್ಕಂಡ ದಿನದಂದು ನಡೆಯುವ ಸಭೆಗೆ ಕಲಬುರಗಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯ ಕಲಬುರಗಿ ತಾಲೂಕಿನ ಎಲ್ಲ ಅನುಷ್ಠಾನ ಅಧಿಕಾರಿಗಳು ಖುದ್ದಾಗಿ ಹಾಜರಾಗಬೇಕೆಂದು ಕಲಬುರಗಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಣ ಸಚಿವರ ಪರಿಷ್ಕೃತ ಪ್ರವಾಸ ಇಂದಿನಿಂದ

ಕಲಬುರಗಿ: ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ ಆರ್.ಪಾಟೀಲ್ ಅವರು ಆ.3ರಂದು ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ವಾಸ್ತವ್ಯ ಮಾಡುವರು. ಆ.4 ರಂದು ಸೋಮವಾರ ಮಧ್ಯಾಹ್ನ 12.10 ಗಂಟೆಗೆ ಕಲಬುರಗಿಯಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಎನ್. ಚಲುವರಾಯಸ್ವಾಮಿ} ಕೃಷಿ ಸಚಿವ

ಕೃಷಿ ಇಲಾಖೆ ಅಧಿಕಾರಿಗಳು ಬೆಳೆ ವಿಮೆಯ ಉಪಯುಕ್ತತೆ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಬೇಕು. ಬೆಳೆ ವಿಮೆ ಮೊತ್ತದಲ್ಲಿ ರೈತರು ಕೇವಲ ಶೇ.2ರಷ್ಟು ಮಾತ್ರ ಪಾವತಿ ಮಾಡಲಾಗುತ್ತಿದೆ. ರಸಗೊಬ್ಬರ ಮಾರಾಟದ ಡೀಲರ್ಸ್‌ಗಳು, ಸೊಸೈಟಿಗಳು ದಾಸ್ತಾನು ವಿವರಗಳ ಬಗ್ಗೆ ಫಲಕದಲ್ಲಿ ಮಾಹಿತಿ ಹಾಕಿರಬೇಕು.

ತನಿಖೆ ನಡೆಸಿ ನ್ಯಾಯ ಒದಗಿಸುವಂತೆ ಪೋಷಕರು, ವಿವಿಧ ಸಂಘಟನೆಗಳ ಒತ್ತಾಯ

ಸಿಬ್ಬಂದಿ ಲೈಂಗಿಕ ಕಿರುಕುಳ: ಆತ್ಮಹತ್ಯೆಗೆ ವಿದ್ಯಾರ್ಥಿನಿ ಬಲಿ?

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಳೆದ ಬುಧವಾರ ಕೇಂದ್ರಿಯ ವಿವಿಯಲ್ಲಿ ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಘಟನೆ ಬಗ್ಗೆ ಕೆಲ ಅನುಮಾನ ಮೂಡಿದ್ದು, ಇದೀಗ ವಿವಿಯ ಸಿಬ್ಬಂದಿಯೇ ನೀಡಿದ ಲೈಂಗಿಕ ಕಿರುಕುಳಕ್ಕೆ ಆತ್ಮಹತ್ಯೆಗೆ ಶರಣಾಗಿದ್ದಾಳೆ ಎನ್ನುವ ಆರೋಪ ಕೇಳಿಬರುತ್ತಿವೆ.

ಜಿಲ್ಲೆಯ ಆಳಂದ ತಾಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಐದನೇ ಸೆಮಿಸ್ಟರ್ ವ್ಯಾಸಂಗ ಮಾಡುತ್ತಿದ್ದ ಒಡಿಶಾ ಮೂಲದ ವಿದ್ಯಾರ್ಥಿನಿ ಜಯಶ್ರೀ ನಾಯಕ್ (21) ಕಳೆದ ಬುಧವಾರ ಹಾಸ್ಟೆಲ್ ಕೊಠಡಿಯ ಫ್ಯಾನ್‌ಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು. ವಿವಿಯ ಸಿಬ್ಬಂದಿಯಿಂದ ಲೈಂಕಿಕ ಕಿರುಕುಳ ಆರೋಪ ಹಿನ್ನೆಲೆ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಕೇಂದ್ರಿಯ ವಿವಿಯ ವಿದ್ಯಾರ್ಥಿ ನಂದಕುಮಾರ ಪೋಸ್ಟ್ ಹಾಕುವ ಮೂಲಕ ಅನುಮಾನ ವ್ಯಕ್ತಪಡಿಸಿದ್ದಾರೆ.

ಕಳೆದ ಮಂಗಳವಾರ ರಾತ್ರಿ ವಿವಿ ಡೀನ್ ಬಸವರಾಜ್ ಕುಬಕಡ್ಡ ಜತೆಗೆ ಮಾತನಾಡಿ, ಕಣ್ಣೀರು ಹಾಕಿದ್ದ ವಿದ್ಯಾರ್ಥಿನಿ ಜಯಶ್ರೀ ತನಗಾದ ಅನ್ಯಾಯದ ವಿರುದ್ಧ ನ್ಯಾಯ ಸಿಗಲಿಲ್ಲ ಎಂದು ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಈ ಬಗ್ಗೆ ಡೀನ್, ವಿಸಿ ಗಮನಕ್ಕೂ ತಂದರು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಆರೋಪ ಮಾಡಿದ್ದಾರೆ. ವಿವಿ ಆವರಣದಲ್ಲಿ ದಲಿತ ವಿದ್ಯಾರ್ಥಿಗಳಿಗೆ ಅನ್ಯಾಯ ಆಗುತ್ತಿದೆ. ಭಯದಲ್ಲೇ ಬದುಕುವ ಪರಿಸ್ಥಿತಿ ಬಂದಿದೆ. ಆತ್ಮಹತ್ಯೆಗೆ ಬಲಿಯಾದ ದಲಿತ ವಿದ್ಯಾರ್ಥಿನಿ ಜಯಶ್ರೀ ಸಾವಿಗೆ ನ್ಯಾಯ ಕೊಡಿಸುವಂತೆ ಸಾಮಾಜಿಕ ಜಾಲತಾಣಗಳ ಮೂಲಕ ನಂದಕುಮಾರ್ ಒತ್ತಾಯಿಸಿದ್ದಾರೆ. ಅಲ್ಲದೇ, ಕಲಬುರಗಿಯ ವಿವಿಧ ದಲಿತ ಸಂಘಟನೆಗಳು ಸಹ ಕೂಡಲೇ, ಪೊಲೀಸರು ತನಿಖೆ ನಡೆಸಿ ವಿದ್ಯಾರ್ಥಿನಿ ಸಾವಿಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಆಗ್ರಹಿಸಿವೆ.

ನಾನು ಒಳ್ಳೆಯ ಮಗಳಾಗಿದರೇ ಚೆನ್ನಾಗಿತ್ತು

ಸಿಯುಕೆ ವಸತಿ ನಿಲಯದಲ್ಲಿ ವಿದ್ಯಾರ್ಥಿನಿ ಜಯಶ್ರೀ ನಾಯಕ್ ಆತ್ಮಹತ್ಯೆ ಪ್ರಕರಣ ಸಂಬಂಧ ಪೊಲೀಸ್ ತನಿಖೆ ವೇಳೆ ಡೆತ್ ನೋಟ್ ಪತ್ತೆಯಾಗಿದೆ. ಮೃತ ವಿದ್ಯಾರ್ಥಿನಿ ಜಯಶ್ರೀ ನಾಯಕ್ ತನ್ನ ತಂದೆ-ತಾಯಿಗೆ ಕ್ಷಮೆ ಕೇಳಿ ಡೆತ್ ನೋಟ್ ಬರೆದಿದ್ದಾಳೆ. 'ಅಪ್ಪ-ಅಮ್ಮ ಕ್ಷಮಿಸಿ, ಜೀವನ ತುಂಬಾನೆ ಕಷ್ಟವಾಗಿದೆ. ನಾನು ಒಳ್ಳೆಯ ಮಗಳಾಗಿದರೇ ಚೆನ್ನಾಗಿತ್ತು' ಎಂದು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದು, ಇದೀಗ ಡೆತ್‌ನೋಟ್ ಹಲವು ಅನುಮಾನಗಳನ್ನು ಹುಟ್ಟುಹಾಕಿದೆ.

ಜಯಶ್ರೀ ನಾಯಕ್ ಒಬ್ಬ ಒಳ್ಳೆ ವಿದ್ಯಾರ್ಥಿಯಾಗಿದ್ದಳು. ವಿದ್ಯಾರ್ಥಿನಿ ಸಾವು ದು:ಖ ಉಂಟು ಮಾಡಿದೆ. ಏಕಾಏಕಿ ಸಾವಿನ ಸುದ್ದಿ ಬಂದಿದೆ. ಈ ಕುರಿತು ನಾವು ಪೊಲೀಸರಿಗೆ ಮಾಹಿತಿ ನೀಡಿದ್ದೇವೆ. ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ತನಿಖೆ ನಡೆಸಿದ ಬಳಿಕ ತಿಳಿದುಬರಲಿದೆ.
-ಪ್ರೊ. ಬಟ್ಟು ಸತ್ಯನಾರಾಯಣ, ಕುಲಪತಿ ಕೇಂದ್ರೀಯ ವಿವಿ

ಮಗಳ ಸಾವಿಗೆ ನ್ಯಾಯ ನೀಡಲು ಪೋಷಕರ ಆಗ್ರಹ

ಹಾಸ್ಟೆಲ್ ನಲ್ಲಿ ನೇಣಿಗೆ ಶರಣಾದ ಒಡಿಸಾ ಮೂಲದ ಜಯಶ್ರೀ ತಂದೆ ತಾಯಿ ನ್ಯಾಯಕ್ಕಾಗಿ ಆಗ್ರಹಿಸಿದ್ದಾರೆ. ನಮ್ಮ ಮಗಳ ಸಾವಿಗೆ ನ್ಯಾಯ ದೊರಕಿಸಿ ಕೊಡಿ, ಮಗಳ ಸಾವಿನ ಕುರಿತು ಸಂಪೂರ್ಣ ತನಿಖೆ ನಡೆಸಬೇಕು. ಪೊಲೀಸರು ಸೂಕ್ತ ಪರಿಶೀಲನೆ ನಡೆಸಿ ತಪ್ಪಿತಸ್ಥ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ ಮೃತ ವಿದ್ಯಾರ್ಥಿನಿಯ ಪೋಷಕರು ಸಿಯುಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಾ.ಶರಣಬಸವಪ್ಪ ಅಪ್ಪ ಭೇಟಿಯಾದ ಶ್ರೀಗಳು

ಮಲ್ಲಾಪುರ ಶ್ರೀ ಶರಣಬಸವೇಶ್ವರ ಸಂಸ್ಥಾನದ ಡಾ.ಪ್ರಣವಾನಂದ ಶ್ರೀಗಳು ಡಾ. ಶರಣಬಸವಪ್ಪ ಅಪ್ಪಾಜಿಯವರ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಕಲಬುರಗಿ: ಶ್ರೀಶರಣಬಸವೇಶ್ವರ ಸಂಸ್ಥಾನದ ಎಂಟನೇ ಪೀಠಾಧಿಪತಿಗಳಾದ ಮಹಾದಾಸೋಹಿ ಡಾ.ಶರಣಬಸವಪ್ಪ ಅಪ್ಪಾಜಿಯವರು ವಯೋಸಹಜ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದು, ಅವರನ್ನು ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಕರದಾಳು ಬ್ರಹ್ಮಶ್ರೀನಾರಾಯಣ ಗುರು ಶಕ್ತಿ ಪೀಠದ ಶ್ರೀ ಹಾಗೂ ರಾಣೆಬೆನ್ನೂರು ಅರೆ ಮಲ್ಲಾಪುರ ಶ್ರೀ ಶರಣಬಸವೇಶ್ವರ ಸಂಸ್ಥಾನದ ಡಾ.ಪ್ರಣವಾನಂದ ಶ್ರೀಗಳು ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ನಗರದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾದ ಅಪ್ಪಾಜಿಯವರನ್ನು ಆ.2 ರಂದು ಡಾ.ಪ್ರಣವಾನಂದ ಸ್ವಾಮೀಜಿ ಭೇಟಿಯಾಗಿ ಬ್ರಹ್ಮಶ್ರೀ ನಾರಾಯಣ ಗುರುಗಳ ಆಶೀರ್ವಾದದಿಂದ ಶೀಘ್ರ ಆರೋಗ್ಯ ಸುಧಾರಣೆಗೊಂಡು ಭಕ್ತರಿಗೆ ದರ್ಶನ ಆಶೀರ್ವಾದ ನೀಡುವಂತಾಗಲಿ ಮತ್ತು ಸಮಾಜದ ಧಾರ್ಮಿಕ ಕಾರ್ಯಕ್ರಮಗಳಿಗೆ ಮಾರ್ಗದರ್ಶನ ನೀಡುವ ಶಕ್ತಿಯನ್ನು ಶ್ರೀಶರಣಬಸವೇಶ್ವರರು ಒದಗಿಸಲಿ ಎಂದು ಪ್ರಾರ್ಥನೆ ಮಾಡಿದರು.

ನಂತರ ಸಂಸ್ಥಾನ ಮಠದಲ್ಲಿ ಮಾತೃಶ್ರೀ ದಾಕ್ಷಾಯಿಣಿ ಅವ್ವಾಜಿ ಹಾಗೂ ಬಸವರಾಜ್ ದೇಶಮುಖ್ ಅವರನ್ನು ಭೇಟಿಯಾಗಿ ಅಪ್ಪಾಜಿಯವರ ಯೋಗಕ್ಷೇಮದ ಕುರಿತು ಚರ್ಚಿಸಿದರು.

ಈ ಸಂದರ್ಭದಲ್ಲಿ ಡಾ.ಅಲ್ಲಮಪ್ರಭು ದೇಶಮುಖ್ ನಾರಾಯಣ ಗುರು ಶಕ್ತಿ ಪೀಠದ ಟ್ರಸ್ಟಿಗಳಾದ ಮಹಾದೇವ ಗುತ್ತೇದಾರ್, ವೆಂಕಟೇಶ ಕಡೇಚೂರ್, ಆಕಾಶವಾಣಿ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಸದಾನಂದ ಪೆರ್ಲ, ಕಲಬುರಗಿ ತಾಲೂಕು ಈಡಿಗ ಸಮಾಜದ ಅಧ್ಯಕ್ಷರಾದ ಮಹೇಶ್ ಗುತ್ತೇದಾರ್, ಮಲ್ಲಿಕಾರ್ಜುನ್ ಜತೆಗಿದ್ದರು.

ಬಿಜೆಪಿಯಿಂದ ಸುಳ್ಳು ಆರೋಪ

ಕಲಬುರಗಿ: ಜನಪರ, ಅಭಿವೃದ್ಧಿಪರ ಕೆಲಸ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಸುಳ್ಳು ಆಪಾದನೆ ಮಾಡುತ್ತಾ ಪುಕ್ಕಟೆ ಪ್ರಚಾರಕ್ಕಾಗಿ ಜಿಲ್ಲೆಯಲ್ಲಿ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸುತ್ತಿರುವುದು ಖಂಡನೀಯ ಎಂದು ವಿಧಾನ ಪರಿಷತ್ ಸದಸ್ಯ, ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಜಗದೇವ್ ಗುತ್ತೇದಾರ್ ತಿಳಿಸಿದ್ದಾರೆ.

ಈ ಕುರಿತು ಶನಿವಾರ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಕೇಂದ್ರ ಬಿಜೆಪಿ ಸರಕಾರ ರಾಜ್ಯಕ್ಕೆ ಬೇಡಿಕೆ ಇರುವಷ್ಟು ರಸಗೊಬ್ಬರ ಪೂರೈಕೆ ಮಾಡದ ಕಾರಣ ರಾಜ್ಯದ ರೈತರಿಗೆ ರಸಗೊಬ್ಬರ ಸಮರ್ಪಕವಾಗಿ ಸಿಗದೆ ಕೊರತೆಯುಂಟಾಗಿದೆ. ಬಿಜೆಪಿ ಅವರು ತಮ್ಮ ತಪ್ಪನ್ನೇ ಅರಿಯದೇ ಬಿದಿಗಿಳಿದು ಪ್ರತಿಭಟನೆ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದಿದ್ದಾರೆ. 2024-25ರಲ್ಲಿ ಭಾರತ 35 ಲಕ್ಷ ಮೆಟ್ರಿಕ್ ಟನ್ ತೊಗರಿ ಉತ್ಪಾದಿಸಿತು.ಆದರೆ, ಮೋದಿ ಸರಕಾರ ಅದರಲ್ಲಿ ಶೇ.10 ಕ್ಕಿಂತ ಕಡಿಮೆ ಸಂಗ್ರಹಿಸಿತು. ಕರ್ನಾಟಕ ಮಾತ್ರ 10 ಲಕ್ಷ ಕ್ವಿಂಟಾಲ್ ಉತ್ಪಾದಿಸಿತು. ಕೇಂದ್ರ ಬಿಜೆಪಿ ಸರಕಾರ ರೈತ ವಿರೋಧಿ, ಜನ ವಿರೋಧಿ ಸರಕಾರ ವಾಗಿದೆ.

ಆದರೆ, ರೈತರು ಕ್ವಿಂಟಾಲ್‌ಗೆ 6 ಸಾವಿರ ರು.ಗಳಂತೆ ಮಾರಾಟ ಮಾಡಲು ಒತ್ತಾಯಿಸಲಾಯಿತು. ಇದು 7550 ರು.ಗಳ ಎಂಎಸ್‌ಪಿ ಗಿಂತ ಕಡಿಮೆಯಾಗಿದೆ. ಈ ವರ್ಷದ ಎಂಎಸ್‌ಪಿ 8000 ರು.ಆದರೆ ಬೆಲೆ 6250 ರು. ಇದೆ. ಇದು ಕಳೆದ ವರ್ಷದ ದರಗಳ ಅರ್ದ ದಷ್ಟು ಇದೆ. ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಸುಳ್ಳರ ಹಾಗೂ ಕಳ್ಳರ ನಾಯಕ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ಮಾತನಾಡಿರುವುದು ಪಕ್ಷದ ರೈತ ಮೋರ್ಚಾದ ರಾಜ್ಯ ಅಧ್ಯಕ್ಷರಾಗಿರುವ ಇವರ ಸಂಸ್ಕೃತಿಯನ್ನು ಎಂತದ್ದು ಎಂಬುದು ತೋರಿಸಿಕೊಡುತ್ತದೆ

ಮೇಜರ್ ಧ್ಯಾನಚಂದ್ ಕ್ರೀಡಾ ಮಹೋತ್ಸವಕ್ಕೆ ಚಾಲನೆ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಶಾಲಾ ಮಟ್ಟದ ಬ್ಯಾಸ್ಕೆಟ್ ಬಾಲ್ ಪ್ರತಿಭೆಯನ್ನು ಹೊರಹಾಕುವ ಸದುದ್ದೇಶದಿಂದ ಬಾಲಕ ಮತ್ತು ಬಾಲಕಿಯರ ಮೇಜರ್ ಧ್ಯಾನ್‌ಚಂದ್ ರಾಷ್ಟ್ರೀಯ ಕ್ರೀಡಾ ಮಹೋತ್ಸವ 2025ನ್ನು ಭಾರತೀಯ ದೈಹಿಕ ಶಿಕ್ಷಣ ಸಂಸ್ಥೆ ಹಾಗೂ ಬಾಲಕ ಮತ್ತು ಬಾಲಕಿ ಆಟಗಾರರು ಬಾಸ್ಕೆಟ್ ಬಾಲ್ ಅಧ್ಯಕ್ಷ ಡಾ.ಪ್ರತಾಪಸಿಂಗ್ ತಿವಾರಿ ಚಾಲನೆ ನೀಡಿದರು.

ಅಂತರ ಜಿಲ್ಲಾ 16 ವರ್ಷದೊಳಗಿನ ಬಾಲಕ/ಬಾಲಕಿಯರ ಆಹ್ವಾನಿತ ಬಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಲೀಗ್ 2025 ನ್ನು ಕೆ.ಎಚ್.ಬಿ ಅಕ್ಕಮಹಾದೇವಿ ಕಾಲೋನಿಯ ಬಾಸ್ಕೆಟ್ ಬಾಲ್ ಕ್ರಿಡಾಂಗಣದಲ್ಲಿ ಆ.2 ರಿಂದ 3ರವರೆಗೆ ಆಯೋಜಿಸಲಾಗಿದ್ದು, ಈ ನಾಕೌಟ್ ಕಮ್ ಲೀಗ್ ಚಾಂಪಿಯನ್‌ಶಿಪನಲ್ಲಿ ಒಟ್ಟು 13 ಬಾಲಕ 8 ಬಾಲಕಿಯರು (ಕಲಬುರಗಿ-ಬೀದರ್) ಜಿಲ್ಲೆಯ ಶಾಲೆಯ ಬಾಸ್ಕೆಟ್ ಬಾಲ್ ತಂಡಗಳಿಂದ ಸುಮಾರು 250 ಕ್ರೀಡಾಪಟು ಭಾಗವಹಿಸಿದ್ದು, ಕ್ರೀಡಾ ಪ್ರತಿಭೆಗೆ ಸೂಕ್ತ ವೇದಿಕೆಯಾಗಲಿದೆ ಎಂದರು.

ಗುಲಬರ್ಗಾ ಜಿಲ್ಲಾ ಬಾಸ್ಕೆಟ್‌ಬಾಲ್ ಅಸೋಸಿಯೇಷನ್ ರಿ, ಕರ್ನಾಟಕ ರಾಜ್ಯ ಬಾಸ್ಕೆಟ್ ಬಾಲ್ ಅಸೋಸಿಯೇಷನ್, ಬೆಂಗಳೂರು ಇವರ ಸಹಯೋಗದಲ್ಲಿ ಫಿಜಿಕಲ್ ಎಡ್ಯುಕೇಶನ್ ಫೌಂಡೇಶನ್ ಆಫ್ ಇಂಡಿಯಾ (ಭಾರತ ಸರಕಾರದ, ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ಕ್ರೀಡಾ ಪ್ರೋತ್ಸಾಹ ಸಂಸ್ಥೆ), ನವದೆಹಲಿ, ಗುಲ್ಬರ್ಗ ಮತ್ತು ಕರ್ನಾಟಕ ರಾಜ್ಯ ಶಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಲಬುರಗಿ ಉಸ್ತುವಾರಿಯಲ್ಲಿ ಕ್ರೀಡಾ ಮಹೋತ್ಸವ ಜರುಗಲಿದೆ.

ಬಾಸ್ಕೆಟ್ ಬಾಲ್ ಬ್ಯಾಸ್ಕೆಟ್ಗೆ ಹಾಕುವುದರ ಮುಖಾಂತರ ಉದ್ಘಾಟಿಸಿದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕ್ರೀಡಾಪಟು ಶಿರಾಜುದ್ದೀನ್, ಗೋನಾಯಕ್, ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಡಾ. ಅಂಬರೇಶ್.ವಿ.ಬಿರಾದಾರ, ಸಂಯುಗ್ ಆಸ್ಪತ್ರೆ, ಅಮೃತ್ ಅಷ್ಟಗಿ, ಸಂಜಯ ಬಾಣದ, ಭೀಮಾಶಂಕರ ದಿವಟೆ, ಸುಶಿಕುಮಾರ್ ಮಾಮಡಿ, ಶ್ರೀಕಾಂತ್ ನಿರುಣಿ,ಧರ್ಮರಾಜ ಹೇರೂರು, ರಮೇಶ್ ಹಾಗೂ ಪದಾಧಿಕಾರಿಗಳಾದ ಮಲ್ಲಿಕಾರ್ಜುನ ಉದನೂರ, ಡಾ.ಚಂದ್ರಕಾಂತ ಶಿರೋಳ್ಳಿ ರಾಮೇಶ್ವರ ಪ್ರವೀಣ್ ಪುಣೆ ಕಾರ್ಯನಿರ್ವಹಿಸಿದರು.

ಬಾಲಕ ಮತ್ತು ಬಾಲಕಿಯರ ಮೇಜರ್ ಧ್ಯಾನ್‌ಚಂದ್ ರಾಷ್ಟ್ರೀಯ ಕ್ರೀಡಾ ಮಹೋತ್ಸವಕ್ಕೆ ಬಾಸ್ಕೆಟ್ ಬಾಲ್ ಅಧ್ಯಕ್ಷ ಡಾ.ಪ್ರತಾಪಸಿಂಗ್ ತಿವಾರಿ ಚಾಲನೆ ನೀಡಿದರು.

ಸ್ವಾತಂತ್ರ್ಯೋತ್ಸವ ದಿನಾಚರಣೆಗೆ ಸಿಕಲ ಸಿದ್ಧತೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಆ.15 ರಂದು ಜಿಲ್ಲೆಯಾದ್ಯಂತ ಸ್ವಾತಂತ್ರೋತ್ಸವ ದಿನಾಚರಣೆಯನ್ನು ಸಡಗರ-ಸಂಭ್ರಮದಿಂದ ಆಯೋಜಿಸಲು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಆಗಸ್ಟ್ 15 ರಂದು ತಮ್ಮ ಕಚೇರಿಗಳಲ್ಲಿ 7.30 ಗಂಟೆಯಿಂದ 8 ಗಂಟೆಯವರೆಗೆ ಆಚರಿಸಿ ಕಡ್ಡಾಯವಾಗಿ ಎಲ್ಲ ಸಿಬ್ಬಂದಿಗಳು ಅಧಿಕಾರಿಗಳು ಕಲಬುರಗಿ ನಗರದ ಡಿ.ಎ.ಆರ್.ಪೊಲೀಸ್ ಪರೇಡ್ ಮೈದಾನದಲ್ಲಿ ಹಾಜರಿರಲು ಸೂಚಿಸಿದರು.

ಸ್ವಾತಂತ್ರ್ಯ ದಿನಾಚರಣೆ ರಾಷ್ಟ್ರಯ ಹಬ್ಬವಾಗಿರುವುದರಿಂದ ಜಿಲ್ಲೆಯ ಎಲ್ಲ ಸರಕಾರಿ ಕಚೇರಿ, ನಿಗಮ-ಮಂಡಳಿ ಕಚೇರಿ, ಗ್ರಾಮ ಪಂಚಾಯತಿ, ಶಾಲಾ-ಕಾಲೇಜು, ಅಂಗನವಾಡಿಗಳಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಮತ್ತು ನಮನ ಸಲ್ಲಿಸುವ ಜತೆಗೆ ರಾಷ್ಟ್ರ ಧ್ವಜಾರೋಹಣ ಮಾಡುವಂತೆ ಜಿಲ್ಲಾಧಿಕಾರಿಗಳು ಕರೆ ನೀಡಿದರು.

ಅಂದು ಕಲಬುರಗಿ ನಗರದ ಡಿ.ಎ.ಆರ್. ಪೊಲೀಸ್ ಪರೇಡ್ ಮೈದಾನದಲ್ಲಿ ನಡೆಯುವ ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ ನೆರವೇರಿಸಲಾಗುತ್ತಿದ್ದು, ಶಿಷ್ಟಾಚಾರದಂತೆ ಚುನಾಯಿತ ಜನಪ್ರತಿನಿಧಿಗಳನ್ನು ಆಹ್ವಾನಿಸಬೇಕು. ಎಲ್ಲಿಯೂ ಶಿಷ್ಟಾಚಾರ ಉಲ್ಲಂಘನೆಯಾಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರ ಅಧ್ಯಕ್ಷತೆಯಲ್ಲಿ ಸಭೆ ಹಮ್ಮಿಕೊಳ್ಳಲಾಯಿತು.

ಡಿ.ಎ.ಆರ್. ಮೈದಾನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರು, ಅಧಿಕಾರಿ, ಪತ್ರಕರ್ತರು, ಶಾಲಾ ಮಕ್ಕಳಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿನ ವ್ಯವಸ್ಥೆ, ಮೈದಾನ ಸ್ವಚ್ಛತೆ, ಸೂಕ್ತ ಪೊಲೀಸ್ ಭದ್ರತೆ, ಹೂವಿನ ಅಲಂಕಾರ ಮಾಡಬೇಕು ಎಂದರು.

ಸ್ವಾತಂತ್ರ ದಿನಾಚರಣೆ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಸರಕಾರಿ ಸೌಲಭ್ಯ ವಿತರಣೆ ಮಾಡಬೇಕಿದ್ದಲ್ಲಿ ಜಿಲ್ಲಾಡಳಿತಕ್ಕೆ ಆಗಸ್ಟ್ 4 ರೊಳಗೆ ಅಧಿಕಾರಿಗಳು ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿಗಳು ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಕಲಬುರ್ಗಿ ಎ.ಸಿ. ಸಾಹಿತ್ಯ, ಡಿಸಿಪಿ ಕ್ರೈಂ ಬ್ಯಾಂಚಿನ ಪ್ರವೀಣ ನಾಯಕ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಪ್ರಮುಖ ವೃತ್ತದಲ್ಲಿ ದೀಪಾಲಂಕಾರ

ನಗರದ ಡಾ.ಬಿ.ಆರ್.ಅಂಬೇಡ್ಕರ್, ಬಸವೇಶ್ವರ, ಸರ್ದಾರ ವಲ್ಲಭಭಾಯಿ ಪಟೇಲ್, ಡಾ.ಬಾಬು ಜಗಜೀವನರಾಂ ಪುತ್ಥಳಿ ಸೇರಿದಂತೆ ಪ್ರಮುಖ ವೃತ್ತಗಳನ್ನು ದೀಪಾಲಂಕಾರದ ವ್ಯವಸ್ಥೆ ಮಾಡುವಂತೆ ಪಾಲಿಕೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಜಿಲ್ಲಾಧಿಕಾರಿಗಳು, ವಾಣಿಜ್ಯ ಅಂಗಡಿ-ಮುಂಗಟ್ಟುಗಳ ಮೇಲೆ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ದೀಪಾಲಂಕಾರ ವ್ಯವಸ್ಥೆ ಮಾಡಿಕೊಳ್ಳುವಂತೆ ತಿಳಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಜನತಾ ನ್ಯಾಯಾಲಯ, ತ್ವರಿತ ಇತ್ಯರ್ಥ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಖಾಯಂ ಜನತಾ ನ್ಯಾಯಾಲಯದಲ್ಲಿ ಸಾರ್ವಜನಿಕ ಮೂಲಭೂತ ಸಮಸ್ಯೆಗಳನ್ನು ರಾಜೀ ಸಂದಾನದ ಮೂಲಕ ತ್ವರಿತ ವಿಲೇವಾರಿ ಮಾಡಲಾಗುತ್ತದೆ. ಸಾರ್ವಜನಿಕರು ಜನತಾ ನ್ಯಾಯಾಲಯಕ್ಕೆ ತಮ್ಮ ಅರ್ಜಿ ಸಲ್ಲಿಸಬೇಕು ಎಂದು ಜಿಲ್ಲಾ ನ್ಯಾಯಾಧೀಶರು ಮತ್ತು ಖಾಯಂ ಜನತಾ ನ್ಯಾಯಾಲಯದ ಅಧ್ಯಕ್ಷ ಎಸ್.ಎನ್.ಚವ್ಹಾಣ ಹೇಳಿದರು.

ಶನಿವಾರ ಇಲ್ಲಿನ ಜಿಲ್ಲಾ ನ್ಯಾಯಲಯದ ಆವರಣದಲ್ಲಿರುವ ಎ.ಡಿ.ಆರ್ ಕಟ್ಟಡದಲ್ಲಿ ಜಿಲ್ಲಾ ನ್ಯಾಯಲಯದ ಆವರಣದಲ್ಲಿರುವ ಖಾಯಂ ಜನತಾ ನ್ಯಾಯಲಯದ ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯದಲ್ಲಿ 5 ಖಾಯಂ ಜನತಾ ನ್ಯಾಯಲಯಗಳಿದ್ದು, ಅದರಲ್ಲಿ ಕಲಬುರಗಿ ನ್ಯಾಯಲಯದಲ್ಲಿ ಅತಿ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. 1 ಕೋಟಿ ರುಪಾಯಿಗಳವರೆಗಿನ ಪ್ರಕರಣಗಳನ್ನು ಜನತಾ ನ್ಯಾಯಾಲಯದಲ್ಲಿ ಯಾವುದೇ ಶುಲ್ಕವಿಲ್ಲದೆ ಪ್ರಕರಣದ ಅರ್ಜಿಯನ್ನು ಸಲ್ಲಿಸಬಹುದು ಎಂದರು.

ಖಾಯಂ ಜನತಾ ನ್ಯಾಯಾಲಯದಲ್ಲಿ ಸಾರ್ವಜನಿಕ ಉಪಯುಕ್ತ ಸೇವೆಗಳಾದ ರಸ್ತೆಸಾರಿಗೆ, ಜಲಸಾರಿಗೆ, ವಾಯುಸಾರಿಗೆ, ಟೆಲಿಗ್ರಾಂ, ವಿದ್ಯುತ್ ಪೂರೈಕೆಯಲ್ಲಿನ ಸಮಸ್ಯೆ, ಇನ್ಸುರೆನ್ಸ್, ಶಿಕ್ಷಣ, ರಿಯಲ್ ಎಸ್ಟೇಟ್ ಬ್ಯಾಂಕುಗಳ ಸಾಲಗಳ ವಸೂಲಾತಿ ಪ್ರಕರಣಗಳು, ಪೋಸ್ಟಲ್, ಶಾಲಾ ಕಾಲೇಜಗಳ ಪ್ರವೇಶಗಳ ಸಮಸ್ಯೆ, ಕಸವಿಲೇವಾರಿ ಸಮಸ್ಯೆಗಳು ಕುರಿತು ಸಾರ್ವಜನಿಕರು ಉಪಯುಕ್ತ ಸೇವೆಗಳ ಕುರಿತು ಅಗತ್ಯ ದಾಖಲೆಗಳೊಂದಿಗೆ ಖಾಯಂ ಜನತಾ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದಾಗ ಅವುಗಳನ್ನು ಪರಿಶೀಲನೆಯನ್ನು ಮಾಡಿ ಅರ್ಜಿದಾರರು ಮತ್ತು ಸಂಬಂದಪಟ್ಟ ಇಲಾಖೆಯವರಿಗೆ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸುವಂತೆ ನೋಟಿಸ್ ನೀಡವುದರ ಮುಖಾಂತರ ಇಂತಹ ಪ್ರಕರಣಗಳನ್ನು ರಾಜೀ ಸಂದಾನದ ಮೂಲಕವಾಗಿ ಬಗೆಹರಿಸಲಾಗುವುದು ಎಂದು ತಿಳಿಸಿದರು.

ಸಾರ್ವಜನಿಕ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಖಾಯಂ ಜನತಾ ನ್ಯಾಯಾಲಯದಲ್ಲಿ ಒಬ್ಬರು ಜಿಲ್ಲಾ ನ್ಯಾಯಾದೀಶರು ಅಧ್ಯಕ್ಷರಾಗಿದ್ದು. ಇಬ್ಬರು ವಕೀಲರು ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದು.ಸಾರ್ವಜನಿಕರ ಇಂತಹ ಮೂಲ ಸಮಸ್ಯೆಗಳನ್ನು ರಾಜಿ ಸಂದಾನದ ಮೂಲಕವಾಗಿ ತ್ವರಿತವಾಗಿ ಇತ್ಯರ್ಥಪಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾದೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ ಉಪಸ್ಥಿತರಿದ್ದರು.

ಪತ್ರಿಕಾಗೋಷ್ಠಿಯಲ್ಲಿ ಜನತಾ ನ್ಯಾಯಾಲಯದ ಅಧ್ಯಕ್ಷ ಎಸ್.ಎನ್.ಚವ್ಹಾಣ ಮಾತನಾಡಿದರು.

2007 ರಿಂದ ಪ್ರಾರಂಭವಾಗಿರುವ ನ್ಯಾಯಲಯವು 2024 ರಿಂದ ಇಲ್ಲಿಯವರೆಗು ಪ್ರತಿ ತಿಂಗಳು 240 ರಿಂದ 250 ಪ್ರಕರಣಗಳಿಗೆ ಪರಿಹಾರ ದೊರಕಿದ್ದು. ಸಾರ್ವಜನಿಕರು ಯಾವುದೇ ಭಯವಿಲ್ಲದೆ ಅರ್ಜಿಯನ್ನು ಸಲ್ಲಿಸಿ ತ್ವರಿತವಾಗಿ ಪರಿಹಾರ ಪಡೆದುಕೊಳ್ಳಬೇಕು.
-ನ್ಯಾ.ಎಸ್.ಎನ್.ಚವ್ಹಾಣ, ಅಧ್ಯಕ್ಷರು

ಗೋಲಿ ಆಟವಾಡಿ ವಿನೂತನ ಪ್ರತಿಭಟನೆ

ಕಲಬುರಗಿ: ನಗರದ ಗುಲ್ಬರ್ಗ ವೈದ್ಯಕೀಯ ಮತ್ತು ವಿಜ್ಞಾನ ಸಂಶೋಧನಾ (ಜಿಮ್ಸ್) ಆಸ್ಪತ್ರೆಯಲ್ಲಿ ಐಸಿಯು ಇಲ್ಲದೇ ದಿನನಿತ್ಯ ಕಲಬುರಗಿ ಜನತೆಗೆ ನರಕ ದರ್ಶನವಾಗುತ್ತಿದ್ದು, ಕೂಡಲೇ ಹೆಚ್ಚುವರಿಯಾಗಿ ಐಸಿಯು ಬೆಡ್ ಹೆಚ್ಚಳ ಮಾಡಬೇಕೆಂದು ಬಿಜೆಪಿ ಒಬಿಸಿ ಮೋರ್ಚಾ ನಗರಾಧ್ಯಕ್ಷ ದೇವಿಂದ್ರ ದೇಸಾಯಿ ಕಲ್ಲೂರ ಆಗ್ರಹಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲೆಯ ಸಚಿವರ, ಶಾಸಕರ ಮುಖವಾಡ ಧರಿಸಿ, ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲೇ ಗೋಲಿ ಆಟವಾಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು.

ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದೆ.ಆದರೆ, ಐಸಿಯು ಬೆಡ್‌ಗಳ ಕೊರತೆಯಿಂದ ಬಡಜನರಿಗೆ ತೊಂದರೆಗಳು ಆಗುತ್ತಿದೆ. ಸಧ್ಯಕ್ಕೆ ಆಸ್ಪತ್ರೆಯಲ್ಲಿ ಕೇವಲ ಹತ್ತು ಬೆಡ್ ಮಾತ್ರ ಇವೆ. ಕಲಬುರಗಿ ಜಿಮ್ಸ್ ಆಸ್ಪತ್ರೆಯಲ್ಲಿ ಕನಿಷ್ಠವೆಂದರೂ 100 ಐಸಿಯು ಬೆಡ್ ಅಗತ್ಯತೆಯಿದ್ದು, ಕೂಡಲೇ 50 ರಿಂದ 100 ಬೆಡ್‌ಗಳ ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿದರು.

ನಗರದ ಜಿಮ್ಸ್ ಆಸ್ಪತ್ರೆಯಲ್ಲಿ ಐಸಿಯು ಬೆಡ್ ಹೆಚ್ಚಳ ಮಾಡುವ ಮೂಲಕ ಬಡ ಜನರಿಗಾಗಿ ಅನುಕೂಲವಾಗುವಂತೆ ನೋಡಿಕೊಳ್ಳಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರ ಓಬಿಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ, ಕಾರ್ಯದರ್ಶಿ ಶರಣಗೌಡ ಐಕುರ್, ಲೋಕೇಶ್ ರಣಜಿ, ಶಶಿ ಮದ್ದೂರು, ಶಿವಲಿಂಗ ಹಳಿಮನಿ, ಬಸವರಾಜ್, ಸೋಮು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಗೋಲಿ ಆಟವಾಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿ, ಸಚಿವ ಡಾ. ಶರಣಪ್ರಕಾಶ್ ಪಾಟೀಲ್‌ಗೆ ಮನವಿ ಸಲ್ಲಿಸಲಾಯಿತು.

ಪ್ರಧಾನಮಂತ್ರಿ ಜನ ಔಷಧಿ ಕೇಂದ್ರಗಳು ಮುಚ್ಚಿಸಲು ಆದೇಶ ಹೊರಡಿಸಿ, ಅವುಗಳನ್ನು ಹೊರಗೆ ಹಾಕಿದ್ದಿರಾ? ಇದರಿಂದ ಬಡ ಮಧ್ಯಮ ವರ್ಗದ ಜನರಿಗೆ ತೀವ್ರ ತೊಂದರೆಯಾಗಿದೆ. ಹೀಗಾಗಿ ಕೂಡಲೇ ಜನ ಔಷಧಿ ಅಂಗಡಿ ಪ್ರಾರಂಭಿಸಬೇಕು.
-ದೇವಿಂದ್ರ ದೇಸಾಯಿ ಕಲ್ಲೂರ ಬಿಜೆಪಿ ನಗರಾಧ್ಯಕ್ಷ

ಬುದ್ಧಿವಂತಿಕೆಯಿಂದ ಎಐ ಬಳಸಿದರೆ ಯಶಸ್ಸು

ಕಲಬುರಗಿ: ಕೃತಕಬುದ್ಧಿಮತ್ತೆ ಉದ್ಯೋಗಗಳನ್ನು ನಾಶಪಡಿಸುತ್ತದೆಂದು ಭಯಪಡಬೇಡಿ. ಅದನ್ನು ಬುದ್ಧಿವಂತಿಕೆಯಿಂದ ಬಳಸಿದರೆ ಯಶಸ್ಸು ಸಾಧ್ಯವೆಂದು ಉಪನ್ಯಾಸಕ ರಂಗಸ್ವಾಮಿ ಮೂಕನಹಳ್ಳಿ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ಶನಿವಾರ ವ್ಯವಹಾರ ಅಧ್ಯಯನ ನಿಕಾಯ ಆಯೋಜಿಸಿದ 'ಎಐ ಯುಗದಲ್ಲಿ ಸಣ್ಣ ಉದ್ಯಮೆ ಕಟ್ಟುವುದು ಆಯ್ಕೆಯಲ್ಲ, ಅನಿವಾರ್ಯ!' ಎಂಬ ವಿಷಯದ ಕುರಿತು ಏರ್ಪಡಿಸಿದ್ದ ಕಾರ್ಯಕ್ರಮ ಉದ್ಘಾಟಿಸಿದರು.

ಎಐ ನಿಂದ ಭಯ ಪಡಬೇಡಿ. ಭಯವು ಅಜ್ಞಾನದಿಂದ ಬರುತ್ತದೆ. ಎಐ ಯೊಂದಿಗೆ ಕೆಲಸ ಮಾಡಲು ಕಲಿಯಿರಿ. ಆದಷ್ಟು ಬೇಗನೆ ಆರಂಭಿಸಿ, ವೈಫಲ್ಯವಾದರೆ ಎದೆಗುಂದದಿರಿ, ಆರಂಭಿಕ ವೈಫಲ್ಯಗಳು ಜೀವಮಾನದ ಪಾಠಗಳನ್ನು ಕಲಿಸುತ್ತವೆ. ಎಐ ಬಳಸಲು ನೀವು ತಂತ್ರಜ್ಞರಾಗುವ ಅಗತ್ಯವಿಲ್ಲ. ಎಐ ಚಿಲ್ಲರೆ ವ್ಯಾಪಾರದಿಂದ ಹಿಡಿದು ಪ್ರತಿಯೊಂದು ಉದ್ಯಮದಲ್ಲಿ ಉದ್ಯೋಗಗಳನ್ನು ಬದಲಾಯಿಸುತ್ತಿದೆ. ಎಐ ಒಂದು ಸಾಧನವಾಗಿದ್ದು ಅದು ಇಂಟರ್ನೆಟ್‌ನಂತೆ, ನೀವು ಅದನ್ನು ಹೇಗೆ ಬಳಸುತ್ತೀರಿ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ ಎಂದರು.

ಇಂದು ಎಐ ತಂತ್ರಜ್ಞಾನ ಭಾರತದ ಉದ್ಯಮದಲ್ಲಿ 30 ಪ್ರತಿಶತಕ್ಕಿಂತ ಹೆಚ್ಚು ಕೊಡುಗೆ ನೀಡುತ್ತಿವೆ. ಭಾರತದಲ್ಲಿ ಜನಸಂಖ್ಯೆಯ 65% ರಷ್ಟು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿದ್ದಾರೆ. ಯುವ ಭಾರತೀಯರು ತಮ್ಮದೇ ಆದ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

'ಎಐ ಯುಗದಲ್ಲಿ ಸಣ್ಣ ಉದ್ಯಮೆ ಕಟ್ಟುವುದು ಆಯ್ಕೆಯಲ್ಲ, ಅನಿವಾರ್ಯ!' ವಿಷಯದ ಕುರಿತು ಏರ್ಪಡಿಸಿದ್ದ ಕಾರ್ಯಕ್ರಮವನ್ನು ಉಪನ್ಯಾಸಕ ರಂಗಸ್ವಾಮಿ ಮೂಕನಹಳ್ಳಿ ಉದ್ಘಾಟಿಸಿದರು.

ಸಮಯ ನಮ್ಮೆಲ್ಲರ ದೊಡ್ಡ ಆಸ್ತಿಯಾಗಿದೆ. ಅದನ್ನು ಬುದ್ಧಿವಂತಿಕೆಯಿಂದ ಬಳಸಬೇಕು. ಎಲ್ಲವೂ ಆನ್‌ಲೈನ್ ಮಾಯವಾಗಿದೆ. ಮುಂದೆ ವ್ಯವಹಾರ ಪ್ರಾರಂಭಿಸಲು ಅಂಗಡಿ ಅಥವಾ ಕಚೇರಿ ಅಗತ್ಯವಿರುವುದಿಲ್ಲ. ಸಮಯದ ಸದುಪಯೋಗ ಪಡೆದುಕೊಳ್ಳಬೇಕು.
-ರಂಗಸ್ವಾಮಿ ಮೂಕನಹಳ್ಳಿ, ಉಪನ್ಯಾಸಕ

ಕಾರ್ಯಕ್ರಮದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವ ಡಾ.ಎಸ್.ಜಿ.ಡೊಳ್ಳೆಗೌಡರ್, ಕುಲಸಚಿವ (ಮೌಲ್ಯಮಾಪನ) ಡಾ. ಎಸ್.ಎಚ್.ಹೊನ್ನಳ್ಳಿ ಹಾಗೂ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಮಕಾವ್ ಓಪನ್ ಟೆನಿಸ್ ಲಕ್ಷ್ಯ, ಮನ್ನೇಪಲ್ಲಿ ಹೊರಕ್ಕೆ

ಮಕಾವ್: ಲಕ್ಷ್ಯ ಸೇನ್ ಮತ್ತು ತರುಣ್ ಮನ್ನೇಪಲ್ಲಿ ಅವರು ಮಕಾವ್ ಓಪನ್ ಸೂಪರ್-300 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಶನಿವಾರ ಹೊರಬಿದ್ದರು, ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಕೊನೆಗೊಂಡಿತು. ಇವರಿಬ್ಬರ ವಿರುದ್ಧ ಕ್ರಮವಾಗಿ ಗೆದ್ದ ಅಲ್ವಿ ಫರ್ಹಾನ್ ಮತ್ತು ಜಸ್ಟಿನ್ ಹೊ ಅವರು ಭಾನುವಾರ ಪ್ರಶಸ್ತಿಗಾಗಿ ಸೆಣಸಾಡಲಿದ್ದಾರೆ.

2021ರ ವಿಶ್ವ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತ ಲಕ್ಷ್ಯ, ಇಂಡೊನೇಷ್ಯಾದ ಅಲ್ವಿ ಫರ್ಹಾನ್ ಅವರ ವೇಗ ಮತ್ತು ಕರಾರುವಾಕ್ ಹೊಡೆತಗಳಿಗೆ ಸಾಟಿಯಾಗಲಿಲ್ಲ. ಅಲ್ವಿ ಸೆಮಿಫೈನಲ್ ಪಂದ್ಯವನ್ನು 21-16, 21-9ರಿಂದ ಕೇವಲ 39 ನಿಮಿಷಗಳಲ್ಲಿ ಗೆದ್ದರು, ಈ ಮೂಲಕ ಲಕ್ಷ್ಯ ಅವರ ಪ್ರಶಸ್ತಿಯ ಬರ ಮುಂದುವರಿಯಿತು. ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ 21-19, 16-21, 16-21ರಿಂದ ಮಲೇಷ್ಯಾದ ಜಸ್ಟಿನ್ ಹೊ ಅವರು ಒಂದು ಗಂಟೆ 21 ನಿಮಿಷಗಳಲ್ಲಿ 17ನೇ ಕ್ರಮಾಂಕದ ಆಟಗಾರ, ತರುಣ್ ಮನ್ನೇಪಲ್ಲಿ ಅವರನ್ನು ಸೋಲಿಸಿದರು.

ಪಶ್ಚಿಮ ವಲಯಕ್ಕೆ ಶಾರ್ದೂಲ್ ನಾಯಕ

ಮುಂಬೈ: ದುಲೀಪ್ ಟ್ರೋಫಿಗಾಗಿ ಪಶ್ಚಿಮ ವಲಯ ತಂಡವನ್ನು ಪ್ರಕಟಿಸಲಾಗಿದೆ. ಈ ಬಾರಿ ತಂಡವನ್ನು ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಮುನ್ನಡೆಸಲಿದ್ದಾರೆ. 15 ಸದಸ್ಯರ ತಂಡದಲ್ಲಿ ಸ್ಟಾರ್ ಆಟಗಾರ ಶ್ರೇಯಸ್ ಅಯ್ಯರ್ ಕೂಡ ಸ್ಥಾನ ಪಡೆದಿದ್ದಾರೆ. ಏಕದಿನ ಹಾಗೂ ಟಿ20 ಪಂದ್ಯಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದ ಶ್ರೇಯಸ್ ಅಯ್ಯರ್ ಇದೀಗ ಟೆಸ್ಟ್ ಕ್ರಿಕೆಟ್‌ಗೆ ಮರಳುವ ಇಂಗಿತದಲ್ಲಿದ್ದು, ಹೀಗಾಗಿ ಮುಂಬರುವ ದುಲೀಪ್ ಟ್ರೋಫಿಯಲ್ಲಿ ಕಣಕ್ಕಿಳಿಯಲು ನಿರ್ಧರಿಸಿದ್ದಾರೆ.

ಯಶಸ್ವಿ ಜೈಸ್ವಾಲ್ ಶತಕ, ಆಕಾಶ್‌ದೀಪ್, ಜಡೇಜಾ ಅರ್ಧ ಶತಕ | ಇಂದು ನಿರ್ಣಾಯಕ ದಿನ

ಸುಸ್ಥಿತಿಯಲ್ಲಿ ಟೀಮ್ ಇಂಡಿಯ

ಲಂಡನ್: ಭಾರತ-ಇಂಗ್ಲೆಂಡ್ ಮಧ್ಯೆ ಇಲ್ಲಿನ ಕೆನ್ನಿಂಗ್ಟನ್ ಓವಲ್ ನಡೆಯುತ್ತಿರುವ ನಡೆಯುತ್ತಿರುವ ಅಂತಿಮ ಟೆಸ್ಟ್‌ನ 3ನೇ ದಿನವಾದ ಶನಿವಾರ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಶತಕ ಸಿಡಿಸಿದರೆ, ನೈಟ್ ವಾಚ್‌ಮನ್ ಅಕಾಶ್ ದೀಪ್ ಅರ್ಧ ಶತಕ ಗಳಿಸಿ ಭಾರತವು ಗೌರವಾರ್ಹ ಮೊತ್ತ ತಲುಪಲು ಕಾರಣಕರ್ತರಾದರು.

ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆ ಟೀಮ್ ಇಂಡಿಯ ತನ್ನ ಎರಡನೇ ಇನಿಂಗ್ಸ್‌ನಲ್ಲಿ 8 ವಿಕೆಟ್ ನಷ್ಟಕ್ಕೆ 357 ರನ್ ಗಳಿಸಿದೆ. ಭಾರತದ ಪರ ಆಲ್ ರೌಂಡರ್ ರವೀಂದ್ರ ಜಡೇಜಾ 52 ರನ್ ಔಟ್ ಆದರೆ, ವಾಷಿಂಗ್ಟನ್ ಸುಂದರ್ 15 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದರು.

ಶುಕ್ರವಾರ 2 ವಿಕೆಟ್ ನಷ್ಟಕ್ಕೆ 75 ರನ್ ಗಳಿಸಿದ್ದ ಭಾರತದ ಬ್ಯಾಟರ್‌ಗಳು ಶನಿವಾರ ಬೆಳಿಗ್ಗೆ ಆತ್ಮವಿಶ್ವಾಸದಿಂದಲೇ ಬ್ಯಾಟಿಂಗ್ ಮುಂದುವರಿಸಿದರು. ನೈಟ್ ವಾಚ್‌ಮೆನ್ ಆಗಿ ಕ್ರೀಸ್‌ಗೆ ಇಳಿದಿದ್ದ ಆಕಾಶ್ ದೀಪ್ ಅಮೋಘ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಇಂಗ್ಲೆಂಡ್ ಬೌಲರ್‌ಗಳನ್ನು ಬಹುವಾಗಿ ಕಾಡಿದ ಅವರು, 94 ಬಾಲ್‌ಗಳನ್ನು ಎದುರಿಸಿ 12 ಬೌಂಡರಿ ಸಹಿತ 66 ರನ್ ಗಳಿಸಿ ಔಟಾದರು. ಮತ್ತೊಂದು ಕಡೆ ಜೈಸ್ವಾಲ್ ಸ್ಥಿರವಾಗಿ ನಿಂತು ಬ್ಯಾಟ್ ಬೀಸಿದರು. ಅಮೋಘ ಶತಕ ಸಿಡಿಸುವ ಮೂಲಕ ಭಾರತ ತಂಡದ ಉತ್ತಮ ಮುನ್ನಡೆಗೆ ಕಾರಣರಾದರು. ಪಂದ್ಯದ ಎರಡನೇ ಅವಧಿಯ ವೇಳೆಗೆ ಜೈಸ್ವಾಲ್ 164 ಬಾಲ್‌ಗಳಲ್ಲಿ 118 ರನ್ ಸಿಡಿಸಿ ಔಟಾದರು. ಅವರ ಅಮೋಘ ಇನ್ನಿಂಗ್ಸ್‌ನಲ್ಲಿ 14 ಬೌಂಡರಿ 2 ಸಿಕ್ಸರ್ ಸೇರಿದ್ದವು.

ಆದರೆ ತಂಡದ ನಾಯಕ ಗಿಲ್ ಕೇವಲ 9 ಬಾಲ್ ಎದುರಿಸಿ 11 ರನ್ ಗಳಿಸಿ ಅಟ್ಕಿನ್ಸನ್ ಬೌಲಿಂಗ್‌ನಲ್ಲಿ ಔಟ್ ಆದರು. ಮೊದಲ ಇನ್ನಿಂಗ್ಸ್‌ನಲ್ಲಿ ಮಿಂಚಿದ್ದ ಕರುಣ್ ನಾಯರ್ 32 ಬಾಲ್ ಎದುರಿಸಿ ಕೇವಲ 17 ರನ್ ಗಳಿಸಿ ಅಟ್ಕಿನ್ಸನ್‌ಗೆ ತಮ್ಮ ವಿಕೆಟ್ ಒಪ್ಪಿಸಿದರು. 46 ಬಾಲ್‌ಗಳನ್ನು ಎದುರಿಸಿದ್ದ ಟೀಮ್ ಇಂಡಿಯಾ ಕೀಪರ್ ಧ್ರುವ್ ಜ್ಯುರೆಲ್ 34 ರನ್ ಗಳಿಸಿ ತಮ್ಮ ವಿಕೆಟ್ ಒಪ್ಪಿಸಿದ್ದರು.

ಜೈಸ್ವಾಲ್: 6ನೇ ಟೆಸ್ಟ್ ಶತಕ

ಶನಿವಾರದಂದು ದ್ವಿತೀಯ ಇನಿಂಗ್ಸ್‌ನಲ್ಲಿ ಭಾರತದ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್, ಇಂಗ್ಲೆಂಡ್ ವಿರುದ್ಧ ತಮ್ಮ ನಾಲ್ಕನೇ ಟೆಸ್ಟ್ ಶತಕವನ್ನು ಪೂರ್ಣಗೊಳಿಸಿದ್ದಾರೆ. ಇದು ಯಶಸ್ವಿ ಜೈಸ್ವಾಲ್ ಅವರ ಟೆಸ್ಟ್ ವೃತ್ತಿ ಬದುಕಿನ ಆರನೇ ಶತಕವಾಗಿದೆ. ಈ ಅಂತಿಮ ಟೆಸ್ಟ್‌ನ ಪ್ರಥಮ ಇನಿಂಗ್ಸ್‌ನಲ್ಲಿ ಬಹುಬೇಗ ವಿಕೆಟ್ ಒಪ್ಪಿಸಿ ಟೀಕೆಗಳಿಗೆ ಗುರಿಯಾಗಿದ್ದ ಜೈಸ್ವಾಲ್, ದ್ವಿತೀಯ ಇನಿಂಗ್ಸ್‌ನಲ್ಲಿ ಶತಕ ಬಾರಿಸಿ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಶತಕದ ಮೂಲಕ ಇಂಗ್ಲೆಂಡ್ ಟೆಸ್ಟ್ ಸರಣಿಯನ್ನು ಆರಂಭಿಸಿದ್ದ ಅವರು, ಇದೀಗ ಕೊನೆಯ ಇನಿಂಗ್ಸ್‌ನಲ್ಲಿಯೂ ಶತಕ ಬಾರಿಸಿ ಈ ಸರಣಿಯನ್ನು ಮುಗಿಸಿದ್ದಾರೆಂಬುದು ವಿಶೇಷ ಸಂಗತಿ.

ಮಿಂಚಿದ ಆಕಾಶ್ ದೀಪ್

ಶುಕ್ರವಾರದಂದು ಭಾರತದ ತಂಡದ ಆಕಾಶ್ ದೀಪ್ ನಾಲ್ಕನೇ ಸ್ಥಾನದಲ್ಲಿ ನೈಟ್ ವಾಚ್‌ಮ್ಯಾನ್ ಆಗಿ ಬ್ಯಾಟಿಂಗ್‌ಗೆ ಬಂದಿದ್ದರು. ಆದರೆ ಮೂರನೇ ದಿನವಾದ ಶನಿವಾರ ಅವರ ಆಂಗ್ಲ ಬೌಲರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದರು. ಮೂರನೇ ದಿನ ಬೆಳಿಗ್ಗೆ ಆಕಾಶ್ ದೀಪ್ ಬಂದು ಆಕ್ರಮಣಕಾರಿಯಾಗಿ ಬ್ಯಾಟಿಂಗ್ ಪ್ರದರ್ಶನ ಮೆರೆದು, ಆ ಮೂಲಕ ತಮ್ಮ ಟೆಸ್ಟ್ ವೃತ್ತಿಜೀವನದ ಅತ್ಯಧಿಕ ಸ್ಕೋರ್ ಗಳಿಸಿದರು. ಅವರು 70 ಎಸೆತಗಳಲ್ಲಿ ತಮ್ಮ ಚೊಚ್ಚಲ ಟೆಸ್ಟ್ ಅರ್ಧಶತಕವನ್ನು ಪೂರ್ಣಗೊಳಿಸಿ, 66 ರನ್ ಗಳಿಸಿದ್ದ ವೇಳೆ ಔಟಾದರು. ಯಶಸ್ವಿ ಜೈಸ್ವಾಲ್ ಅವರ ಜತೆ 107 ರನ್‌ಗಳ ಜತೆಯಾಟವನ್ನು ಆಡಿದರು.

ಗವಾಸ್ಕರ್ ದಾಖಲೆ ಮುರಿಯುವ ಅವಕಾಶ ಕೈಚೆಲ್ಲಿದ ರಾಹುಲ್

ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಕ್ರಿಕೆಟ್ ಸರಣಿಯೊಂದರಲ್ಲಿ ಭಾರತದ ಪರ ಗರಿಷ್ಠ ರನ್ ಕಲೆ ಹಾಕಿದ ಆರಂಭಿಕ ಬ್ಯಾಟರ್ ಎನಿಸಿಕೊಳ್ಳುವ ಅವಕಾಶವನ್ನು ಕನ್ನಡಿಗ ಕೆ.ಎಲ್. ರಾಹುಲ್ ಕೈಚೆಲ್ಲಿದರು.

ಅತಿಥೇಯರ ವಿರುದ್ಧದ ಸರಣಿಯ ಐದನೇ ಪಂದ್ಯದಲ್ಲಿ ಕೇವಲ 21 ರನ್ ಗಳಿಸಿದ ರಾಹುಲ್, ಅಗ್ರಸ್ಥಾನಕ್ಕೇರುವ ಅವಕಾಶವನ್ನು ಕೇವಲ 10 ರನ್ ಕೊರತೆಯಿಂದ ಕಳೆದುಕೊಂಡರು. ಈ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 14 ರನ್ ಗಳಿಸಿದ್ದ ಅವರು, ಎರಡನೇ ಇನ್ನಿಂಗ್ಸ್‌ನಲ್ಲಿ ಗಳಿಸಿದ್ದು 7 ರನ್ ಮಾತ್ರ. ಪ್ರಸ್ತುತ ಟೂರ್ನಿಯಲ್ಲಿ ಐದೂ ಪಂದ್ಯಗಳ 10 ಇನ್ನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿರುವ ರಾಹುಲ್, ತಲಾ ಎರಡು ಶತಕ ಸಹಿತ 532 ರನ್ ಕಲೆಹಾಕಿದ್ದಾರೆ.

ಬ್ಯಾಟಿಂಗ್ ದಿಗ್ಗಜ, ಟೀಮ್ ಇಂಡಿಯದ ಮಾಜಿ ನಾಯಕ ಸುನಿಲ್ ಗವಾಸ್ಕರ್ ಅವರು 1979ರಲ್ಲಿ ಆರಂಭಿಕರಾಗಿ 542 ರನ್ ಕಲೆ ಹಾಕಿದ್ದರು, ಅದು ಇನ್ನೂ ದಾಖಲೆಯಾಗಿಯೇ ಉಳಿದಿದೆ.

ಮಹಾರಾಷ್ಟ್ರ ಸರಕಾರದಿಂದ ನಗದು ಪುರಸ್ಕಾರ

ದಿವ್ಯಾಗೆ 3 ಕೋಟಿ ಬಹುಮಾನ



ನಾಗ್ಪುರ: ಫಿಡೆ ಚೆಸ್ ಮಹಿಳಾ ವಿಶ್ವಕಪ್ ಕಿರೀಟ ಧರಿಸಿದ ಭಾರತದ ಯುವ ತಾರೆ ದಿವ್ಯಾ ದೇಶಮುಖ್ ಅವರನ್ನು ಸನ್ಮಾನಿಸಿದ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ 23 ಕೋಟಿ ರು. ನಗದು ಬಹುಮಾನವನ್ನು ನೀಡಿದ್ದಾರೆ.

ಜುಲೈ 28ರಂದು ಜಾರ್ಜಿಯಾದ ಬಟುಮಿಯಲ್ಲಿ ನಡೆದ ಫೈನಲ್‌ನಲ್ಲಿ ಸ್ವದೇಶದ ಅನುಭವಿ ಕೋನೇರು ಹಂಪಿ ಅವರನ್ನು ಸೋಲಿಸಿ ಫಿಡೆ ಚೆಸ್ ಮಹಿಳಾ ವಿಶ್ವಕಪ್ ಕಿರೀಟ ಧರಿಸಿದ ದಿವ್ಯಾ, ಗ್ರಾಂಡ್‌ಮಾಸ್ಟರ್ ಬಿರುದಿಗೂ ಪಾತ್ರರಾಗಿದ್ದರು. ದಿವ್ಯಾ ನಾಗ್ಪುರದ ಮೂಲದವರಾಗಿದ್ದು, ಸಿಎಂ ಫಡ್ನವೀಸ್ ಕೂಡ ಅದೇ ಊರಿನವರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ದಿವ್ಯಾ, ತನ್ನನ್ನು ಸನ್ಮಾನಿಸಿದ್ದಕ್ಕಾಗಿ ಸಿ.ಎಂ ಹಾಗೂ ನಾಗ್ಪುರದ ಜನರಿಗೆ ಧನ್ಯವಾದ ಅರ್ಪಿಸಿದರು. 'ಜೀವನದಲ್ಲಿ ಅಪರೂಪಕ್ಕೆ ಇಂತಹ ಕ್ಷಣಗಳನ್ನು ಆನಂದಿಸಲು ಅವಕಾಶ ಸಿಗುತ್ತದೆ. ಇದು ನನಗೆ ತುಂಬಾ ವಿಶೇಷವಾದ ಕ್ಷಣ, ಹಾಗಾಗಿ ನನಗೆ ತುಂಬಾ ಸಂತೋಷವಾಗುತ್ತಿದೆ. ಮಹಾರಾಷ್ಟ್ರ ಸರಕಾರ ಮತ್ತು ಮಹಾರಾಷ್ಟ್ರ ಚೆಸ್ ಅಸೋಸಿಯೇಷನ್ ನೀಡಿದ ಬೆಂಬಲಕ್ಕೆ ಧನ್ಯವಾದ' ಎಂದರು.

ಸಿ.ಎಂ ಫಡ್ನವೀಸ್ ಮಾತನಾಡಿ, 'ಸ್ಥಳೀಯ ಹುಡುಗಿಯೊಬ್ಬರು ವಿಶ್ವ ಮಟ್ಟದಲ್ಲಿ ಇಡೀ ದೇಶ ಹೆಮ್ಮೆಪಡುವಂತಹ ಸಾಧನೆ ಮಾಡಿದ್ದಾರೆ. ಈ ಬಗ್ಗೆ ಒಬ್ಬ ಭಾರತೀಯನಾಗಿ, ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಮತ್ತು ನಾಗ್ಪುರದ ನಿವಾಸಿಯಾಗಿ ನಾನು ಹೆಮ್ಮೆಪಡುತ್ತೇನೆ' ಎಂದು ಹೇಳಿದರು.

ಸಿಜೆಐಯಿಂದಲೂ ಭೇಟಿ, ಅಭಿನಂದನೆ

ಫಿಡೆ ಮಹಿಳಾ ವಿಶ್ವಕಪ್ ಗೆದ್ದ ದಿವ್ಯಾ ದೇಶಮುಖ್ ಅವರ ನಿವಾಸಕ್ಕೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಶನಿವಾರ ಭೇಟಿ ನೀಡಿ ಅವರ ಸಾಧನೆಗೆ ಅಭಿನಂದನೆ ಸಲ್ಲಿಸಿದರು. ಆ ವೇಳೆ ಅವರು ದಿವ್ಯಾ ಕುಟುಂಬದ ಜತೆಗಿನ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು. ಮುಖ್ಯ ನ್ಯಾಯಮೂರ್ತಿ ಗವಾಯಿ ಅವರು ಅಮರಾವತಿಯವರಾಗಿದ್ದು, ದಿವ್ಯಾ ಅವರ ಅಜ್ಜ ಡಾ. ಕೆ.ಜಿ. ದೇಶಮುಖ್ ಅವರು ಈ ಹಿಂದೆ ಅಮರಾವತಿಯ ಸಂತ ಗಾಡ್ಗೆ ಬಾಬಾ ಅಮರಾವತಿ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದರು. 'ಕುಲಪತಿ ಮತ್ತು ನಾನು ಆತ್ಮೀಯ ಸ್ನೇಹಿತರಾಗಿದ್ದೆವು. ನಾವು ಒಂದೇ ಕುಟುಂಬದಂತೆ ಇದ್ದೆವು. ನಾನು 50-55 ವರ್ಷಗಳ ಹಿಂದಿನ ನೆನಪಿಗೆ ಮರಳಿ ಭಾವುಕನಾದೆ. ಹಲವು ವರ್ಷಗಳ ನಂತರದ ಸಮ್ಮಿಲನ ಇದು. ನಾವೆಲ್ಲ ಹೆಮ್ಮೆಪಟ್ಟುಕೊಳ್ಳುವಂತೆ ಆಡಿದ ದಿವ್ಯಾ ಅವರನ್ನು ಅಭಿನಂದಿಸಲು ನಾನು ವಿಶೇಷವಾಗಿ ಬಂದೆ' ಎಂದು ಗವಾಯಿ ಅವರು ತಿಳಿಸಿದರು.

ಆಗಸ್ಟ್-28ರಿಂದ ದುಲೀಪ್ ಟ್ರೋಫಿ ಆರಂಭ | ದೀರ್ಘಾವಧಿ ಬಳಿಕ ಮರಳಿದ ಶಮಿ

ಇಶಾನ್ ಕಿಶನ್ ಪೂರ್ವ ವಲಯಕ್ಕೆ ನಾಯಕ

ದೆಹಲಿ: ದೇಶಿ ಟೆಸ್ಟ್ ಕ್ರಿಕೆಟ್‌ನ ಹಲವು ಟೂರ್ನಿಗಳಲ್ಲಿ ಒಂದಾಗಿರುವ ದುಲೀಪ್ ಟ್ರೋಫಿ ಟೂರ್ನಿಯು ಆಗಸ್ಟ್-28ರಂದು ಅಧಿಕೃತವಾಗಿ ಆರಂಭವಾಗಲಿದೆ. ಉದ್ಘಾಟನಾ ಪಂದ್ಯದಲ್ಲಿ ಪೂರ್ವ ವಲಯ ಹಾಗೂ ಉತ್ತರ ವಲಯ ತಂಡಗಳು ಪರಸ್ಪರ ಕಾದಾಟ ನಡೆಸಲಿವೆ.

ಅಸ್ಸಾಂ, ಬಿಹಾರ, ಬಂಗಾಳ, ಜಾರ್ಖಂಡ್, ಒಡಿಶಾ ಮತ್ತು ತ್ರಿಪುರಾ ರಾಜ್ಯಗಳನ್ನು ಪ್ರತಿನಿಧಿಸುವ ಪೂರ್ವ ವಲಯ ತಂಡದ ನಾಯಕನಾಗಿ ಭಾರತ ತಂಡದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಇಶಾನ್ ಕಿಶನ್ ನೇಮಕವಾಗಿದ್ದಾರೆ. ತಂಡಕ್ಕೆ ಉಪ ನಾಯಕನಾಗಿ ಬಂಗಾಳದ ಆರಂಭಿಕ ಆಟಗಾರ ಅಭಿಮನ್ಯು ಈಶ್ವರನ್ ಅವರನ್ನು ಆರಿಸಲಾಗಿದೆ. ಈಶ್ವರನ್ ರೆಡ್ ಬಾಲ್ ಕ್ರಿಕೆಟ್‌ನಲ್ಲಿ ಭಾರತ ತಂಡದ ಪರ ಸ್ಥಿರ ಪ್ರದರ್ಶನ ತೋರಿದ್ದರಲ್ಲದೆ, ತಂಡದ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್ ಆಗಿ ಕಳೆದ ಕೆಲವು ವರ್ಷಗಳಿಂದ ಗುರುತಿಸಿಕೊಂಡಿದ್ದಾರೆ.

ಭಾರತದ ವೇಗಿ ಮೊಹಮ್ಮದ್ ಶಮಿ ದೀರ್ಘಾವಧಿ ದೇಶಿ ರೆಡ್ ಬಾಲ್ ಕ್ರಿಕೆಟ್‌ನಿಂದ ದೂರ ಉಳಿದಿದ್ದರು, ಆದರೆ ಇದೀಗ ದೇಶಿ ರೆಡ್ ಬಾಲ್ ಕ್ರಿಕೆಟ್‌ಗೆ ಮರಳಿದ್ದು, ಪೂರ್ವ ವಲಯದ ತಂಡದ ಪರ ಕಣಕ್ಕಿಳಿಯಲಿದ್ದಾರೆ.

ಪೂರ್ವ ವಲಯ: ಇಶಾನ್ ಕಿಶನ್ (ನಾಯಕ), ಅಭಿಮನ್ಯು ಈಶ್ವರನ್ (ಉಪ ನಾಯಕ), ಸಂದೀಪ್ ಪಟ್ನಾಯಕ್, ವಿರಾಟ್ ಸಿಂಗ್, ಡ್ಯಾನಿಶ್ ದಾಸ್, ಶ್ರೀದಾಮ್ ಪಾಲ್, ಶರಣದೀಪ್ ಸಿಂಗ್, ಕುಮಾರ್ ಕುಶಾಗ್ರಾ, ರಿಯಾನ್ ಪರಾಗ್, ಉತ್ಕರ್ಷ್ ಸಿಂಗ್, ಸೂರಜ್ ಸಿಂಧು ಜೈಸ್ವಾಲ್, ಮುಖೇಶ್ ಕುಮಾರ್, ಆಕಾಶ್ ದೀಪ್, ಮೊಹಮ್ಮದ್ ಶಮಿ.

ಆಗಸ್ಟ್-11ರಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಟೂರ್ನಿ

ಮಹಾರಾಜ ಟ್ರೋಫಿ: ಕ್ರೀಡಾಂಗಣ ಸ್ಥಳಾಂತರ ಸಾಧ್ಯತೆ

ಬೆಂಗಳೂರು: ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ನಗರದ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಿಂದ ಸ್ಥಳಾಂತರವಾಗುವ ಸಾಧ್ಯತೆ ಇದೆ. 4ನೇ ಆವೃತ್ತಿಯ ಟೂರ್ನಿ ಆಗಸ್ಟ್-11ರಿಂದ 27ರವರೆಗೆ ನಡೆಯಲಿದ್ದು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಸಿದ್ಧತೆ ಆರಂಭಿಸಿತ್ತು.

ಆದರೆ ಕಳೆದ ಐಪಿಎಲ್‌ನ ವಿಜೇತ ತಂಡ, ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ತಂಡದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಅಭಿಮಾನಿಗಳು ಸಾವನ್ನಪ್ಪಿದ ಪ್ರಕರಣದ ತನಿಖೆ ಇನ್ನೂ ವಿಚಾರಣೆಯ ಹಂತದಲ್ಲಿ ಇರುವುದರಿಂದ ಕ್ರೀಡಾಂಗಣದಲ್ಲಿ ಪಂದ್ಯಗಳ ಆಯೋಜನೆಗೆ ಇದುವರೆಗೂ ಪೊಲೀಸ್ ಇಲಾಖೆಯಿಂದ ಅನುಮತಿ ಸಿಕ್ಕಿಲ್ಲ ಎಂದು ಟೂರ್ನಿಯ ಆಯೋಜಕರು ತಿಳಿಸಿದ್ದಾರೆ. ಈ ಬಾರಿಯ ಟೂರ್ನಿಯಲ್ಲಿ ಕ್ರೀಡಾಂಗಣಕ್ಕೆ ಅಭಿಮಾನಿಗಳ ಪ್ರವೇಶ ನಿರ್ಬಂಧಿಸಿ, ಮುಚ್ಚಿದ್ದ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸುವುದಾಗಿ ತಿಳಿಸಿದ್ದ ಆಯೋಜಕರು ವೇಳಾಪಟ್ಟಿಯನ್ನೂ ಬಿಡುಗಡೆಗೊಳಿಸಿದ್ದರು.

ಒಂದು ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಅನುಮತಿ ದೊರೆಯದಿದ್ದರೆ ಪರ್ಯಾಯವಾಗಿ ಆಲೂರು ಅಥವಾ ಮೈಸೂರಿನ ಕೆಎಸ್‌ಸಿಎ ಮೈದಾನಗಳಲ್ಲಿ ಪಂದ್ಯ ಆಯೋಜಿಸುವ ಕುರಿತು ಕೆಎಸ್‌ಸಿಎ ಚಿಂತನೆ ನಡೆಸುತ್ತಿದೆ. ಫ್ರಾಂಚೈಸಿಗಳ ಮಾಲೀಕರು ಹಾಗೂ ಟೂರ್ನಿಯ ನೇರಪ್ರಸಾರಕರೊಂದಿಗೆ ಈಗಾಗಲೇ ಸಾಧಕ-ಬಾಧಕಗಳ ಕುರಿತು ಚರ್ಚಿಸಲಾಗುತ್ತಿದ್ದು, ಶೀಘ್ರದಲ್ಲೇ ಅಂತಿಮ ನಿರ್ಧಾರ ಪ್ರಕಟವಾಗಲಿದೆ.

ಪ್ರಶಾಂತ್.ಟಿ.ಆರ್

71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಘೋಷಣೆಯಾಗಿದ್ದು ಕನ್ನಡದ ಕಂದೀಲು ಚಿತ್ರಕ್ಕೆ ಪ್ರಾದೇಶಿಕ ವಿಭಾಗದಲ್ಲಿ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಲಭಿಸಿದೆ. ಸಾಮಾಜಿಕ ಸಂಕಥನದ ಜತೆಗೆ, ರೈತರ ಬದುಕು ಬವಣೆಯ ಕಥೆಯೂ ಇಲ್ಲಿದೆ. ಬಡತನದಲ್ಲಿ ಬೆಂದ ರೈತನ ತೊಳಲಾಟ, ಆತನಿಗೆ ಎದುರಾಗುವ ಸವಾಲುಗಳು ಚಿತ್ರದಲ್ಲಿ ಹಾಸುಹೊಕ್ಕಾಗಿದೆ. ಕೊಡಗಿನ ಕೊಟ್ಟುಕತ್ತೀರ ಯಶೋಧಾ ಪ್ರಕಾಶ್ ಈ ಚಿತ್ರವನ್ನು ನಿರ್ದೇಶಿಸಿದ್ದು ರಾಷ್ಟ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಕಂದೀಲು ಕಥೆಯನ್ನು ಆಯ್ದುಕೊಳ್ಳಲು ಕಾರಣ?

ಯಶೋಧಾ ಪ್ರಕಾಶ್: ನನಗೆ ಸಾಮಾಜಿಕ ಕಳಕಳಿಯ ಸಿನಿಮಾಗಳು ಎಂದರೆ ಮೊದಲಿನಿಂದಲೂ ಇಷ್ಟ. ಈ ಹಿಂದೆ ರಂಗಪ್ರವೇಶ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದೆ, ಈ ಸಂದರ್ಭದಲ್ಲಿ ನಮ್ಮ ಚಿತ್ರದ ಸಂಕಲನಕಾರ ನಾಗೇಶ್ ಅವರು ಅನಾಮಿಕ ಎಂಬ ಕಥಾಸಂಕಲನ ನೀಡಿದರು. ಅದರಲ್ಲಿದ್ದ ಕಥೆಯೇ ಕಂದೀಲು. ಈ ಸ್ಟೋರಿ ಓದುತ್ತಾ ಮನಸಿಗೆ ಹಿಡಿಸಿತು. ಹೊಸತನ ಕಂಡಿತು. ರೈತನ ಬದುಕು ಬವಣೆ, ಸಾಮಾಜಿಕ ಸವಾಲುಗಳು ಎಲ್ಲವೂ ಬಿಡದೆ ಕಾಡಿವವು. ಇದೇ ಕಥೆಯನ್ನು ಯಾಕೆ ಸಿನಿಮಾ ಮಾಡಬಾರದು ಎಂದು ನಿರ್ಧರಿಸಿದೆ. ಸಿನಿಮಾವೂ ಸೆಟ್ಟೇರಿತು. ಕಥೆಗೆ ತಕ್ಕಂತೆ ಶೀರ್ಷಿಕೆ ಆಯ್ದುಕೊಳ್ಳುವುದು ಮುಖ್ಯವಾಗಿತ್ತು. ಅದಕ್ಕಾಗಿ ಐವತ್ತರಿಂದ ನೂರು ಶೀರ್ಷಿಕೆ ಹುಡುಕಿದೆವು, ಅದರಲ್ಲಿ ಕಂದೀಲು ಅಂತಿಮವಾಯಿತು. ಕಂದೀಲು ಎಂದರೆ ಬೆಳಕು, ಈ ಸಿನಿಮಾ ನನ್ನ ವೃತ್ತಿ ಜೀವನದಲ್ಲಿ ಹೊಸ ಬೆಳಕುತಂದಿದೆ.

ಕಂದೀಲು ಪ್ರಶಸ್ತಿ ಪಡೆಯುವ ನಿರೀಕ್ಷೆ ಇತ್ತೆ?

ಯಶೋಧಾ: ಒಳ್ಳೆಯ ಕಥೆಯನ್ನು ಆಯ್ದುಕೊಂಡಿದ್ದೆ, ಸಿನಿಮಾ ಕೂಡ ಅಷ್ಟೇ ಸೊಗಸಾಗಿ ಮೂಡಿಬಂದಿತ್ತು. ಕಂದೀಲು ಕಲ್ಕತ್ತಾ ಅಂತಾರಾಷ್ಟ್ರೀಯ ಚಲಚಿತ್ರೋತ್ಸವದಲ್ಲಿಯೂ ಪ್ರದರ್ಶನಗೊಂಡು ಮೆಚ್ಚುಗೆ ಗಳಿಸಿತು. ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿಯೂ ಪ್ರದರ್ಶನ ಕಚಿಡು ಪ್ರಶಸ್ತಿ ಪಡೆಯಿತು. ಈಗ ನಮ್ಮ ನಿರೀಕ್ಷೆಯಂತೆ ರಾಷ್ಟ್ರ ಪ್ರಶಸ್ತಿಯೂ ಸಂದಿದೆ. ಈ ಪ್ರಶಸ್ತಿ ನಮ್ಮ ಇಡೀ ಚಿತ್ರತಂಡಕ್ಕೆ ಸಲ್ಲಬೇಕು.

ನಿರ್ದೇಶನಕ್ಕೆ ಬರಲು ಸ್ಫೂರ್ತಿ ಯಾರು?

ಯಶೋಧಾ: ನಾನು ಇಂದು ನಿರ್ದೇಶಕಿಯಾಗಿ ಗುರುತಿಸಿಕೊಂಡಿದ್ದೇನೆ ಎಂದರೆ ಅದಕ್ಕೆ ನನ್ನ ಪತಿ ಪ್ರಕಾಶ್ ಕಾರ್ಯಪ್ಪ ಅವರೆ ಸ್ಫೂರ್ತಿ. ಪ್ರಕಾಶ್ ಹಲವು ಸಿನಿಮಾಗಳನ್ನು, ಕೊಡವ ಧಾರಾವಾಹಿಗಳನ್ನು ನಿರ್ದೇಶಿಸಿದ್ದಾರೆ. ಹಾಗಾಗಿ ನನಗೂ ಸಿನಿಮಾರಂಗದಲ್ಲಿ ಆಸಕ್ತಿ ಮೂಡಿತು. ನನ್ನ ಎಲ್ಲಾ ಸಿನಿಮಾಗಳಿಗೂ ಪ್ರಕಾಶ್ ಸಾಥ್ ನೀಡಿದ್ದಾರೆ. ನಿರ್ಮಾಣಕ್ಕೂ ಕೈಜೋಡಿಸಿದ್ದಾರೆ.

> **ಕನ್ನಡದಲ್ಲಿ ಕಥೆಗಳ ಕೊರತೆಯೇ ಇಲ್ಲ, ಕನ್ನಡದಲ್ಲಿ ವಿಪುಲ ಸಾಹಿತ್ಯ ಸಂಪತ್ತಿದೆ. ಅದರಿಂದ ನೂರಾರು ಕಥೆಗಳನ್ನು ಆಯ್ದುಕೊಂಡು ಅತ್ಯುತ್ತಮ ಸಿನಿಮಾಗಳನ್ನು ತೆರೆಗೆ ತರಬಹುದು.**

> **ಒಬ್ಬ ಮಹಿಳಾ ನಿರ್ದೇಶಕಿಯಾಗಿ ನನಗೆ ರಾಷ್ಟ್ರ ಪ್ರಶಸ್ತಿ ಲಭಿಸಿರುವುದು ಖುಷಿಕೊಟ್ಟಿದೆ. ಅದಕ್ಕೂ ಮಿಗಿಲಾಗಿ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ಮುಂದೆ ಮತ್ತಷ್ಟು ಒಳ್ಳೆಯ ಸಿನಿಮಾಗಳನ್ನು ನಿರ್ದೇಶಿಸುತ್ತೇನೆ.**

ನಿಮ್ಮ ಮೇಲೆ ಪ್ರಭಾವ ಬೀರಿದ ಸಿನಿಮಾಗಳು?

ಯಶೋಧಾ: ಈ ಹಿಂದೆ ರಾಷ್ಟ್ರ ಪ್ರಶಸ್ತಿ ಪಡೆದ ಘಟಶ್ರದ್ಧಾ, ತಬರನ ಕಥೆ, ಚೋಮನ ದುಡಿ, ದ್ವೀಪ ಈ ಎಲ್ಲಾ ಸಿನಿಮಾಗಳು ನನ್ನ ಮೇಲೆ ಅಪಾರ ಪ್ರಭಾವ ಬೀರಿದವು. ಆ ಸಿನಿಮಾಗಳನ್ನು ನೋಡಿದಾಗ ಅಲ್ಲಿ ಆಯ್ದುಕೊಂಡಿರುವ ಕಥೆಗಳು ನನ್ನನ್ನು ಸೆಳೆದವು. ಹಾಗಾಗಿ ನನ್ನ ಸಿನಿಮಾಗಳಲ್ಲಿಯೂ ಅಂತಹದ್ದೇ ಕಥೆಗಳನ್ನು ಆಯ್ದುಕೊಳ್ಳಲು ನಿರ್ಧರಿಸಿದೆ. ಅದರಲ್ಲಿಯೂ ನಮ್ಮ ಸಿನಿಮಾ ತಂಡದ ಶ್ರಮದಿಂದ ಕಂದೀಲು ಅಂತಹ ಅದ್ಭುತ ಚಿತ್ರ ಸಿದ್ಧವಾಗಲು ಸಾಧ್ಯವಾಯಿತು.

ನಿಮ್ಮ ಮುಂದಿನ ಸಿನಿಮಾಗಳು?

ಯಶೋಧಾ: ಕಂದೀಲು ಬಳಿಕ ಕೌಮುದಿ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದೇನೆ. ಈ ಸಿನಿಮಾದ ಕಥೆ ಕೂಡ ಚೆನ್ನಾಗಿದೆ ಅದು ಪ್ರೇಕ್ಷಕರಿಗೆ ಮೆಚ್ಚುಗೆಯಾಗಲಿದೆ ಎಂಬ ನಂಬಿಕೆಯೂ ಇದೆ. ಇದರ ಜೊತೆಗೆ ನಮ್ಮ ಕೊಡಗಿನಲ್ಲಿ ಕಾಡುತ್ತಿರುವ ಕಾರ್ಮಿಕರ ಸಮಸ್ಯೆ, ವಲಸೆ ಕಾರ್ಮಿಕರು, ಆನೆ ಮಾನವ ಸಂಘರ್ಷದ ಕುರಿತ ಸಿನಿಮಾ ನಿರ್ದೇಶನ ಮಾಡುವ ಯೋಜನೆ ಇದೆ.

77 ನೇ
ಜನ್ಮದಿನದ ಶುಭಾಶಯಗಳು.
ರಾಜ್ಯದ ಬಡ ಹಾಗೂ ಮಧ್ಯಮ ವರ್ಗಗಳಿಗೆ
ಗ್ಯಾರಂಟಿ ಬದುಕನ್ನು ಕಲ್ಪಿಸಿದ,
ಭ್ಯಾಗಗಳ ಮೂಲಕವೇ ನಾಡಿನ
ಜನರಿಗೆ ವಿಶ್ವಾಸ ತುಂಬಿದ
ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿಯೇ
ಅಧಿಕಾರವನ್ನು ನಡೆಸುತ್ತಿರುವ,
ಅಹಿಂದ ವರ್ಗದ ಆಶಾಕಿರಣ, ಧೀಮಂತ ನಾಯಕ
ಸನ್ಮಾನ್ಯ ಶ್ರೀ
ಸಿದ್ದರಾಮಯ್ಯ
ನವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು.
-: ಶುಭ ಕೋರುವವರು :-
ಟಿ. ಡಿ. ರಾಜೇಗೌಡ್ರು
ಶಾಸಕರು
ಶೃಂಗೇರಿ ವಿಧಾನಸಭಾ ಕ್ಷೇತ್ರ,
ಚಿಕ್ಕಮಗಳೂರು ಜಿಲ್ಲೆ.

ವಿದೇಶ ಕಾಲ ಓದಲು ಇದೇ ಸಕಾಲ!

ವಿಶ್ವೇಶ್ವರ ಭಟ್ ಅವರ 100 ನೇ ಪುಸ್ತಕ

ವಿವಿಧ ವಿಷಯಗಳ ಬಗ್ಗೆ ನಿರಂತರವಾಗಿ ಬರೆಯುತ್ತಾ ಬಂದಿರುವ ಸಾಹಿತಿ, ಪತ್ರಕರ್ತ ವಿಶ್ವೇಶ್ವರ ಭಟ್ ಅವರು, ಪ್ರವಾಸ ಸಾಹಿತ್ಯವನ್ನೂ ವಿಶೇಷವಾಗಿ, ವ್ಯಾಪಕವಾಗಿ ಬರೆದಿದ್ದಾರೆ. ಈಗಾಗಲೇ 100ಕ್ಕೂ ಅಧಿಕ ದೇಶಗಳಲ್ಲಿ ಪ್ರವಾಸ ಮಾಡಿರುವ ವಿಶ್ವೇಶ್ವರ ಭಟ್ ಅವರಿಗೆ, ಪ್ರವಾಸದ ಅನುಭವಗಳನ್ನು ಬರೆಯುವುದೆಂದರೆ ಬಲು ಇಷ್ಟ; ಅದಕ್ಕೆ ಪೂರಕವಾಗಿ, ಈಗ ಹೊರಬಂದಿರುವ ಅವರ 100 ನೇ ಪುಸ್ತಕ 'ವಿದೇಶ ಕಾಲ'ವೂ ಅವರ ವಿದೇಶ ಪ್ರವಾಸದ ಅನುಭವಗಳನ್ನು ಒಳಗೊಂಡಿದೆ. ಪ್ರವಾಸಾನುಭವ ಹೊಂದಿರುವ ಇಂತಹದೊಂದು ವಿಶಿಷ್ಟ, ಸಮಗ್ರ, ಅನನ್ಯ ಪುಸ್ತಕವು ಕನ್ನಡದಲ್ಲಿ ಇದುವರೆಗೆ ಹೊರಬಂದಿಲ್ಲ ಎಂದರೆ ಅದು ಅತಿಶಯೋಕ್ತಿಯಲ್ಲ.



» ಶಶಿಧರ ಹಾಲಾಡಿ

ಕನ್ನಡ ಸಾಹಿತ್ಯದಲ್ಲಿ, ಪ್ರವಾಸ ಕಥನಗಳಿಗೆ ಒಂದು ಉತ್ತಮ ಪರಂಪರೆಯಿದೆ. ನಮ್ಮ ಹಲವು ಪ್ರಮುಖ ಲೇಖಕರು ಪ್ರವಾಸ ಕಥನಗಳ್ನು ಬರೆದು, ಆ ಒಂದು ಪರಂಪರೆಗೆ ಸತ್ವ ತುಂಬಿದ್ದಾರೆ, ಅದೂ ಸಹ ಒಂದು ಸೃಜನಶೀಲ ಬರವಣಿಗೆ ಎಂಬುದನ್ನು ಋಜುವಾತುಪಡಿಸಿದ್ದಾರೆ.

ಕನ್ನಡದಲ್ಲಿ ಹೆಚ್ಚು ಸಂಖ್ಯೆಯ ಪ್ರವಾಸ ಕಥನಗಳನ್ನು ಪುಸ್ತಕ ರೂಪದಲ್ಲಿ ಹೊರತಂದವರಲ್ಲಿ ಎದ್ದು ಕಾಣುವ ಹೆಸರೆಂದರೆ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತ ಶಿವರಾಮ ಕಾರಂತರು. ಅವರು ವ್ಯಾಪಕವಾಗಿ ದೇಶ ವಿದೇಶಗಳಲ್ಲಿ ಸುತ್ತಾಡಿದ್ದರು; ಅವರ ಪುಸ್ತಕಗಳಲ್ಲಿ, ಪ್ರವಾಸನುಭವ ಮಾತ್ರವಲ್ಲ, ಜತೆಯಲ್ಲೇ, ಕಲೆಯ ಅಧ್ಯಯನ, ರಂಗ ಕಲೆಗಳ ಬಗ್ಗೆ ಕುತೂಹಲ, ವಿದೇಶಗಳ ವಿವಿಧ ಕಲಾಗ್ಯಾಲರಿಗಳ ವಿವರವಾದ ವಿಶ್ಲೇಷಣೆಯೂ ಇರುತ್ತದೆ. ಅಪೂರ್ವ ಪಶ್ಚಿಮ, ಅಬೂವಿನಿಂದ ಬರಾಮಕ್ಕೆ, ಅರಸಿಕರಲ್ಲ, ಪಾತಾಳಕ್ಕೆ ಪಯಣ ಮೊದಲಾದ ಅವರ ಪ್ರವಾಸ ಕಥನಗಳು, ಕನ್ನಡ ಸಾಹಿತ್ಯಕ್ಕೆ, ಪ್ರವಾಸ ಸಾಹಿತ್ಯಕ್ಕೆ ವಿಶಿಷ್ಟ, ಮೌಲಿಕ ಕೊಡುಗೆ.

ಅಮೆರಿಕದಂತಹ ಮುಂದುವರಿದ ದೇಶದ ಪ್ರವಾಸಾನುಭವವನ್ನು ಪುಸ್ತಕ ರೂಪಕ್ಕೆ ಇಳಿಸಿದ ಮೊದಮೊದಲ ಸಾಹಿತಿಗಳಲ್ಲಿ ಬಿ.ಜಿ.ಎಲ್.ಸ್ವಾಮಿ (ಜನನ 1919) ಪ್ರಮುಖರು. ಇವರ ಪ್ರವಾಸ ಕಥನದ ಪ್ರಧಾನ ಧಾರೆ ಹಾಸ್ಯ ಎನ್ನಲೂಬಹುದಾದಷ್ಟು ವಿಶಿಷ್ಟವಾಗಿದೆ ಅವರ ಪ್ರವಾಸ ಕಥನ. ಉನ್ನತ ಅಧ್ಯಯನಕ್ಕೆಂದು 1940ರ ದಶಕದಲ್ಲಿ ಅಮೆರಿಕಕ್ಕೆ ಹೊರಟಾಗ, ಅವರ ಪ್ರಯಾಣ ಮಾಧ್ಯಮವು ಹಡಗು! ನಮ್ಮ ದೇಶದಿಂದ ಅಮೆರಿಕಕ್ಕೆ ಆಗ ಹಲವು ವಾರಗಳ ಪಯಣ! ಹಾಸ್ಯರಸವೇ ಎದ್ದು ಕಾಣುವಂತೆ ಅವರು ರಚಿಸಿದ ಪ್ರವಾಸ ಕಥನದ ಹೆಸರು 'ಅಮೆರಿಕದಲ್ಲಿ ನಾನು'. ಆ ನಂತರ, ಅಮೆರಿಕದ ಪ್ರವಾಸಾನುಭವವನ್ನು ಪುಸ್ತಕರೂಪದಲ್ಲಿ ಹಲವರು ಹೊರತಂದಿದ್ದಾರೆ. ಆ ದೊಡ್ಡ ದೇಶದ ಕುರಿತು ಎಲ್ಲರಿಗೂ ಬೆರಗು ಇದ್ದದ್ದೇ!

ಕನ್ನಡದ ಖ್ಯಾತ ಕವಿ ಜಿ.ಎಸ್.ಶಿವರುದ್ರಪ್ಪನವರು ತಮ್ಮ ಪ್ರವಾಸಾನುಭವವನ್ನು ಪುಸ್ತಕ ರೂಪದಲ್ಲಿ ಹೊರತಂದು, ಈ ಪ್ರಕಾರದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. (ಗಂಗೆಯ ಶಿಖರಗಳಲ್ಲಿ, ಮಾಸ್ಕೋದಲ್ಲಿ 22 ದಿನ, ಇಂಗ್ಲೆಂಡಿನಲ್ಲಿ ಚತುರ್ಮಾಸ, ಅಮೆರಿಕದಲ್ಲಿ ಕನ್ನಡಿಗ). ಎ.ಎನ್.ಮೂರ್ತಿರಾವ್, ವಿ.ಸೀ., ಕೃಷ್ಣಾನಂದ ಕಾಮತ, ಕು.ಶಿ.ಹರಿದಾಸ ಭಟ್, ಟಿ.ಕೆ.ರಾಮರಾವ್ ಸೇರಿದಂತೆ ಹಿರಿಯ ತಲೆಮಾರಿನ ಹಲವು ಸಾಹಿತಿಗಳು ಪ್ರವಾಸ ಕಥನ ಬರೆದಿದ್ದಾರೆ. ಮಹಿಳೆಯರು ರಚಿಸಿದ ಪ್ರವಾಸ ಕಥನಗಳ ಪೈಕಿ ನೇಮಿಚಂದ್ರ ಅವರ 'ಪೆರುವಿನ ಪವಿತ್ರ ಕಣಿವೆಗಳಲ್ಲಿ' ಅನನ್ಯ ಎನಿಸಿದೆ. ಈಚಿನ ವರ್ಷಗಳಲ್ಲಿ ಈ ಪ್ರಕಾರದ ಸಾಹಿತ್ಯ ಇನ್ನಷ್ಟು ಹುಲುಸಾಗಿದೆ; ಯುವ ಪೀಳಿಗೆಯವರೂ ವಿದೇಶ ಪ್ರವಾಸವನ್ನು ಅಕ್ಷರರೂಪಕ್ಕೆ ಇಳಿಸುವುರದಲ್ಲಿ ಮುಂದಿದ್ದಾರೆ.

ಹತ್ತಾರು ವಿದೇಶಾನುಭವ!

ಕನ್ನಡದ ಪ್ರವಾಸ ಕಥನಗಳ ಸಿದ್ಧಶೈಲಿಗಿಂತ ತುಂಬಾ ವಿಭಿನ್ನವಾಗಿ ಹೊರಬಂದಿರುವ, ವಿಶ್ವೇಶ್ವರ ಭಟ್ ಅವರ 'ವಿದೇಶ ಕಾಲ' ಓದಿದಾಗ, ಕನ್ನಡ ಪ್ರವಾಸ ಕಥನಗಳ ಪರಂಪರೆನ ನೆನಪಾಯಿತು. ಸಾಹಿತಿ, ಪತ್ರಕರ್ತರಾದ ವಿಶ್ವೇಶ್ವರ ಭಟ್ ಅವರ ನೂರನೆಯ ಪುಸ್ತಕವೂ ಆಗಿರುವ 'ವಿದೇಶ ಕಾಲ' ಪುಸ್ತಕದ ಸ್ವರೂಪ ತುಸು ಭಿನ್ನ, ಅನನ್ಯ. ಇದು ಒಂದು ದೇಶದ ಪ್ರವಾಸದ ಅನುಭವ ಹೊಂದಿರುವ ಪುಸ್ತಕವಲ್ಲ; ಇಲ್ಲಿ ಹತ್ತಾರು ದೇಶಗಳ ಪ್ರವಾಸಾನುಭವವಿದೆ, ಅದೇ ಸಮಯದಲ್ಲಿ ಆ ದೇಶದ ಸಂಸ್ಕೃತಿ, ಜನ, ಜೀವನ, ನಗರ, ಪಟ್ಟಣಗಳ ಸೂಕ್ಷ್ಮ ವಿಶ್ಲೇಷಣೆಗಳಿವೆ, ಒಳನೋಟಗಳಿವೆ. ಈ ಪುಸ್ತಕದಲ್ಲಿರುವ 134 ಲೇಖನಗಳೂ, ತಮ್ಮಷ್ಟಕ್ಕೆ ತಾವೇ ವಿಶಿಷ್ಟ, ಅನನ್ಯ; ಅಂದರೆ, ಅವುಗಳನ್ನು ಬಿಡಿಯಾಗಿ ಓದಿದರೆ ಒಂದು ಅನುಭವ; ಒಟ್ಟಿಗೇ ಓದಿದರೆ ಇನ್ನೊಂದೇ ಅನುಭವ. ಪುಸ್ತಕವನ್ನು ಪೂರ್ತಿ ಓದಿ ಮುಗಿಸಿದವರಿಗೆ ಜಗತ್ತನ್ನೇ ಸುತ್ತಿ ನೋಡಿದ ಅನುಭವ ದೊರೆತರೂ ಅಚ್ಚರಿಯಿಲ್ಲ! ಅಂತಹ ಒಂದು ಸಾಧ್ಯತೆಯನ್ನು ತನ್ನಲ್ಲಿರಿಸಿಕೊಂಡಿರುವ ಪುಸ್ತಕ 'ವಿದೇಶ ಕಾಲ'. ನೂರಕ್ಕೂ ಅಧಿಕ ದೇಶಗಳಲ್ಲಿ ಪ್ರವಾಸ ಮಾಡಿ ಬಂದಿರುವ ವಿಶ್ವೇಶ್ವರ ಭಟ್ ಅವರಿಂದ ಮಾತ್ರ, ಇಂತಹ ಒಂದು ಓದಿನ ಅನುಭವವನ್ನು ನೀಡಲು ಸಾಧ್ಯ.

'ವಿದೇಶ ಕಾಲ' ಪುಸ್ತಕದ ಕುರಿತು ಇನ್ನೊಂದು ಪ್ರಮುಖ ವಿಚಾರವನ್ನು ಸ್ಪಷ್ಟಪಡಿಸಲೇ ಬೇಕು ಮತ್ತು ಗುರುತಿಸಲೇಬೇಕು. ಅದೇನೆಂದರೆ, ಸಾಹಿತಿ, ಪತ್ರಕರ್ತರಾದ ವಿಶ್ವೇಶ್ವರ ಭಟ್ ಅವರಿಂದ ಮಾತ್ರ ಇಂತಹ ಒಂದು 'ಪ್ರವಾಸ ಸಂಪುಟ'ವನ್ನು ಓದುಗರ ಕೈಗಿಡಲು ಸಾಧ್ಯ! ಇದು ಅತಿಶಯೋಕ್ತಿಯಂತೆ ಕಾಣಬಹುದು, ಆದರೆ ಅತಿಶಯೋಕ್ತಿಯಲ್ಲ; ಇದನ್ನು ಪುರಾವೆ ಸಹಿದ ಸಿದ್ಧಪಡಿಸಬಹುದು! ಏಕೆ ಗೊತ್ತೆ?

1.ಇದುವರೆಗೆ 100 ಕ್ಕೂ ಅಧಿಕ ದೇಶಗಳಲ್ಲಿ ವಿಶ್ವೇಶ್ವರ ಭಟ್ ಅವರು ಪ್ರವಾಸ ಮಾಡಿದ್ದಾರೆ; ಕೆಲವು ದೇಶಗಳಿಗೆ ಒಂದಕ್ಕಿಂತ ಹೆಚ್ಚು ಬಾರಿ ಭೇಟಿಕೊಟ್ಟಿದ್ದಾರೆ; ಒಟ್ಟು 300 ಕ್ಕೂ ಅಧಿಕ ಸಲ ವಿದೇಶಗಳಲ್ಲಿ ಸುತ್ತಾಡಿದ್ದಾರೆ, ಅಲ್ಲಿನ ಜನ ಜೀವನವನ್ನು ಗಮನಿಸಿದ್ದಾರೆ. ಕನ್ನಡದ ಬೇರೊಬ್ಬ ಸಾಹಿತಿ, ಬರಹಗಾರ ಈ ರೀತಿ ಪ್ರವಾಸ ಮಾಡಿಲ್ಲ.

2.ಪ್ರವಾಸದ ಗುಂಗನ್ನು ಹಚ್ಚಿಕೊಂಡ ಬೇರೆ ಕೆಲವು ಪ್ರವಾಸಿಗರು ಸಹ 100ಕ್ಕೂ ಅಧಿಕ ದೇಶಗಳಿಗೆ ಭೇಟಿ ನೀಡಿರಬಹುದು; ಅವರ ಪ್ರವಾಸಾನುಭವವೂ ಅಮೂಲ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಅಂತಹವರ್ಯಾರೂ ಕನ್ನಡದಲ್ಲಿ ಇಷ್ಟೊಂದು ಸಂಖ್ಯೆಯ ಪ್ರವಾಸ ಲೇಖನಗಳನ್ನು, ಪುಸ್ತಕಗಳನ್ನು ಬರೆದಿಲ್ಲ!

3.ಆದ್ದರಿಂದ, ಲೇಖಕರೂ, ಪತ್ರಕರ್ತರೂ ಆಗಿದ್ದು, ನಿರಂತರವಾಗಿ ತಮ್ಮ ಅನುಭವಗಳನ್ನು ಅಕ್ಷರರೂಪದಲ್ಲಿ ದಾಖಲಿಸುತ್ತಿರುವ ವಿಶ್ವೇಶ್ವರ ಭಟ್ ಅವರಿಂದ ಮಾತ್ರ, ನೂರಾರು ವಿದೇಶ ಪ್ರವಾಸದ ಅನುಭವಗಳಿರುವ 'ವಿದೇಶ ಕಾಲ'ದಂತಹ ಪುಸ್ತಕವನ್ನು ರಚಿಸಲು ಸಾಧ್ಯ. ಜತೆಗೆ, ಅವರ ಎಲ್ಲಾ ಬರಹಗಳಲ್ಲಿ ಓದಿಸಿಕೊಳ್ಳುವ ಗುಣ ಇರುವುದರಿಂದಾಗಿ, ಓದುಗರಿಗೆ ಉತ್ತಮ 'ಓದಿನ ಸುಖ' ದೊರಕುತ್ತದೆ.

ಅವರೂ ಮನುಷ್ಯರೇ ತಾನೆ!

''ಬರೀ ದೇಶ ನೋಡಿ ಬಂದರೆ, ಅದರ ಅಂತರಂಗ ತಿಳಿಯುವುದೇ ಇಲ್ಲ. ಎಲ್ಲರಂತೆ ಕಟ್ಟಡ, ಸ್ಮಾರಕ, ಸೇತುವೆ, ಭವನ, ಪ್ರತಿಮೆ, ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಬರುತ್ತೇವೆ. ಆದರೆ ಆ ದೇಶದ ಅಂತರಾತ್ಮ ತಿಳಿಯುವುದೇ ಇಲ್ಲ. ಅದನ್ನು ತಿಳಿಯಬೇಕೆಂದರೆ ಬೇರೆಯದೇ ದೃಷ್ಟಿಕೋನ ಬೇಕಾಗುತ್ತದೆ. ಅಲ್ಲಿನ ಜನರೊಂದಿಗೆ ಬೆರೆಯಬೇಕಾಗುತ್ತದೆ, ಸ್ಥಳೀಯರೊಂದಿಗೆ ಮಾತಾಡಬೇಕಾಗುತ್ತದೆ. ಪರಿಣತರು, ವಿಷಯ ತಜ್ಞರೊಂದಿಗೆ ಚರ್ಚಿಸಬೇಕಾಗುತ್ತದೆ. ಸಾಮಾನ್ಯ ಜನರೊಂದಿಗೆ ಕಲೆಯಬೇಕಾಗುತ್ತದೆ. ಆಗಲೇ ಒಂದಷ್ಟು ವಿಷಯಗಳು, ಹೊಸಸಂಗತಿಗಳು ಹೊರಬರುತ್ತವೆ. ನಮ್ಮ ಪಾಡಿಗೆ ನಾವಿದ್ದರೆ, ಗುಂಪಿನಲ್ಲಿ ಹೋಗಿ ನೋಡಿ ಬಂದರೆ, ಏನೂ ಗೊತ್ತಾಗುವುದಿಲ್ಲ. ಇತ್ತೀಚೆಗೆ ಕೆಲವು ಸ್ನೇಹಿತರು ಉಗಾಂಡಕ್ಕೆ ಹೋಗಿ ಬಂದರು. 'ಹೇಗಿತ್ತು ಪ್ರವಾಸ?' ಎಂದು ಕೇಳಿದೆ. ಅದಕ್ಕೆ ಅವರು ಚೆನ್ನಾಗಿತ್ತು ಎಂದಷ್ಟೇ ಹೇಳಿ, ತಾವು ನೋಡಿದ ಐದಾರು ಊರುಗಳ ಹೆಸರುಗಳನ್ನು ಹೇಳಿದರು. ಆ ಪೈಕಿ ಎರಡು ಊರುಗಳ ಹೆಸರುಗಳನ್ನು ಮರೆತಿದ್ದರು. ನಾನು ನೆನಪಿಸಿದಾಗ, 'ಹೌದು ಹೌದು.. ನಾವು ಅಲ್ಲಿಗೂ ಹೋಗಿದ್ದೆವು' ಎಂದು ಹೇಳಿದರು. ಅವರಿಗೆ ಆ ದೇಶದ ಬಗ್ಗೆ ಹೇಳಲು ಉತ್ತಮ ವಿಚಾರಗಳು ಸಿಕ್ಕಿರಲಿಲ್ಲ. 'ಸಾರ್, ಎಲ್ಲಿ ನೋಡಿದರೂ ಕಪ್ಪು ಜನ. ಬಿಳಿಯರೇ ಇಲ್ಲ. ನನಗೆ ಅಲ್ಲಿ ಹೊಂದಿಕೊಳ್ಳಲು ಮೂರ್ನಾಲ್ಕು ದಿನ ಬೇಕಾಯಿತು. ಯಾವಾಗ ನಮ್ಮ ದೇಶಕ್ಕೆ, ಬೆಂಗಳೂರಿಗೆ ಮರಳಿ ಬರುತ್ತೇನೋ ಎಂದು ತವಕಿಸುತ್ತಿದ್ದೆ' ಎಂದು ಹೇಳಿದರು. 'ಅಷ್ಟಕ್ಕೂ ನೀವು ಆ ದೇಶಕ್ಕೆ ಹೋಗಿದ್ದೇಕೆ? ನೋಡಲು ತಾನೆ? ನೋಡುವುದೆಂದರೆ ಅನುಭವಿಸುವುದು, ಅಲ್ಲಿನ ಜನರೊಂದಿಗೆ ಬೆರೆಯುವುದು. ಅಲ್ಲಿನ ಜನರು ಕಪ್ಪು ಎಂದು ಗೊತ್ತಿರಲಿಲ್ಲವಾ? ಕಪ್ಪಾದರೇನಂತೆ, ಅವರೂ ಮನುಷ್ಯರೇ ಅಲ್ಲವಾ? ಬಣ್ಣದಲ್ಲಿ ಏನಿದೆ? ಅಲ್ಲಿನ ಜನರ ಜತೆ ಬೆರೆಯದೇ ಆ ದೇಶ ಹೇಗೆ ನೋಡುತ್ತೀರಿ? ಇಂಪಾಸಿಬಲ್' ಎಂದು ಹೇಳಿದೆ.'' (ಪುಟ 438) ವಿದೇಶ ಕಾಲ ಪುಸ್ತಕದ ಒಂದು ಪುಟ.

ವಿಶಿಷ್ಟ ಅನುಭವಗಳ ದಾಖಲೆ

ಸುಲಭವಾಗಿ, ಆಪ್ತವಾಗಿ ಓದಿಸಿಕೊಂಡು ಹೋಗುವ ಗುಣ ಹೊಂದಿರುವ 'ವಿದೇಶ ಕಾಲ' ಪುಸ್ತಕವು, ಓದುಗರಿಗೆ ನೀಡುವ ವಿಶಿಷ್ಟ ಅನುಭವವನ್ನು ಪದಗಳಲ್ಲಿ ವಿವರಿಸುವುದು ಕಷ್ಟಸಾಧ್ಯ; ಪುಸ್ತಕವನ್ನು ಓದಿಯೇ ಅನುಭವಿಸಬೇಕು. ಏಕೆಂದರೆ, ಇಂತಹ ಒಳನೋಟಗಳನ್ನು ಹೊಂದಿರುವ ಬರಹಗಳನ್ನು, ಅನುಭವಗಳನ್ನು ಬರೆಯಲು ಅಪಾರವಾದ ಅನುಭವವೂ ಬೇಕು - ಪ್ರವಾಸದಲ್ಲಿ ಮತ್ತು ಅದೇ ಕಾಲದಲ್ಲಿ ಬರೆಯುವಲ್ಲಿಯೂ! ಆದ್ದರಿಂದಲೇ ಇಲ್ಲಿನ ಬರಹಗಳು ಆಪ್ತ ಎನಿಸುತ್ತದೆ, ಓದುಗರನ್ನು ಪುಸ್ತಕದಲ್ಲಿ ಮುಳುಗಿಸಿ ಬಿಡುತ್ತದೆ.

ವಿಶ್ವೇಶ್ವರ ಭಟ್ ಅವರ ಬರಹಗಳಲ್ಲಿ ಅಪೂರ್ವ ಎನಿಸುವ 'ಒಳನೋಟ' ಇರುತ್ತವೆ ಎಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ನೋಡೋಣ:

''ಆ ಕೋತಿ ಮುಂಡೇವುಗಳನ್ನು ನೋಡಲು ಅಷ್ಟು ದೂರ ಹೋಗ್ತಿರಲ್ಲ, ನಿಮಗೆ ಬೇರೆ ಕೆಲಸ ಇಲ್ಲವಾ? ಎಂಬ ತಮಾಷೆ ಮಾತುಗಳನ್ನು ಹೇಳಿದ್ದ ಸ್ನೇಹಿತರೊಬ್ಬರು ಫೋನ್ ಮಾಡಿ 'ಗೊರಿಲ್ಲಾಗಳ ಕುರಿತ ಲೇಖನ, ನಿಮ್ಮ ರವಾಂಡ ಡೈರಿ ಓದುತ್ತಿದ್ದೇವೆ. ಖಂಡಿತವಾಗಿಯೂ ಗೊರಿಲ್ಲಾಗಳ ಬಗ್ಗೆ ನನಗೆ ಸ್ವಲ್ಪವೂ ಗೊತ್ತಿರಲಿಲ್ಲ. ಇನ್ನಷ್ಟು ಬರೆಯಿರಿ. ಯಾಕೋ ಅಂದಿನ ನನ್ನ ಮಾತುಗಳು ಸದಭಿರುಚಿಯಿಂದ ಕೂಡಿರಲಿಲ್ಲವೆಂದು ಆಗ ಅನಿಸುತ್ತಿದೆ. ನನ್ನ ಮಾತುಗಳನ್ನು ವಾಪಸ್ ಪಡೆಯುತ್ತೇನೆ' ಎಂದರು. ಅವರ ದನಿಯಲ್ಲಿ ಪ್ರಾಮಾಣಿಕತೆಯ ಒರತೆಯಿತ್ತು.'' (ಪುಟ 236)

''ನನಗೆ ಕುತೂಹಲ ಮೂಡಿಸಿದ ಸಂಗತಿಯೇನೆಂದರೆ ಉಷ್ಟ್ರ ಪಕ್ಷಿಗಳ ಮೊಟ್ಟೆ. ನಮ್ಮ ಗೈಡ್ ಆಗ ತಾನೆ ಹಾಕಿದ 8-10 ಮೊಟ್ಟೆಗಳನ್ನು ತೋರಿಸುತ್ತಾ, 'ಇವು ಉಷ್ಟ್ರ ಪಕ್ಷಿ ಮೊಟ್ಟೆಗಳು, ನೀವು ಅದರ ಮೇಲೆ ನಿಂತುಕೊಳ್ಳಿ. ಸಾಧ್ಯವಾದರೆ ಅದರ ಮೇಲೆ ಕುಣಿದಾಡಿ. ಆದರೆ ಅವು ಒಡೆದು ಹೋಗುವುದಿಲ್ಲ. ಅಷ್ಟು ಗಟ್ಟಿ' ಎಂದ. ಆದರೆ ಅದರ ಮೇಲೆ ನಿಂತುಕೊಳ್ಳಲು ಏನೋ ಹಿಂಜರಿಕೆ. ಆಕಸ್ಮಾತ್ ಒಡೆದು ಹೋದರೆ ಎಂಬ ಪುಟ್ಟ ಆತಂಕ. ಆತನೇ ವರಾತ ಮಾಡಿ, 'ಪರವಾಗಿಲ್ಲ, ನಿಂತುಕೊಳ್ಳಿ, ಏನೂ ಆಗೊಲ್ಲ. ನಿಮಗಿಂತ ಎರಡು ಪಟ್ಟು ದಡೂತಿ ಕಾಯದವರು ನಿಂತರೂ ಒಡೆಯುವುದಿಲ್ಲ' ಎಂದು ಧೈರ್ಯ ತುಂಬಿದಾಗಲೇ ನಾನು ಅದರ ಮೇಲೆ ನಿಂತುಕೊಂಡೆ. ಏನೂ ಆಗಲಿಲ್ಲ. ನನಗಿಂತ ಭಾರವಾದವ ಅದರ ಮೇಲೆ ಜಂಪ್ ಮಾಡಿದೆ. ಅದು ಗುಂಡುಕಲ್ಲಿನ ಹಾಗೇ ಇತ್ತು!'' (ಪುಟ 337)

ಕನ್ನಡ ಪ್ರವಾಸ ಸಾಹಿತ್ಯಕ್ಕೆ ಒಂದು ಅಪೂರ್ವ ಕೊಡುಗೆ ಎನಿಸಿದ 'ವಿದೇಶ ಕಾಲ' ಪುಸ್ತಕವು, ಕನ್ನಡದ ಓದುಗರಿಗೆ ವಿಶಿಷ್ಟ ಓದಿನ ಅನುಭವ ನೀಡುವುದರಲ್ಲಿ ಸಂದೇಹವಿಲ್ಲ.

ವಿದೇಶ ಕಾಲ
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ
8431007267
ಬೆಲೆ: ರೂ. 500/-

ವಿರಾಮ
ವಿಶ್ವವಾಣಿ
03.08.2025
ಭಾನುವಾರ
ಓಡುವ ಲೋಕಕ್ಕೆ ಓದುವ ನಿಲ್ದಾಣ

» ಕೆಕ್ಕಾರ ನಾಗರಾಜ ಭಟ್ಟ ಸಿದ್ದಾಪುರ

ಹೋರಾಟಗಾರ ಚೌಡಾ ನಾಯ್ಕ ಎಂದರೆ ಕರ್ನಾಟಕದ ಇತರ ಭಾಗದವರಿಗೆ ಅಷ್ಟೊಂದು ಪರಿಚಯವಿಲ್ಲ. ಇವರು ಉತ್ತರ ಕನ್ನಡದ ಬೇಡ್ಕಣಿ ಎಂಬ ಪುಟ್ಟ ಹಳ್ಳಿಯ ಹೋರಾಟಗಾರರು. ಇವರ ತಂದೆ ಸಿರಿವಂತರು, ಬ್ರಿಟಿಷರಿಂದ ರಾವ್ ಬಹದ್ದೂರ್ ಗೌರವವನ್ನು ಪಡೆದವರು. ಅವರ ಕಿರಿ ಮಗ ಚೌಡಾ ನಾಯ್ಕರು, ಸರಕಾರದ ಹುದ್ದೆಯ ಪಡೆದು ನೆಮ್ಮದಿಯಾಗಿರಬಹುದಿತ್ತು. ಆದರೆ, ಅವರು ಬ್ರಿಟಿಷರ ವಿರುದ್ಧ ಹೋರಾಡಿದರು; ಇದರಿಂದಾಗಿ ಮನೆಯಿಂದ ಹೊರಹಾಕಲ್ಪಟ್ಟರು; ಸ್ವಾತಂತ್ರ್ಯ ದೊರಕಿದ ನಂತರ ಅವರು ಇನ್ನಷ್ಟು ಕಷ್ಟಕ್ಕೆ ಒಳಗಾದರು. 1952ರಲ್ಲಿ ಅವರು ನಿಧನರಾದಾಗ, ಅವರ ಮನೆಯ ಪಕಾಸು ಮಾರಿ ಅಂತ್ಯಕ್ರಿಯೆಗೆ ಹಣ ಹೊಂದಿಸಬೇಕಾದಂತಹ ಸಂಕಷ್ಟ! ಇಂತಹ ಹೋರಾಟಗಾರರ ಬದುಕನ್ನು ಬಿಂಬಿಸುವ 'ಕ್ರಾಂತಿಯ ಕಿಡಿ' ನಾಟಕವು, ನಾಡಿನ ಎಲ್ಲೆಡೆ ಪ್ರದರ್ಶನಗೊಳ್ಳಬೇಕಾದ ಅಗತ್ಯವಿದೆ.

ಅದು ದೇಶದಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಕಾವು ಏರಿದ ಸಂದರ್ಭ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನಿಂದಲೂ ಸಾವಿರಾರು ದೇಶಭಕ್ತರು ಮನೆ-ಮಠ-ಜಮೀನು -ಮಡದಿ-ಮಕ್ಕಳನ್ನು ಬಿಟ್ಟು ಭಾರತಮಾತೆಯನ್ನು ಪರದಾಸ್ಯದಿಂದ ವಿಮುಕ್ತಿಗೊಳಿಸಲು ಹೋರಾಟದ ಕಣಕ್ಕೆ ಧುಮುಕಲು ಸಜ್ಜಾಗಿದ್ದರು. ಜಲಿಯನ್ ವಾಲಾಭಾಗ್ ದುರಂತದಲ್ಲಿ ಡಯರ್ ಎಂಬ ಕಿರಾತನಕ ಅಟ್ಟಹಾಸದ ಗುಂಡು ತಗುಲಿದ ಮೌಲಾನಾ ಹಬೀಬುಲ್ಲಾ ಖಾನರು, ಸಿದ್ದಾಪುರಕ್ಕೆ ಆಗಮಿಸಿ ವೀರಾವೇಶದ ಭಾಷಣ ಮಾಡಿ ದೇಶಪ್ರೇಮಿಗಳಲ್ಲಿ ಮತ್ತಷ್ಟು ಕಿಚ್ಚು ಹೆಚ್ಚಿಸಿದರು.

ಸಿದ್ದಾಪುರ ತಾಲೂಕಿನ ಪುಟ್ಟ ಹಳ್ಳಿ ಬೇಡ್ಕಣಿಯ ಚೌಡಾ ನಾಯ್ಕರಲ್ಲಿ ಹುದುಗಿದ್ದ ರಾಷ್ಟ್ರಪ್ರೇಮವನ್ನು, ಈ ಭಾಷಣವು ಇಮ್ಮಡಿಗೊಳಿಸಿ ಅವರ ನರನಾಡಿಗಳನ್ನು ಹೋರಾಟಕ್ಕೆ ಸಜ್ಜುಗೊಳಿಸಿತು. ಆದರೆ ಅವರ ತಂದೆಯವರು ಬ್ರಿಟಿಷರ ಪರವಾಗಿ ಕೆಲಸ ಮಾಡಿ ರಾವ್‌ಬಹದ್ದೂರ ಪ್ರಶಸ್ತಿ ಪಡೆದಿದ್ದ ಬೇಡ್ಕಣಿಯ ಕನ್ನಾ ನಾಯ್ಕರು! ಕನ್ನಾ ನಾಯ್ಕರು ವಾರ್ಷಿಕ ರು.800/- ತೀರ್ವೆ ತುಂಬುತ್ತಿದ್ದ ಸಿರಿವಂತರು. ಆ ಸುತ್ತಲಿನ ಪ್ರದೇಶದಲ್ಲಿ, ರಾವ್ ಬಹಾದ್ದೂರ ಕನ್ನಾ ನಾಯ್ಕರು ಬಂದರೆ ಜನರು ದಾರಿ ಬಿಟ್ಟುಕೊಡುತ್ತಿದ್ದರು. ಅಂತಹ ಗತ್ತು, ದೌಲತ್ತು ಕನ್ನಾ ನಾಯ್ಕರದು. ಬ್ರಿಟಿಷ್ ಆಡಳಿತವೂ ತನ್ನ 'ವಸೂಲಿ'ಯನ್ನು ಬಿಗಿಗೊಳಿಸಲು ಕನ್ನಾ ನಾಯ್ಕರಂತವರನ್ನು ಬಳಸಿಕೊಳ್ಳುತ್ತಿತ್ತು.

ಇಂತಹ ಗಣ್ಯರ ಮಗ ಚೌಡಾ ನಾಯ್ಕರು ಅದಾಗಲೇ ಮೆಟ್ರಿಕ್ ಮುಗಿಸಿ ಊರಿಗೆ ಮರಳಿದ್ದರು. ಮರಾಠಿ ಪತ್ರಿಕೆಗಳಿಂದ ಪ್ರಭಾವಿತರಾಗಿ ದೇಶಭಕ್ತರಾಗಿದ್ದ ಚೌಡಾ ನಾಯ್ಕರು ಸ್ವಾತಂತ್ರ್ಯ ಆಂದೋಲನದಲ್ಲಿ ತೊಡಗಿಕೊಳ್ಳಲು ಮನ ಮಾಡಿದರೆ ಅವರ ತಂದೆ ಅದಕ್ಕೆ ತದ್ವಿರುದ್ಧವಾಗಿ ಆಂಗ್ಲರ ಪರವಾಗಿದ್ದರು. ಇಂತಹ ಸಂದಿಗ್ದತೆಯಲ್ಲಿ ಸಿಲುಕಿ ನಲುಗಿದ ಚೌಡಾ ನಾಯ್ಕರು, ಒಂದು ನಿರ್ಣಯ ತೆಗೆದುಕೊಂಡರು! ಅದೇನೆಂದರೆ, ತನ್ನ ತಂದೆಗೆ ಕೋಪಬಂದರೂ ಪರವಾಗಿಲ್ಲ, ಬ್ರಿಟಿಷರ ದೃಷ್ಟಿಯಲ್ಲಿ ತನ್ನ ತಂದೆಗೆ ಅವಮಾನವಾದರೂ ಪರವಾಗಿಲ್ಲ, ತಾನು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತೇನೆ! ಎಂದು.

ಬ್ರಿಟಿಷರಿಂದ ರಾವ್‌ಬಹದ್ದೂರ್ ಪದವಿ ಪಡೆದವರೊಬ್ಬರ ಮಗನು ನಡೆಸಿದ ಈ ಹೋರಾಟದ ವರ್ಣನೆಯನ್ನು 'ಕ್ರಾಂತಿಯ ಕಿಡಿ' ನಾಟಕ ಕಟ್ಟಿಕೊಡುತ್ತದೆ. ಈ ನಾಟಕವನ್ನು ಸಿದ್ದಾಪುರದ ರಂಗಸೌಗಂಧ ತಂಡ ಈ ವರ್ಷದ ತಿರುಗಾಟದ ನಾಟಕವನ್ನಾಗಿ ಆಯ್ದುಕೊಂಡು ಪ್ರದರ್ಶನಕ್ಕೆ ನಾಂದಿ ಹಾಡಿದೆ.

ಹುದ್ದೆ ತ್ಯಜಿಸಿ ಹೋರಾಟ!

ಕನ್ನ ನಾಯ್ಕರ ಕಿರಿಯ ಮಗ ಚೌಡಾ ನಾಯ್ಕರಿಗೆ ಭಾರತಾಂಬೆಯನ್ನು ಪರದಾಸ್ಯದಿಂದ ವಿಮುಕ್ತಿಗೊಳಿಸುವುದೊಂದೇ ಜೀವನದ ಗುರಿಯಾಗಿತ್ತು. ಹೀಗಾಗಿ ಬ್ರಿಟಿಷ್ ಆಡಳಿತದಲ್ಲಿ ತಮಗೆ ಸುಲಭದಲ್ಲಿ ಸಿಗಬಹುದಾಗಿದ್ದ ಮಾಮಲೇದಾರ ಹುದ್ದೆಯನ್ನೂ ನಿರಾಕರಿಸಿದರು. ಆದರೆ ತಂದೆ ಕನ್ನಾ ನಾಯ್ಕರ ಕೆಂಗಣ್ಣಿಗೆ ಗುರಿಯಾದಾಗ, ಅವರ ಬದುಕು ಅಸಹನೀಯವಾಯಿತು. ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಇಳಿದ ಚೌಡಾ ನಾಯ್ಕರಿಗೆ, ತನ್ನ ಸ್ವಂತ ಮನೆಯಲ್ಲಿ ತುತ್ತು ಅನ್ನಕ್ಕೂ ಗತಿಯಿಲ್ಲದಂತಾಯಿತು! ತಾನು ಜನಿಸಿದ ಮನೆಯಲ್ಲಿಯೇ ಆಳಿನಂತೆ ದುಡಿದು ಮೂಲೆಯಲ್ಲಿ ಬಿದ್ದಿರಬೇಕಾಯಿತು. ಮನೆಯ ಸದಸ್ಯರೆಲ್ಲರ ತಿರಸ್ಕಾರ, ಬೈಗುಳ!

ಮನೆ ಬಿಟ್ಟ ಹೋರಾಟಗಾರ

ಕೊನೆಗೆ ಅವರು ಮನೆಯಿಂದ ಹೊರಹೋಗಲು ನಿರ್ಧರಿಸಿದರು. ಆದರೆ ತಂದೆ ಕನ್ನಾ ನಾಯ್ಕರು ಆಸ್ತಿಯಲ್ಲಿ ಪಾಲು ಕೊಡುವುದಿರಲಿ, ಚಿಕ್ಕಾಸನ್ನೂ ನೀಡದೇ ತಾವು ಜನ್ಮ ನೀಡಿದ ಮಗನನ್ನೇ ದೂರ ತಳ್ಳಿದರು. ಕಂಡವರ ಮನೆಯಲ್ಲಿ ಕೆಲಸ ಮಾಡಿಕೊಂಡು ಜೀವನ ದೂಡಬೇಕಾದ ಸಂದಿಗ್ದತೆ ಚೌಡಾ ನಾಯ್ಕರಿಗೆ ಎದುರಾಯಿತು. ಆದರೂ ಚೌಡಾ ನಾಯ್ಕರ ದೇಶಪ್ರೇಮಕ್ಕೆ ಕುಂದು ಬರಲಿಲ್ಲ. ಎದೆಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡರು. ಹಬೀಬುಲ್ಲಾ ಖಾನರ ಭಾಷಣಗಳನ್ನು ವ್ಯವಸ್ಥೆಗೊಳಿಸಿ ಜೈಲು ಶಿಕ್ಷೆಗೆ ಒಳಗಾದರು. ಹುಲ್ಲುಬನ್ನಿ ಚಳವಳಿ, ಜಂಗಲ್ ಸತ್ಯಾಗ್ರಹ, ಕರನಿರಾಕರಣೆಯಂತಹ ವಿಧಾಯಕ ಕಾರ್ಯಗಳಲ್ಲಿ ಮುನ್ನುಗ್ಗಿದರು. ನಾ.ಸು.ಹರ್ಡಿಕರರ ಸೇವಾದಳ ಶಿಬಿರದಲ್ಲಿ ತರಬೇತಿ ಪಡೆದರು. ಬೆಳಗಾಂವನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂ ಸೇವಕರಾಗಿ ದುಡಿದರು. ಅಂಕೋಲಾದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಪುನಃ ಬಂಧಿತರಾದರು.

1934 ರಲ್ಲಿ ಗಾಂಧೀಜಿಯವರು ಸಿದ್ದಾಪುರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ, 1937 ರಲ್ಲಿ ನೆಹರು ಅವರು ಸಿದ್ದಾಪುರಕ್ಕೆ ಬಂದ ಸಮಯದಲ್ಲಿ ದೇಶಕ್ಕಾಗಿ ಕಾಣಿಕೆ ಸಮರ್ಪಿಸಿದರು. ಚೌಡಾ ನಾಯ್ಕರ ಹೋರಾಟದ ಸಂದರ್ಭಗಳಲ್ಲೆಲ್ಲಾ ಪ್ರೋತ್ಸಾಹಿಸಿ, ಅವರ ನೆರಳಾಗಿ ನಿಂತವರು ಚೌಡಾ ನಾಯ್ಕರ ಧರ್ಮಪತ್ನಿ ಮೈಲಮ್ಮ ಮಾತ್ರ. ಆದರೆ ಚೌಡಾ ನಾಯ್ಕರ ಕುಟುಂಬದ ಪರಿಸ್ಥಿತಿ ಚಿಂತಾಜನಕವಾಗಿತ್ತು. ಇರುವ ಜಮೀನನ್ನು ಅಡವಿಟ್ಟು ಮಗಳ ಮದುವೆ ಮಾಡಬೇಕಾಗಿ ಬಂತು.

ದೇಹ ತ್ಯಜಿಸಿದ ಹೋರಾಟಗಾರ

1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತರೂ ಚೌಡಾ ನಾಯ್ಕರ ಆರೋಗ್ಯದಲ್ಲಿ ಸುಧಾರಣೆ ಕಂಡು ಬರದೆ 1952 ರಲ್ಲಿ ಇಹಲೋಕ ತ್ಯಜಿಸಿದರು. ಪತ್ನಿ ಮೈಲಮ್ಮನವರಿಗೆ ಮಕ್ಕಳಾದ ಲಕ್ಷ್ಮಣ, ರತ್ನಾಕರ ಅವರಿಗೆ ಚೌಡಾ ನಾಯ್ಕರ ಮರಣದ ವಾರ್ತೆ ಬರಸಿಡಿಲು ಎರಗಿದಂತಾಯಿತು. ಕುಟುಂಬದ ಜನರ ತಿರಸ್ಕಾರ, ಯಾರೊಂದಿಗೂ ಯಾಚಿಸದ ಸ್ವಾಭಿಮಾನಿ ಬದುಕು, ಗಾಂಧಿ ಹತ್ಯೆ ಚೌಡಾ ನಾಯ್ಕರನ್ನು ಮಾನಸಿಕವಾಗಿ ಜರ್ಜರಿತವಾಗುವಂತೆ ಮಾಡಿತು. ಧಾರವಾಡದ ಮಾನಸಿಕ ಆಸ್ಪತ್ರೆಗೆ ಅವರನ್ನು ದಾಖಲಿಸಲಾಯಿತು. ಅವರ ಮನೆಯೂ ಸುಟ್ಟುಹೋಗಿತ್ತು! ಬೇರೆ ಗುಡಿಸಲು ಕಟ್ಟಬೇಕೆಂದು ಮನೆಯಲ್ಲಿಟ್ಟಿದ್ದ ಪಕಾಸುಗಳನ್ನು ಮಾರಿ ಧಾರವಾಡ ಆಸ್ಪತ್ರೆಗೆ ತೆರಳಿ ಚೌಡಾ ನಾಯ್ಕರ ಕಳೇಬರವನ್ನು ಕಂಡು ಅಶ್ರುತರ್ಪಣ ಸಲ್ಲಿಸಲಾಯಿತು. ಚೌಡಾ ನಾಯ್ಕರ ಹೆಣವನ್ನು ಮನೆಗೆ ತರಲಾರದಷ್ಟು ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿ ಅಲ್ಲಿಯೇ ಶವಸಂಸ್ಕಾರ ಮಾಡುವಂತೆ ವಿನಂತಿಸಿಕೊಳ್ಳಲಾಯಿತು.

ಪುರಾಣಿಕರ ಹೋರಾಟ

ಇಂತಹ ಅಪ್ರತಿಮ ಹೋರಾಟಗಾರ ಚೌಡಾ ನಾಯ್ಕರ ದೇಶಪ್ರೇಮ, ಹೋರಾಟದ ಮಜಲುಗಳನ್ನು 'ಕ್ರಾಂತಿಯ ಕಿಡಿ' ನಾಟಕದಲ್ಲಿ ಬಿಂಬಿಸಲಾಗಿದೆ. ಅಂದಿನ ಕರನಿರಾಕರಣೆಯ ಹೋರಾಟದಲ್ಲಿ ಪಾಲ್ಗೊಂಡ ಸಿದ್ದಾಪುರದ ಬಿಳಗಿಯ ಹನುಮಂತ ಪುರಾಣಿಕರ ತ್ಯಾಗವನ್ನೂ ಅಳವಡಿಸಲಾಗಿದೆ. ಮೃದು ಸ್ವಭಾವದ ಪರೋಪಕಾರಿ ಪುರೋಹಿತರಾಗಿದ್ದ ಹನುಮಂತ ಪುರಾಣಿಕರು ಎಲ್ಲರ ಗೌರವಾದರಕ್ಕೆ ಪಾತ್ರರಾಗಿದ್ದರು. ಅವರು ಪೂಜೆಗೆ ಕುಳಿತಿದ್ದಾಗಲೇ ಸರ್ಕಲ್ ಇನ್ಸಪೆಕ್ಟರ್ ಹನುಮಂತ ಪುರಾಣಿಕರನ್ನು ಬಂಧಿಸಲು ಮುಂದಾಗುತ್ತಾನೆ. ಸರ್ಕಾರವನ್ನು ಎದುರು ಹಾಕಿಕೊಳ್ಳಬೇಡಿ, ಕರತುಂಬಿ ಎಂದು ಧಮಕಿ ಹಾಕುತ್ತಾನೆ. ಅದಿಲ್ಲವಾದಲ್ಲಿ ಕರ ಮಾಫಿಮಾಡುವಂತೆ ಕೋರಿಕೊಳ್ಳಿ ಎನ್ನುತ್ತಾನೆ. ಇದ್ಯಾವ ಮಾತಿಗೂ ಸೊಪ್ಪು ಹಾಕದ ಪುರಾಣಿಕರು ತಮ್ಮ ಅಚಲ ನಿರ್ಧಾರದಿಂದ ವಿಮುಖರಾಗದೆ ಸೆರೆವಾಸಕ್ಕೆ ತೆರಳಲು ಮುಂದಾಗುತ್ತಾರೆ.

ಮಡದಿಯ ಹೋರಾಟ

ಪುರಾಣಿಕರ ಧರ್ಮಪತ್ನಿ ಗರ್ಭಿಣಿ ಭಾಗೀರಥಿ ಬಾಯಿ ಹಾಗೂ ಆಗಮಿಸಿದ್ದ ನೂರಾರು ನಾಗರಿಕರು ಅಂಗಲಾಚಿದರೂ ಕರುಣೆ ತೋರದ ಸರ್ಕಲ್ ಇನ್ಸಪೆಕ್ಟರ್ ಪುರಾಣಿಕರನ್ನು ಬಂಧಿಸಿ ಸೆರೆಮನೆಗೆ ಅಟ್ಟಿದ್ದಲ್ಲದೆ ಮನೆಯಲ್ಲಿದ್ದ ಪಾತ್ರೆಪಗಡೆ, ಕರೆಯುವ ಹಸುವನ್ನೂ ಜಪ್ತಿ ಮಾಡಿಕೊಂಡು ಹೋಗುತ್ತಾನೆ. ಅದಾಗಲೇ ನಿಶ್ಚಯವಾಗಿದ್ದ ಪುರಾಣಿಕರ ಹಿರಿಯ ಮಗಳ ಲಗ್ನ ನಿಲ್ಲುವಂತಾಗುತ್ತದೆ. ಪುರಾಣಿಕರ ಮಗನೂ ಅನಾರೋಗ್ಯದಿಂದ ಅಸುನೀಗುತ್ತಾನೆ. ತನ್ನ ಅಸಹಾಯಕತೆಯಿಂದಾಗಿ ಕೆರಳಿ ಕೆಂಡವಾದ ಪುರಾಣಿಕರ ಪತ್ನಿ ಭಾಗೀರಥಿಬಾಯಿಯವರು ಕಲೆಕ್ಟರ್‌ನಲ್ಲಿಗೆ ಬಂದು ಅವರ ಆಡಳಿತ ನಡೆಸಿದ ಹೇಯ ಕೃತ್ಯವನ್ನು ಖಂಡಿಸುತ್ತಾ ನಮ್ಮಂತಹ ನೂರಾರು ಸ್ತ್ರೀಯರ ಕುತ್ತಿಗೆ ಕೊಯ್ದಿರಿ, ಮನೆಗಳನ್ನು ದೋಚಿ ಸ್ಮಶಾನವನ್ನಾಗಿ ಮಾಡಿದಿರಿ, ಊಟ ಮಾಡೋ ಅನ್ನವನ್ನು ಕಸಿದಿರಿ, ಶಿಶು ಹತ್ಯೆಯಾಗುವಂತೆ ಮಾಡಿದಿರಿ, ಮಂಗಳ ಕಾರ್ಯಗಳನ್ನು ನಿಲ್ಲಿಸಿದಿರಿ, ಅದೆಷ್ಟೋ ದಂಪತಿಗಳನ್ನು ಅಗಲಿಸಿದಿರಿ, ಸುಮಂಗಲೆಯರ ಮಂಗಳ ಸೂತ್ರ ಹರಿದು ಹಾಕಿದಿರಿ, ಅಹಿಂಸಾ ಮಾರ್ಗದಲ್ಲಿ ಚಳವಳಿ ಮಾಡುತ್ತಾ ಇರುವ ಜನರ ತಲೆ ಮೆಟ್ಟಿ ಅಟ್ಟಹಾಸ ಮೆರೆಯುತ್ತಿದ್ದೀರಿ ಎಂದು ತಮ್ಮ ರೌದ್ರ ರೂಪವನ್ನು ಪ್ರದರ್ಶಿಸುತ್ತಾರೆ.

ಇಂತಹ ಘಟನೆಗಳನ್ನು ರಂಗ ಪ್ರಯೋಗದಲ್ಲಿ ಮನಮುಟ್ಟುವಂತೆ ಅಳವಡಿಸುವ ಮೂಲಕ ನಿರ್ದೇಶಕ ಗಣಪತಿ ಹೆಗಡೆ ಹುಲಿಮನೆ ತಮ್ಮ ಸಾಮರ್ಥ್ಯವನ್ನು ತೋರಿ ನಾಟಕದ ಗಂಭೀರತೆಯನ್ನು ಪ್ರಾರಂಭದಿಂದ ಕೊನೆಯ ತನಕವೂ ಹಿಡಿದಿಟ್ಟುಕೊಳ್ಳುವಲ್ಲಿ ಸಫಲರಾಗಿದ್ದಾರೆ. ಶ್ರೀಪಾದ ಹೆಗಡೆ ಕೋಡನಮನೆ ಅವರು ವಿನ್ಯಾಸ ಮಾಡಿದ್ದು ಒಂದೇ ವೇದಿಕೆಯಲ್ಲಿ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಕನ್ನಾ ನಾಯ್ಕರ ಮನೆ, ಕಲೆಕ್ಟರ್ ಕಚೇರಿ, ಪುರಾಣಿಕರ ಮನೆ, ಗೋವಿಂದಣ್ಣ ಮನೆಗಳನ್ನು ಸೃಷ್ಟಿಸಿ ಸನ್ನಿವೇಶಗಳ ಹೊಂದಾಣಿಕೆಯಲ್ಲಿ ಯಶಸ್ವಿಯಾಗಿದ್ದಾರೆ.

ಮೂರು ಪಾತ್ರ ನಿರ್ವಹಿಸಿದ ಗಣಪತಿ ಹೆಗಡೆ!

ಕನ್ನಾ ನಾಯ್ಕರಾಗಿ ನಾಮಧಾರಿ ಭಾಷೆಯಲ್ಲಿ, ನೆಹರು ಆಗಿ ಹಿಂದಿಯಲ್ಲಿ, ಧಾರವಾಡ ಆಸ್ಪತ್ರೆಯ ವೈದ್ಯರಾಗಿ ಅಚ್ಚ ಕನ್ನಡದಲ್ಲಿ ಸಂಭಾಷಣೆ ನಡೆಸಿಕೊಡುವ ಮೂಲಕ ತ್ರಿಪಾತ್ರಗಳಲ್ಲಿ ಗಣಪತಿ ಹೆಗಡೆ ಗುಂಜಗೋಡ ಸಹಜ ಅಭಿನಯ ನೀಡಿದ್ದಾರೆ!

ದಕ್ಷಿಣದ ಬಾರ್ಡೋಲಿ ಎಂದು ಕರೆಯಲ್ಪಟ್ಟ ಸಿದ್ದಾಪುರದ ಸ್ವಾತಂತ್ರ್ಯ ಸಂಗ್ರಾಮ ಚರಿತ್ರೆಯನ್ನು 'ಕ್ರಾಂತಿಯಕ ಕಿಡಿ' ನಾಟಕ ರೂಪಕ್ಕೆ ತಂದವರು ಶ್ರೀಪಾದ ಹೆಗಡೆ ಮಗೇಗಾರು. ಈ ನಾಟಕ ರಂಗಭೂಮಿಯಲ್ಲಿ ಹೊಸ ಅಲೆಯನ್ನು, ಇತಿಹಾಸವನ್ನು ಸೃಷ್ಟಿಸುವ ಲಕ್ಷಣಗಳನ್ನೂ ಹೊಂದಿದೆ. ಈ ನಾಟಕವನ್ನು ನಾಡಿನಾದ್ಯಂತ ಪ್ರದರ್ಶಿಸುವ ಅಗತ್ಯವಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಪುಸ್ತಕ ವಿಮಾನ

ನುಡಿ ನೋವಿಗೆ ಪರಿಹಾರ ಕಾಣುವ ಪ್ರಯತ್ನ

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಇದು ನಮ್ಮ ನಾಡಿನ ಭಾಷಾನೀತಿಯನ್ನು ಕುರಿತ ವಿಶ್ಲೇಷಣೆ ಒಳನೋಟಗಳನ್ನು ಗಂಭೀರವಾದ ಚಿಂತನೆಗಳನ್ನು ಒಳಗೊಂಡಿರುವ ಸಾಮಯಿಕ ಮಹತ್ವದ ಕೃತಿ. ಸಾಂಪ್ರತ ಕೃತಿಯಲ್ಲಿ ನಮ್ಮ ದೇಶ ಭಾಷೆ ಅಲ್ಲಿನ ಪ್ರಾದೇಶಿಕ ಅಸ್ಮಿತೆ, ವೈವಿಧ್ಯಗಳನ್ನು ಬಿಂಬಿಸುವ ಜತೆಗೆ ಜತೆಗೆ ಭಾರತವು ಅನುಸರಿಸಬೇಕಾದ ಭಾಷಾ ನೀತಿ, ಬಹುಭಾಷಿಕ ಪರಿಸರದಲ್ಲಿ ದ್ವಿಭಾಷಾ - ತ್ರಿಭಾಷಾ ಸೂತ್ರಗಳು, ಸಾಧ್ಯತೆಗಳು ಮತ್ತು ಸವಾಲುಗಳು, ಕರ್ನಾಟಕದಲ್ಲಿ ಕನ್ನಡವನ್ನು ಸಬಲೀಕರಿಸಿ ಭಾಷಾ ಹೇರಿಕೆಯನ್ನು ಎದುರಿಸುವ ಬಗೆ ಹೇಗೆ ಎಂಬುದನ್ನು ತಿಳಿಸಿಕೊಡುವ ವೈವಿಧ್ಯಮಯವಾದ ಐವತ್ತು ಲೇಖನಗಳಿವೆ. ಇಂದಿನ ಸಂಕೀರ್ಣ ಸಂದರ್ಭದಲ್ಲೂ ಹೇಗೆ ನಮ್ಮ ನಾಡು ನುಡಿಯನ್ನು ಜತನ ಮಾಡಿಕೊಂಡು ಹೋಗಬಹುದು ಎಂಬುದಕ್ಕೆ ಈ ಕೃತಿ ತೋರು ದೀಪವಾಗಿದೆ.

ಪ್ರಸ್ತುತ ಕೃತಿಯಲ್ಲಿ ಭಾಷಾ ನೀತಿ, ದ್ವಿಭಾಷಾ ನೀತಿ, ತ್ರಿಭಾಷಾನೀತಿ ಎಂಬ ಮೂರು ಒಳ ತೆನೆಗಳಿದ್ದು ನಮ್ಮ ನಡುವಿನ ಭಾಷಾ ಸಮಸ್ಯೆಗೆ ಪರಿಹಾರ ಹುಡುಕುವ ಚಿಕಿತ್ಸಕ ದೃಷ್ಟಿಕೋನವು ಇಲ್ಲಿ ಎದ್ದು ಕಾಣುತ್ತದೆ. ಮನುಷ್ಯನನ್ನು ಕುರಿತು ಏನನ್ನು ತಿಳಿಯಬೇಕಾದರೂ ಮೊದಲು ಅವನ ಭಾಷೆಯನ್ನು ತಿಳಿದುಕೊಳ್ಳು ಎಂಬುದಾಗಿ ಪ್ರಸಿದ್ಧ ಭಾಷಾ ವಿಜ್ಞಾನಿ ಲಿಯೊನಾರ್ಡೊ ಬ್ಲೂಮ್ ಫೀಲ್ಡ್ ಹೇಳಿದ್ದಾನೆ. ಭಾಷೆ ಎನ್ನುವುದು ಒಂದು ಸಮಾಜದ ಒಂದು ಸಂಸ್ಕೃತಿಯ ಪ್ರತಿಬಿಂಬ. ಜನಾಂಗ, ಸಂಸ್ಕೃತಿ ಹಾಗೂ ಭಾಷೆಯ ನಡುವೆ ಅವಿನಾಭಾವ ಸಂಬಂಧವಿದೆ.

ಭಾರತ ಬಹು ಭಾಷೆ ಬಹು ಸಂಸ್ಕೃತಿಗಳನ್ನು ನಾಡು. ನಮ್ಮ ದೇಶ ಬಹು ಭಾಷೆಗಳ ಒಂದು ಅಪೂರ್ವ ಸಂಗ್ರಹಾಲಯ. ಆದರೆ ನಮ್ಮಲ್ಲಿ ಭಾಷೆ ಭಾಷೆಗಳು ನಡುವೆ ಪೈಪೋಟಿ ಹೆಚ್ಚಿ ಯಜಮಾನಿಕೆಯನ್ನು ನಡೆಸುವ ಭಾಷಾ ರಾಜಕಾರಣವೂ ಮುನ್ನೆಲೆಗೆ ಬಂದಿದೆ. ಹೀಗಾಗಿ ಪ್ರಾದೇಶಿಕ ಭಾಷೆಗಳ ಜನ ಬದುಕು ಕಷ್ಟದ್ದಾಗುತ್ತಿದೆ. ಹಿಂದಿ ಹೇರಿಕೆ, ದ್ವಿಭಾಷಾ ಸೂತ್ರ, ತ್ರಿಭಾಷಾ ಸೂತ್ರ ಹೀಗೆ ಭಾಷೆ ಭಾಷೆಗಳ ನಡುವೆ ಹೋರಾಟ ಸಂಘರ್ಷದ ಕಾವು ಈಗ ಮತ್ತೂ ಜೋರಾಗಿದೆ. ನಮ್ಮ ದೇಶದ ಬಹುಭಾಷೆಗಳು ಇವತ್ತು ಗಂಭೀರವಾದ ಬಿಕ್ಕಟ್ಟನ್ನು ಎದುರಿಸುತ್ತಿವೆ. ಈ ನುಡಿ ನೋವಿಗೆ ಪರಿಹಾರ ಏನು ಎಂಬುದನ್ನು ವಿಭಿನ್ನ ನೆಲೆಗಳಲ್ಲಿ ಕಟ್ಟಿಕೊಟ್ಟಿರುವುದು ಪ್ರಸ್ತುತ ಕೃತಿಯ ಹೆಚ್ಚುಗಾರಿಕೆ. ದ್ವಿಭಾಷೆ ತ್ರಿಭಾಷೆಗಳ ಕುರಿತಾದ ಚರ್ಚೆಗಳು ಬಿಸಿಯೇರುತ್ತಿರುವ ಸಂದರ್ಭದಲ್ಲಿ ಇದನ್ನು ಒಂದಷ್ಟು ಚಿಕಿತ್ಸಕ ದೃಷ್ಟಿಕೋನದಿಂದ ನೋಡುವ ಪ್ರಾಮಾಣಿಕ ಪ್ರಯತ್ನ ಈ ಕೃತಿಯಲ್ಲಿ ನೆರವೇರಿದೆ. ಇದು ಯಾವುದೇ ಒಂದು ನೀತಿಯ ಪರವಾದ ಕೃತಿಯಲ್ಲವೆನ್ನುವುದು ಓದುಗರು ಗಮನಿಸಬೇಕು. ದ್ವಿಭಾಷೆ ತ್ರಿಭಾಷೆಗಳ ಚರ್ಚೆ ಒಂದು ವಲಯಕ್ಕೆ ಸೀಮಿತವಾಗಿಲ್ಲ. ಇದರ ಆಳ-ಅಗಲಗಳು ನಮ್ಮ ಊಹೆಗೆ ಮೀರಿದಂತಿವೆ. ಯಾವುದೇ ಒಂದು ನೀತಿಯ ಪರವಾಗಿ ನಿಂತರೂ ಅದು ತನ್ನದೆ ಧನಾತ್ಮಕ ಅಥವಾ ಋಣಾತ್ಮಕ ಪರಿಣಾಮಗಳನ್ನು ಬೀರುವ ಕಾರಣ ಅತ್ಯಂತ ಎಚ್ಚರದಿಂದ ಪ್ರತಿಕ್ರಿಯಿಸಬೇಕಾದ ಅನಿವಾರ್ಯತೆ ಇದೆ. ಯಾವುದೇ ಪ್ರಯತ್ನವಾದರೂ ದೇಶದ ವೈವಿಧ್ಯತೆಯ ಪದರವನ್ನು



ಭಾಷೆ -ಬದುಕು
ಸಂ: ಸಂ: ಡಾ.ಸಂತೋಷ ಹಾನಗಲ್ಲ
ಪ್ರ: ವೀರಲೋಕ, ಬೆಂಗಳೂರು
ಬೆಲೆ ರು.650/-

ಬಹು ಭಾಷೆಗಳು ಬಳಕೆಯಲ್ಲಿರುವ ನಮ್ಮ ದೇಶದಲ್ಲಿ, ಭಾಷಾ ನೀತಿ ಹೇಗಿರಬೇಕು? ಇಂತಹ ಹಲವು ವಿಚಾರಗಳ ಗಂಭೀರ ಚರ್ಚೆಯನ್ನು ಈ ಪುಸ್ತಕದ ಲೇಖನಗಳು ಮಾಡುತ್ತವೆ.

ವಿರೂಪಗೊಳಿಸಬಾರದು ಎನ್ನುವ ಎಚ್ಚರದಿಂದ ಈ ಕೃತಿಯನ್ನು ಸಂಪಾದಿಸಲಾಗಿದೆಎಂಬ ಕಾಳಜಿ ಈ ಕೃತಿಯಲ್ಲಿ ಎದ್ದು ಕಾಣುತ್ತದೆ.

ನಾಡಿನ ಹಿರಿಯ ಭಾಷಾ ವಿಜ್ಞಾನಿಗಳಾದ ಪ್ರೊ.ಹಂಪನಾ, ಪ್ರೊ.ಸವದತ್ತಿಮಠ,ಪ್ರೊ. ಎ. ಮುರಿಗೆಪ್ಪ,ಪ್ರೊ. ಕೆ. ವಿ. ನಾರಾಯಣ, ಡಾ. ಜಿ. ಎನ್.ದೇವಿ, ಸಾಹಿತಿಗಳಾದ ಪ್ರೊ. ಬರಗೂರು ರಾಮಚಂದ್ರಪ್ಪ, ಡಾ. ಪ್ರಧಾನ ಗುರುದತ್ತ ಎಸ್ ಜಿ ಸಿದ್ದರಾಮಯ್ಯ, ಡಾ. ಓ ಎಲ್ ನಾಗಭೂಷಣಸ್ವಾಮಿ, ಡಾ.ಎಚ್ ಎಸ್ ರಾಘವೇಂದ್ರರಾವ್ ಮೊದಲಾದವರು, ಸಂಸ್ಕೃತಿ ಚಿಂತಕರು, ಪತ್ರಕರ್ತರು, ಲೇಖಕರು, ಶಿಕ್ಷಕರು, ಹೋರಾಟಗಾರರು ಬರೆದ ಲೇಖನಗಳು ವರ್ತಮಾನದ ಭಾಷಾನೀತಿಯ ಗೊಂದಲ ಅದಕ್ಕೆ ಸಾಧ್ಯವಿರುವ ಪರಿಹಾರ

ಉಪಾಯಗಳನ್ನು ಕುರಿತು ಚರ್ಚೆ ಮಾಡಿರುವುದು ಔಚಿತ್ಯಪೂರ್ಣ ಉಪಕ್ರಮ. ಭಾಷೆ ಮನುಷ್ಯನಿಗೆ ಸಿಕ್ಕ ವರ ಎಂದೇ ಎಲ್ಲಡೆ ಭಾವಿಸಲಾಗಿದೆ. ಆದರೆ ನಮ್ಮಲ್ಲಿ ಮಾತ್ರ ಅದನ್ನು ಒಂದು ಅಸ್ತ್ರವಾಗಿಸಿಕೊಂಡು ಸ್ಥಳೀಯ ಅಸ್ಮಿತೆಯನ್ನು ಜನ ಬದುಕನ್ನು ನಾಶ ಮಾಡಲು ಹೊರಟಿರುವ ಹುನ್ನಾರಗಳನ್ನು ಇಲ್ಲಿ ಬೆಳಕಿಗೆ ಹಿಡಿಯಲಾಗಿದೆ.

ತ್ರಿಭಾಷಾ ಸೂತ್ರ ಭಾರತೀಯ ಪರಿಸರಕ್ಕೆ ಅಪಾಯಕಾರಿಯಾದದ್ದು ಎಂಬುದನ್ನು ಇಲ್ಲಿನ ಎಲ್ಲ ವಿದ್ವಾಂಸರು ಒತ್ತಿ ಹೇಳಿದ್ದಾರೆ. ಮೇಲುನೋಟಕ್ಕೆ ಕಲಿಕೆಯಲ್ಲಿ ನಮ್ಮ ನಾಡು ಕನ್ನಡ-ಇಂಗ್ಲೀಷ್-ಹಿಂದಿ ಎನ್ನುವ ತ್ರಿಭಾಷಾ ಸೂತ್ರಕ್ಕೆ ಜೋತುಬೀಳಬೇಕೋ ಅಥವಾ ಅದನ್ನು ಕೈಬಿಟ್ಟು ಕನ್ನಡ-ಇಂಗ್ಲೀಷ್ ಎನ್ನುವ ದ್ವಿಭಾಷಾನೀತಿಯನ್ನು ಅಳವಡಿಸಿಕೊಳ್ಳಬೇಕೋ ಎಂಬುದರ ಕುರಿತಾಗಿ ನಡೆಯುತ್ತಿರುವ ಚರ್ಚೆಗಳು, ಬರಿಯ ಶಿಕ್ಷಣ ಕ್ಷೇತ್ರಕ್ಕೆ ಮಾತ್ರ ಸೀಮಿತವಾದ ಚರ್ಚೆಯ ಹಾಗೆ ತೋರುತ್ತಿದ್ದರೂ ಇದರ ಆಳ-ಅಗಲಗಳು ನಮ್ಮ ಊಹೆಗೆ ಮೀರಿದಂತಿವೆ(ಆನಂದ.ಜಿ) ಎಂಬುದನ್ನು ಮನದಟ್ಟು ಮಾಡಿಕೊಳ್ಳುವಲ್ಲಿ ಈ ಕೃತಿ ಯಶಸ್ವಿಯಾಗಿದೆ.

ಜಾಗತೀಕರಣದ ಪರಿಣಾಮದಿಂದ ಮಾರುಕಟ್ಟೆ ಕೇಂದ್ರಿತವಾಗಿ ಬೆಳೆಯುತ್ತಿರುವ ಇಂದಿನ ಸಮಾಜದಲ್ಲಿ ಅನೇಕ ಭಾಷೆಗಳು ಗಂಭೀರವಾದ ಬಿಕ್ಕಟ್ಟುಗಳನ್ನು ಇದಿರಿಸುತ್ತಿವೆ. ಬಹುಭಾಷೆಗಳನ್ನು ಹೊಂದಿರುವ ಭಾರತದಲ್ಲಿ ಅನೇಕ ಭಾಷೆಗಳು ಪತನಮುಖಿಯಾಗಿವೆ. ಕಳೆದ 50 ವರ್ಷಗಳಲ್ಲಿ 250ಕ್ಕೂ ಹೆಚ್ಚು ಭಾಷೆಗಳು ನಶಿಸಿ ಹೋಗಿವೆ. ಇಂಥ ಸಂದರ್ಭದಲ್ಲಿ ಈ ಭಾಷೆಗಳನ್ನು ಉಳಿಸಿಕೊಳ್ಳಲು ನಾವು ಅನುಸರಿಸಬೇಕಾದ ಭಾಷಾ ನೀತಿ ಹೇಗಿರಬೇಕು? ನಾವು ಇದುವರೆಗೆ ಒಪ್ಪಿಕೊಂಡು ಬಂದಿರುವ ತ್ರಿಭಾಷಾ ಸೂತ್ರದ ಸಾಧಕ ಬಾಧಕಗಳೇನು ಮತ್ತು ಕರ್ನಾಟಕಕ್ಕೆ ದ್ವಿಭಾಷಾ ಸೂತ್ರ ಯಾಕೆ ಬೇಕು? ಎಂಬಿತ್ಯಾದಿ ವಿಷಯಗಳನ್ನು ವಿಭಿನ್ನ ಚೌಕಟ್ಟಿನಲ್ಲಿ ಚರ್ಚಿಸುವ ಅಮೂಲ್ಯ ಲೇಖನಗಳು ಈ ಸಂಪುಟದಲ್ಲಿವೆ. ಭಾಷಾ ನೀತಿಗಳ ಕುರಿತಾಗಿ ಇಂಥದ್ದೊಂದು ಪುಸ್ತಕ ಇದೇ ಮೊದಲ ಬಾರಿಗೆ ಕನ್ನಡದಲ್ಲಿ ಪ್ರಕಟವಾಗುತ್ತಿದೆ ಎಂಬ ಡಾ.ಪುರುಷೋತ್ತಮ ಬಿಳಿಮಲೆ ಅವರ ಮಾತು ನಿಜವೇ ಆಗಿದೆ. ಇದೊಂದು ವರ್ತಮಾನದ ತುರ್ತಿನ ಕೃತಿ.

ವಿಮರ್ಶೆಯ ಸಮಗ್ರ ಪರಿಚಯ

ಕನ್ನಡದ ಸಂದರ್ಭದಲ್ಲಿ, ವಿಮರ್ಶೆಯು ಈಚಿನ ವರ್ಷಗಳಲ್ಲಿ, ಮೊನಚನ್ನು ಕಳೆದುಕೊಳ್ಳುತ್ತಿದೆ ಎಂಬ ಮಾತು ಅಲ್ಲಲ್ಲಿ ಕೇಳಿಬರುತ್ತಿದೆ. ಅದಕ್ಕೆ ವಿಭಿನ್ನ ಕಾರಣಗಳಿರಬಹುದು; ಪ್ರಮುಖ ವಿಮರ್ಶಕರಾಗಬಲ್ಲವರು ಕಥೆ, ಕಾದಂಬರಿ ಅಥವಾ ಇತರ ಪ್ರಕಾರಗಳತ್ತ ಆಸಕ್ತಿ ತೋರಿರುವುದು ಸಹ ಒಂದು ಕಾರಣ ಎನಿಸಬಹುದು. ಹೊಸ ತಲೆಮಾರಿನ ವಿಮರ್ಶಕರು ಮೂಡಿಬರಬೇಕು ಎಂಬ ಇನ್ನೊಂದು ಅಭಿಪ್ರಾಯವೂ ಇದೆ. ಇಂತಹ ಸನ್ನಿವೇಶದಲ್ಲಿ, ಡಾ. ಬಿ. ಜನಾರ್ದನ ಭಟ್ ಅವರ ಹೊಸ ಪುಸ್ತಕ 'ಸಾಹಿತ್ಯ ವಿಮರ್ಶೆಯ ಕೈಪಿಡಿ' ಗಮನ ಸೆಳೆಯುತ್ತದೆ. ವಿಮರ್ಶೆ ಎಂದರೇನು ಎಂಬು ಪ್ರಾಥಮಿಕ ಪಾಠದಿಂದ ಆರಂಭಿಸಿ, ಆಧುನಿಕ ವಿಮರ್ಶೆಯ ಇತಿಹಾಸ, ವಿವಿಧ ಸಾಹಿತ್ಯಕ ಸಂದರ್ಭಗಳಲ್ಲಿ ಕಂಡುಬಂದ ವಿಮರ್ಶೆ, ವಿಮರ್ಶೆಯ ಮೂಲ ಪರಿಕರಗಳೇ ಮೊದಲುಗೊಂಡು, ವಿಮರ್ಶೆಯ ಸಮಗ್ರ ಪರಿಚಯ ಮತ್ತು ಅವಲೋಕನ ಇಲ್ಲಿದೆ. ಮೂಲತಃ ವಿದ್ಯಾರ್ಥಿಗಳಿಗಾಗಿ ಈ ಪುಸ್ತಕ ರೂಪುಗೊಂಡಿದ್ದು, ಅವರಿಗೆ ವಿಮರ್ಶೆಯ ಪಾಠಗಳನ್ನು ಪರಿಣಾಮಕಾರಿಯಾಗಿ, ಸಮಗ್ರವಾಗಿ ಹೇಳುವುದರ ಜತೆಯಲ್ಲೇ, ಎಲ್ಲಾ ಸಾಹಿತ್ಯಾಸಕ್ತರಿಗೂ ಇದು ಉತ್ತಮ ಪರಾಮರ್ಶನ ಗ್ರಂಥವೂ ಆಗಬಲ್ಲದು.

ಜಾಗತಿಕ ವಿಮರ್ಶೆ ಮತ್ತು ಕನ್ನಡದ ವಿಮರ್ಶೆಯ ಕುರಿತಾಗಿ ಇಲ್ಲಿ ಹಲವು ಕುತೂಹಲಕಾರಿ ಬರಹಗಳೂ ಇವೆ. 'ಕನ್ನಡದ ನವ್ಯ ವಿಮರ್ಶೆ' (ಪುಟ 71), 'ವಸಾಹತೋತ್ತರ ವಿಮರ್ಶೆ' (ಪುಟ 151), 'ಭರತನ ನಾಟ್ಯಶಾಸ್ತ್ರ' (ಪುಟ 203), 'ಮಿಲನ್ ಕುಂದೇರ : ಕಾದಂಬರಿಯ ಕಲೆ' (ಪುಟ 295) ಮೊದಲಾದ ಬರಹಗಳು ಸಾಹಿತ್ಯದ ವಿದ್ಯಾರ್ಥಿಗಳ ಜತೆಯಲ್ಲೇ, ಜನಸಾಮಾನ್ಯರಿಗೂ ಇಷ್ಟವಾಗಬಹುದು. ಈ ಗ್ರಂಥದ ಬೆನ್ನುಡಿಯಲ್ಲಿರುವ ಮಾತುಗಳು, ಈ ಪುಸ್ತಕದ ಮೌಲ್ಯವನ್ನು ಬಿಂಬಿಸುತ್ತವೆ : ''ಡಾ. ಬಿ. ಜನಾರ್ದನ ಭಟ್ ಅವರು ನಾಡಿನ ಶ್ರೇಷ್ಠ ಲೇಖಕರಲ್ಲಿ ಒಬ್ಬರು. ಸೃಜನ, ಸೃಜನೇತರ ಈ ಎರಡೂ ಪ್ರಕಾರಗಳಲ್ಲೂ ಸಮಾನ ಪ್ರತಿಭೆ, ಪ್ರಭುತ್ವವನ್ನು ಮೆರೆದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಅವರು ಆಂಗ್ಲ ಸಾಹಿತ್ಯವನ್ನು ಓದಿ, ಬೋಧಿಸಿಯೂ ಕನ್ನಡದ ಹಿರಿಮೆ ಗರಿಮೆಯನ್ನು ಎತ್ತಿ ಹಿಡಿಯಲು ಅವಿರತವಾಗಿ ಪ್ರಯತ್ನಿಸುತ್ತಾ ಬಂದಿದ್ದಾರೆ. ಪ್ರಸ್ತುತ ಕೃತಿ, 'ಸಾಹಿತ್ಯ ವಿಮರ್ಶೆಯ ಕೈಪಿಡಿ' ಡಾ. ಜನಾರ್ದನ ಭಟ್ ಅವರ ಮಹತ್ವದ ಕೃತಿಗಳಲ್ಲಿ ಒಂದು. ಹೆಸರೇ ಸೂಚಿಸುವಂತೆ ಈ ಗ್ರಂಥ,

ಸಾಹಿತ್ಯ ವಿಮರ್ಶೆಯ ಕೈಪಿಡಿ
ಲೇ: ಡಾ. ಬಿ. ಜನಾರ್ದನ ಭಟ್
ಪ್ರ: ಸೃಜನ ಪ್ರಕಾಶನ, ಮಂಡ್ಯ
9481145775
ಬೆಲೆ ರು.375/-

ವಿಮರ್ಶೆ ಎಂದರೇನು? ಅದು ನಡೆದು ಬಂದ ದಾರಿ, ಅದರ ಆಳ ಅಗಲ ವೈಭವ, ಕನ್ನಡದಲ್ಲಿ ವಿಮರ್ಶೆ ಇಟ್ಟ ಹೆಜ್ಜೆ, ತೊಟ್ಟ ರೂಪದ ಸಮಗ್ರ ದರ್ಶನವನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿದೆ. ವಿಮರ್ಶೆಯ ವೈಧಾನಿಕತೆಯನ್ನು ಕರಾರುವಾಕ್ಕಾಗಿ. ನೇರವಾಗಿ, ಸ್ಪಷ್ಟವಾಗಿ ವಿಶ್ಲೇಷಿಸಿರುವುದು ಈ ಕೃತಿಯ ಧನಾತ್ಮಕ ಅಂಶ. ಕನ್ನಡ ವಿಮರ್ಶೆಯನ್ನು ಅಧ್ಯಯನ ಮಾಡುವವರಿಗೆ, ಓದುವವರಿಗೆ. ವಿದ್ಯಾರ್ಥಿಗಳಿಗೆ. ವಿದ್ವಾಂಸರಿಗೆ ಉಪಯುಕ್ತವಾದ ಕೈಪಿಡಿ ಇದಾಗಿದೆ. ಬಹುಶಿಸ್ತೀಯ ಅಧ್ಯಯನ, ಚಿಂತನೆ, ವ್ಯಾಖ್ಯಾನ, ಮೌಲ್ಯಮಾಪನ, ಚೇತೋಹಾರಿಯಾದ ನಿರೂಪಣೆಗಳಿಂದ ವಾಚನೀಯವೂ ಆಗಿರುವ ಈ ಕೃತಿ ಕನ್ನಡ ವಿಮರ್ಶಾ ಜಗತ್ತಿಗೆ ಒಂದು ಮೌಲಿಕ ಕೊಡುಗೆ.'' (ಬೆನ್ನುಡಿಯಲ್ಲಿ ಪ್ರೊ. ಜಿ.ಎನ್.ಉಪಾಧ್ಯ)

ಹಸಿರು ಕ್ರಾಂತಿಯ ಹರಿಕಾರ

» ಕಗ್ಗೆರೆ ಪ್ರಕಾಶ್

ಹಸಿರು ಕ್ರಾಂತಿಯ ಪಿತಾಮಹ ಹಾಗೂ ರೈತರ ಮಿತ್ರ ಎಂದೇ ಖ್ಯಾತರಾದ ಭಾರತ ರತ್ನ ಪ್ರೊ. ಎಂ.ಎಸ್. ಸ್ವಾಮಿನಾಥನ್ ಅವರ ಜೀವನ ಕಥನವು ಈ ಕೃತಿಯಲ್ಲಿ ಚಿತ್ರಣಗೊಂಡಿದೆ. ಕೃಷಿ ವಿಜ್ಞಾನಿ, ದಕ್ಷ ಆಡಳಿಗಾರ, ಹಲವು ಸಂಘ-ಸಂಸ್ಥೆಗಳ ನಿರ್ಮಾಪಕ, ಉತ್ತೇಜಕ, ಬೋಧಕ ಹೀಗೆ ಬಹುಮುಖ ವ್ಯಕ್ತಿತ್ವದ ಸ್ವಾಮಿನಾಥನ್ ಅವರ ಜೀವನ ಕಥೆ, ಓದುಗರಿಗೆ ಸ್ಫೂರ್ತಿ ತುಂಬಬಲ್ಲದು.

ಭಾರತದ ಕೃಷಿ ಕ್ಷೇತ್ರದ ಇತಿಹಾಸದಲ್ಲಿ ತಮ್ಮದೇ ಆದ ಛಾಪು ಒತ್ತಿರುವ, ಈ ಮೂಲಕ ಲಕ್ಷಾಂತರ ರೈತರ ಜೀವನದ ಮೇಲೆ ಮಹತ್ತರ ಬದಲಾವಣೆಗೆ ಕಾರಣವಾಗಿರುವ ಸ್ವಾಮಿನಾಥನ್, ನಮ್ಮ ದೇಶದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರು. 1925 ರಲ್ಲಿ ಹುಟ್ಟಿದ ಇವರು, 2023 ರವರೆಗಿನ ತಮ್ಮ ಜೀವಿತಾವಧಿಯಲ್ಲಿ ಮಾಡಿರುವ ಕೃಷಿ ಸಂಶೋಧನೆ, ಸಾಧನೆ, ಜೀವನ, ಹೀಗೆ ಎಲ್ಲವೂ ಈ ಕೃತಿಯಲ್ಲಿ ದಾಖಲಾಗಿವೆ. 1964-65ರಲ್ಲಿ ಒಂದೆಡೆ ಜನಸಂಖ್ಯೆ ಏರುತ್ತಿದ್ದರೆ ಇನ್ನೊಂದೆಡೆ ಆಹಾರ ಧಾನ್ಯಗಳ ಉತ್ಪಾದನೆ 89 ಮಿಲಿಯನ್ ಟನ್‌ನಿಂದ 72 ಮಿಲಿಯನ್ ಟನ್‌ಗೆ ಇಳಿದಿತ್ತು. ಬೆಲೆಗಳು ಗಗನಕ್ಕೇರಿ ದೇಶದಲ್ಲಿ ಜನ ಹಸಿವಿನಿಂದ ನರಳುತ್ತಿದ್ದರು.

ಇಂಥ ಸಂದರ್ಭದಲ್ಲಿ ಕೃಷಿ ಕ್ಷೇತ್ರದಲ್ಲಿ ಸ್ವಾಮಿನಾಥನ್ ಅಕ್ಕಿ, ಗೋಧಿ ಉತ್ಪನ್ನಗಳ ಹೆಚ್ಚಳಕ್ಕೆ ಸಂಶೋಧನೆಗಳನ್ನು ಮಾಡಿ ಹೊಸ ತಳಿಗಳನ್ನು ಕಂಡು ಹಿಡಿದರು. ಈ ಮೂಲಕ ಭಾರತದಲ್ಲಿ ಹಸಿರು ಕ್ರಾಂತಿಯನ್ನು ಉಂಟು ಮಾಡಿದರು. ಇವರ ಕೊಡುಗೆಗಳು ಕೇವಲ ಹೆಚ್ಚು ಇಳುವರಿಯ ಗೋಧಿ, ಭತ್ತದ ತಳಿಗಳನ್ನು ರೈತರಿಗೆ ಪರಿಚಯಿಸುವುದಷ್ಟೇ ಆಗಿರಲಿಲ್ಲ, ಕೃಷಿ ಕ್ಷೇತ್ರದ ಮುನ್ನಡೆಗಳು, ಪರಿಸರ ಸುಸ್ಥಿರತೆ ಮತ್ತು ಸಾಮಾಜಿಕ ಹಾಗೂ ಸಮಾನತೆ ಆಧಾರದ ಮೇಲೆ ಸುಭದ್ರವಾಗಿ ನಿಂತಿರಬೇಕು ಎಂಬುದನ್ನು ಅರಿತ ದಾರ್ಶನಿಕರೂ ಆಗಿದ್ದರು



ಭಾರತ ರತ್ನ ಪ್ರೊ. ಎಂ.ಎಸ್. ಸ್ವಾಮಿನಾಥನ್
ಲೇ : ಡಾ. ಎಂ.ಎಸ್.ಎಸ್. ಮೂರ್ತಿ
ಪ್ರ : ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್, ಬೆಂಗಳೂರು.
9739561334
ಬೆಲೆ : 240/-

ಎಂದು ಸ್ವತಃ ಸ್ವಾಮಿನಾಥನ್ ಪತ್ನಿ ಡಾ. ಸೌಮ್ಯ ಹೇಳಿದ್ದಾರೆ. ಭಾರತವನ್ನು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿ ಮಾಡುವಲ್ಲಿ ಸ್ವಾಮಿನಾಥ್ ಪಾತ್ರ ಪ್ರಮುಖವಾಗಿರುವುದು ಪುಸ್ತಕದ ಪ್ರತಿ ಪುಟದಲ್ಲೂ ತೆರೆದುಕೊಂಡಿದೆ. ಸ್ವಾಮಿನಾಥನ್ ಅವರಂಥ ಮೇರುಪ್ರತಿಭೆಯ ವಿಜ್ಞಾನಿ ಆಂತರ್ಯವನ್ನು ಅರ್ಥೈಸಿಕೊಂಡು ಮತ್ತೊಬ್ಬ ವಿಜ್ಞಾನಿಯಾದ ಡಾ. ಎಂ.ಎಸ್.ಎಸ್. ಮೂರ್ತಿ ಇವರ ಜೀವನ ಕಥನ ಬರೆದಿರುವುದು ಗಮನಾರ್ಹ.

ಮಾತಿನ ಶಕ್ತಿ ಬದುಕಿನ ಯುಕ್ತಿ

» ಪಾರ್ವತಿ ಜಿ.ಐತಾಳ್

ಮಾತು ಎಂಬ ವಿಸ್ಮಯ' ಡಾ.ಮೀನಾಕ್ಷಿ ರಾಮಚಂದ್ರ ಅವರು ಮಲೆಯಾಳದಿಂದ ಕನ್ನಡಕ್ಕೆ ಅನುವಾದಿಸಿರುವ ಸಜಿ ಎಂ. ನರಿಕ್ಕುಯಿ ಅವರ ಒಂದು ಅಪೂರ್ವ ಕೃತಿ. ಮನುಷ್ಯನು ತನ್ನ ಜೀವನದಲ್ಲಿ ಯಶಸ್ಸು ಸಾಧಿಸಬೇಕಿದ್ದರೆ, ಸುಖ ಶಾಂತಿ ನೆಮ್ಮದಿಗಳನ್ನು ಪಡೆಯಬೇಕಿದ್ದರೆ, ಯಾವ ರೀತಿಯ ಸಕಾರಾತ್ಮಕ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು ಅನ್ನುವುದನ್ನು ಲೇಖಕರು ಈ ಕೃತಿಯಲ್ಲಿ ವಿವರಿಸಿದ್ದಾರೆ. ನಾವು ಆಡುವ ಬಹಿರಂಗದ ಮಾತ್ರವಲ್ಲದೆ ಅಂತರಂಗದೊಳಗಿನ ಮಾತುಗಳು ಹೇಗೆ ನಮ್ಮ ಜೀವನದಲ್ಲಿ ವಿಸ್ಮಯಕರವಾದ ಬದಲಾವಣೆಗಳನ್ನು ಉಂಟುಮಾಡಬಹುದು ಅನ್ನುವುದನ್ನು ಸನ್ನಿವೇಶ-ಸಂದರ್ಭಗಳ ಉಲ್ಲೇಖಗಳ ಮೂಲಕ ಚಿತ್ರಿಸಿದ್ದಾರೆ.

ಈ ಕೃತಿಯಲ್ಲಿ ಒಟ್ಟು ಐದು ಭಾಗಗಳಿವೆ. ಪ್ರತಿಯೊಂದು ಭಾಗವನ್ನು 8-10 ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಪ್ರತಿ ಅಧ್ಯಾಯದ ಕೊನೆಗೂ ಆ ಅಧ್ಯಾಯವು ಹೇಳುವ ವಿಚಾರಗಳ ಸಾರಸತ್ವದ ಮೇಲೆ ಬೆಳಕು ಚೆಲ್ಲುವ ಒಂದು ವಾಕ್ಯವನ್ನು ನೀಡಲಾಗಿದೆ. ಇದು ತರಗತಿಯಲ್ಲಿ ಅಧ್ಯಾಪಕರು ಪಾಠ ಮಾಡುವ ರೀತಿಯಲ್ಲಿದೆ. ಓದುಗರು ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಇದು ಸಹಕಾರಿ. ಮಾತುಗಳು ಬದುಕನ್ನು ಹೇಗೆ ಕಟ್ಟಿಕೊಳ್ಳುತ್ತವೆ, ಬದುಕನ್ನು ಬದಲಾಯಿಸಲು ಮಾತುಗಳನ್ನು ಹೇಗೆ ಪ್ರಯೋಗಿಸಬೇಕು, ಮಾತುಗಳು ಹೇಗೆ ಕೆಲಸ ಮಾಡುತ್ತವೆ, ಚಿತ್ರ ಬರೆಯುವ ಮಾತುಗಳು ಯಾವುವು, ಮಾತುಗಳು ಮತ್ತು ಮಿದುಳಿನ ನಡುವಣ ಸಂಬಂಧವೇನು, ಮನುಷ್ಯನನ್ನು ಬೆಳೆಸುವ ಮಾತುಗಳು ಹೇಗಿರುತ್ತವೆ, ಕೇಳಬೇಕಾದ ಸರಿಯಾದ ಪ್ರಶ್ನೆಗಳು ಯಾವುವು, ಪ್ರಪಂಚದಿಂದ ನಾವು ಏನು ಕೇಳಬೇಕು, ಮಾತು ಮತ್ತು ನಮ್ಮ ಆರೋಗ್ಯ, ಜೀವನದ ಬದಲಾವಣೆಯ ದಾರಿ ಯಾವುದು, ಬದಲಾವಣೆಯ ಆರಂಭ, ವಿಜಯದ ಮೊದಲ ಮೆಟ್ಟಲು, ವಿಜಯದಲ್ಲಿನ ವ್ಯತ್ಯಾಸ, ವಿಜಯದ ನಿಯಮಗಳು, ವಿಜಯದ ಭಾಷೆ, ವಿಜಯದ ಸೋಪಾನಗಳು, ಇಚ್ಛಾಶಕ್ತಿಯನ್ನೊಳಗೊಂಡ ವಿಜಯ, ವಿಜಯಿಗಳು ಮತ್ತು ಪರಾಜಿತರು, ವಿಜಯಿಗಳ ಏಳು ರಹಸ್ಯಗಳು, ವಿಜಯದ ಶತ್ರು, ಇಂತಹ, ಮಾತಿಗೆ ಸಂಬಂಧಪಟ್ಟ ವೈವಿಧ್ಯಮಯ ವಿಷಯಗಳ ಮೇಲೆ ಸರಳವಾದ, ಬೇಗನೆ ಅರ್ಥವಾಗಬಹುದಾದ ವಿವರಣೆಗಳಿವೆ.

ಕೃತಿಯ ಅನುವಾದ ಬಹಳ ಚೆನ್ನಾಗಿದೆ. ಸೂಕ್ತ ಪದಗಳ



ಮಾತು ಎಂಬ ವಿಸ್ಮಯ
ಮೂಲ ಮಲೆಯಾಳ : ಸಜಿ ಎಂ.ನರಿಕ್ಕುಯಿ
ಅನು:ಡಾ.ಮೀನಾಕ್ಷಿ ರಾಮಚಂದ್ರ
ಪ್ರ : ಮೈರುಗ ಪ್ರಕಾಸನ, ಮಂಗಳೂರು
9448911777
ಬೆಲೆ ರು.300/-

ಮಾತಿನ ಶಕ್ತಿಯನ್ನು ಸರಳವಾಗಿ ವಿವರಿಸುವ ಈ ಪುಸ್ತಕವು, ಕನ್ನಡಕ್ಕೆ ಅನುವಾದವಾಗಿ ಬಂದಿರುವುದು ಉಪಯುಕ್ತ.

ಬಳಕೆ, ವಾಕ್ಯಗಳ ಸ್ಪಷ್ಟತೆ, ಮೂಲದ ಆಶಯವು ಸೋರಿ ಹೋಗದಂತೆ ತೆಗೆದುಕೊಂಡ ಎಚ್ಚರ, ಮೂಲವಾಕ್ಯಗಳ ಧ್ವನಿಯನ್ನು ಉಳಿಸಿಕೊಂಡ ಜಾಣ್ಮೆ, ವ್ಯಾಕರಣ ಶುದ್ಧಿ ಎಲ್ಲವೂ ಮೆಚ್ಚಿಕೊಳ್ಳುವಂಥದ್ದು. ಕನ್ನಡದ ಓದುಗರಿಗೆ ಇಂಥ ಒಂದು ಕೃತಿ ಲಭ್ಯವಾಗಬೇಕು ಎಂದು ಇದನ್ನು ಅನುವಾದಕ್ಕೆ ಆಯ್ಕೆ ಮಾಡಿಕೊಂಡದ್ದು ಪ್ರಶಂಸಾರ್ಹ. ಸಂಸ್ಕೃತಿ ಎಂದರೆ ಏನೆಂದೇ ಗೊತ್ತಿಲ್ಲದೆ, ಯದ್ವಾತದ್ವಾ ಮಾತನಾಡಿ ಸಂಬಂಧಗಳನ್ನು ಹಾಳುಮಾಡಿಕೊಳ್ಳುವ ಜನರಿರುವ ಇಂದಿನ ದಿನಗಳಲ್ಲಿ, ಇಂತಹ ಪುಸ್ತಕದ ಅವಶ್ಯಕತೆ ಇದೆ. ಇದೊಂದು ಉಪಯುಕ್ತ ಪುಸ್ತಕ.

ಪರ್ವತವಾಣಿಯವರ ನಾಟಕಗಳು

» ಕೆ.ಎಂ. ವಿಜಯಲಕ್ಷ್ಮಿ (ಕೊಪ್ಪುಮನೆ)

ಪರ್ವತವಾಣಿ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ, ಪರ್ವತವಾಡಿ ನರಸಿಂಗರಾವ್ ಅವರು ಪ್ರಪ್ರಥಮವಾಗಿ ನಾಟಕಕ್ಕೆ ಪ್ರವೇಶಿಸಿದ್ದು 1936ರಲ್ಲಿ, ನಾಯಕನಟನಾಗಿಯೇ. ಭದ್ರಾವತಿಯಲ್ಲಿ ಅರಣ್ಯ ಇಲಾಖೆಯಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿದ ಸಂದರ್ಭದಲ್ಲಿ, ಅಲ್ಲಿಂದ ಬೆಂಗಳೂರಿಗೆ ವರ್ಗಾವಣೆಗೊಂಡು ಬಂದು ನಾಟಕಾಸಕ್ತ ಗೆಳೆಯರ ಜೊತೆಗೂಡಿದ ಮೇಲೆ, 1939ರಲ್ಲಿ 'ಪರ್ವತವಾಡಿ' ಎಂಬ ಹೆಸರಿನಲ್ಲಿ ಯಾರಿಗೂ ತಿಳಿಸದೆ ಬರೆದ ಮೊದಲ ನಾಟಕ 'ಮಾಲತಿ'. ನಂತರ ನಾಟಕಾಧ್ಯಯನದಿಂದಾಗಿ ಪಾಶ್ಚಾತ್ಯ ನಾಟಕಗಳಿಂದ ಪ್ರೇರಿತರಾದರು. ಪ್ರಭಾವಿತರಾದರು. ರಚನಾ ಕಾರ್ಯದಲ್ಲಿ ನಿರತರಾದರು. ಜಗತ್ತಿನ ಶ್ರೇಷ್ಠ ನಾಟಕಕಾರರ ವಸ್ತುಗಳನ್ನು ಆಧಾರವಾಗಿಟ್ಟುಕೊಂಡು, ಸ್ವತಂತ್ರ ಆಲೋಚನೆಗಳಿಂದ, ಕನ್ನಡ ಸಂಸ್ಕೃತಿಗೆ ಹಾಗೂ ಕರ್ನಾಟಕದಲ್ಲೇ ನಡೆದಿದೆ ಎನಿಸುವಂತ ನಾಟಕಗಳನ್ನು ಬರೆದರು. ವಿಲಿಯಂ ಶೇಕ್ಸ್‌ಪಿಯರ್, ಆಲಿವರ್ ಗೋಲ್ಡ್‌ಸ್ಮಿತ್, ಮಾರ್ಕ್‌ಹೀಂ, ಮೋಲಿಯೇರ್, ರಿಚರ್ಡ್ ಬ್ರಿನ್ಸ್‌ಲೇ ಷೆರಿಡನ್, ಇಬ್ಸನ್, ಮುಂತಾದ, ವಿವಿಧ ದೇಶಗಳ, ವಿವಿಧ ಭಾಷೆಗಳ ರಂಗದಿಗ್ಗಜರ ಕೃತಿಗಳು ಪರ್ವತವಾಣಿ ಅವರ ಕೈಯಲ್ಲಿ ಕನ್ನಡದ ಕೃತಿಗಳಾದವು, ಕರ್ನಾಟಕದಲ್ಲೇ ನಡೆದ ಕಥೆಗಳಾದವು.

ಇವರ ನಾಟಕಗಳಲ್ಲಿ ಮೀನಾ ಮದುವೆ, ಗಿಳಿಯ ಪಂಜರ, ತಿನ್ನಬೇಕೇ ತಿಂದು ಕುಡಿಯಬೇಕೇ?, ಜುಕುತಿ ಕೂಗುತಿ, ಮದ್ಯಪಾನ, ಹಗ್ಗದ ಕೊನೆ, ಪಿಂಡಕ್ಕಾಗಿ, ತಪ್ಪು ಹೆಜ್ಜೆ, ಅಂತಿಂಥ ಹೆಣ್ಣು ಇವಳಲ್ಲ, ನಾಯಿ ಬಾಲ, ಮಂಗಮಾಯ, ನಾಯಿ ಬೊಗಳಿತು, ಮುಂತಾಗಿ ಸುಮಾರು ನಲವತ್ತಾರು ಸ್ವಂತ ಕೃತಿಗಳಾದರೆ, ಉಳಿದ ನಲವತ್ತು ಕೃತಿಗಳು ರೂಪಾಂತರಿಸಿ ಅಥವಾ ಸ್ವಂತದ್ದಾಗಿಸಿಕೊಂಡು ಸೃಷ್ಟಿಸಿದವುಗಳು. 1945-46ರಲ್ಲಿ, ಶೇಕ್ಸ್ಪಿಯರಿನ 'ಟೇಮಿಂಗ್ ಆಫ್ ದ ಶೂ' ನಾಟಕವನ್ನು ಆಧರಿಸಿ ಬರೆದ 'ಬಹದ್ದೂರ್ ಗಂಡ' ನಾಟಕ; ಕೆ.ಜಿ. ರಸ್ತೆಯಲ್ಲಿದ್ದ ಹಿರಣ್ಣಯ್ಯನವರ ಶ್ರೀ ಥಿಯೇಟರ್‌ನಲ್ಲಿ, ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಅಖಂಡವಾಗಿ ನೂರಾಐವತ್ತು ಪ್ರದರ್ಶನಗಳನ್ನು ನೀಡಿದ್ದು, ಹವ್ಯಾಸಿ ರಂಗಭೂಮಿಯಲ್ಲಿ ಇಂದಿಗೂ ಮುರಿಯಲಾಗದೇ ಉಳಿದಿರುವ ದಾಖಲೆ.

ಶಿವಮೊಗ್ಗದಲ್ಲಿ 1943ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಬಹದ್ದೂರ್ ಗಂಡ' ನಾಟಕದ ಪ್ರದರ್ಶನವನ್ನು ನೋಡಿದ, ಖ್ಯಾತ ಸಾಹಿತಿ ವಿ.ಕೃ. ಗೋಕಾಕರು, ಪರ್ವತವಾಣಿಯವರ ದೊಡ್ಡ ಧ್ವನಿಗೆ ಮಾರುಹೋಗಿ, 'ಪರ್ವತವಾಡಿ'ಗೆ ಬದಲಾಗಿ ಪರ್ವತವಾಣಿ' ಎಂದಿಟ್ಟುಕೊಂಡರೆ ಹೆಚ್ಚು ಸೂಕ್ತವಾಗುತ್ತದೆ ಎಂದು ನೀಡಿದ ಸೂಚನೆ ಒಪ್ಪಿಗೆಯಾಗಿ, ಅಲ್ಲಿಂದ ಮುಂದೆ ಜನಪ್ರಿಯಗೊಂಡಿದ್ದು 'ಪರ್ವತವಾಣಿ' ಎಂಬ ಕಾವ್ಯನಾಮವೇ. ಪಿ. ನರಸಿಂಗರಾವ್ ಎನ್ನುವುದು ಕೇವಲ ಕಛೇರಿಯ ದಾಖಲೆಗಳಲ್ಲಿ ಮಾತ್ರ ಉಳಿದುಕೊಂಡ ಹೆಸರು. (ಮುನ್ನುಡಿಯ ಆಯ್ದ ಭಾಗ)



ಇಷ್ಟಾರ್ಥ ಮತ್ತು ಇತರ ನಾಟಕಗಳು
ಲೇ: ಪರ್ವತವಾಣಿ
ಸಂ: ಕೆ.ಎಂ.ವಿಜಯಲಕ್ಷ್ಮಿ
ಪ್ರ: ಅಂಕಿತ ಪುಸ್ತಕ
ಬೆಲೆ ರು.150/-

ಹಿರಿಯ ನಾಟಕಕಾರ ಪರ್ವತವಾಣಿಯವರ ನಾಟಕಗಳು, ಇತ್ತೀಚೆಗೆ ಅಂಕಿತ ಪುಸ್ತಕದ ಮೂಲಕ ಮರುಮುದ್ರಣಗೊಂಡಿವೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ವಿದೇಶ ಕಾಲ
(ನೂರಕ್ಕೂ ಹೆಚ್ಚು ದೇಶಗಳಿಗೆ ಪ್ರವಾಸ ಕೈಗೊಂಡಿರುವ ವಿಶ್ವೇಶ್ವರ ಭಟ್ಟರು ಅಲ್ಲಿಯ ವಿಶಿಷ್ಟ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಇದು ಭಟ್ಟರ ನೂರನೇ ಪುಸ್ತಕವೂ ಹೌದು)
ಲೇ: ವಿಶ್ವೇಶ್ವರ ಭಟ್ ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 500/-

2
ಸರಹದ್ದು
('ಬ್ರ್ಯಾಂಡ್ ಬಿಲ್ಡರ್ಸ್' ಮೂಲಕ ಬರವಣಿಗೆಯಲ್ಲಿ ತಮ್ಮ ಛಾಪು ಮೂಡಿಸಿದ್ದ ಹಿರೇಗುತ್ತಿಯವರ ಮೊದಲ ಕಥಾಸಂಕಲನ ವಿದು. ವೈವಿಧ್ಯಮಯ ಕಥೆಗಳು ಇಲ್ಲಿವೆ.)
ಲೇ: ದೀಪಾ ಹಿರೇಗುತ್ತಿ
ಪ್ರ: ಅಂಕಿತಪುಸ್ತಕ, ಬೆಂಗಳೂರು
ಬೆಲೆ : ರೂ 150



3
ಹತ್ತೇವು ವಿಜ್ಞಾನದ ಜೇಪ
(ಕನ್ನಡದಲ್ಲಿ ವಿಜ್ಞಾನ ಬರವಣಿಗೆ ಸುಲಭವಲ್ಲ. ಎಲ್ಲರಿಗೂ ಸುಲಭವಾಗಿ ವಿಜ್ಞಾನ ಅರ್ಥವಾಗುವಂತೆ ಈ ಪ್ರಬಂಧಗಳು ಮೂಡಿಬಂದಿವೆ.)
ಲೇ: ಶರತ್ ಭಟ್ ಸೇರಾಜೆ
ಪ್ರ: ಅಭಿಜ್ಞಾನ, ಬೆಂಗಳೂರು
ಬೆಲೆ : ರೂ 275/-



4
ಕುವೆಂಪು ವಿಚಾರ ಕ್ರಾಂತಿ
(ಕುವೆಂಪು ಅವರು ವಿವಿಧ ಸಂದರ್ಭಗಳಲ್ಲಿ ಮಾಡಿದ ಭಾಷಣ ಮತ್ತು ಲೇಖನಗಳ ಸಂಕಲನ)
ಸಂ: ಬರಗೂರು ರಾಮಚಂದ್ರಪ್ಪ
ಪ್ರ: ಜನ ಪ್ರಕಾಶನ, ಬೆಂಗಳೂರು
ಬೆಲೆ: ರೂ 100/-



5
ಅನ್ನಾ ಕರೆನಿನಾ ...
(ಜಗತ್ತಿನ ಹತ್ತು ಶ್ರೇಷ್ಠ ಕಾದಂಬರಿಗಳಲ್ಲಿ ಒಂದು. ಮನುಷ್ಯ ಕುಟುಂಬ, ಸಮಾಜ ಮತ್ತು ವ್ಯವಸ್ಥೆಗಳನ್ನು ಭಿನ್ನ ಬೆಳಕಿನಲ್ಲಿ ನೋಡುವ ಕೃತಿ ಇದು)
ಲೇ: ಲಿಯೋ ಟಾಲ್ಸ್‌ಟಾಯ್
ಅನು: ಓ. ಎಲ್. ನಾಗಭೂಷಣಸ್ವಾಮಿ
ಪ್ರ: ಅಭಿನವ, ಬೆಂಗಳೂರು
ಬೆಲೆ: ರೂ 1200/-



6
ನೀವು ಹೆಂಡತಿಗೆ ಹೆದರುತ್ತೀರಾ?
(ಡುಂಡಿರಾಜರು ಬೇಕಾದರೆ ಹೆದರಿಕೊಳ್ಳಲಿ. ನಾವ್ಯಾಕೆ ಹೆದರಬೇಕು? ಹಾಗೆಲ್ಲ ಖಾಸಗಿ ವಿಷಯಗಳನ್ನು ಸಾರ್ವಜನಿಕಗೊಳಿಸುವುದು ಏಕೆ? ಲಘುಧಾಟಿಯ ಬರಹಗಳು.)
ಲೇ: ಎಚ್. ಡುಂಡಿರಾಜ್
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 160/-



7
ಬೆಂಕಿ ಮತ್ತು ನೀರು
(ಆರ್ಯ ಮತ್ತು ದ್ರಾವಿಡರನ್ನು ಕುರಿತದ್ದು ಎಂದೂ ಮುಗಿಯದ ಚರ್ಚೆ. ನಮ್ಮ ಮೂಲ ಯಾವುದು? ನಾವೇಕೆ ಇಲ್ಲಿಗೆ ಬಂದೆವು ಮುಂತಾಗಿ ಅನೇಕ ಪ್ರಶ್ನೆಗಳೆನ್ನೆತ್ತಿದ್ದಾರೆ ಲೇಖಕರು)
ಲೇ: ಎನ್.ಕೆ. ಮೋಹನ್‌ರಾಂ
ಪ್ರ: ಆಕ್ರಾಂತ ಪ್ರಕಾಶನ, ಬೆಂಗಳೂರು
ಬೆಲೆ : 170/-



8
ಆರ್ಟಿಫೀಶಿಯಲ್ ಇಂಟೆಲಿಜೆನ್ಸ್
(ಈಗ ಬಹು ಚರ್ಚಿತ ವಿಷಯ. ಗೂಗಲ್ ದೈತ್ಯನನ್ನೇ ನುಂಗಿ ಹಾಕುತ್ತಿರುವ ಎಐ ಈಗ ಸರಳಗನ್ನಡದಲ್ಲಿ)
ಲೇ: ಮಧು ವೈ.ಎನ್
ಪ್ರ: ನೆಲ ಮುಗಿಲು ಪ್ರಕಾಶನ, ಬೆಂಗಳೂರು
ಬೆಲೆ: ರೂ 170/-



9
ನೂತನ ಜಗದಾ ಬಾಗಿಲು
(ಐವತ್ತೆಂಟು ವಿವಿಧ ಲೇಖಕರ ವೈವಿಧ್ಯಮಯ ಕಥೆಗಳು ಇಲ್ಲಿವೆ. ಹೊಸ ಲೇಖಕರ ಆಸಕ್ತಿದಾಯಕ ಓದಿಗೆ ಇಲ್ಲಿ ಬನ್ನಿ)
ಸಂ : ಆಶಾ ರಘು
ಪ್ರ: ಉಪಾಸನ ಬುಕ್ಸ್, ಬೆಂಗಳೂರು
ಬೆಲೆ : ರೂ 640/-



10
ಎದೆಯ ಹಣತೆ
(ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ 13 ಕಥೆಗಳ ಸಂಕಲನ; ಈಗ ಬೂಕರ್ ಪ್ರಶಸ್ತಿ ಪುರಸ್ಕಾರದೊಂದಿಗೆ)
ಲೇ: ಬಾನು ಮುಷ್ತಾಕ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ: ರೂ 250/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ವಿರಾಮ

ಮೈಸೂರ್ ಸಕತು!

ಲಹರಿ

ಮೈಸೂರು ಸಕತು ಅಂದ್ರೆ ಏನು ಅಂತ ಹುಬ್ಬೇರಿಸಬೇಡಿ. ವೆರಿ ಸಿಂಪಲ್! ಸ ಅಂದ್ರೆ ಸಕ್ಕರೆ, ಕ ಅಂದ್ರೆ ಕಡ್ಲೆಹಿಟ್ಟು, ತು ಅಂದ್ರೆ ತುಪ್ಪ. ಈ ಮೂರರ ಸಮ್ಮಿಲನವೇ ಮೈಸೂರ್ ಸಕತು.. ಏನಂತೀರಿ? ಸಕತ್ ಅಲ್ವಾ?

» ತುರುವೇಕೆರೆ ಪ್ರಸಾದ್



ಮೈಸೂರ್ ಪಾಕ್ ಎಂದರೆ ನೀರೂರದ ಬಾಯೇ ಇಲ್ಲ. ಡಯಾಬಿಟೀಸ್ ಬಂದಿದ್ದವರೂ ತಮ್ಮ ಹಿಂದಿನ ಮೈಸೂರ್ ಪಾಕ್ ಆಸ್ವಾದಿಸಿದ ಕ್ಷಣವನ್ನು ಮರೆಯಲಾರರು. ಅದೊಂದು ಸ್ವೀಟ್ ನಾಸ್ಟಾಲ್ಜಿಯಾ ಆಗಿ ಅವರ ಮನಸ್ಸಿನಲ್ಲಿ ಹಚ್ಚ ಹಸಿರಾಗಿರುತ್ತದೆ. ಮೈಸೂರು ಪಾಕಿನ ಸವಿಯೇ ಅಂತದ್ದು. ಯಾರು ಏನೇ ಹೇಳಲಿ, ನನ್ನ ಮಟ್ಟಿಗಂತೂ ಅದು ಸಿಹಿಗಳ ರಾಜ. ರಾಜರ ಮನೆಯಲ್ಲಿ ಹುಟ್ಟಿದ್ದು ಎಂಬ ಕಾರಣಕ್ಕಲ್ಲ, ಪ್ರಜೆಗಳ ಮನೆ ಮನೆಯಲ್ಲು ಜನಗಳ ನಾಲಗೆಯ ಮೇಲೆ ನಲಿದಾಡಿತು ಎಂಬ ಕಾರಣಕ್ಕೆ! ಅದೂ ತಮಿಳು ಜನರ ಪೈಪೋಟಿಗೆ ಸಡ್ಡು ಹೊಡೆದು ಜಿಐ ಬೇರೆ ಪಡೆದಿರುವುದು ನಮಗೆ ಹೆಗ್ಗಳಿಕೆಯ ವಿಷಯವಲ್ಲವೇ?

ಲಾಡು ಪ್ರಸಾದ ರೂಪಿ. ದೇವಸ್ಥಾನಗಳಲ್ಲೆಲ್ಲಾ ವಿಜೃಂಬಿಸಿ ಅದರ ಮೇಲೇನೋ ಭಕ್ತಿ ಭಾವ. ಜಿಲೇಬಿ ಪರಮಹಂಸರು ಹೇಳುವಂತೆ ಗವರ್ನರನ ಗಾಡಿ. ಮೈಸೂರು ಪಾಕಿನದಾದರೋ ಎಲ್ಲೆಲ್ಲೂ ಸಲ್ಲುವ ಆಕರ್ಷಕ ಮೋಡಿ. ಈಗಲೂ ಮದುವೆ ಮನೆಗಳಲ್ಲಿ ಅಕಸ್ಮಾತ್ ಬೇರೆ ಯಾವುದೋ ಸ್ವೀಟ್ ಮಾಡಿಸಿದ್ದು ಶಾರ್ಟೇಜ್ ಆದರೆ ಧಿಡೀರ್ ಮೈಸೂರ್ ಪಾಕಿನ ಮೊರೆ ಹೋಗುತ್ತಾರೆ.

ಹೆಸರು ಬಂದಿದ್ದು ಹೇಗೆ?

ಮೈಸೂರು ಪಾಕಿಗೇಕೆ ಆ ಹೆಸರು ಬಂತು ಎಂದು ಎಲ್ಲರಿಗೂ ಗೊತ್ತಿರುವುದೇ! ಮೈಸೂರು ಮಹಾರಾಜರು ಯಾರೋ ದಿಢೀರ್ ಅತಿಥಿಗಳು ಬಂದಾಗ ತಮ್ಮ ನೆಚ್ಚಿನ ಅಡುಗೆ ಭಟ್ಟರಾದ ಕಾಕಾಸುರ ಮಾದಪ್ಪನವರಿಗೆ ಒಂದು ವಿಶಿಷ್ಟವಾದ ಹೊಸ ಸಿಹಿ ಮಾಡಲು ಆದೇಶ ನೀಡಿದರಂತೆ. ತಕ್ಷಣಕ್ಕೆ ಏನೂ ಹೊಳೆಯದ ಮಾದಪ್ಪ ಕಡ್ಲೆಹಿಟ್ಟಿಗೆ ತುಪ್ಪ ಸುರಿದು ಸಕ್ಕರೆ ಪಾಕಕ್ಕೆ ಹಾಕಿ ಕೆದಕಿ ತಂದು ರಾಜನ ಮುಂದಿಟ್ಟರಂತೆ. ಅದನ್ನು ತಿಂದು ಸುಪ್ರೀತರೂ ಸುಪ್ರಸನ್ನರೂ ಆದ ಮಹಾರಾಜರು ಅದಕ್ಕೆ ಮೈಸೂರು ಪಾಕು ಎಂದು ನಾಮಕರಣ ಮಾಡಿದರಂತೆ..ನಿಜಕ್ಕೂ ಮೈಸೂರು ಅರಸರದ್ದು ತುಂಬಾ ದೊಡ್ಡತನ. ಅವರು ತಮ್ಮ ಹೆಸರಿನಲ್ಲಿ ನಾಲ್ವಡಿ ಪಾಕು ಅಂತಲೋ, ರಾಜಾ ಪಾಕ್ ಅಂತಲೋ ಇಡಬಹುದಿತ್ತು. ಸಂದರ್ಭಕ್ಕೆ ತಕ್ಕ ಹಾಗೆ ತಟ್ಟನೆ ಉದ್ಭವವಾದ್ದರಿಂದ ಧಿಡೀರ್ ಪಾಕು, ಅವಸರ ಪಾಕು ಎಂದೂ ನಾಮಕರಣ ಮಾಡಬಹುದಿತ್ತು. ವಿಜ್ಞಾನದ ಎಷ್ಟೋ ಅವಿಷ್ಕಾರಗಳನ್ನು ಅದನ್ನು ಕಂಡು ಹಿಡಿದವರ ಹೆಸರಲ್ಲೇ (ರಾಮನ್ ಎಫೆಕ್ಟ್ ತರ) ನಾಮಕರಣ ಮಾಡಿದ್ದಾರೆ. ಹೇಗೋ ಅಂತೂ ಮೈಸೂರು ಪಾಕಾಗೇ ಉಳಿದುಹೋಯಿತು.

ನನಗೆ ಈ ಮೈಸೂರು ಪಾಕೆಂದರೆ ಪಂಚಪ್ರಾಣ. ಯಾವುದೇ ಸಿಹಿ ಅಂಗಡಿಗೆ ಹೋದರೂ ನನ್ನ ಕಣ್ಣು ಹುಡುಕುವುದು ಈ ಮೈಸೂರು ಪಾಕನ್ನೇ! ತಗೊಳ್ಳೋದೇ ತುಪ್ಪದ ಒಂದೇ ವೆರೈಟಿ, ಅದೂ ಜುಜುಬಿ ಕಾಲು ಕೆಜಿಯೇ ಆದರೂ ಜೋಡಿಸಿಟ್ಟ ಎರಡು ಮೂರು ವೈರೈಟಿಗಳನ್ನು (ಕೇಸರಿ ಮೈಸೂರು ಪಾಕು, ಬಾದಾಮ್ ಮೈಸೂರು ಪಾಕು ಇತ್ಯಾದಿ) ಸ್ಯಾಂಪಲ್ ಕೇಳಿ ಚಪ್ಪರಿಸುವುದು ರೂಢಿ!

ಈ ಮೈಸೂರು ಪಾಕಿನ ಖಯಾಲಿ ಹಚ್ಚಿಕೊಂಡದ್ದಕ್ಕೂ ಒಂದು ಕಾರಣ ಇದೆ. ಹೈಸ್ಕೂಲ್ ಓದುವಾಗ ನನ್ನ ಸ್ನೇಹಿತ ಮಹೇಶನದ್ದು ಒಂದು ಮಿಠಾಯಿ ಅಂಗಡಿಯಿತ್ತು. ನಾನು ಅಲ್ಲಿಗೆ ಹೋದಾಗಲೆಲ್ಲಾ ಮೈಸೂರು ಪಾಕು ದೊಡ್ಡ ಕಡಾಯಿಯಲ್ಲಿ ಪಾಕ ರೂಪದಲ್ಲಿ ಲಾಸ್ಯವಾಡುತ್ತಾ ನನ್ನ ಮನಸೂರೆಗೊಳ್ಳುತ್ತಿತ್ತು. ಹಾಗೇ ಘಮ್ಮೆನ್ನುವ ತುಪ್ಪದ ಪರಿಮಳವೂ ನನ್ನ ನಾಸಿಕದ ಮೂಲಕ ನರ ನಾಡಿಗಳಲ್ಲೆಲ್ಲಾ ಸಂಚರಿಸಿ ನರಮಂಡಲವನ್ನೇ ಆವರಿಸಿಕೊಂಡು ಈ ಪರಿಮಳಕ್ಕೇ ಸೂಕ್ಷ್ಮಸಂವೇದಿಯಾಗಿ ಗಾವುದ ದೂರದಲ್ಲಿ ಪಾಕ ಕುದಿದರೂ ನನ್ನ ಮೂಗು ಅರಳುತ್ತಿತ್ತು. ಹಾಗೇ ಈ ಸಿಹಿಸ್ವಾದವೂ ನಾಲಿಗೆಯಿಂದಿಳಿದು ರಕ್ತದ ಕಣಕಣಗಳಲ್ಲೂ ಡಿಎನ್ಎ, ಆರ್ ಎನ್ಎ ತಂತುಗಳಂತೆ ಅವಿತುಹೋಗಿತ್ತು. ಹಾಗಾಗಿ ಯಾರೇ ಮೈಸೂರು ಪಾಕು ಮಾಡುತ್ತಾರೆಂದರೂ ನಾನು ಅಲ್ಲಿ ತಲೆ ತೂರಿಸುತ್ತಿದ್ದೆ.

ಬ್ಯಾಗೆಲ್ಲಾ ತುಪ್ಪ!

ನಮ್ಮ ಸೋದರತ್ತೆ ಒಬ್ಬರು ಯಾವಾಗಲೂ ಈ ಪಾಕ ಕೆಡಿಸಿ ತಟ್ಟೆಗೆ ಹಾಕಿ ಸಲೀಸಾಗಿ ಪೀಸು ಕುಯ್ಯಲಾಗದೆ ಒದ್ದಾಡುತ್ತಿದ್ದರು. ತಟ್ಟೆಯಿಂದ ಮೇಲೆ ಏಳದೆ ಅದು ಮೈ ಚೂರು ಪಾಕಾಗುತ್ತಿತ್ತು. ಕೆಲವೊಮ್ಮೆ ಮೈಸೂರುಪಾಕು ತರುವಾಗ ಪಾಕಿನ ಪ್ಯಾಕಲ್ಲೇ ತುಪ್ಪ ಸೋರಿ ಇಡೀ ಬ್ಯಾಗೇ ತುಪ್ಪಮಯವಾದದ್ದಿದೆ.

ಹಳದಿ-ಕೆಂಪು ಮಿಶ್ರಿತ ಸನ್‌ಸೆಟ್ ಎಲ್ಲೋ ಆಗಿ ಹೊಂಬಣ್ಣದಂತೆ ಮನಸೂರೆಗೊಂಡು ಕಂಗೊಳಿಸುವುದು ಖಂಡಿತಾ ಮೈ-ಸೂರೆ ಪಾಕ್! ಒಟ್ನಲ್ಲಿ ''ಹದಬಂದರೆ ಮೈಸೂರು ಪಾಕಾದೆ, ಹದಗೆಟ್ಟರೆ ಹಲ್ವವಾದೆ, ಕುಲಗೆಟ್ಟರೆ ಹರಿದು ಪಾಯಸವಾದೆ, ನೀನಾರಿಗಾದೆಯೋ ಎಲೆ ಜಿಲೇಬಿ'' ಎಂತಲೋ, ಎಲೆ ಲಾಡು ಅಂತಲೋ ಈ ಮೈಸೂರು ಪಾಕು ಯಾರನ್ನಾದರೂ ಹಂಗಿಸಬಹುದು. ಪ್ರತಿವಾರ ಸಂತೆಗೆ ಬಂದಾಗ ಜಿಲೇಬಿ ಮಾಮೂಲಿ, ಹಾಗೇ ಆಯುಧಪೂಜೆಗೆ ಲಾಡು, ಪಕ್ಷದಲ್ಲಿ ಎಡೆ ಇಡಲು ಮಾತ್ರ ಮೈಸೂರು ಪಾಕು ಬೇಕೇ ಬೇಕು! ಬದುಕಿದವರಿಗೆ ಇರಲಿ, ಸತ್ತವರಿಗೂ ಮೈಸೂರು ಪಾಕೆಂದರೆ ಭಾರೀ ಖಯಾಷಿ!

ಇಂತ ಮೈಸೂರು ಪಾಕಿಗೆ ಈಚೆಗೆ ಜೈಪುರ ಸಿಹಿ ವ್ಯಾಪಾರಿಗಳು ಸರ್ಜಿಕಲ್ ಸ್ಟ್ರೈಕ್ ಮಾಡಿ ಮೈಸೂರು ಪಾಕಿನ ಪಾಕು ತೆಗೆದು ಶ್ರೀ ಸೇರಿಸಿದ್ದಾರೆ. ಆಪರೇಶನ್ ಸಿಂಧೂರ ಆದ ಮೇಲೆ ಈ ಅದ್ಭುತ ಸಿಹಿಯ ಹೆಸರಿನಲ್ಲಿ ಪಾಕ್ ಇರಬಾರದೆಂದು, ಪಾಕ್‌ಗೆ ಕೊಕ್ ಕೊಟ್ಟಿದ್ದಾರೆ. ಮೈಸೂರು ಪಾಕ್ ಮೈಸೂರು ಶ್ರೀ, ಆಮ್ ಪಾಕ್ ಆಮ್ ಶ್ರೀ, ಗೊಂದ್ ಪಾಕ್ ಗೊಂದ್ ಶ್ರೀ ಹೀಗೆ ಎಲ್ಲಾ ಪಾಕಗಳೂ ಎತ್ತಂಗಡಿ ಆಗಿ ಆ ಜಾಗದಲ್ಲಿ ಶ್ರೀ ಬಂದು ಕೂರಲಿದೆ. ಆದರೆ ಪಾಕ್‌ನ ಈ ಶ್ರೀ ನಿಂದ ಏಕೆ ರಿಪ್ಲೇಸ್ ಮಾಡಿದಾರೆ ಅನ್ನೋದು ಮಾತ್ರ ಅರ್ಥ ಆಗ್ತಾ ಇಲ್ಲ. ಶ್ರೀ ಅಂದ್ರೆ ಲಕ್ಷ್ಮಿ, ಐಶ್ವರ್ಯ ಅಂತೆಲ್ಲಾ ಅರ್ಥ ಇದೆ. ಈ ಪಾಕಕ್ಕೂ ಶ್ರೀಗೂ ಎತ್ತಣಿಂದೆತ್ತ ಸಂಬಂಧ ಅಂತ ಗೊತ್ತಿಲ್ಲ. ಅದೂ ಅಲ್ದೆ ಶ್ರೀ ಅಂದ ತಕ್ಷಣ ನಮ್ ಮುಂದೆ ಬರೋದು ಸ್ವಾಮಿಗಳೇ! ಮೈಸೂರ್ ಪಾಕ್ ಕಣ್ಮುಂದೆ ಬರೋದೇ ಇಲ್ಲ.

ಮೈಸೂರು ಶ್ರೀ ಬದಲು ಕರದಂಟಿನ ತರ ಮೈಸೂರು ಅಂಟು, ಮೈಸೂರು ತುಕಡಾ, ಮೈಸೂರು ಖಂಡ, ಅಂತೇನಾದ್ರೂ ಹೆಸರು ಇಡ್ಬಹುದಿತ್ತೇನೋ? ಇದೆಲ್ಲಕ್ಕಿಂತ ಮೈಸೂರ್ ಪಾಕ್ ಹೆಸರು ಬದಲಿಸೋದೇ ಆದ್ರೆ ನನ್ನದೊಂದು ಸಕತ್ ಸಲಹೆ ಇದೆ. ಮೈಸೂರ್ ಪಾಕ್‌ಗೆ 'ಮೈಸೂರು ಸಕತು' ಅಂತ ಇಡೋದು! ಮೈಸೂರು ಸಕತು ಅಂದ್ರೆ ಏನು ಅಂತ ಹುಬ್ಬೇರಿಸಬೇಡಿ. ವೆರಿ ಸಿಂಪಲ್! ಸ ಅಂದ್ರೆ ಸಕ್ಕರೆ, ಕ ಅಂದ್ರೆ ಕಡ್ಲೆಹಿಟ್ಟು, ತು ಅಂದ್ರೆ ತುಪ್ಪ. ಈ ಮೂರರ ಸಮ್ಮಿಲನವೇ ಮೈಸೂರ್ ಸಕತು.. ಏನಂತೀರಿ? ಸಕತ್ ಅಲ್ವಾ?

ಪೋಸ್ಟ್ ಆಫೀಸು

ವಿರಾಮದ ಮುಖಪುಟದಲ್ಲಿ ಪ್ರಕಟಗೊಂಡ, 'ಇಂದು ಗೂಗಲ್ ಮಯ ನಾಳೆ ಗೂಗಲ್ ಮಾಯ?' (ವಿಕ್ರಮ್ ಜೋಷಿ) ಲೇಖನವು ನನಗೆ ಬಹಳಷ್ಟು ವಿಚಾರಗಳನ್ನು ತಿಳಿಸಿಕೊಟ್ಟಿತು. ನಾವೆಲ್ಲಾ ಇಂದು ಗೂಗಲ್‌ನ್ನು ಅವಲಂಬಿಸಿದ್ದೇವೆ; ಅದರಿಂದಾಗಿ ಅದೆಷ್ಟೋ ಮಾಹಿತಿ ತಿಳಿದಿದೆ. ಆದರೆ, ನಾಳೆ ಗೂಗಲ್ ಎನ್ನುವುದೇ ಮಾಯವಾಗುತ್ತದೆ ಎಂಬ ಪರಿಕಲ್ಪನೆಯೇ ಬೆರಗು ಹುಟ್ಟಿಸುವಂತಹದ್ದು. ಬದಲಾವಣೆ ಜಗದ ನಿಯಮ; ಆದರೆ, ಈ ಮಟ್ಟದ ದೊಡ್ಡ ಮತ್ತು ತ್ವರಿತ ಬದಲಾವಣೆ ಎಂದರೆ ಅಚ್ಚರಿ ಎನಿಸುತ್ತದೆ. ಅದೇನಿದ್ದರೂ, ಗೂಗಲ್ ಬದಲು ಎಐ ಆಧಾರಿತ ಟೂಲ್‌ಗಳು ಲಭ್ಯವಿವೆ ಎಂಬುದು ನೆಮ್ಮದಿಯ ವಿಚಾರ. ಉತ್ತಮ ಲೇಖನಕ್ಕಾಗಿ ಧನ್ಯವಾದಗಳು.

ಅವಿನಾಶ್ ಶೆಟ್ಟಿ ಹುಬ್ಬಳ್ಳಿ

ಮೇಘಾಲಯದ ಹಾಡುವ ಹಳ್ಳಿಯ ಕುರಿತಾದ ಶ್ರೀಧರ ಎಸ್.ಸಿದ್ದಾಪುರ ಅವರ ಬರಹ ಚೆನ್ನಾಗಿದೆ. ಮಕ್ಕಳಿಗೆ ಹಾಡುಗಳ ಮೂಲಕ ಹೆಸರನ್ನಿಡುತ್ತಾರೆ ಎಂಬುದನ್ನು ತಿಳಿದು ಬೆರಗಾದೆ. ಲೇಖನದ ಶೈಲಿಯೂ ಹಿಡಿಸಿತು.

ಕೆ.ಎಸ್.ಹೆಬ್ಬಾರ್, ಜೆ.ಪಿ.ನಗರ

ವಿರಾಮದಲ್ಲಿ ಪ್ರತಿ ವಾರ ಪ್ರಕಟವಾಗುವ ಆಸ್ಕ್ ದ ಎಡಿಟರ್ ಅಂಕಣವನ್ನು ಓದುವುದು ಬಹಳ ಇಷ್ಟ ಎನಿಸುತ್ತದೆ. ಓದುಗರು ಕೇಳುವ ಸಾಮಾನ್ಯ ಎನಿಸುವ ಪ್ರಶ್ನೆಗಳಿಗೆ ಚುರುಕಾದ, ಚಿನಕುರಳಿಯಂತಹ ಉತ್ತರ ನೀಡುವ ರೀತಿ ಚೆನ್ನಾಗಿದೆ.

ಸಿಂಚನಾ ಪಾಟೀಲ್ ಮೈಸೂರು

ಯುವ ಹೃದಯಗಳ ಪ್ರೀತಿ ತಲ್ಲಣ

ಪ್ರೇಮದ ಮಧುರ ಮತ್ತು ಅಮರ ಅನುಭವವನ್ನು ಕಿರುಚಿತ್ರದ ಮೂಲಕ ಹಿಡಿದಿಟ್ಟಿರುವ ಜೈಶಂಕರ್ ಅರ್ಯರ್ ಅವರ ಪ್ರಯತ್ನ ಗಮನಾರ್ಹ ಎನಿಸಿದೆ. ಇದು ಅರ್ಧ ಗಂಟೆಯ ಚಿತ್ರ; ಯುಟ್ಯೂಬ್‌ನಲ್ಲಿ ಲಭ್ಯ.

» ಗೊರೂರು ಶಿವೇಶ್

ಸಾವಿರಾರು ಪ್ರೇಮ ಕಥೆಗಳು ಕಥೆ ಕಾದಂಬರಿ ಸಿನಿಮಾಗಳ ಮೂಲಕ ಬರುತ್ತಿವೆ. ಮುಂದೆಯೂ ಬರುತ್ತವೆ. ಹೇಳದೆ ಉಳಿದ ಪ್ರೇಮಗಳು ಪ್ರೇಮಿಗಳ ಎದೆಯಲ್ಲಿ ಕವಿತೆಗಳಾಗಿ ಉಳಿದರೆ, ಯಶಸ್ವಿ ಪ್ರೇಮ ಪ್ರೇಮಿಗಳು ಒಂದಾಗಿ ಅಮರವಾಗುತ್ತದೆ. ಆದರೆ ಬಹಳಷ್ಟು ಪ್ರೇಮಗಳು ಪ್ರೇಮಿಗಳ ಪಾಲಿಗೆ ಮಧುರವಾದರೂ ಅವು ಮದುವೆಯೊಂದಿಗೆ ಕೊನೆಗೊಳ್ಳುತ್ತವೆಯೇ ಎಂಬ ಪ್ರಶ್ನೆಗೆ ಉತ್ತರ ಇಲ್ಲ. ಅವು ಪ್ರೇಮ ಕಥೆಗಳಾಗುತ್ತವೆ. ಇಂಥ ಕಥೆಗಳ ಸಂಖ್ಯೆ ಅಸಂಖ್ಯ. ಇದಕ್ಕೆ ಕಾರಣ ಹಲವಾರು. ಜಾತಿ,ಧರ್ಮ,ಪಂಗಡ, ಒಳಪಂಗಡ ಮುಂತಾಗಿ ಬೇರೆಯಾಗಲು ಹತ್ತಾರು ಕಾರಣ.

ಜೈಶಂಕರ್ ಅರ್ಯರ್ 'ಲಚ್ಚವ್ವ' (ಕಥಾಸಂಗಮ ಚಲನಚಿತ್ರದ ಏಳು ಕಿರು ಚಿತ್ರಗಳಲ್ಲಿ ಒಂದು) ಹಾಗೂ 'ಶಿವಮ್ಮ ಯರೇಹಂಚಿನಾಳ' ಚಲನಚಿತ್ರದ ಮೂಲಕ ಸದಭಿರುಚಿ ವೀಕ್ಷಕರ ಮನಗೆದ್ದವರು. ಅವರು ಮತ್ತೊಮ್ಮೆ 'ಇಟ್ ವಾಸ್ ನೈಸ್ ಮೀಟಿಂಗ್ ಯು' ಕಿರು ಚಿತ್ರದ ಮೂಲಕ ಪ್ರೇಕ್ಷಕರ ಹೃದಯಕ್ಕೆ ಲಗ್ಗೆ ಇಟ್ಟಿದ್ದಾರೆ.

ಯಾರ ಜೊತೆಗಾಗಲಿ ಸುಂದರ ಗಳಿಗೆಗಳನ್ನು ಕಳೆದಾಗ ಕಳುಹಿಸುವ ಮೆಸೇಜ್ ಚಿತ್ರದ ಶೀರ್ಷಿಕೆಯಾಗಿದೆ. ಹದಿಹರೆಯದ ಹೃದಯದ ತಲ್ಲಣಗಳನ್ನು ಇಷ್ಟು ಸುಂದರವಾಗಿ ಕಟ್ಟಿಕೊಟ್ಟ ಚಿತ್ರಗಳು ಬಹಳ ಅಪರೂಪ. ಬಿಡುಗಡೆಯಾದ ತಿಂಗಳಲ್ಲಿಯೇ ಸರಿಸುಮಾರು 5 ಲಕ್ಷದಷ್ಟು ವೀಕ್ಷಣೆ ಪಡೆದಿದೆ. ಜೈ ಶಂಕರ್ ಅರ್ಯರ್ ಮತ್ತು ಅಶ್ವಿತಾ ಹೆಗಡೆ ಅವರು ಪಾತ್ರಗಳಲ್ಲಿ ಜೀವಿಸಿದ್ದಾರೆ. ಅಶ್ವಿತಾ ಹೆಗಡೆಯಂತೂ ಇಡೀ ಚಿತ್ರವನ್ನು ಆವರಿಸಿದ್ದಾರೆ ಎಂದರೂ ತಪ್ಪಾಗಲಾರದು.

'ಮುನಿಸು, ಕನಸು ಜೊತೆಯಾಗಿರುವುದೇ ಪ್ರೇಮವೇ' ಈ ಕಿರು ಚಿತ್ರದಲ್ಲಿ ಬರುವ ಹಾಡಿನ ಸಾಲುಗಳು. ಬಹಳಷ್ಟು ಪ್ರೇಮಿಗಳು ಅನುಭವಿಸಿರುವ, ಅನುಭವಿಸುತ್ತಿರುವ ಮುಂದೆ ಅನುಭವಿಸಬಹುದಾದ ಪರಿಸ್ಥಿತಿಗಳನ್ನು ತೆರೆದಿಡುವುದರಿಂದ ಇದೊಂದು ಮೊದಲ ದೃಶ್ಯಕಾವ್ಯವಾಗಿ ಮೂಡಿದೆ.

ಇಬ್ಬರು ಪ್ರೇಮಿಗಳು ವೈಯಕ್ತಿಕ ಭಿನ್ನಾಭಿಪ್ರಾಯದ ಕಾರಣದಿಂದಾಗಿ ಬೇರ್ಪಡಲು ತೀರ್ಮಾನಿಸುತ್ತಾರೆ. ವಿದಾಯ ಹೇಳುವ ಮುನ್ನ ಇಬ್ಬರು ಒಂದು ದಿನ ಜೊತೆ ಇರಲು ನಿರ್ಧರಿಸುತ್ತಾರೆ. ಬೆಳಗಿನ ಮುಂಜಾವಿನ ಚುಮುಚುಮು ನಸುಕಿನಲ್ಲಿ ಆತ ಆಕೆಗಾಗಿ ಕಾಯುತ್ತಿರುವುದರೊಂದಿಗೆ ಚಿತ್ರ ಆರಂಭವಾಗುತ್ತದೆ. ಬಹಳಷ್ಟು ಪ್ರೇಮಕ್ಕೆ ಕಾರಣವಾಗುವ ಕಾಳಜಿ (ಕೇರಿಂಗ್) ವಿರಸಕ್ಕೆ ಕಾರಣವಾಗುವ ಸ್ವಾಮಿತ್ವ (ಪೊಸೆಸಸಿವ್‌ನೆಸ್) ಕಿರುಚಿತ್ರದ ದೃಶ್ಯಗಳಲ್ಲಿ ಹಾಸು ಹೊಕ್ಕಾಗಿದೆ.

ಈ ಚಿತ್ರದ ಪ್ರತಿ ದೃಶ್ಯವೂ ಪ್ರತ್ಯೇಕ ಕಥೆ! ಇದೊಂದು ಉತ್ತಮ, ಅಪರೂಪದ ಪ್ರಯತ್ನ. ಅರ್ಧ ಗಂಟೆಯ ಈ ಕನ್ನಡ ಕಿರು ಚಿತ್ರ ಯೂಟ್ಯೂಬ್‌ನಲ್ಲಿ ವೀಕ್ಷಣೆಗೆ ಲಭ್ಯವಿದೆ.



ಇಲ್ಲಿ ಈಜಿಪ್ತೇ ಬಂದು ಕೂತಿದೆ!

ಇದೊಂದು ಜಗತ್‌ಪ್ರಸಿದ್ಧ ಮ್ಯೂಸಿಯಂ. ಎಷ್ಟು ಪ್ರಸಿದ್ಧವೆಂದರೆ, ನ್ಯೂಯಾರ್ಕ್ ಪ್ರವಾಸವು ಇಲ್ಲಿನ ಭೇಟಿ ಇಲ್ಲದೇ ಇದ್ದರೆ ಅಪೂರ್ಣ ಎನಿಸುವಷ್ಟು!

» ಕುಸುಮ ಗೋಪಿನಾಥ್

ನ್ಯೂಯಾರ್ಕ್‌ನ ಭವ್ಯ ಕಟ್ಟಡಗಳ ನಡುವೆ ನಡೆಯುತ್ತಾ ಇದ್ದಾಗ, 'ಮ್ಯೂಸಿಯಮ್ ಮೈಲ್' ಎಂಬ ಫಲಕ ಕಂಡಿತು. ಇದೇನಿದು ಎಂಬ ಕುತೂಹಲ! ಇಲ್ಲಿನ ಫಿಫ್ತ್ ಅವೆನ್ಯೂನಲ್ಲಿ, ಒಂದು ಮೈಲು ಅಂತರದಲ್ಲಿ ಎಂಟು ಪ್ರಮುಖ ಮ್ಯೂಸಿಯಮ್‌ಗಳು ಇವೆಯಂತೆ! ನಾನಿಲ್ಲಿರುವ ತನಕ ಇವೆಲ್ಲವನ್ನೂ ನೋಡಲೇಬೇಕೆಂದು ಅಂದುಕೊಂಡು ಸಮಯ ಸಿಕ್ಕಾಗೆಲ್ಲ, ಮ್ಯೂಸಿಯಮ್‌ಗೆ ಹೋಗುವುದೆಂದು ನಿರ್ಧರಿಸಿಬಿಟ್ಟೆ.

ಮೊದಲನೆಯದಾಗಿ, ನಾವಿರುವ ಜಾಗಕ್ಕೆ ತುಂಬ ಹತ್ತಿರದಲ್ಲೆ ಇದ್ದ, 'ದ ಮೆಟ್ರೋಪಾಲಿಟನ್ ಮ್ಯೂಸಿಯಮ್ ಆಫ್ ಆರ್ಟ್ಸ್' (ದ ಮೆಟ್). ಸೆಂಟ್ರಲ್ ಪಾರ್ಕಿನ ಒಂದು ಭಾಗವೇ ಆದ ಈ ಭವ್ಯ ಕಟ್ಟಡವನ್ನು ನೋಡುವುದೇ ಆನಂದ. ಸುಮಾರು 400 ಮಿಟರ್ ಉದ್ದ, 2 ಮಿಲಿಯನ್ ಸ್ಕ್ವೇರ್ ಫುಟ್ ವಿಸ್ತಾರದ ಈ ಬೃಹತ್ ಕಟ್ಟಡದಲ್ಲಿ ಹಲವಾರು ವಿಭಾಗಗಳಿವೆ. ಅಲ್ಲದೇ, ಆಧುನಿಕ ಜಗತ್ತಿನ ಅತ್ಯಂತ ಪ್ರಸಿದ್ಧವಾದ ಫ್ಯಾಷನ್ ಶೊ 'ಮೆಟ್ ಗಾಲಾ' ನಡೆಯುವುದು ಕೂಡ ಇಲ್ಲೇ.

ದ ಮೆಟ್ ಮೂಸಿಯಮ್‌ನಲ್ಲಿ, ಸಾಮಾನ್ಯವಾಗಿ ನಿತ್ಯವೂ ಇರುವ ಪ್ರದರ್ಶನಗಳಲ್ಲದೆ, ಹಲವಾರು ವಿಶೇಷ ಕಲಾಪ್ರದರ್ಶನಗಳೂ ನಡೆಯುತ್ತಿರುತ್ತವೆ. ಸದಾಕಾಲ ಇಲ್ಲಿ ನಾವು ನೋಡಬಹುದಾದ ವಿಷಯಗಳೆಂದರೆ, 'ಪ್ರಾಚೀನ ಈಜಿಪ್ತಿನ ಇತಿಹಾಸ ಮತ್ತು ಕಲೆ', ಪ್ರಾಚೀನ ಹಾಗೂ ಮಧ್ಯಕಾಲೀನ ಯುರೋಪಿನ ಕಲೆ ಹಾಗೂ ಸಂಸ್ಕೃತಿ', ಬೈಜಾಂಟಿಯನ್ ಶಿಲ್ಪಕಲೆ ಮತ್ತು ಸಂಸ್ಕೃತಿ', ಆಫ್ರಿಕದ ಇತಿಹಾಸ, ಆಧುನಿಕ ಅಮೇರಿಕದ ಕಲೆ, ಇಸ್ಲಾಮಿಕ್ ಆರ್ಟ್,' ಏಸಿಯಾದ ಕಲೆ ಮುಂತಾದವುಗಳು.

ಭಾರತದ ಬೌದ್ಧ ಕಲೆಯ ಪ್ರದರ್ಶನ

ನಾನು ಹೋಗಿದ್ದು ಆಗಸ್ಟ್ ತಿಂಗಳಿನಲ್ಲಿ. ಆಗ, 'ಟ್ರೀ ಎಂಡ್ ಸರ್ಪೆಂಟ್: ಅರ್ಲೀ ಬುದ್ದಿಸ್ಟ್ ಆರ್ಟ್ ಇನ್ ಇಂಡಿಯಾ' ಎಂಬ, ನಮ್ಮ ದೇಶಕ್ಕೆ ಸಂಬಂಧಿಸಿದ ಪ್ರದರ್ಶನ ನಡೆಯುತ್ತಿತ್ತು. ಬೌದ್ಧ ಧರ್ಮದ ಕಾಲದಲ್ಲಿನ ಭಾರತದ ಶಿಲ್ಪಕಲೆ ಹಾಗೂ ಚಿತ್ರ ಕಲೆಗಳ ಪ್ರದರ್ಶನ ಇದು. ಆ ಕಾಲದಲ್ಲಿಯೇ ಭಾರತ, ರೋಮ್ , ಗ್ರೀಕ್, ಪರ್ಶಿಯಾಗಳ ಜೊತೆ ವ್ಯಾಪಾರ ವ್ಯವಹಾರ ಹೊಂದಿತ್ತಲ್ಲದೇ, ಅದರಿಂದಾಗಿ, ಭಾರತದ ಶಿಲ್ಪಕಲೆ ಮತ್ತು ಚಿತ್ರ ಕಲೆಗಳ ಮೇಲಾದ ಆ ಸಂಸ್ಕೃತಿಗಳ ಪ್ರಭಾವಗಳನ್ನ ಈ ಪ್ರದರ್ಶನ ತೋರಿಸುತ್ತದೆ.

ಕಲಾಕೃತಿಗಳ ಶೈಲಿಯಲ್ಲಿ ವಿದೇಶಗಳ (ಗ್ರೀಕ್ ಮತ್ತು ರೋಮನ್) ಪ್ರಭಾವ ಕಾಣುತ್ತದೆಯಾದರೂ, ಕಲೆಯ ವಸ್ತು ಮಾತ್ರ ಅಪ್ಪಟ ಭಾರತೀಯವಾಗಿತ್ತು. ಪೂರ್ವಕಾಲದ ನಮ್ಮ ನಿಸರ್ಗ ಪೂಜೆ, ನಂತರದ ಜೈನ ಹಾಗೂ ಬೌದ್ಧ ಧರ್ಮಗಳಲ್ಲಿಯೂ ವ್ಯಕ್ತವಾಗಿ, ಹೇಗೆ ಭಾರತೀಯ ಸಂಸ್ಕೃತಿಯ ಭಾಗವಾಗಿದೆಯೆಂದು ಈ ಪ್ರದರ್ಶನ ತೋರಿಸಿತು. ಬುದ್ಧನ ಕಾಲದ ವೃಕ್ಷಗಳ ಹಾಗೂ ನಾಗಗಳ ಶಿಲ್ಪಗಳು ನಿಸರ್ಗದೊಂದಿಗೆ ನಮಗಿರುವ ಅವಿನಾಭಾವ ಸಂಬಂಧವನ್ನು ಹೇಳುತ್ತಿತ್ತು. ಬುದ್ಧನ ಜ್ಞಾನೋದಯವಾದದ್ದು ಕೂಡ , ಬೋಧಿವೃಕ್ಷದ ಕೆಳಗೇ ಅಲ್ಲವೇ?

ಈಜಿಪ್ತಿನ ಇತಿಹಾಸ ಹಾಗೂ ಕಲೆ ಈ ಪ್ರದರ್ಶನ ಈ ಮ್ಯೂಸಿಯಮ್ಮಿನ ಅವಿಭಾಜ್ಯ ಅಂಗ. ಇದು ವಿಶಾಲವಾಗಿದೆ.

ಬಂದಿದ್ದು ಹೇಗೆ?

ಈಜಿಪ್ತನ ಬೃಹತ್ ದೇವಾಲಯಗಳು, ಸ್ಪಿಂಕ್ಸ್ ಗಳು, ಮಮ್ಮಿಗಳು ಮತ್ತು ಭಾರೀ ಸಂಖ್ಯೆಯ ಇನ್ನಿತರ ಶಿಲ್ಪಕಲೆಗಳು, ಇವೆಲ್ಲ ಅಮೆರಿಕಕ್ಕೆ ಬಂದದ್ದಾದರೂ ಹೇಗೆ?



ಈ ವಿಭಾಗದ ಪ್ರವೇಶದ್ವಾರದಲ್ಲಿಯೇ 'ಟೋಂಬ್ ಆಫ್ ಪೆರಿನಿಬ್' ಪರಿನಿಬ್ ಎಂಬಾತನ ಸಮಾಧಿ. ಬೃಹದಾಕಾರವಾದ ಸುಣ್ಣದಕಲ್ಲಿನಿಂದ ಮಾಡಿದ ನೆಲಮಾಳಿಗೆಯಲ್ಲಿರುವ ಕಟ್ಟಡವಿದು. ಅದರ ಪ್ರವೇಶದ್ವಾರದ ಬೃಹದಾಕಾರದ ಮುಂಬಾಗಿಲುಗಳು ನಮ್ಮನ್ನು ಕುಬ್ಜರನ್ನಾಗಿಸುತ್ತವೆ. ಅದರ ಕೆಳಗೆ ನಾಲ್ಕು ಕೋಣೆಗಳಿದ್ದು, ಒಂದು ಕೋಣೆಯಲ್ಲಿ ಪೆರಿನಿಬ್ ನ ಸುಣ್ಣದ ಕಲ್ಲಿನ ಮೂರ್ತಿ ಇದೆ. ಈಜಿಪ್ತಿನ ಗೀಝಾ ನಗರದ ದಕ್ಷಿಣ ಭಾಗದ ಸಕ್ಕಾರದಲ್ಲಿ ಅಗೆದು ತೆಗೆದ ಕಲಾಕೃತಿ ಇದು. 1907 ರಲ್ಲಿ ಉತ್ಖನನ ಮಾಡಿದರು; ಅವನ್ನು ಬಿಡಿಬಿಡಿಯಾಗಿ ಜೋಡಿಸಿಕೊಂಡು 1913 ರಲ್ಲಿ ಹಡಗಿನಲ್ಲಿ ತಂದರು.

ಇದೇ ಮಾದರಿಯಲ್ಲಿ ಇನ್ನೊಂದು ಬೃಹದಾಕಾರದ ಪೂರ್ವ ಈಜಿಪ್ತನ ಇಮಾರತನ್ನು ಪುನರ್ ನಿರ್ಮಿಸಲಾಗಿದೆ.. ಅದೇ ಟೆಂಪಲ್ ಆಫ್ ಡೆಂಡುರ. ಕ್ರಿಸ್ತ ಪೂರ್ವ ಹದಿನೈದನೇ ಶತಮಾನದಲ್ಲಿ ರೋಮ್ ಸಾಮ್ರಾಜ್ಯದ ಮೊದಲ ಸಾಮ್ರಾಟನಾದ ಆಗಸ್ಟಸ್‌ಸೀಸರನು ಈಜಿಪ್ತಿನ ದೇವತೆ ಐಸಿಸ್ ಗಾಗಿ ನಿರ್ಮಿಸಿದ ದೇವಾಲಯವಿದು.

ಈ ಬೃಹದಾಕಾರದ ಕಟ್ಟಡವು ಮೆಟ್ ಮ್ಯೂಸಿಯಮ್ಮಗೆ ಬಂದದ್ದಾದರೂ ಹೇಗೆ? ಈಜಿಪ್ತ್ ಸರಕಾರ 1963 ರಲ್ಲಿ ನೈಲ್ ನದಿಗೆ ಅಡ್ಡವಾಗಿ ಆಸ್ವಾನ್ ಡ್ಯಾಮ್ ಕಟ್ಟುವಾಗ ಈ ಪ್ರದೇಶ ಸಂಪೂರ್ಣವಾಗಿ ಮುಳುಗಿಹೋಗುವುದಿತ್ತಂತೆ, ಆಗ ಯುನೆಸ್ಕೊದವರು, 50 ದೇಶಗಳ ಧನಸಹಾಯದಿಂದ (ಅಮೆರಿಕದ 16 ಮಿಲಿಯನ್ ಡಾಲರ್ ಧನಸಹಾಯ) ಅಲ್ಲಿಂದ ಭಾರೀ ಹಡಗಿನಲ್ಲಿ ಸ್ಥಳಾಂತರಿಸಿದರಂತೆ. ಇದು ಈಗ ಮೆಟ್ ಮ್ಯೂಸಿಯಮ್‌ನಲ್ಲಿಅತಿ ದೊಡ್ಡ ಜಾಗವನ್ನು ಆಕ್ರಮಿಸಿ ಕೊಂಡ ಮಾನ್ಯುಮೆಂಟ್. ಈ ದೇವಾಲಯವನ್ನು 661 ಬ್ಲಾಕ್‌ಗಳಾಗಿ ಒಡೆದು, ಒಂದೊಂದೂ ಸುಮಾರು ಒಂದು ಟನ್ ಭಾರದ ಅಂದರೆ, 640 ಟನ್‌ಗಳ ಭಾರದ ಕಲ್ಲುಗಳನ್ನ, 661 ಕ್ರೇಟರ್‌ಗಳಲ್ಲಿ ಹಡಗಿನಲ್ಲಿ ಸಾಗಿಸಿಕೊಂಡು ಬಂದಿದ್ದು ಇತಿಹಾಸ. ಹಾಗೆ ಸಾಗಿಸಲು 1965ರಲ್ಲಿಯೇ 9.5 ಮಿಲಿಯನ್ ಡಾಲರ್ ಖರ್ಚಾಯಿತಂತೆ!

ಈಜಿಪ್ತೇ ಬಂದು ಕೂತಿದೆ!

ಈಜಿಪ್ತಿನ ಆಸವಾನ್ ಆಣೆಕಟ್ಟು ಕಟ್ಟುವ ಕಾಲಕ್ಕೆ, 1963ರ ಸುಮಾರು, ಈಜಿಪ್ತಿನ ಆರ್ಥಿಕ ಸ್ಥಿತಿ ಬಹಳ ಕುಸಿದಿತ್ತು. ಅಲ್ಲಿನ ಅವಶೇಷಗಳನ್ನು ಹೊರತೆಗೆಯಲು ಅಮೆರಿಕ ಮಾಡಿದ ಸಹಾಯಕ್ಕಾಗಿ, ಈಜಿಪ್ತ್ ದೇಶ ಹಲವು ಅವಶೇಷಗಳನ್ನು ಅಮೆರಿಕಕ್ಕೆ ಉಡುಗೊರೆಯನ್ನಾಗಿ ನೀಡಿತು. ಹಾಗಾಗಿ ಇವೆಲ್ಲ ಮೆಟ್ ಮ್ಯೂಸಿಯಮ್‌ನಲ್ಲಿ ಈಜಿಪ್ತೇ ಬಂದು ಕೂತಿದೆ ಎಂಬಂತೆ ಪ್ರದರ್ಶನಗೊಂಡಿದೆ.

ಪ್ರಸಿದ್ಧ ಸೈಪ್ರೆಸ್ ವೃಕ್ಷಗಳು!

ನಂತರ ನಾನು ನೋಡಿದ ಪ್ರದರ್ಶನವೆಂದರೆ, ಡಚ್ ಕಲಾಕಾರ ವ್ಯಾನ ಗೋಹ್ ನ (1853– 1890) ಸೈಪ್ರೆಸ್ ವೃಕ್ಷಗಳು ಎಂಬ ಪ್ರಸಿದ್ಧ ಕಲಾಕೃತಿ. ಇದನ್ನು ಸಹ ಆಗಸ್ಟ್ ತಿಂಗಳಿನಲ್ಲೇ ಪ್ರದರ್ಶಿಸಲಾಗಿತ್ತು. ಅವನ 40 ಕಲಾಕೃತಿಗಳು ಅಲ್ಲಿದ್ದವು, ಎಲ್ಲವೂ ಆತನ ಸೈಪ್ರೆಸ್ ಗುಂಗಿನವೇ. ಕೇವಲ37 ವರ್ಷಗಳಷ್ಟೇ ಬದುಕಿದ ಈ ಕಲಾವಿದನ ಚಿತ್ರಗಳು, ಅವನು ಸತ್ತ ಮೇಲಷ್ಟೇ ಪ್ರಸಿದ್ಧವಾದವು! ಮೆಡಿಟರೇನಿಯನ್ ಪ್ರದೇಶಗಳಲ್ಲಿ ಅತಿ ಎತ್ತರಕ್ಕೆ ಬೆಳೆಯುವ ಸೈಪ್ರಸ್ ಮರಗಳು ಅವನಿಗೆ ಮೋಡಿ ಮಾಡಿದಂತೆ ಅವುಗಳೇ ಪ್ರಧಾನವಾಗಿ 40 ಚಿತ್ರಗಳನ್ನ ರಚಿಸಿದ್ದಾನೆ. ಈತನ ಚಿತ್ರಗಳು, ತಮ್ಮ ಗಾಢ ವರ್ಣಗಳಿಗೆ ಹಾಗೂ ಬೋಲ್ಡ್ ಎಂಡ್ ಹೈಲೀ ಎಕ್ಸ್ಪ್ರೆಸ್ಸಿವ್ ಬ್ರಷ್‌ವರ್ಕ್‌ಗೆ ಹೆಸರಾಗಿವೆ. ಈಗ ಆಮ್‌ಸ್ಟರ್ಡ್ಯಾಮ್ ನಲ್ಲಿ ಇವನ ಹೆಸರಿನ ಮ್ಯೂಸಿಯಮ್‌ನಲ್ಲಿ ಈತನ ಎಲ್ಲಾ ಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಆತ ತನ್ನ ಪ್ರಸಿದ್ಧ ಕಲಾಕೃತಿಗಳನ್ನು ರಚಿಸಿದಾಗ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದು, ಮಾನಸಿಕ ಆಸ್ಪತ್ರೆಯಲ್ಲಿಯೇ ಚಿತ್ರಗಳನ್ನ ರಚಿಸಿದ. ಅವನ ಚಿತ್ರಗಳು ಎಷ್ಟು ಪ್ರಸಿಧ್ಧವಾಗಿವೆ ಎಂದರೆ, ಜಗತ್ತಿನ ಅತ್ಯಂತ ಬೆಲೆಬಾಳುವ ಹಲವು ಪೇಂಟಿಂಗ್‌ಗಳಲ್ಲಿ ಇವನದ್ದು ಸಿಂಹಪಾಲು. ಇಷ್ಟು ಉತ್ತಮವಾದ ಕಲಾಕೃತಿಗಳನ್ನು ಜಗತ್ತಿಗೆ ಕೊಟ್ಟ ಈತ ತನ್ನ 37ನೇ ವಯಸ್ಸಿನಲ್ಲಿ ತಲೆಗೆ ಗುಂಡುಹಾರಿಸಿಕೊಂಡು ಸತ್ತನೆಂದರೆ, ಅದನ್ನು ಏನೆಂದು ಕರೆಯುವುದು?

ನೀವು ನ್ಯೂಯಾರ್ಕ್‌ಗೆ ಭೇಟಿ ಕೊಟ್ಟರೆ, ಮೆಟ್ ಮ್ಯೂಸಿಯಂ ನೋಡಲು ಮರೆಯಬೇಡಿ!



ಮರಗಳು ಸಾರ್ ಮರಗಳು!

ಕವಿ ಕಣ

» ಡಾ. ವಿಶ್ವನಾಥ ಎನ್ ನೇರಳಕಟ್ಟೆ

ಬೆಳೆಯುವುದೆಂದರೆ
ನನ್ನ ಒಡನಾಡಿಗಳನ್ನೂ ಬೆಳೆಸುತ್ತಾ
ಜೊತೆಗೆ ನಾನೂ ಹಂತಹಂತವಾಗಿ
ಬೆಳೆಯುವುದು ಎಂದುಕೊಂಡಿದ್ದೆ
ಬೆಳೆಸಿದಂತೆ ನಟಿಸುತ್ತಾ
ಒಳಗೊಳಗೇ ಬೇರುಗಳ ಕತ್ತರಿಸುವ
ಕಪಟ ನಾಟಕದ ಅರಿವೇ ನನಗಿರಲಿಲ್ಲ||

ಸಸಿಯಿಂದ ಗಿಡವಾಗಿ ಗಿಡದಿಂದ ಮರವಾಗಿ
ಬೆಳೆದುನಿಲ್ಲುವ ನಿಲುವು ನನ್ನದು
ನಿನ್ನೆ ಒಂದಡಿ ಇದ್ದ ಎತ್ತರ
ಇಂದು ಹನ್ನೆರಡಾಗುವ ಪರಿ
ನನ್ನಿಂದಲಂತೂ ಅತೀತ||

ಎದೆಯ ಮೇಲೊರಗಿದ
ಲತೆಗಳನ್ನು ಅಕ್ಕರೆಯಿಂದ ತಬ್ಬುತ್ತಾ
ನಾನು ಉಂಡದ್ದರಲ್ಲಿ ಒಂದಿಷ್ಟನ್ನು ಉಣಿಸುತ್ತಾ
ಜೊತೆಜೊತೆಗೇ ಬೆಳೆಯುವ ಬಗೆ
ಬಲುಮೆಚ್ಚುಗೆ ನನಗೆ

ಕರುಳಬಳ್ಳಿಯ ಬಂಧ
ಕಳಚಿಕೊಂಡಂತೆಯೇ
ಬಳ್ಳಿಬಳ್ಳಿಗಳನ್ನೆಲ್ಲಾ ತರಿದುಹಾಕಿ
ಬೆಳವಣಿಗೆ ಕಾಣುವುದಂತೂ
ನನ್ನ ಪಾಲಿಗೆ ಸಂಪೂರ್ಣ ಅಪರಿಚಿತ||

ಎಲ್ಲೆಲ್ಲಿಂದಲೋ ಬಂದ
ಕನಸುಗಣ್ಣಿನ ಹಕ್ಕಿಗಳು
ಚಂದನೆಯ ಗೂಡುಕಟ್ಟಿ
ಆಸೆ- ಆಕಾಂಕ್ಷೆಗಳ
ಮೊಟ್ಟೆಗಳನ್ನು ಅದರೊಳಗಿಟ್ಟು

ಭವಿಷ್ಯದ ಭರವಸೆಯ ಕಾವು ಕೊಟ್ಟಾಗ
ತಾಯ್ತನದ ಕಕ್ಕುಲಾತಿಯಲ್ಲಿ
ಅರಳಿನಿಲ್ಲುವ ಪಿಳಿಪಿಳಿ ಕಣ್ಣಿನ
ಮರಿಗಳನ್ನು ಕಂಡು
ನಾನೂ ಸಂತಸಪಟ್ಟಿದ್ದೆ

ಧನ್ಯವಾಯಿತು ನನ್ನ ಬದುಕು
ಇದುವಲ್ಲವೇ ನಿಜವಾದ ಬೆಳವಣಿಗೆ
ಎಂದು ಹೆಮ್ಮೆಪಟ್ಟಿದ್ದೆ
ಆಶ್ರಯ ಕೊಟ್ಟಂತೆ ನಟಿಸಿ
ಗೂಡು ಮೊಟ್ಟೆ ಮರಿಗಳನ್ನು

ಇನ್ನಿಲ್ಲವಾಗಿಸುವ ಮರಗಳೂ ಇದ್ದಾವೆ
ಆ ಮರಗಳಿಗೂ ಜನರು ಕೈ ಮುಗಿಯುತ್ತಾರೆ
ಎಂದು ತಿಳಿದಮೇಲೆ ಹುಟ್ಟಿದ್ದು
ಅಸಹ್ಯ ಭಾವ||

ಬೆಳೆಯುವುದೆಂದರೆ
ಬಿಸಿಲಿನ ಬೇಗೆಯನ್ನು
ನಾನು ಪಡೆದು ನೆರಳನ್ನು ಇತರರೆಡೆಗೆ
ಚಾಚುವುದು ಎಂದುಕೊಂಡಿದ್ದೆ
ಬೆಳಕು ನೀರು ಗೊಬ್ಬರ ಮಣ್ಣಿನ ಸಾರ

ಎಲ್ಲವನ್ನೂ ಹೆಚ್ಚೆಚ್ಚು
ಬಾಚುವುದು ಎನ್ನುವುದು ಗೊತ್ತಿರಲಿಲ್ಲ ಗೊತ್ತಿರಲೇ ಇಲ್ಲ

ಈ ಹಿಂದೆ ನಮ್ಮ ದೇಶವು ಪ್ರೋಕ್ರಾನ್ ಅಣು ಪರೀಕ್ಷೆ ಮಾಡಿದಾಗ, ಅಮೆರಿಕವು ಇಂದಿಗಿಂತಲೂ ಅಧಿಕ ಆರ್ಥಿಕ ನಿರ್ಬಂಧಗಳನ್ನು ಹೇರಿತ್ತು. ಅಟಲ್ ಬಿಹಾರಿ ವಾಜಪೇಯಿಯವರು ಅದನ್ನು ದಿಟ್ಟವಾಗಿ ಎದುರಿಸಿದ್ದರು. ಈಗ ಭಾರತದ ಮೇಲೆ ಶೇ.25 ಸುಂಕ ಹೇರಲಾಗಿದೆ; ಇದರಿಂದ ಕಿರು ಅವಧಿಯಲ್ಲಿ ಸ್ವಲ್ಪ ಬಿಕ್ಕಟ್ಟು ಎದುರಾಗಬಹುದು. ಜಾಣ್ಮೆಯಿಂದ ಎದುರಿಸುವುದು ಮುಖ್ಯ ಎನಿಸಿದೆ.

» ನಾರಾಯಣ ಯಾಜಿ

ಭಾರತದ ಮೇಲೇಕೆ ಅಧಿಕ ಸುಂಕ?

ಕೊನೆಗೂ, ಅಮೆರಿಕವು ಭಾರತದ ವಿರುದ್ಧ ಸುಂಕದ ಬಾಂಬನ್ನು ಹಾಕಿಯೇ ಬಿಟ್ಟಿದೆ. ಇನ್ನು ಮುಂದೆ ಭಾರತವು ಯಾವುದೇ ವಸ್ತುವನ್ನು ಅಮೆರಿಕಕ್ಕೆ ರಫ್ತು ಮಾಡಿದರೆ, ಅದರ ಮೇಲೆ 25% ಸುಂಕ ವಿಧಿಸಲಾಗುವುದು ಮತ್ತು ರಶಿಯಾದಿಂದ ತೈಲ ಮತ್ತು ಮಿಲಿಟರಿ ಉಪರಕರಣಗಳ ಆಮದು ಆಮದು ನಿಲ್ಲಿಸದಿದ್ದರೆ ಇನ್ನಷ್ಟು ದಂಡದ ಎಚ್ಚರಿಕೆ! ಅಮೆರಿಕದ ಸೆನೆಟರ್ ಲಿಂಡ್ಸೆ ಗ್ರಹಾಂ ಇನ್ನಷ್ಟು ಮುಂದೆ ಹೋಗಿ, ರಶಿಯಾದಿಂದ ತೈಲದ ಆಮದನ್ನು ನಿಲ್ಲಿಸದಿದ್ದರೆ ಚೈನಾ, ಭಾರತ ಮತ್ತು ಬ್ರೆಜಿಲ್ ದೇಶಗಳ ಅರ್ಥವ್ಯವಸ್ಥೆಯನ್ನು ಅಪ್ಪಚ್ಚಿ ಮಾಡಿಬಿಡುವೆನೆಂದು ಗುಟುರಾಯಿಸಿದ್ದಾನೆ.

ಜಗತ್ತಿನ ದೊಡ್ಡ ಸಾಲಗಾರ ಅಮೆರಿಕವನ್ನು ಮತ್ತೆ ಮೊದಲಿನ ಮಹಾನ್ (ಮೆಗಾ) ದೇಶವನ್ನಾಗಿಸಬೇಕೆನ್ನುವ ಕನಸು ಅವರ ನಾಯಕರಲ್ಲಿದ್ದರೆ ಅದನ್ನು ಆಕ್ಷೇಪಿಸಲು ಬರುವುದಿಲ್ಲ. ಆದರೆ ಈ ನಿರ್ಧಾರದ ಹಿಂದೆ ಇರುವುದು 'ಮೆಗಾ' ಅಮೆರಿಕವನ್ನು ಮಹಾನ್ ದೇಶವನ್ನಾಗಿಸುವದಕ್ಕಿಂತಲೂ, ಉಕ್ರೇನ್ ಯುದ್ಧವನ್ನು ನಿಲ್ಲಿಸಿ ನೋಬಲ್ ಪ್ರಶಸ್ತಿಯ ಮೇಲೆ ಇನ್ನಷ್ಟು ಹಕ್ಕನ್ನು ಚಲಾಯಿಸುವ ಮನೋಭಾವ ಎದ್ದು ಕಾಣುತ್ತದೆ.

ಭಾರತ ಮತ್ತು ಅಮೆರಿಕಗಳ ನಡುವಿನ ವ್ಯಾಪರದ ಪಾಲುದಾರಿಕೆಯನ್ನು ಒಮ್ಮೆ ಗಮನಿಸೋಣ. ಅಮೆರಿಕದ ಒಟ್ಟೂ ಆಮದಿನಲ್ಲಿ ಸಿಂಹಪಾಲು ಯುರೋಪಿಯನ್ ಯೂನಿಯನ್ ಮತ್ತು ಚೈನಾದಿಂದ ಕ್ರಮವಾಗಿ 605.76 ಮತ್ತು 438.95 ಬಿಲಿಯನ್ ಡಾಲರಗಳಷ್ಟಾದರೆ, ಭಾರತದಿಂದ ಕೇವಲ 129.02 ಬಿಲಿಯನ್ ಡಾಲರಗಳಷ್ಟಾಗಿದೆ. ಅದರಲ್ಲಿ ರಫ್ತು 87.4 ಬಿಲಿಯ ಡಾಲರ್ ಆದರೆ ಆಮದು 41.08 ಡಾಲರಗಳು. ಐಟಿ ವಲಯದ 57 ಬಿಲಿಯ ಡಾಲರ್ ಯಾವುದೇ ಕರ ನಿಬಂಧನೆಗಳಿಗೆ ಒಳಪಟ್ಟಿಲ್ಲ. (ಭಾರತದ ಐಟಿ ಮತ್ತು ಸೇವಾ ವಲಯದ ಜಾಗತಿಕ ಆದಾಯ 200 ಬಿಲಿಯ ಡಾಲರಗಳಷ್ಟಿದೆ).

ಯಾವುದು ಅಧಿಕ ರಫ್ತು?

ಭಾರತ ರಫ್ತುಮಾಡುವುದು ಮುಖ್ಯವಾಗಿ ಫಾರ್ಮಾ ಮತ್ತು ಸಿದ್ಧ ಉಡುಪು, ವಜ್ರಾಭರಣಗಳು, ಸ್ಟೀಲ್ ಇನ್ನಿತರ ವಲಯಗಳಿಂದ ಬರುತ್ತವೆ. ಅಮೆರಿಕದಿಂದ ನಾವು ಆಮದು ಮಾಡುವುದು ಮುಖ್ಯವಾಗಿ ವೈಮಾನಿಕ ಕ್ಷೇತ್ರ, ಔಷಧ ತಯಾರಿಸಲು ಬೇಕಾದ ಉಪಕರಣಗಳು, ರಕ್ಷಣಾ ಸಲಕರಣೆಗಳು, ಎಂಜಿನಿಯರಿಂಗ್ ಮಶಿನರಿ ಮತ್ತು ಪೆಟ್ರೋಲಿಯಂ ಉತ್ಪನ್ನಗಳಾಗಿವೆ. ಅದೇ ಚೈನಾದ ವ್ಯವಹಾರ 438.95 ಬಿಲಿಯನ್ ಡಾಲರಿನಷ್ಟಾಗಿದ್ದು, ಒಟ್ಟೂ 295.40 ಬಿಲಿಯನ್ ಕೊರತೆ ಡಾಲರ್ ಅನುಭವಿಸುತ್ತಿವೆ. ವಾರ್ಷಿಕವಾಗಿ ಅಮೆರಿಕದ 4083.3 ಬಿಲಿಯನ್ ಡಾಲರಿನ ಆಮದಿಗೆ ಹೋಲಿಸಿದರೆ ಭಾರತದ ಪಾಲು 2.1%ದಷ್ಟಿದೆ (ಐಟಿ ವಲಯವನ್ನು ಬಿಟ್ಟು).

ಪರಿಣಾಮ ಕಡಿಮೆ!

ಹಾಗೆ ನೋಡಿದರೆ, ವಾಸ್ತವವಾಗಿ ಭಾರತದ ವ್ಯವಹಾರ ಇನ್ನೂ ಅಂಬೆಗಾಲಿನಲ್ಲಿದೆ. ಹಾಗಾಗಿ ಭಾರತದ ಮೇಲಿನ ಸುಂಕದಿಂದ, ಅಮೆರಿಕದ ಆರ್ಥಿಕ ವ್ಯವಸ್ಥೆಯ ಮೇಲೆ ಆಗುವ ದೀರ್ಘಕಾಲೀನ ಪರಿಣಾಮ ನಗಣ್ಯ.

ಆದರೆ ಅಮೆರಿಕ ಭಾರತದ ದೊಡ್ಡ ವ್ಯಾಪಾರ ಪಾಲುದಾರ. ದೇಶದ 824.9 ಬಿಲಿಯನ್ ಡಾಲರ್‌ನಲ್ಲಿ ಅಮೆರಿಕ ಈಗ ಭಾರತದ ಒಟ್ಟಾರೆಯಾದ ವ್ಯಾಪಾರದಲ್ಲಿ ಅಮೆರಿಕದ ಪಾಲು ಐಟಿ ವಲಯಯವನ್ನು ಹಿಡಿದರೆ ಶೇ 14.6 ರಷ್ಟಿದೆ. ಇದು ಭಾರತದ ಪಾಲಿಗೆ ಬಹುದೊಡ್ಡದು. ಹಾಗಾಗಿ ಭಾರತ ತನ್ನ ಆರ್ಥಿಕತೆಯ ಮೇಲಾಗುವ ಪರಿಣಾಮವನ್ನು ಮರೆಯುವಂತಿಲ್ಲ. ಭಾರತ ಅಮೆರಿಕಕ್ಕೆ ರಫ್ತುಮಾಡುವ ವಸ್ತುಗಳಲ್ಲಿ ಹೆಚ್ಚಿನವು ಸಣ್ಣ ಮತ್ತು ಮದ್ಯಮ ಕೈಗಾರಿಕಾ ವಲಯದ ಸಿದ್ಧ ಉಡುಪು, ಜನರಿಕ್ ಔಷಧ, ಆಭರಣ, ಅಟೋಮೊಬೈಲ್ ಬಿಡಿಭಾಗಗಳು. ಸಮಾಧಾನದ ಸಂಗತಿಯೆಂದರೆ ಐಟಿ ವಲಯ ಸೇವಾ ವ್ಯಾಪ್ತಿಯಲ್ಲಿ ಬರುವುದರಿಂದ ಸುಂಕದ ವ್ಯಾಪ್ತಿಗೆ ಬರುವುದಿಲ್ಲ.

ಪರಿಣಾಮಗಳು

ಅಮೆರಿಕದ ನಿತ್ಯಬಳಕೆಯ ವಸ್ತುಗಳಲ್ಲಿ ಭಾರತವು ಪ್ರಮುಖ ವ್ಯಾಪಾರ ಪಾಲುದಾರರಾಗಿದ್ದು, ಎಲೆಕ್ಟ್ರಾನಿಕ್ಸ್, ವಾಹನಗಳು, ಕಬ್ಬಿಣ, ರಾಸಾಯನಿಕಗಳು, ಚಿನ್ನ, ಮತ್ತು ಸಿದ್ಧ ಉಡುಪುಗಳು ತುಟ್ಟಿಯಾಗಲಿವೆ. ಫಾರ್ಮಾ ವಲಯವನ್ನು ಗಮನಿಸುವುದಾದರೆ ಅಲ್ಲಿನ ಒಟ್ಟೂ ಬೇಡಿಕೆಯ 40%ಷ್ಟು ಭಾರತವನ್ನೇ ಅವಲಂಬಿಸಿದೆ. ಈಗಾಗಲೇ ಯೇಲ್ ವಿಶ್ವವಿದ್ಯಾಲಯ, ತನ್ನ ವರದಿಯಲ್ಲಿ ಟ್ರಂಪ್ ಕೈಗೊಂಡ ಈ ಕ್ರಮದಿಂದಾಗಿ ಅಮೆರಿಕದ ನಿತ್ಯ ಬಳಕೆಯ ವಸ್ತುಗಳು ತುಟ್ಟಿಯಾಗಿ, ಕೇವಲ ಆರೋಗ್ಯ ವೆಚ್ಚವೊಂದರಲ್ಲಿಯೇ ಅಲ್ಲಿನ ಬಡ ಮದ್ಯಮವರ್ಗ ವಾರ್ಷಿಕವಾಗಿ ಸುಮಾರು 2400 ಡಾಲರ್ ಹೆಚ್ಚಿನ ಹೊರೆಯನ್ನು ಮತ್ತು ಮೇಲ್ ಮದ್ಯಮ ವರ್ಗದ ವೆಚ್ಚ 5000 ಡಾಲರಿನಷ್ಟು ಆಗಬಹುದು, ಇದು ಅಮೆರಿಕದ ಅರ್ಥವ್ಯವಸ್ಥೆಗೆ ತಿರುಗುಬಾಣವಾಗಿ ಪರಿಣಮಿಸಬಹುದೆಂದೂ ಎಚ್ಚರಿಕೆಯನ್ನು ನೀಡಿರುವುದು ಭಾರತಕ್ಕಿರುವ ಬೆಳ್ಳಿರೇಖೆ. ಸಿದ್ಧ ಉಡುಪುಗಳ ತುಟಾಗ್ರತೆ ಶೇ 19ರಷ್ಟು ಹೆಚ್ಚಾಗಿ ಬದುಕನ್ನು ಇನ್ನಷ್ಟು ಹೈರಾಣಾಗಿಸಬಹುದು.

ಭಾರತದ ಮುಂದಿರುವ ಸವಾಲುಗಳು

ಪ್ರೊ ಆ್ಯಕ್ಟಿವ್ ಎನ್ನುವುದು ಯಾವತ್ತಿಗೂ ವ್ಯವಹಾರದಲ್ಲಿನ ಜಾಣ ನಡೆ. ಕೋವಿಡೋತ್ತರ ಮತ್ತು ಟ್ರಂಪ್‌ನ ಎರಡನೆಯ ಅವಧಿಯಲ್ಲಿ ನಡೆಯುತ್ತಿರುವ ವಿದ್ಯಮಾನವನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಭಾರತ ವ್ಯಾಪಾರಕ್ಕಾಗಿ ವ್ಯೂಹಾತ್ಮಕ ಪಾಲುದಾರಿಕೆಯನ್ನು ಯುರೋಪ್, ಆಫ್ರಿಕಾ ಮತ್ತು ಬ್ರಿಟನ್‌ಗಳತ್ತ ಲಕ್ಷ್ಯ ಹರಿಸಿದೆ. ಇದರ ಭಾಗವಾಗಿ ಸಂಪೂರ್ಣ ಆರ್ಥಿಕ ಸಹಭಾಗಿತ್ವ ಒಪ್ಪಂದಗಳು, ಮತ್ತು ಮುಕ್ತ ವ್ಯಾಪಾರ ಒಪ್ಪಂದಗಳು ಪರಿಣಾಮಕಾರಿ ಕಾರ್ಯವನ್ನು ನಿರ್ವಹಿಸಲಿವೆ.

ಜಿಡಿಪಿ ಕುಸಿತ?

ಅಮೆರಿಕ ವಿಧಿಸಿದ ಶೇ.25 ಸುಂಕದಿಂದಾಗಿ, ಭಾರತವು ಕಿರು ಅವಧಿಗೆ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ನಮ್ಮ ಜಿಡಿಪಿ ಬೆಳವಣಿಗೆ ಶೇ 6.8 ರಿಂದ ಶೇ 6 ಕ್ಕೆ ಇಳಿಯಬಹುದೆಂದು ಅಂದಾಜಿಸಲಾಗಿದೆ. ಫಾರ್ಮಾ ವಲಯಕ್ಕೆ ಪ್ರತಿಸ್ಪರ್ಧಿಯಾಗಿ ನಮ್ಮಷ್ಟು ಕಡಿಮೆ ದರದಲ್ಲಿ ಉತ್ಪಾದನೆ ಮಾಡುವ ಬೇರೆ ಯಾವ ದೇಶಗಳೂ ಅಮೆರಿಕಕ್ಕೆ ಇಲ್ಲ. ಇನ್ನು ಸಿದ್ಧ ಉಡುಪುಗಳಲ್ಲಿ ಬಾಂಗ್ಲಾ, ವಿಯಟ್ನಾಂ ಮತ್ತು ಶ್ರೀಲಂಕಾ ಅಗ್ಗದ ದೇಶಗಳಾಗಿರುವುದರಿಂದ, ಈ ವಲಯದಲ್ಲಿ ನಮ್ಮ ದೇಶವು ಸಂಕಷ್ಟವನ್ನು ಎದುರಿಸಬೇಕಾಗಬಹುದು.

ಯುರೋಪಿಯನ್ ಯೂನಿಯನ್

2025 ಕೊನೆಯ ವೇಳೆಗೆ ಅಂತಿಮಗೊಳ್ಳುವ ನಿರೀಕ್ಷೆಯಲ್ಲಿರುವ ಭಾರತ ಯುರೋಪ್ ಮುಕ್ತ ವ್ಯಾಪಾರ ಒಪ್ಪಂದವು ವಸ್ತ್ರ, ಚರ್ಮೋತ್ಪನ್ನ, ಯಂತ್ರೋಪಕರಣ ಮತ್ತು ಔಷಧಿಗಳ ಮೇಲಿನ ಸುಂಕವನ್ನು ಗಣನೀಯವಾಗಿ ಕಡಿಮೆಮಾಡಲಿದೆ. ಈಗಾಗಲೇ ಯುರೋಪ್ ಭಾರತಕ್ಕೆ ಮೂರನೇ ಅತಿ ದೊಡ್ಡ ವ್ಯಾಪಾರ ಪಾಲುದಾರ.

ಬ್ರಿಟನ್ ಭಾರತ ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಬಂದಿದೆ. ಚರ್ಚೆಗಳು ಅಂತಿಮ ಹಂತದಲ್ಲಿವೆ.

ನಾವೇ ಒಂದು ವಿಶ್ವ!

ತಿಯಾನ್ಮೆನ್ ಚೌಕದ ದುರಂತದ ನಂತರ ಪಾಶ್ಚಾತ್ಯ ರಾಷ್ಟ್ರಗಳು ಚೈನಾದ ಮೇಲೆ ನಿರ್ಬಂಧ ಹೇರಿದಾಗ ಅಧ್ಯಕ್ಷ ಡೆಂಗ್ 'ನಾವು ನೂರಾ ಇಪ್ಪತ್ತು ಕೋಟಿ ಜನಸಂಖ್ಯೆಯುಳ್ಳ ದೇಶ, ನಾವೇ ಒಂದು ವಿಶ್ವ' ಎಂದಿದ್ದ. ಭಾರತವೂ ಅಷ್ಟೇ, ನಮ್ಮ ಜನಸಂಖ್ಯೆ ಪ್ರಪಂಚದ ಪ್ರಮುಖ ಮಾರುಕಟ್ಟೆಗಳಲ್ಲೊಂದಾಗಿದೆ. ವಿಜ್ಞಾನ, ರಕ್ಷಣೆ, ಔದ್ಯಮಿಕ ಕ್ಷೇತ್ರದಲ್ಲಿ ವೇಗವಾಗಿ ಬೆಳೆಯುತ್ತಿರುವುದು ಪಾಶ್ಚಾತ್ಯ ಜಗತ್ತಿನ ಕಿಸಿರಿಗೆ ಕಾರಣ. ಯಾವತ್ತಿದ್ದರೂ ರಶಿಯಾ ನಮ್ಮ ವ್ಯೂಹಾತ್ಮಕ ಪಾಲುದರ ಎನ್ನುವುದನ್ನು ಮರೆಯಕೂಡದು.

ಭಾರತ ಚೀನಾ ವ್ಯಾಪಾರ 136 ಬಿಲಿಯನ್ ತಲುಪಿದೆ. ಭಾರತದ ಔಷಧೋತ್ಪಾದನೆ ಚೀನಾದ ಕಚ್ಚಾವಸ್ತುಗಳ ಮೇಲೆ ಅವಲಂಬಿಸಿದೆ. ಅದೇ ರೀತಿ ರಶಿಯಾ ಮತ್ತು ಭಾರತದ ವ್ಯಾಪಾರ 65 ಬಿಲಿಯನ್ ದಾಟಿದೆ. ಎರಡು ದೇಶಗಳ ನಡುವೆ ರೂಪಾಯಿಯಲ್ಲಿ ವಿನಿಮಯವಾಗುತ್ತಿರುವುದರಿಂದ ಅದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಬಹುದು.

ಈ ಹಿಂದೆ ಪ್ರೋಕ್ರಾನ್ ಅಣು ಪರೀಕ್ಷೆಯ ನಂತರ ಇದಕ್ಕಿಂತಲೂ ಹೆಚ್ಚಿನ ಆರ್ಥಿಕ ನಿರ್ಬಂಧಗಳನ್ನು ಅಮೆರಿಕ ಹೇರಿತ್ತು. ಅಟಲ್ ಬಿಹಾರಿ ವಾಜಪೇಯಿ ಅವರು ಅದನ್ನು ದಿಟ್ಟವಾಗಿ ಎದುರಿಸಿದ್ದರು. ಮುಂಬಾಗಿಲು ಹಾಕಿ ಹಿಂಬಾಗಿಲಲ್ಲಿ ವ್ಯವಹರಿಸುವುದು ಅಮೆರಿಕಕ್ಕೆ ಹೊಸತಲ್ಲ. ವಾಣಿಜ್ಯವೆಂದರೆ ಸಂತೆಯಲ್ಲಿ ಅಂಗಡಿಯನ್ನು ತೆರೆದಂತೆ. ಅನೇಕರ ಅಂಗಡಿ ಇರುತ್ತದೆ. ಮಾರ್ಕೆಟಿಂಗ್ ತಂತ್ರ ವ್ಯವಹಾರವನ್ನು ಹೆಚ್ಚಿಸುತ್ತದೆ. ಚೀನಾವನ್ನು ನಂಬುವ ಸ್ಥಿತಿಯಲ್ಲಿಲ್ಲ. ಆದರೂ ವ್ಯಾಪಾರದಲ್ಲಿ ಲಾಭದ ವಿಷಯ ಬಂದಾಗ ಶತ್ರು ಮಿತ್ರನಾಗಬಹುದು.

ನೀವು ಎಷ್ಟೇ ಚೆನ್ನಾಗಿದ್ದರೂ ಕೆಲವರು ದೋಷ ಹುಡುಕುತ್ತಾರೆ!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಕ್ಯಾತ್ಸಂದ್ರ ಸುರೇಶ, ಬೆಂಗಳೂರು

- **ಭಟ್ರೇ, ನನ್ನ ಬಗ್ಗೆ ಯಾರಾದರೂ ಒಂದು ನೆಗೆಟಿವ್ ಕಾಮೆಂಟ್ ಹಾಕಿದರೆ ನನಗೆ ನಿದ್ರೆ ಬರುವುದಿಲ್ಲ. ಇಡೀ ದಿನ ಯೋಚಿಸುತ್ತಾ ಇರುತ್ತೇನೆ. ಇದರಿಂದ ಬಹಳ ಡಿಸ್ಟರ್ಬ್ ಆಗ್ತೇನೆ. ನಿಮ್ಮ ಬಗ್ಗೆ ಕೆಲವರು ನೆಗೆಟಿವ್ ಕಾಮೆಂಟ್ ಹಾಕಿದರೂ ನೀವು ಡಿಲೀಟ್ ಮಾಡುವುದಿಲ್ಲ. ನೀವು ಈ ಸಮಸ್ಯೆಯನ್ನು ಹೇಗೆ ನಿಭಾಯಿಸುತ್ತೀರಿ? ನನಗೆ ತಿಳಿದುಕೊಳ್ಳುವ ಕುತೂಹಲವಿದೆ. ತಿಳಿಸಿ.**

– ಸುರೇಶ ಅವರೇ, ನಿಮ್ಮ ಪ್ರಶ್ನೆಯು ತುಂಬಾ ಸೂಕ್ಷ್ಮ ಮತ್ತು ಮುಖ್ಯವಾಗಿದೆ. ನೀವು ಹೇಳಿದಂತೆ, ಕೆಲವೊಮ್ಮೆ ಸಣ್ಣ ನಕಾರಾತ್ಮಕ ಕಾಮೆಂಟ್‌ಗಳು ಕೂಡ ನಮ್ಮ ಮನಸ್ಸನ್ನು ಬಹಳ ಘಾಸಿಗೊಳಿಸುತ್ತವೆ. ನೀವು ಈ ಸಮಸ್ಯೆಯಿಂದ ಹೊರಬರಲು ಪ್ರಯತ್ನಿಸುತ್ತಿರುವುದು ಒಳ್ಳೆಯ ವಿಷಯ.

ನನ್ನ ವಿಷಯಕ್ಕೆ ಬರುವುದಾದರೆ, ನನಗೆ ನಾನು ಯಾರು ಎಂಬುದು ಚೆನ್ನಾಗಿ ಗೊತ್ತು. ಹೀಗಾಗಿ ನನ್ನ ಬಗ್ಗೆ ಬೇರೆಯವರ ಅಭಿಪ್ರಾಯ ನನ್ನ ಮೇಲೆ ಹೆಚ್ಚು ಪ್ರಭಾವ ಬೀರುವುದಿಲ್ಲ. ಅತಿಯಾದ ಹೊಗಳಿಕೆ ಮತ್ತು ಟೀಕೆ ಎರಡೂ ಸತ್ಯಕ್ಕೆ ದೂರವೇ. ಹೀಗಾಗಿ, ನಕಾರಾತ್ಮಕ ಕಾಮೆಂಟ್‌ಗಳು ನನ್ನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ನಾನು ಅವುಗಳನ್ನು ವೈಯಕ್ತಿಕವಾಗಿ ತೆಗೆದುಕೊಳ್ಳುವುದಿಲ್ಲ. ನನ್ನನ್ನು ಟೀಕಿಸುವುದು ಅಥವಾ ಹೊಗಳುವುದು ನನ್ನ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುವುದಿಲ್ಲ. ಈ ರೀತಿ ಮನಸ್ಥಿತಿ ಕಾಪಾಡಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ಅಯ್ಯೋ, ಈ ವ್ಯಕ್ತಿ ನನ್ನ ಬಗ್ಗೆ ತಪ್ಪು ಮಾಹಿತಿ ನೀಡಿದ್ದಾನೆ. ಇರಲಿ, ಇವನ ಮನಸ್ಸಿನ ಕಸವನ್ನು ಇಲ್ಲಿ ಸುರಿದು ಹೋಗಿದ್ದಾನೆ. ಇಂಥ ಕಸವನ್ನು ನಾನು ಡಿಲೀಟ್ ಮಾಡುವುದಿಲ್ಲ, ಬದಲಾಗಿ ಅದರಿಂದ ಏನಾದರೂ ಕಲಿಯಬಹುದೇ ಎಂದು ನೋಡುತ್ತೇನೆ. ಕೆಲವೊಮ್ಮೆ ಆ ಕಸದಲ್ಲಿ ಏನಾದರೂ ಅಮೂಲ್ಯವಾದ ಮಾಹಿತಿ ಸಿಗಬಹುದಲ್ಲವೇ? ಎಂದು ಭಾವಿಸಿ.

ನೀವು ಹೀಗೂ ಯೋಚಿಸಿ. ನೀವೊಂದು ದೊಡ್ಡ ಪುಸ್ತಕವಿದ್ದಂತೆ. ಆ ಪುಟಗಳಲ್ಲಿ ಲಕ್ಷಾಂತರ ಮಾಹಿತಿ ಇದೆ. ಕೆಲವರು ಒಂದು ಪುಟ ಓದಿ, ಆ ಒಂದು ಪುಟ ಸರಿಯಿಲ್ಲ ಎಂದು ಹೇಳಬಹುದು. ಆದರೆ ಅವರಿಗೆ ಗೊತ್ತಿಲ್ಲ, ಆ ಪುಸ್ತಕದಲ್ಲಿ ಇನ್ನೂ ಲಕ್ಷಾಂತರ ಪುಟಗಳಿವೆ ಎಂದು. ಹಾಗೆಯೇ, ನಿಮ್ಮ ಬಗ್ಗೆ ಯಾರಾದರೂ ನೆಗೆಟಿವ್ ಕಾಮೆಂಟ್ ಹಾಕಿದಾಗ, ಅವರು ನಿಮ್ಮ ಒಂದು ಪುಟವನ್ನು ಮಾತ್ರ ನೋಡಿದ್ದಾರೆ, ಇಡೀ ಪುಸ್ತಕವನ್ನಲ್ಲ ಎಂದು ಭಾವಿಸಿ.

ಯಾವತ್ತೂ ಕಾಮೆಂಟ್‌ಗಳನ್ನು ಒಂದು ಆಟವಾಗಿ ನೋಡಿ. ನೆಗೆಟಿವ್ ಕಾಮೆಂಟ್ ಬಂದಾಗ, ಹೌದಾ! ಇವತ್ತು ಈ ವ್ಯಕ್ತಿ ನನ್ನನ್ನು ನೆಗೆಟಿವ್ ಆಗಿ ನೋಡಿದ್ದಾನೆ. ಪರವಾಗಿಲ್ಲ, ನಾಳೆ ಇನ್ನೊಬ್ಬರು ಒಳ್ಳೆಯದನ್ನು ಹೇಳಬಹುದು ಎಂದು ಭಾವಿಸಿ. ನೆಗೆಟಿವ್ ಕಾಮೆಂಟ್ ಹಾಕಿದ ವ್ಯಕ್ತಿಗೆ ಮನಸ್ಸಿನಲ್ಲಿಯೇ ಒಂದು ನಮಸ್ಕಾರ ಹೇಳಿ, ನಿಮ್ಮ ಕಾಮೆಂಟ್‌ಗೆ ಧನ್ಯವಾದಗಳು, ಇವತ್ತಿನ ನನ್ನ ನಗುವಿಗೆ ಕಾರಣರಾದಿರಿ ಎಂದುಕೊಳ್ಳಿ. ನಿಮ್ಮ ಮೌಲ್ಯವನ್ನು ಬೇರೆಯವರ ಅಭಿಪ್ರಾಯಗಳಿಂದ ಅಳೆಯಬೇಡಿ. ನೀವು ಎಷ್ಟೇ ಚೆನ್ನಾಗಿದ್ದರೂ, ಕೆಲವರು ನಿಮ್ಮಲ್ಲಿ ದೋಷ ಹುಡುಕಲು ಪ್ರಯತ್ನಿಸುತ್ತಾರೆ. ಹೀಗಾಗಿ, ಅವರ ಮಾತಿಗೆ ನಿಮ್ಮ ಮನಸ್ಸಿನ ಶಾಂತಿಯನ್ನು ಕಳೆದುಕೊಳ್ಳಬೇಡಿ.

ನೆನಪಿಡಿ, ನೀವು ಒಬ್ಬ ಅದ್ಭುತ ವ್ಯಕ್ತಿ. ಕೆಲವರ ನೆಗೆಟಿವ್ ಕಾಮೆಂಟ್‌ಗಳು ನಿಮ್ಮನ್ನು ವ್ಯಾಖ್ಯಾನಿಸುವುದಿಲ್ಲ. ನಿಮ್ಮ ಬದುಕು ನಿಮ್ಮ ಕೈಯಲ್ಲಿದೆ, ಬೇರೆಯವರ ಮಾತಿನಿಂದಲ್ಲ. ನಗ್ತಾ ಇರಿ, ಜೀವನದಲ್ಲಿ ಖುಷಿಯಿಂದ ಇರಿ!

* * *

ರಮೇಶ ಚಂದ್ರ ಚವಾಣ್, ಬೆಂಗಳೂರು

- **ಸಂಪಾದಕರೇ, ನನಗೆ ಐವತ್ತೊಂಬತ್ತು ವರ್ಷ ವಯಸ್ಸು. ನನಗೆ ಹಳೆ ಪತ್ರಿಕೆಗಳನ್ನು ಸಂಗ್ರಹಿಸುವ ಅಭ್ಯಾಸವಿದೆ. ನನ್ನ ದೃಷ್ಟಿಯಲ್ಲಿ ಪತ್ರಿಕೆಗಳು ಎಸೆಯುವಂಥದ್ದಲ್ಲ. ಆದರೆ ನಮ್ಮ ಮನೆಯಲ್ಲಿ ಜಾಗ ಇಲ್ಲ. ನನ್ನ ಮಗ ಮತ್ತು ಪತ್ನಿ ಹಳೆ ಪುಸ್ತಕ ಮತ್ತು ಪತ್ರಿಕೆಗಳನ್ನು ನನಗರಿವಿಲ್ಲದಂತೆ ರದ್ದಿ ಅಂಗಡಿಗೆ ಮಾರಾಟ ಮಾಡಿಬಿಡುತ್ತಾರೆ. ಇದರಿಂದ ನನಗೆ ಅತೀವ ಬೇಸರವಾಗುತ್ತದೆ. ಈ ವಿಷಯದಲ್ಲಿ ನನ್ನ ಮಾತನ್ನು ನನ್ನ ಮಕ್ಕಳಾಗಲಿ, ಮಡದಿಯಾಗಲಿ, ಕೇಳುತ್ತಿಲ್ಲ. ನಮ್ಮ ಮನೆಯಲ್ಲಿ ಈ ವಿಷಯದ ಬಗ್ಗೆ ಆಗಾಗ ಜಗಳ, ಕಿರಿಕಿರಿ ಆಗುತ್ತಿರುತ್ತವೆ. ನನಗೆ ನಿಮ್ಮ ಸಾಂತ್ವನದ ಮಾತುಗಳು ಬೇಕು.**

– ರಮೇಶ ಚಂದ್ರ ಅವರೇ, ನಿಮ್ಮ ಭಾವನೆಗಳನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಐವತ್ತೊಂಬತ್ತು ವರ್ಷ ವಯಸ್ಸಿನಲ್ಲಿ, ಹಳೆ ಪತ್ರಿಕೆಗಳನ್ನು ಸಂಗ್ರಹಿಸುವ ನಿಮ್ಮ ಹವ್ಯಾಸವು ಕೇವಲ ಒಂದು ಹವ್ಯಾಸವಲ್ಲ, ಅದು ನಿಮ್ಮ ಜೀವನದ ಒಂದು ಭಾಗವಾಗಿದೆ. ಪ್ರತಿಯೊಂದು ಪತ್ರಿಕೆಯು ಒಂದು ನೆನಪು, ಒಂದು ಇತಿಹಾಸ ಮತ್ತು ನಿಮ್ಮ ಸಂಗ್ರಹದಲ್ಲಿನ ಪ್ರತಿಯೊಂದು ಪುಟವು ನೀವು ಕಳೆದ ಸಮಯದ ಕಥೆಗಳನ್ನು ಹೇಳುತ್ತದೆ. ಪತ್ರಿಕೆಗಳು ಕೇವಲ ಕಾಗದದ ತುಂಡುಗಳಲ್ಲ, ಅವು ನಿಮ್ಮ ಹಿಂದಿನ ಜೀವನದ ಮತ್ತು ಅನುಭವಗಳ ಅಮೂಲ್ಯ ದಾಖಲೆಗಳು ಎಂಬುದು ನಿಜ.

ನಿಮ್ಮ ಮನೆಯವರು ನಿಮ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳದೇ, ನಿಮ್ಮ ಸಂಗ್ರಹವನ್ನು ರದ್ದಿ ಅಂಗಡಿಗೆ ಮಾರಾಟ ಮಾಡಿದಾಗ ನಿಮಗೆ ಆಗುವ ಬೇಸರವನ್ನು ಊಹಿಸಬಲ್ಲೆ. ಪ್ರೀತಿಯಿಂದ ಸಂಗ್ರಹಿಸಿದ ವಸ್ತುಗಳನ್ನು ಹೀಗೆ ಕಳೆದುಕೊಂಡಾಗ ಆ ನೋವು ಹೇಳತೀರದು. ನಿಮ್ಮ ಕುಟುಂಬದವರು ಇದನ್ನು ಕೇವಲ ಜಾಗದ ಸಮಸ್ಯೆ ಎಂದು ನೋಡಬಹುದು, ಆದರೆ ನಿಮಗೆ ಅದು ಅದಕ್ಕಿಂತ ಹೆಚ್ಚಾಗಿದೆ. ಇದು ನಿಮ್ಮ ಭಾವನಾತ್ಮಕ ಸಂಪರ್ಕವನ್ನು ಕಡೆಗಣಿಸಿದಂತೆ ಅನಿಸಬಹುದು ಮತ್ತು ಇದರಿಂದಾಗಿ ಮನೆಯಲ್ಲಿ ಜಗಳ, ಕಿರಿಕಿರಿಗಳು ಸಾಮಾನ್ಯ.

ನಿಮ್ಮ ಕುಟುಂಬದವರಿಗೆ ನಿಮ್ಮ ಸಂಗ್ರಹದ ಮಹತ್ವವನ್ನು ತಿಳಿಸಿ ಹೇಳುವುದು ಮುಖ್ಯ. ಪತ್ರಿಕೆಗಳು ನಿಮಗೆ ಏಕೆ ಮುಖ್ಯ, ಅವುಗಳಲ್ಲಿರುವ ವಿಷಯಗಳು, ನೆನಪುಗಳು, ಇತಿಹಾಸದ ಬಗ್ಗೆ ಅವರಿಗೆ ವಿವರಿಸಿ. ಇದು ಕೇವಲ ಜಾಗವನ್ನು ತುಂಬುವ ವಸ್ತುಗಳಲ್ಲ, ಬದಲಾಗಿ ನಿಮ್ಮ ಬದುಕಿನ ಒಂದು ಭಾಗ ಎಂಬುದನ್ನು ಮನದಟ್ಟು ಮಾಡಿ.

ಅದೇ ಸಮಯದಲ್ಲಿ, ಅವರ ದೃಷ್ಟಿಕೋನದಿಂದಲೂ ನೋಡಲು ಪ್ರಯತ್ನಿಸಿ. ಒಂದು ವೇಳೆ ಜಾಗದ ಸಮಸ್ಯೆ ನಿಜವಾಗಿಯೂ ಇದ್ದರೆ, ಅದಕ್ಕೆ ಪರ್ಯಾಯ ಮಾರ್ಗಗಳ ಬಗ್ಗೆ ಯೋಚಿಸಬಹುದು. ಉದಾಹರಣೆಗೆ, ಡಿಜಿಟಲ್ ರೂಪಕ್ಕೆ ಪರಿವರ್ತಿಸುವುದು. ಪ್ರಮುಖ ಲೇಖನಗಳು ಅಥವಾ ಪತ್ರಿಕೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪದಲ್ಲಿ ಉಳಿಸಿಕೊಳ್ಳಬಹುದು. ಇದರಿಂದ ಮೂಲ ಪತ್ರಿಕೆಯನ್ನು ಇಟ್ಟುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಮತ್ತು ನಿಮ್ಮ ನೆನಪುಗಳು ಸುರಕ್ಷಿತವಾಗಿರುತ್ತವೆ.

ನಿಮಗೆ ಅತ್ಯಂತ ಪ್ರಿಯವಾದ ಮತ್ತು ಪ್ರಮುಖವಾದ ಪತ್ರಿಕೆಗಳನ್ನು ಮಾತ್ರ ಆರಿಸಿ, ಅವುಗಳನ್ನು ಸುರಕ್ಷಿತವಾಗಿಡಲು ನಿರ್ದಿಷ್ಟ ಸ್ಥಳವನ್ನು ಗೊತ್ತುಪಡಿಸಬಹುದು. ಉಳಿದವುಗಳನ್ನು ಬೇರೆಯವರಿಗೆ ದಾನ ಮಾಡುವುದು ಅಥವಾ ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುವುದು ಒಂದು ಆಯ್ಕೆಯಾಗಬಹುದು.

ಸಮಸ್ಯೆ ಏನೇ ಇರಲಿ, ಪರಸ್ಪರ ಅರ್ಥಮಾಡಿಕೊಂಡು ಮಾತುಕತೆಯ ಮೂಲಕ ಪರಿಹಾರ ಕಂಡುಕೊಳ್ಳುವುದು ಬಹಳ ಮುಖ್ಯ. ನಿಮ್ಮ ಹವ್ಯಾಸವನ್ನು ಗೌರವಿಸುವಂತೆ ನಿಮ್ಮ ಕುಟುಂಬಕ್ಕೆ ತಿಳಿಸಿ ಮತ್ತು ಅವರ ಸಮಸ್ಯೆಯನ್ನೂ ನೀವು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ನಿಮ್ಮ ಮತ್ತು ನಿಮ್ಮ ಸಂಗ್ರಹದ ನಡುವಿನ ಬಾಂಧವ್ಯವನ್ನು ನಾವು ಗೌರವಿಸುತ್ತೇವೆ. ಇದೊಂದು ಅತೀ ಸೂಕ್ಷ್ಮ ವಿಷಯವಾಗಿದ್ದು, ಇದಕ್ಕೆ ಸೂಕ್ತ ಪರಿಹಾರ ಸಿಗಲಿ ಎಂದು ನಾವು ಆಶಿಸುತ್ತೇವೆ. ನೀವು ಏಕಾಂಗಿಯಲ್ಲ, ನಿಮ್ಮ ಈ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಅನೇಕ ಜನರಿದ್ದಾರೆ. ನಿಮ್ಮ ಬೇಸರವನ್ನು ನಿವಾರಿಸಲು ಮಾತುಕತೆ ಒಂದು ಉತ್ತಮ ಮಾರ್ಗ.

* * *

ಶೈಲಜಾ ಸಿ.,(ಇಮೇಲ್ ಮೂಲಕ)

- **ಭಟ್ರೇ, ನನ್ನ ಮಗಳಿಗೆ ಇಪ್ಪತ್ತಾರು ವರ್ಷ. ಎಂ.ಎ. ಮುಗಿಸಿ ಮನೆಯಲ್ಲಿದ್ದಾಳೆ. ದಿನಕ್ಕೆ ಐದರಿಂದ ಆರು ಗಂಟೆಗಳ ಕಾಲ ರೀಲ್ಸ್ ನೋಡುತ್ತಾಳೆ ಅಥವಾ ರೀಲ್ಸ್ ಮಾಡುವುದರಲ್ಲಿ ತಲ್ಲೀನಳಾಗಿರುತ್ತಾಳೆ. ಅವಳ ರೀಲ್ಸ್ ಹುಚ್ಚು ಮಿತಿ ಮೀರಿದೆ. ರೀಲ್ಸ್ ನೋಡುವಾಗ ಏನಾದರೂ ಹೇಳಿದರೆ ರೇಗುತ್ತಾಳೆ, ಜಗಳಕ್ಕೆ ಬರುತ್ತಾಳೆ. ಅವಳ ರೀಲ್ಸ್ ಗೀಳನ್ನು ನಿವಾರಿಸುವುದು ಹೇಗೆ?**

– ಶೈಲಜಾ ಅವರೇ, ನಿಮ್ಮ ಮಗಳ ಬಗ್ಗೆ ಇರುವ ಕಾಳಜಿ ಮತ್ತು ಆಕೆಯ ಭವಿಷ್ಯದ ಬಗ್ಗೆ ನಿಮ್ಮ ಆತಂಕವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಇಪ್ಪತ್ತಾರು ವರ್ಷ ವಯಸ್ಸಿನಲ್ಲಿ, ಎಂ.ಎ. ಪದವಿ ಮುಗಿಸಿದ ನಂತರವೂ ಕೆಲಸ ಹುಡುಕುವ ಬದಲು ರೀಲ್ಸ್‌ನಲ್ಲಿ ಹೆಚ್ಚು ಸಮಯ ಕಳೆಯುವುದು ಪೋಷಕರಾಗಿ ನಿಮಗೆ ಸಹಜವಾಗಿಯೇ ಬೇಸರ ತರಿಸುತ್ತದೆ. ಇಂಥ ಸಂದರ್ಭದಲ್ಲಿ, ಆಕೆಯೊಂದಿಗೆ ಜಗಳ ಅಥವಾ ಕಿರಿಕಿರಿ ಮಾಡುವುದಕ್ಕಿಂತ ಶಾಂತವಾಗಿ ಮತ್ತು ಪರಿಣಾಮಕಾರಿಯಾಗಿ ಈ ಸಮಸ್ಯೆಯನ್ನು ಎದುರಿಸುವುದು ಮುಖ್ಯ. ಸಮಸ್ಯೆಯ ಮೂಲವನ್ನು ಅರ್ಥಮಾಡಿಕೊಳ್ಳಿ.

ಮೊದಲಿಗೆ, ನಿಮ್ಮ ಮಗಳು ಏಕೆ ರೀಲ್ಸ್‌ನಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಾಳೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿ. ಅದು ಕೇವಲ ವಿನೋದಕ್ಕೋ ಅಥವಾ ಯಾವುದಾದರೂ ಭಾವನಾತ್ಮಕ ಕಾರಣವಿದೆಯಾ ಎಂದು ತಿಳಿದುಕೊಳ್ಳಿ. ಉದಾಹರಣೆಗೆ, ಕೆಲಸ ಸಿಗದಿರುವ ಬೇಸರ, ಭವಿಷ್ಯದ ಬಗ್ಗೆ ಆತಂಕ, ಸ್ನೇಹಿತರೊಂದಿಗೆ ಒಡನಾಟ ಇಲ್ಲದಿರುವುದು ಅಥವಾ ಬೇರೆ ಯಾವುದೋ ಒತ್ತಡಗಳಿಂದ ಹೊರಬರಲು ಇದೊಂದು ಮಾರ್ಗವಾಗಿರಬಹುದಾ ಎಂಬುದನ್ನು ತಿಳಿದುಕೊಳ್ಳಿ. ಆಕೆಯ ಮನಸ್ಸಿನ ಸ್ಥಿತಿಯನ್ನು ಅರ್ಥಮಾಡಿಕೊಂಡರೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸುಲಭವಾಗುತ್ತದೆ.

ಅವಳೊಂದಿಗೆ ನೇರವಾಗಿ ಜಗಳಕ್ಕೆ ಹೋಗಬೇಡಿ. ರೀಲ್ಸ್ ನೋಡುವಾಗ ನೀವು ಏನಾದರೂ ಹೇಳಿದರೆ ಅಥವಾ ಜಗಳಕ್ಕೆ ಹೋದರೆ, ಅದು ಆಕೆಯ ವರ್ತನೆಯನ್ನು ಇನ್ನಷ್ಟು ಹದಗೆಡಿಸಬಹುದು. ಆದ್ದರಿಂದ, ಆಕೆ ಆರಾಮವಾಗಿರುವಾಗ, ರೀಲ್ಸ್ ನೋಡದ ಸಮಯದಲ್ಲಿ ವಿಷಯವನ್ನು ಪ್ರೀತಿಯಿಂದ ಪ್ರಸ್ತಾಪಿಸಿ. 'ನೀನು ದಿನಕ್ಕೆ ಇಷ್ಟು ಗಂಟೆ ರೀಲ್ಸ್ ನೋಡುವುದು ನನಗೆ ಬೇಸರ ತಂದಿದೆ' ಎಂದು ಹೇಳುವ ಬದಲು, 'ನಾನು ನಿನ್ನ ಬಗ್ಗೆ ಯೋಚಿಸುತ್ತಿದ್ದೇನೆ, ನೀನು ಏನು ಮಾಡುತ್ತೀಯಾ ಅಂತ ನನಗೆ ಗೊತ್ತು. ನಿನಗೆ ಏನಾದರೂ ಕೆಲಸ ಸಿಕ್ಕರೆ ನನಗೆ ಸಂತೋಷವಾಗುತ್ತಿತ್ತು' ಎಂದು ಹೇಳುವ ಮೂಲಕ ಆಕೆಯ ಮೇಲೆ ಒತ್ತಡ ಹೇರದೇ ನಿಮ್ಮ ಕಾಳಜಿಯನ್ನು ವ್ಯಕ್ತಪಡಿಸಿ.

ಆಕೆಗೆ ಪರ್ಯಾಯ ಚಟುವಟಿಕೆಗಳನ್ನು ಪರಿಚಯಿಸಿ. ರೀಲ್ಸ್‌ಗೆ ಪರ್ಯಾಯವಾಗಿ, ಆಕೆಯ ಆಸಕ್ತಿಗೆ ತಕ್ಕ ಬೇರೆ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ. ಉದಾಹರಣೆಗೆ, ಹೊಸ ಹವ್ಯಾಸಗಳನ್ನು ಕಲಿಯಲು ಪ್ರೋತ್ಸಾಹಿಸಿ. ಆನ್‌ಲೈನ್ ಕೋರ್ಸ್‌ಗಳು, ಹೊಸ ಭಾಷೆ ಕಲಿಯುವುದು, ಬರವಣಿಗೆ, ಚಿತ್ರಕಲೆ ಅಥವಾ ಯಾವುದೇ ಸೃಜನಾತ್ಮಕ ಕೆಲಸಗಳಲ್ಲಿ ಆಸಕ್ತಿ ಬೆಳೆಸಲು ಪ್ರೋತ್ಸಾಹಿಸಿ. ಇಲ್ಲವೇ ಕೆಲಸ ಹುಡುಕುವ ಪ್ರಕ್ರಿಯೆಯಲ್ಲಿ ಸಹಾಯ ಮಾಡಿ. ಆಕೆಯ ಅರ್ಹತೆಗೆ ತಕ್ಕ ಕೆಲಸ ಹುಡುಕಲು, ರೆಸ್ಯೂಮ್ ಬರೆಯಲು, ಅಥವಾ ಸಂದರ್ಶನಕ್ಕೆ ತಯಾರಿ ನಡೆಸಲು ಸಹಾಯ ಮಾಡಿ. ಇದರಿಂದ ಆಕೆ ರೀಲ್ಸ್‌ನಿಂದ ಗಮನ ಬೇರೆಡೆಗೆ ಹರಿಸಲು ಸಾಧ್ಯವಾಗುತ್ತದೆ. ಸಾಮಾಜಿಕವಾಗಿ ತೊಡಗಿಸಿಕೊಳ್ಳಲು ಪ್ರೇರೇಪಿಸಿ. ಸ್ನೇಹಿತರೊಂದಿಗೆ ಹೊರಗೆ ಹೋಗುವುದು, ಸಂಬಂಧಿಕರನ್ನು ಭೇಟಿ ಮಾಡುವುದು ಅಥವಾ ಸಮಾಜ ಸೇವೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿ. ಇದು ಆಕೆಯ ಏಕಾಂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ರೀಲ್ಸ್‌ನ ಸಕಾರಾತ್ಮಕ ಅಂಶಗಳನ್ನು ಗುರುತಿಸಿ. ಕೆಲವು ಸಂದರ್ಭಗಳಲ್ಲಿ, ರೀಲ್ಸ್ ಒಂದು ವೃತ್ತಿಯಾಗಿಯೂ ಬೆಳೆಯಬಹುದು. ಒಂದು ವೇಳೆ ನಿಮ್ಮ ಮಗಳು ರೀಲ್ಸ್ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರೆ, ಅದನ್ನೇ ವೃತ್ತಿಯಾಗಿ ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ಚರ್ಚಿಸಿ. ಉದಾಹರಣೆಗೆ, ಅವಳು ಏನಾದರೂ ಹೊಸ ವಿಷಯಗಳನ್ನು ಕಲಿಸುತ್ತಾ ರೀಲ್ಸ್ ಮಾಡಬಹುದೇ? ಅಥವಾ ಅವಳ ಜಾಣ್ಮೆಯನ್ನು ಪ್ರದರ್ಶಿಸಲು ಬಳಸಬಹುದೇ? ಈ ರೀತಿಯಾಗಿ ಯೋಚಿಸಿದರೆ ಅವಳ ಆಸಕ್ತಿಯನ್ನು ಸೃಜನಾತ್ಮಕವಾಗಿ ಬಳಸಲು ಸಾಧ್ಯವಾಗುತ್ತದೆ.

ಒಂದು ವೇಳೆ ಈ ಎಲ್ಲ ಪ್ರಯತ್ನಗಳು ವಿಫಲವಾದರೆ ಮತ್ತು ಅವಳ ರೀಲ್ಸ್ ಗೀಳು ತುಂಬಾ ಹೆಚ್ಚಾದರೆ, ಒಬ್ಬ ಮನೋವೈದ್ಯರು ಅಥವಾ ಸಮಾಲೋಚಕರ ಸಹಾಯ ಪಡೆಯುವುದು ಒಳ್ಳೆಯದು. ವೃತ್ತಿಪರರು ಇಂಥ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಸಹಾಯ ಮಾಡುತ್ತಾರೆ ಮತ್ತು ನಿಮ್ಮ ಮಗಳ ಆತಂಕಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಸೂಕ್ತ ಪರಿಹಾರ ಸೂಚಿಸುತ್ತಾರೆ. ಕೊನೆಯದಾಗಿ, ನಿಮ್ಮ ಮಗಳೊಂದಿಗೆ ತಾಳ್ಮೆಯಿಂದ ವರ್ತಿಸಿ ಮತ್ತು ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ. ಆಕೆಯ ಸಮಸ್ಯೆಯನ್ನು ಅರ್ಥಮಾಡಿಕೊಂಡು ಸಹಾಯ ಮಾಡಲು ನೀವು ಸಿದ್ಧರಿದ್ದೀರಿ ಎಂದು ಅವಳಿಗೆ ಅನಿಸುವಂತೆ ಮಾಡಿ. ಇದರಿಂದ ಅವಳು ನಿಮ್ಮೊಂದಿಗೆ ಸಹಕರಿಸಲು ಹೆಚ್ಚು ಮುಕ್ತಳಾಗುತ್ತಾಳೆ.

ಕೆ.ಎಂ.ರೆಡ್ಡಿ ಪಾಟೀಲ, ರೋಣ

- **ಭಟ್ರೇ, ಸಾಮಾಜಿಕ ಜಾಲ ತಾಣಗಳನ್ನು ಓಪನ್ ಮಾಡಿದರೆ ಸಾಕು, ಎಲ್ಲರೂ ಬರೀ ವಿಷವನ್ನೇ ಕಕ್ಕುವುದು ಕಾಣುತ್ತದೆ. ಸಾಮಾಜಿಕ ಜಾಲತಾಣ ಒಂಥರಾ ಸಾರ್ವಜನಿಕ ಶೌಚಾಲಯ ಆಗಿದೆಯಾ ಎಂಬ ಅನುಮಾನ ಬರುತ್ತಿದೆ. ಈ ಕಲುಷಿತ ವಾತಾವರಣ ನನ್ನ ಮನಸ್ಸನ್ನು ಘಾಸಿಗೊಳಿಸಿದೆ. ನೀವೇನು ಹೇಳುತ್ತೀರಿ?**

– ರೆಡ್ಡಿ ಪಾಟೀಲ ಅವರೇ, ನಿಮ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳಬಲ್ಲೆ. ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚುತ್ತಿರುವ ನಕಾರಾತ್ಮಕತೆ ಮತ್ತು ವಿಷಮಯ ವಾತಾವರಣ ನಿಜವಾಗಿಯೂ ಬೇಸರ ತರಿಸುತ್ತದೆ. ಇಂಥ ಕಲುಷಿತ ವಾತಾವರಣದಿಂದ ನಿಮ್ಮ ಮನಸ್ಸಿಗೆ ನೋವಾಗಿರಬಹುದು.

ಸಾಮಾಜಿಕ ಜಾಲತಾಣಗಳು ಒಂದು ರೀತಿಯ ಸಾರ್ವಜನಿಕ ಶೌಚಾಲಯವಾಗಿ ಮಾರ್ಪಟ್ಟಿವೆ ಎಂಬ ನಿಮ್ಮ ಹೋಲಿಕೆ ಸೂಕ್ತವಾಗಿದೆ. ಏಕೆಂದರೆ, ಶೌಚಾಲಯದಲ್ಲಿ ಜನರು ತಮ್ಮ ಎಲ್ಲಾ ವೇಸ್ಟ್‌ಗಳನ್ನು ಹೊರಹಾಕುತ್ತಾರೆ. ಅಂತೆಯೇ, ಕೆಲವರು ತಮ್ಮ ಮನಸ್ಸಿನ ಎಲ್ಲ ನಕಾರಾತ್ಮಕ, ವಿಷಪೂರಿತ ಆಲೋಚನೆಗಳು, ದ್ವೇಷ ಮತ್ತು ಅಸಹನೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ವಿಲೇವಾರಿ ಮಾಡುತ್ತಾರೆ.

ಇದನ್ನು ಇನ್ನೊಂದು ರೀತಿಯಲ್ಲಿ ನೋಡಿದರೆ, ಸಾಮಾಜಿಕ ಜಾಲತಾಣಗಳು ಒಂದು ದೊಡ್ಡ ಡಿಜಿಟಲ್ ಕಸದ ತೊಟ್ಟಿ ಇದ್ದ ಹಾಗೆ. ಅಲ್ಲಿ ಜನರು ತಮ್ಮ ಬೇಡವಾದ, ಕೆಟ್ಟ ಆಲೋಚನೆಗಳನ್ನು ಎಸೆದು ಹೋಗುತ್ತಾರೆ. ಇಂಥ ಕಸದ ರಾಶಿಯಲ್ಲಿ ನೀವು ಏನಾದರೂ ಒಳ್ಳೆಯದನ್ನು ಹುಡುಕ ಹೊರಟರೆ, ಅಲ್ಲಿ ಕೆಟ್ಟ ವಾಸನೆ ಮಾತ್ರ ಸಿಗುತ್ತದೆ.

ಹಾಗಾಗಿ, ಈ ಡಿಜಿಟಲ್ ಕಸದ ತೊಟ್ಟಿಯಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ನೀವು ಮಾಡಬಹುದಾದ ಒಂದು ಕೆಲಸವೆಂದರೆ, ಸಾಮಾಜಿಕ ಜಾಲತಾಣಗಳನ್ನು ಒಂದು ದೊಡ್ಡ ಸೋಪ್ ಜಾಹೀರಾತು (Soap ad) ಎಂದು ಭಾವಿಸುವುದು. ಇಲ್ಲಿರುವ ಎಲ್ಲ ಕೊಳೆ ಮತ್ತು ಕಲ್ಮಶಗಳನ್ನು ನೋಡಿದ ನಂತರ, ನಿಮಗೆ ಸ್ವಚ್ಛತೆ ಎಷ್ಟು ಮುಖ್ಯ ಎಂದು ಮನವರಿಕೆಯಾಗುತ್ತದೆ. ಆನಂತರ, ನಿಮ್ಮ ನಿಜ ಜೀವನಕ್ಕೆ ಬಂದು, ನಿಮ್ಮ ಸ್ನೇಹಿತರೊಂದಿಗೆ ಮತ್ತು ಕುಟುಂಬದೊಂದಿಗೆ ನೈಜವಾಗಿ ಮಾತನಾಡಿ, ನಕ್ಕು, ಆಟವಾಡಿ. ಆಗ ನಿಮಗೆ ಗೊತ್ತಾಗುತ್ತದೆ, ನಿಜವಾದ ಸಂತೋಷ ಮತ್ತು ಶುದ್ಧ ಗಾಳಿ ಎಲ್ಲಿ ಸಿಗುತ್ತದೆ ಎಂದು!

ಇಂಥ ವಾತಾವರಣ ನಿಮ್ಮನ್ನು ಕಾಡದಂತೆ ನೋಡಿಕೊಳ್ಳಲು, ಸಾಮಾಜಿಕ ಜಾಲತಾಣಗಳಲ್ಲಿ ಒಳ್ಳೆಯ ವಿಷಯಗಳನ್ನು, ಹಾಸ್ಯದ ಪುಟಗಳನ್ನು, ಪ್ರಕೃತಿ ಸೌಂದರ್ಯದ ಫೋಟೋಗಳನ್ನು ನೋಡಲು ಹೆಚ್ಚು ಗಮನ ಕೊಡಿ. ಸಾಮಾಜಿಕ ಜಾಲತಾಣಗಳಲ್ಲಿ ಒಳ್ಳೆಯ ವಿಚಾರಗಳನ್ನು ಬರೆಯುವವರ ಸಂಖ್ಯೆಯೂ ದೊಡ್ಡ ಪ್ರಮಾಣದಲ್ಲಿದೆ. ಅಂಥವರನ್ನು ನೀವು ಫಾಲೋ ಮಾಡಬೇಕು. ನಿಮ್ಮನ್ನು ನಗಿಸುವ, ಖುಷಿ ಕೊಡುವ, ಚಿಂತನೆ ಹತ್ತಿಸುವ ವಿಷಯಗಳತ್ತ ಗಮನಹರಿಸಿದರೆ, ಈ ಡಿಜಿಟಲ್ ಕಸದ ತೊಟ್ಟಿಯಿಂದ ಬರುವ ದುರ್ವಾಸನೆ ನಿಮ್ಮನ್ನು ತಲುಪುವುದಿಲ್ಲ. ನೆನಪಿಡಿ, ನೀವು ನೋಡುವ ವಿಷಯ ನಿಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ, ನಿಮ್ಮ ಮನಸ್ಸನ್ನು ಶುದ್ಧವಾಗಿ ಇಡಲು ಒಳ್ಳೆಯ ವಿಷಯಗಳನ್ನು ಮಾತ್ರ ಆರಿಸಿಕೊಳ್ಳಿ.

* * *

ಸೂರಜ್ ಹೆಗಡೆ, ಉಡುಪಿ

- **ಸಂಪಾದಕರೇ, ನನಗೆ ನಲವತ್ತೊಂದು ವರ್ಷ. ಯಾರಾದರೂ ನನಗೆ ಉಪದೇಶ ಹೇಳಿದರೆ, ಬುದ್ಧಿಮಾತು ಹೇಳಿದರೆ ನಾನು ರೇಗುತ್ತೇನೆ. ಅವರು ನನ್ನ ಒಳ್ಳೆಯದಕ್ಕೆ ಹೇಳಿದರೂ ನಾನು ಕೋಪಿಸಿಕೊಳ್ಳುತ್ತೇನೆ. ನಂತರ ನಾನು ಹಾಗೆ ಮಾಡಬಾರದಿತ್ತು ಎಂದು ಅನಿಸುತ್ತದೆ. ನನ್ನ ಈ ಗುಣವನ್ನು ಬದಲಿಸಿಕೊಳ್ಳುವುದು ಹೇಗೆ?**

– ಸೂರಜ್ ಅವರೇ, ಯಾರಾದರೂ ಬುದ್ಧಿಮಾತು ಹೇಳಿದರೆ ರೇಗುವುದು, ನಂತರ ಪಶ್ಚಾತ್ತಾಪ ಪಡುವುದು ಇದು ಅನೇಕ ಜನರ ಸಾಮಾನ್ಯ ಅನುಭವ. ನಾನು ನಿಮ್ಮ ಸಮಸ್ಯೆಯನ್ನು ಒಂದು ಪಾರ್ಸಲ್ ಜತೆ ಹೋಲಿಸುತ್ತೇನೆ. ಯಾರಾದರೂ ನಿಮಗೆ ಉಪದೇಶ ಹೇಳಿದಾಗ, ಅದು ಒಂದು 'ಉಚಿತ ಪಾರ್ಸಲ್' ಎಂದು ಭಾವಿಸಿ. ಆದರೆ ಆ ಪಾರ್ಸಲ್ ಮೇಲೆ ಯಾವುದೇ ರಿಸೀವರ್ ಹೆಸರು ಇಲ್ಲ ಮತ್ತು ಅದು ಎಲ್ಲರಿಗೂ ಉಚಿತವಾಗಿ ಸಿಗುತ್ತಿದೆ ಎಂದು ತಿಳಿಯಿರಿ. ನೀವು ಆ ಪಾರ್ಸಲ್ ಅನ್ನು ಸ್ವೀಕರಿಸಬೇಕೋ ಬೇಡವೋ ಎಂಬುದು ನಿಮ್ಮ ಇಚ್ಛೆಗೆ ಬಿಟ್ಟದ್ದು. ಆದರೆ, ನೀವೇಕೆ ರೇಗುತ್ತೀರಿ ಎಂದರೆ, ಆ ಪಾರ್ಸಲ್‌ಅನ್ನು ಯಾರು ಬೇಕಾದರೂ ನಿಮ್ಮ ಕೈಗೆ ಬಲವಂತವಾಗಿ ಕೊಡುತ್ತಿದ್ದಾರೆ ಎಂದು ಅಂದುಕೊಂಡಾಗ.

ನಿಜವಾಗಿ, ಆ ಪಾರ್ಸಲ್‌ನಲ್ಲಿರುವುದು ಒಂದು ಬುದ್ಧಿಮಾತು ಎಂಬ ಒಂದು ಸಣ್ಣ ಚೀಟಿ ಬರೆದಿದ್ದಾರೆ ಅಂದುಕೊಳ್ಳಿ. ಆ ಚೀಟಿಯಲ್ಲಿರುವ ವಿಷಯ ನಿಮ್ಮ ಜೀವನಕ್ಕೆ ಉಪಯುಕ್ತವಾಗಿರಬಹುದು ಅಥವಾ ಅನುಪಯುಕ್ತವಾಗಿರಬಹುದು. ಆದರೆ ನೀವು ರೇಗಿ ಹೋಗುವುದರಿಂದ, ಆ ಪಾರ್ಸಲ್ ಅನ್ನು ನೀವು ಒಪ್ಪಿಕೊಳ್ಳಲು ಸಹ ನಿರಾಕರಿಸುತ್ತೀರಿ. ಆ ಪಾರ್ಸಲ್ ಅನ್ನು ಸ್ವೀಕರಿಸಿದ ಕೂಡಲೇ ಅದರಲ್ಲಿರುವ ವಿಷಯವನ್ನು ನೀವು ಪಾಲಿಸಬೇಕೆಂದೇನೂ ಇಲ್ಲ. ನೀವು ಆ ಪಾರ್ಸಲ್ ಅನ್ನು ಕೇವಲ ಓಪನ್ ಮಾಡಿ, ಅದರಲ್ಲಿರುವ ಚೀಟಿಯನ್ನು ನೋಡಿ, ಓಕೆ, ಥ್ಯಾಂಕ್ಸ್ ಎಂದು ಹೇಳಿ, ಆ ಚೀಟಿಯನ್ನು ಒಂದು ಮೂಲೆಯಲ್ಲಿ ಇಡಬಹುದು. ಆ ಚೀಟಿಯ ವಿಷಯ ಇಷ್ಟವಾಗದಿದ್ದರೆ, ತಮಾಷೆಯಾಗಿ ಅದನ್ನು ರಿಸೈಕಲ್ ಬಿನ್‌ಗೆ ಹಾಕಬಹುದು.

ಆದರೆ, ನೀವು ರೇಗಿ ಹೋದಾಗ ಏನಾಗುತ್ತದೆ ಎಂದರೆ, ಆ ಪಾರ್ಸಲ್ ಅನ್ನು ಎಸೆಯಲು ಪ್ರಯತ್ನಿಸುತ್ತೀರಿ ಮತ್ತು ಆ ಪಾರ್ಸಲ್ ನಿಮ್ಮ ಕೈಯಲ್ಲಿಯೇ ಸ್ಫೋಟಗೊಂಡಂತೆ ಆಗುತ್ತದೆ. ಆ ಸ್ಫೋಟದಲ್ಲಿ ನಿಮಗೆ ಮಾತ್ರ ಕೋಪ, ಬೇಸರ, ಕಿರಿಕಿರಿ ಉಂಟಾಗುತ್ತದೆ, ಬೇರೆಯವರಿಗೆ ಏನೂ ಆಗುವುದಿಲ್ಲ. ಯಾರಾದರೂ ನಿಮಗೆ ಉಪದೇಶ ಹೇಳಿದಾಗ, ಅವರು ನಿಮಗೆ ಒಂದು ರೀತಿಯ ಮಾನಸಿಕ ಮಾದಕ ವಸ್ತುವನ್ನು ಕೊಡುತ್ತಿದ್ದಾರೆ ಎಂದುಕೊಳ್ಳಿ. ಅದರ ರುಚಿ ನಿಮಗೆ ಇಷ್ಟವಾಗದಿದ್ದರೆ, ನನಗೆ ಈ ಟೇಸ್ಟ್ ಇಷ್ಟವಾಗಲಿಲ್ಲ ಎಂದು ಹೇಳಿ, ಅದನ್ನು ವಿನಯದಿಂದ ತಿರಸ್ಕರಿಸಿ. ಅಥವಾ ಓಹ್, ಥ್ಯಾಂಕ್ಯೂ, ಬಟ್ ನೋ ಥ್ಯಾಂಕ್ಸ್ ಎಂದು ಹೇಳಿ ಮುನ್ನಡೆಯಿರಿ.

ಯಾರಾದರೂ ನಿಮಗೆ ಬುದ್ಧಿ ಹೇಳಿದಾಗ, ಆ ಸನ್ನಿವೇಶವನ್ನು ಒಂದು ತಮಾಷೆಯ ಸಿನಿ ಮಾದ ದೃಶ್ಯ ಎಂದು ಭಾವಿಸಿ. ಅವರು ಹೇಳುವ ಮಾತುಗಳನ್ನು ಕೇಳಿ ನಗುವಿನಿಂದಲೇ ಸ್ವೀಕರಿಸಿ. ಇವತ್ತಿನ ಕಾಮಿಡಿ ಶೋ ಚೆನ್ನಾಗಿತ್ತು ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡು ಹೋಗಿ. ನಿಮ್ಮ ಮನಸ್ಸು ಸೂಪರ್ ಹೀರೋ ಥರ ವರ್ತಿಸಲಿ. ಯಾರಾದರೂ ನಿಮಗೆ ನೆಗೆಟಿವ್ ಆಗಿ ಏನಾದರೂ ಹೇಳಿದರೆ, ನಿಮ್ಮ ಮನಸ್ಸು ನಾನೊಬ್ಬ ಸೂಪರ್ ಹೀರೋ. ಈ ನಕಾರಾತ್ಮಕ ಶಕ್ತಿ ನನ್ನ ಮೇಲೆ ಪರಿಣಾಮ ಬೀರಲ್ಲ ಎಂದುಕೊಳ್ಳಿ, ಅವರು ಹೇಳುವ ಮಾತುಗಳು ಕೇವಲ ಗಾಳಿಯಲ್ಲಿ ಇರುವ ಧೂಳು ಮಾತ್ರ. ನೀವು ರೇಗಿದಾಗ, ಆ ಧೂಳು ನಿಮ್ಮ ಮನಸ್ಸಿನೊಳಗೆ ಹೋಗಿ ನಿಮಗೆ ಕಿರಿಕಿರಿ ಉಂಟುಮಾಡುತ್ತದೆ. ಆದರೆ ನೀವು ಶಾಂತವಾಗಿದ್ದರೆ, ಆ ಧೂಳು ನಿಮ್ಮನ್ನು ಮುಟ್ಟದೇ ದೂರ ಹೋಗುತ್ತದೆ.

ಮುಂದಿನ ಬಾರಿ ಯಾರಾದರೂ ನಿಮಗೆ ಬುದ್ಧಿವಾದ ಹೇಳಿದಾಗ, ನಕ್ಕು ಸುಮ್ಮನಿರಿ. ನಂತರ, ಆ ವಿಷಯವನ್ನು ಶಾಂತ ಮನಸ್ಸಿನಿಂದ ವಿಶ್ಲೇಷಿಸಿ. ನಿಮ್ಮ ಕೋಪ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡುತ್ತದೆ. ಅದನ್ನು ನಗುವಿನಲ್ಲಿ ಪರಿವರ್ತಿಸಿ. ಆಗ ನೀವು ಸಂತೋಷದಿಂದ ಇರುತ್ತೀರಿ ಮತ್ತು ನಿಮ್ಮ ಸುತ್ತಮುತ್ತ ಇರುವವರೂ ಸಂತೋಷವಾಗಿರುತ್ತಾರೆ.